ಮಂಗಳವಾರ, ಏಪ್ರಿಲ್ 2, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 93 | ಪುಟ 14
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ದೇಹಕ್ಕೆ ಅಗತ್ಯವಿರುವಷ್ಟು ನೀರನ್ನು ನಾವು ಕುಡಿಯುತ್ತಿದ್ದೇವೆಯೆ ಎಂದು ಗಮನಿಸಿಕೊಳ್ಳತಕ್ಕದ್ದು

ಆಳ-ಅಗಲ
ಕಚ್ಚತೀವು ದ್ವೀಪ: ಸರ್ಕಾರ ಹೇಳಿದ್ದೇ ಒಂದು ಮೋದಿ ಹೇಳುತ್ತಿರುವುದೇ ಇನ್ನೊಂದು
ದೇವೇಗೌಡ, ಕುಮಾರಸ್ವಾಮಿ ಬದುಕಿದ್ದೂ ಸತ್ತಂತೆ: ಡಿಕೆಶಿ 5
ಮಹಿಳಾ 'ಮತ' ಸೆಳೆತ: ಬಿಜೆಪಿ ಪಥ 9

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
74,014 ▲	22,462 ▲	₹71,400 (ಬೆಂಗಳೂರು) ▲	₹77,400 (ಬೆಂಗಳೂರು) ▲	83.35

ಉತ್ತರ ಕರ್ನಾಟಕದಲ್ಲಿ ಪ್ರಭಾವ ಹೆಚ್ಚು: ಹವಾಮಾನ ಇಲಾಖೆ ಮುನ್ಸೂಚನೆ

ಬರದ ನಡುವೆ ಬಿಸಿಗಾಳಿ ಭೀತಿ

ನವದೆಹಲಿ (ಪಿಟಿಐ): ಏಪ್ರಿಲ್‌ನಿಂದ ಜೂನ್‌ವರೆಗೆ ದೇಶದಲ್ಲಿ ಅತ್ಯಂತ ತೀವ್ರ ಪ್ರಮಾಣದ ಸೆಕೆ ಇರಲಿದೆ. ದೇಶದ ಮಧ್ಯಭಾಗ ಹಾಗೂ ದಕ್ಷಿಣ ಭಾರತದ ಪಶ್ಚಿಮ ಭಾಗದಲ್ಲಿ ಬಿಸಿಗಾಳಿಯ ತೀವ್ರತೆ ಹೆಚ್ಚಿರಲಿದೆ. ಉತ್ತರ ಕರ್ನಾಟಕವು ಬಿಸಿಗಾಳಿಯ ಕೆಟ್ಟ ಪರಿಣಾಮವನ್ನು ಎದುರಿಸಲಿದೆ.

ಕೇಂದ್ರ ಹವಾಮಾನ ಇಲಾಖೆಯು (ಐಎಂಡಿ) ಸೋಮವಾರ ಈ ಎಚ್ಚರಿಕೆ ನೀಡಿದೆ. ಏಳು ಹಂತಗಳ ಲೋಕಸಭಾ ಚುನಾವಣೆಯುದ್ದಕ್ಕೂ ಬಿಸಿಗಾಳಿಯ ತೀವ್ರತೆ ಕಾಡಲಿದೆ.

ಏಪ್ರಿಲ್‌ನಿಂದ ಜೂನ್‌ವರೆಗೆ ದೇಶದ ಬಹುತೇಕ ಕಡೆಗಳಲ್ಲಿ ಗರಿಷ್ಠ ತಾಪಮಾನವು ವಾಡಿಕೆಗಿಂತ ಹೆಚ್ಚಿರಲಿದೆ. ದೇಶದ ಮಧ್ಯಭಾಗದಲ್ಲಿ ಹಾಗೂ ದಕ್ಷಿಣ ಭಾರತದ ಪಶ್ಚಿಮ ಭಾಗದಲ್ಲಿ ಹೆಚ್ಚಿನ ತಾಪಮಾನದ ಸಾಧ್ಯತೆಯು ಜಾಸ್ತಿ ಇದೆ ಎಂದು ಇಲಾಖೆಯ ಮಹಾನಿರ್ದೇಶಕ ಮೃತ್ಯುಂಜಯ ಮಹಾಪಾತ್ರ ಹೇಳಿದ್ದಾರೆ.

11ನೇ ಪುಟ ನೋಡಿ

ಹವಾಮಾನ ಇಲಾಖೆ ನೀಡಿದ ಎಚ್ಚರಿಕೆ

- ದೇಶದ ಬಹುತೇಕ ಕಡೆಗಳಲ್ಲಿ ಏಪ್ರಿಲ್‌ನಲ್ಲಿ ಗರಿಷ್ಠ ತಾಪಮಾನವು ವಾಡಿಕೆಗಿಂತ ಹೆಚ್ಚಿರುವ ಸಾಧ್ಯತೆ ಇದೆ. ಈ ಸಾಧ್ಯತೆಯು ದಕ್ಷಿಣ ಭಾರತದ ಮಧ್ಯಭಾಗದಲ್ಲಿ ಜಾಸ್ತಿ
- ಗುಜರಾತ್, ಮಹಾರಾಷ್ಟ್ರದ ಮಧ್ಯಭಾಗ, ಉತ್ತರ ಕರ್ನಾಟಕ, ರಾಜಸ್ಥಾನ, ಮಧ್ಯಪ್ರದೇಶ, ಒಡಿಶಾ, ಛತ್ತೀಸಗಢದ ಉತ್ತರ ಭಾಗ ಮತ್ತು ಆಂಧ್ರ ಪ್ರದೇಶದಲ್ಲಿ ಬಿಸಿಗಾಳಿಯ ಪರಿಣಾಮವು ತೀರಾ ಕೆಟ್ಟದ್ದಾಗಿರಲಿದೆ
- ಮಧ್ಯ ಭಾರತ, ಉತ್ತರ ಭಾರತದ ಹಾಗೂ ದಕ್ಷಿಣ ಭಾರತದ ಹಲವು ಕಡೆಗಳಲ್ಲಿ ಬಿಸಿಗಾಳಿಯು ಏಪ್ರಿಲ್‌ನಲ್ಲಿ ವಾಡಿಕೆಗಿಂತ ಹೆಚ್ಚಾಗಿರುವ ಸಾಧ್ಯತೆ ಇದೆ
- ಈ ಪ್ರದೇಶಗಳಲ್ಲಿ ಬಿಸಿಗಾಳಿಯ ಪರಿಣಾಮವು ಈ ಬಾರಿ ಎರಡರಿಂದ ಎಂಟು ದಿನಗಳವರೆಗೆ ಇರಬಹುದು
- ಉತ್ತರ ಭಾರತದ ಹಲವೆಡೆ, ಪೂರ್ವ ಹಾಗೂ ಪಶ್ಚಿಮದ ಕರಾವಳಿ ಪ್ರದೇಶಗಳಲ್ಲಿ ತಾಪಮಾನವು ವಾಡಿಕೆಗಿಂತ 2–3 ಡಿಗ್ರಿ ಸೆಲ್ಸಿಯಸ್‌ನಷ್ಟು ಹೆಚ್ಚಿರಬಹುದು

ಬರಗಾಲ ಉಲ್ಬಣ

ಜಲಕ್ಷಾಮ
- **123** ತಾಲ್ಲೂಕುಗಳು
- **683** ಗ್ರಾಮ ಪಂಚಾಯಿತಿಗಳು
- **1,839** ಬಾಡಿಗೆಗೆ ಪಡೆದಿರುವ ಕೊಳವೆಬಾವಿಗಳು
- **316** ಟ್ಯಾಂಕರ್ ಮೂಲಕ ನೀರು ಪೂರೈಸುತ್ತಿರುವ ಗ್ರಾಮಗಳು

• ಆದಿತ್ಯ ಕೆ.ಎ.

ಬೆಂಗಳೂರು: ರಾಜ್ಯದಲ್ಲಿ ದಿನೇ ದಿನೆ ತಾಪಮಾನ ಏರಿಕೆ ಆಗುತ್ತಿದ್ದು, ಬರ ಪರಿಸ್ಥಿತಿಯೂ ಗಂಭೀರವಾಗುತ್ತಿದೆ. ಏಪ್ರಿಲ್ ಕಾಲಿಟ್ಟರೂ ಮಳೆ ಬರುವ ಮುನ್ಸೂಚನೆ ಕಾಣಿಸುತ್ತಿಲ್ಲ. ಕೆರೆ–ಕಟ್ಟೆಗಳು ಹಾಗೂ ನದಿ ತೊರೆಗಳು ಬರಿದಾಗಿ ನಿಂತಿವೆ.

ಫೆಬ್ರುವರಿ ವೇಳೆಯಲ್ಲಿ ರಾಜ್ಯದ ಹಲವು ಕೆರೆಗಳಲ್ಲಿ ಶೇ 50ರಷ್ಟು ನೀರು ಲಭ್ಯವಿತ್ತು. ಅವುಗಳಲ್ಲಿದ್ದ ನೀರು ಈಗ ಅರ್ಧದಷ್ಟು ಖಾಲಿಯಾಗಿದೆ.

ಕಳೆದ ವರ್ಷ ಮುಂಗಾರು ಕೈಕೊಟ್ಟ ಪರಿಣಾಮ, ಹಲವು ತಾಲ್ಲೂಕುಗಳನ್ನು ರಾಜ್ಯ ಸರ್ಕಾರ ಬರಪೀಡಿತ ಪಟ್ಟಿಗೆ ಸೇರಿಸಿತ್ತು. ಈಗ 25 ಜಿಲ್ಲೆಗಳ, 117 ತಾಲ್ಲೂಕುಗಳಲ್ಲಿ ಬರ ಪರಿಸ್ಥಿತಿ ಗಂಭೀರ ಸ್ವರೂಪ ಪಡೆದುಕೊಂಡಿದೆ. ಅಲ್ಲೀಗ ಟ್ಯಾಂಕರ್ ಹಾಗೂ ಬಾಡಿಗೆಗೆ ಕೊಳವೆಬಾವಿ ಪಡೆದು ಕುಡಿಯುವ ನೀರು ಪೂರೈಸಲಾಗುತ್ತಿದೆ. ಈ ತಿಂಗಳು ಮಳೆಯಾಗದಿದ್ದರೆ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸುವ ಸಾಧ್ಯತೆಯಿದೆ ಎಂದು ಕಂದಾಯ ಇಲಾಖೆ ಅಧಿಕಾರಿಗಳು ಹೇಳುತ್ತಾರೆ. ರಾಜ್ಯದಲ್ಲಿ 27,481 ಜನವಸತಿ ಪ್ರದೇಶಗಳಿದ್ದು, ಫೆಬ್ರುವರಿ ಹಾಗೂ ಮಾರ್ಚ್ ತಿಂಗಳಲ್ಲಿ ಹಲವು ವಾರ್ಡ್ ಹಾಗೂ ಗ್ರಾಮಗಳಲ್ಲಿ ನೀರಿನ ಸಮಸ್ಯೆ ಗೋಚರಿಸಿತ್ತು.

11ನೇ ಪುಟ ನೋಡಿ

ವರುಣ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷವು ಕನಿಷ್ಠ 60 ಸಾವಿರ ಮತಗಳ ಮುನ್ನಡೆ ಪಡೆಯಬೇಕು. ಅದು ಸಾಧ್ಯವಾದರೆ ನನಗೆ ಖುಷಿಯಾಗುತ್ತದೆ. ಆಗ ನನ್ನನ್ನು ಮುಟ್ಟಲು ಯಾರಿಂದಲೂ ಸಾಧ್ಯವಿಲ್ಲ
ಸಿದ್ದರಾಮಯ್ಯ, ಮುಖ್ಯಮಂತ್ರಿ

ಮಂಡ್ಯದಲ್ಲಿ ಹೆಚ್ಚಿನ ಸ್ಥಾನಗಳನ್ನು ನೀವು ಕಾಂಗ್ರೆಸ್ಸಿಗೆ (ವಿಧಾನಸಭಾ ಚುನಾವಣೆಯಲ್ಲಿ) ನೀಡಿದಾಗ ನಿಮ್ಮ ಮನಸ್ಸಿನಲ್ಲಿ ಇದ್ದಿದ್ದು ನಾನು. ನಿಮ್ಮ ಹಾರೈಕೆಯು ನಿರರ್ಥಕವಾಗುವುದಿಲ್ಲ.
ಡಿ.ಕೆ. ಶಿವಕುಮಾರ್, ಉಪ ಮುಖ್ಯಮಂತ್ರಿ

ಸಿ.ಎಂ ಹುದ್ದೆ ಮೇಲೆ ಕಣ್ಣಿಟ್ಟು ಸಿದ್ದರಾಮಯ್ಯ, ಡಿಕೆಶಿ ಮಾತಿನಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಮಹತ್ವಾಕಾಂಕ್ಷೆ ಹಾಗೂ ಅದಕ್ಕೆ ಎದುರಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೋಮವಾರ ಆಡಿರುವ ಮಾತುಗಳು ಲೋಕಸಭಾ ಚುನಾವಣೆಯ ಪ್ರಚಾರದ ಸಂದರ್ಭದಲ್ಲಿ ಮಹತ್ವ ಪಡೆದಿವೆ.

ರಾಜ್ಯದಲ್ಲಿ ಕಾಂಗ್ರೆಸ್ 2023ರಲ್ಲಿ ಅಧಿಕಾರಕ್ಕೆ ಮರಳಿದಾಗ ಮುಖ್ಯಮಂತ್ರಿ ಹುದ್ದೆಗಾಗಿ ಶಿವಕುಮಾರ್ ಲಾಬಿ ನಡೆಸಿದ್ದರು. ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ನಂತರವೂ, ಶಿವಕುಮಾರ್ ಅವರು ಆ ಹುದ್ದೆಗೆ ಏರುವುದು ಯಾವಾಗ ಎಂಬ ಬಗ್ಗೆ ಸಾರ್ವಜನಿಕವಾಗಿ ಚರ್ಚೆಗಳು ನಡೆಯುತ್ತಲೇ ಇವೆ.

ಸಿದ್ದರಾಮಯ್ಯ ಮತ್ತು ಶಿವಕುಮಾರ್ ಅವರು ಮತದಾರರನ್ನು ಉದ್ದೇಶಿಸಿ, ಕೆಲವು ಸ್ಪಷ್ಟ ಸಂದೇಶಗಳನ್ನು ರವಾನಿಸಿದರು. ಆ ಮೂಲಕ ಈ ಚುನಾವಣೆಯಲ್ಲಿ ತಾವು ಪಣಕ್ಕೆ ಒಡ್ಡಿರುವುದು ಏನನ್ನು ಎಂಬುದನ್ನು ಸೂಚ್ಯವಾಗಿ ಹೇಳಿದರು.

'ನಾನು ನಿಮಗೆ ಬೇಕೋ ಬೇಡವೋ' ಎಂದು ಸಿದ್ದರಾಮಯ್ಯ ಅವರು ವರುಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮತದಾರರನ್ನು ಉದ್ದೇಶಿಸಿ ಕೇಳಿದರು. ವರುಣ ಕ್ಷೇತ್ರವು ಚಾಮರಾಜನಗರ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರುತ್ತದೆ.

ವರುಣ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷವು ಕನಿಷ್ಠ 60 ಸಾವಿರ ಮತಗಳ ಮುನ್ನಡೆ ಪಡೆಯಬೇಕು ಎಂದು ಸಿದ್ದರಾಮಯ್ಯ ಹೇಳಿದರು. 'ಅದು ಸಾಧ್ಯವಾದರೆ ನನಗೆ ಖುಷಿಯಾಗುತ್ತದೆ. ಆಗ ನನ್ನನ್ನು ಮುಟ್ಟಲು ಯಾರಿಂದಲೂ ಸಾಧ್ಯವಿಲ್ಲ' ಎಂದು ಕೂಡ ಅವರು ಹೇಳಿದರು.

5ನೇ ಪುಟ ನೋಡಿ

ಕಾರ್ಯಕರ್ತರ ಸಭೆ • ಎಚ್‌ಡಿಕೆ ಜತೆ ರೋಡ್ ಶೋ

ಬಂಡಾಯ ಶಮನಕ್ಕೆ ಶಾ ಪ್ರವೇಶ

ಪ್ರಜಾವಾಣಿ ವಾರ್ತೆ



ಅಮಿತ್ ಶಾ

ಬೆಂಗಳೂರು: ಪಕ್ಷದೊಳಗಿನ ಆಂತರಿಕ ಭಿನ್ನಮತ, ಬಂಡಾಯದಂತಹ ಚಟುವಟಿಕೆಗಳನ್ನು ಗಂಭೀರವಾಗಿ ಪರಿಗಣಿಸಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಅಸಮಾಧಾನದ ಬೆಂಕಿ ಶಮನ ಮಾಡುವ ಯತ್ನ ನಡೆಸಲಿದ್ದಾರೆ.

ಸೋಮವಾರ ರಾತ್ರಿ ಬೆಂಗಳೂರಿಗೆ ಬಂದಿಳಿದ ಅಮಿತ್ ಶಾ, ಪಕ್ಷದ ವಿವಿಧ ಹಂತದ ನಾಯಕರ ಜತೆ, ಮಿತ್ರ ಪಕ್ಷ ಜೆಡಿಎಸ್ ನಾಯಕರ ಜತೆ ಹಲವು ಸಭೆಗಳನ್ನು ನಡೆಸಲಿದ್ದಾರೆ. ಪ್ರತ್ಯೇಕ ರಾಷ್ಟ್ರದ ಪ್ರಸ್ತಾಪ ಮಾಡಿ ವಿವಾದಕ್ಕೆ ಒಳಗಾಗಿದ್ದ ಸಂಸದ ಡಿ.ಕೆ.ಸುರೇಶ್ ಪ್ರತಿನಿಧಿಸುವ ಬೆಂಗಳೂರು ಗ್ರಾಮಾಂತರ ಕ್ಷೇತ್ರದಿಂದಲೇ ಕರ್ನಾಟಕದ ಚುನಾವಣಾ ಪ್ರಚಾರಕ್ಕೂ ಚಾಲನೆ ನೀಡಲಿದ್ದಾರೆ.

ವಿವಿಧ ಲೋಕಸಭಾ ಕ್ಷೇತ್ರಗಳಲ್ಲಿರುವ ಅಸಮಾಧಾನವನ್ನು ಬಗೆಹರಿಸುವುದರ ಜತೆಗೆ, ಮಿತ್ರ ಪಕ್ಷ ಜೆಡಿಎಸ್ ಜತೆಗೆ ಹೆಗಲಿಗೆ ಹೆಗಲುಕೊಟ್ಟು ಶ್ರಮಿಸಲು ಪಕ್ಷದ ನಾಯಕರು ಮತ್ತು ಕಾರ್ಯಕರ್ತರಿಗೆ ಮಾರ್ಗದರ್ಶನ ನೀಡಲಿದ್ದಾರೆ ಎಂದು ಬಿಜೆಪಿ ಮೂಲಗಳು ಹೇಳಿವೆ.

'ಕಳೆದ ವಿಧಾನಸಭಾ ಚುನಾವಣೆಯಲ್ಲಿ ಆದ ತಪ್ಪುಗಳು ಮರುಕಳಿಸದಂತೆ ಎಚ್ಚರವಹಿಸಿರುವ ಅಮಿತ್ ಶಾ ಅವರು, ಈ ವಿಚಾರವಾಗಿ ಪಕ್ಷದ ನಾಯಕರಿಗೆ ಸ್ಪಷ್ಟ ಸಂದೇಶ ರವಾನಿಸಲಿದ್ದಾರೆ. ಪಕ್ಷದ ಎಲ್ಲ ನಾಯಕರು ಮತ್ತು ಕಾರ್ಯಕರ್ತರು ಅಭ್ಯರ್ಥಿಯ ಗೆಲುವಿಗಾಗಿ ಶ್ರಮಿಸಬೇಕು. ಅಭ್ಯರ್ಥಿಗಿಂತ ಪಕ್ಷದ ಗೆಲುವು ಮತ್ತು ಮೋದಿ ಮತ್ತೊಮ್ಮೆ ಪ್ರಧಾನಿ ಆಗಬೇಕು ಎಂಬುದು ಮುಖ್ಯ. ಅದಕ್ಕಾಗಿ ಬೆವರು ಹರಿಸಬೇಕು. ಇದಕ್ಕೆ ವ್ಯತಿರಿಕ್ತವಾಗಿ ನಡೆದುಕೊಂಡರೆ, ಪರೋಕ್ಷವಾಗಿ ವಿರೋಧಿಗಳ ಜೊತೆ ಕೈ ಜೋಡಿಸಿದರೆ, ಅಂತಹವರನ್ನು ಸಹಿಸಿಕೊಳ್ಳುವ ಪ್ರಶ್ನೆಯೇ ಇಲ್ಲ ಎಂಬ ಎಚ್ಚರಿಕೆಯನ್ನೂ ನೀಡಲಿದ್ದಾರೆ' ವಿವರಿಸಿವೆ.

ಬಂಡಾಯ ಎದುರಿಸುತ್ತಿರುವ ಚಿಕ್ಕಬಳ್ಳಾಪುರ, ತುಮಕೂರು, ದಾವಣಗೆರೆ, ಚಿತ್ರದುರ್ಗ, ಬೀದರ್, ಬೆಳಗಾವಿ ಲೋಕಸಭಾ ಕ್ಷೇತ್ರಗಳ ಜಿಲ್ಲಾ ಪ್ರಮುಖ ನಾಯಕರ ಸಮಿತಿ (ಕೋರ್ ಕಮಿಟಿ) ಸದಸ್ಯರ ಜೊತೆಗೂ ಶಾ ಸಭೆ ನಡೆಸಲಿದ್ದಾರೆ.

ಸಮಾವೇಶ– ರೋಡ್ ಶೋ: ಮಂಗಳವಾರ ಇಡೀ ದಿನ ಸಮಾವೇಶ, ಸಭೆಗಳ ಜತೆಗೆ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ವ್ಯಾಪ್ತಿಯ ಚನ್ನಪಟ್ಟಣದಲ್ಲಿ ರೋಡ್ ಶೋ ನಡೆಸಲಿದ್ದಾರೆ. ರೋಡ್ ಶೋನಲ್ಲಿ ಜೆಡಿಎಸ್ ರಾಜ್ಯ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಭಾಗವಹಿಸಲಿದ್ದಾರೆ.

5ನೇ ಪುಟ ನೋಡಿ

'ಚನ್ನಪಟ್ಟಣದಿಂದ ರಾಜ್ಯಕ್ಕೆ ಸಂದೇಶ'

'ರಾಜ್ಯದ 28 ಸ್ಥಾನಗಳನ್ನು ನಮ್ಮ ಮೈತ್ರಿಕೂಟ ಗೆಲ್ಲಬೇಕು. ಯಾವುದೇ ಕ್ಷೇತ್ರದಲ್ಲಿಯೂ ಸಮಸ್ಯೆ ಆಗಬಾರದು. ಹೊಂದಾಣಿಕೆಗೆ ಧಕ್ಕೆ ಆಗಬಾರದು. ಗುರಿ ತಲುಪಲು ಯಾವುದೇ ಲೋಪ ಆಗಬಾರದು ಎಂಬ ಉದ್ದೇಶ ನಮ್ಮದು. ಈ ಎಲ್ಲ ವಿಷಯಗಳನ್ನು ಅಮಿತ್ ಶಾ ಜತೆಗಿನ ಸಭೆಯಲ್ಲಿ ಚರ್ಚೆ ಮಾಡುವೆ' ಎಂದು ಜೆಡಿಎಸ್ ರಾಜ್ಯಾಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

'ಸಂಜೆ ಚನ್ನಪಟ್ಟಣದಲ್ಲಿ ನಡೆಯುವ ರೋಡ್‌ಶೋದಲ್ಲಿ ಇಬ್ಬರೂ ಭಾಗವಹಿಸುತ್ತೇವೆ. ಇಡೀ ರಾಜ್ಯಕ್ಕೆ ಚನ್ನಪಟ್ಟಣದಿಂದ ಒಂದು ಸ್ಪಷ್ಟ ಸಂದೇಶ ನೀಡುತ್ತವೆ' ಎಂದು ಅವರು ತಿಳಿಸಿದರು.

ಚಿನ್ನದ ದರ 10 ಗ್ರಾಂಗೆ ₹71,400

ನವದೆಹಲಿ (ಪಿಟಿಐ): ಚಿನ್ನ ಮತ್ತು ಬೆಳ್ಳಿ ದರವು ಏರಿಕೆ ಆಗಿದ್ದು, ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ಸೋಮವಾರ ತಲುಪಿದೆ. ಬೆಂಗಳೂರಿನಲ್ಲಿ 10 ಗ್ರಾಂ ಚಿನ್ನದ ದರವು ₹71,400ಕ್ಕೆ ಏರಿಕೆಯಾಗಿದೆ.

ದೆಹಲಿ ಚಿನಿವಾರ ಪೇಟೆಯಲ್ಲಿ ಚಿನ್ನದ ದರವು 10 ಗ್ರಾಂಗೆ ₹1,070 ಏರಿಕೆಯಾಗಿದ್ದು, ₹68,420ಕ್ಕೆ ಮಾರಾಟವಾಯಿತು.

'ಜಾಗತಿಕ ಮಾರುಕಟ್ಟೆಯಲ್ಲಿಯೂ ಚಿನ್ನದ ದರ ಏರಿಕೆ ಕಂಡಿದೆ. ಇದು ದೇಶೀಯ ಮಾರುಕಟ್ಟೆ ಮೇಲೂ ಪರಿಣಾಮ ಬೀರಿದೆ' ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಹಿರಿಯ ವಿಶ್ಲೇಷಕ ದಿಲೀಪ್ ಪರ್ಮಾರ್ ಹೇಳಿದ್ದಾರೆ.

ಚಂದ್ರು ಆಸ್ತಿ ₹ 410 ಕೋಟಿ, ಯದುವೀರ್ ಆಸ್ತಿ ₹ 6 ಕೋಟಿ

ಮೈಸೂರು–ಕೊಡಗು ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ದಂಪತಿ ಆಸ್ತಿ ಮೌಲ್ಯ ₹6 ಕೋಟಿ ಇದ್ದರೆ, ಮಂಡ್ಯ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ ದಂಪತಿ ₹410 ಕೋಟಿ ಮೌಲ್ಯದ ಆಸ್ತಿಯ ಒಡೆಯರಾಗಿದ್ದಾರೆ. ಒಂದು ಸಾಮ್ಯತೆ ಎಂದರೆ ಎರಡೂ ಕುಟುಂಬಗಳ ಬಳಿ ಸ್ವಂತ ಕಾರುಗಳಿಲ್ಲ. ಆದರೆ, ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಮೂರು ಟ್ರ್ಯಾಕ್ಟರ್‌ಗಳ ಮಾಲೀಕ. ಯದುವೀರ ಕುಟುಂಬ ಆರೂವರೆ ಕೆ.ಜಿ. ಚಿನ್ನ ಹೊಂದಿದ್ದರೆ, ವೆಂಕಟರಮಣೇಗೌಡ ಪತ್ನಿ ಕುಸುಮಾ 4.2 ಕೆ.ಜಿ ಚಿನ್ನದ ಒಡತಿ.

ಅಭ್ಯರ್ಥಿಗಳ ಆಸ್ತಿ ವಿವರ

ಅಭ್ಯರ್ಥಿಯ ಹೆಸರು: ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್

- ಪಕ್ಷ: ಬಿಜೆಪಿ
- ಒಟ್ಟು ಆಸ್ತಿಯ ಮೌಲ್ಯ: ₹4.99 ಕೋಟಿ
- ನಗದು: ₹1 ಲಕ್ಷ
- ಚರಾಸ್ತಿ: ₹4.99 ಕೋಟಿ
- ಸ್ಥಿರಾಸ್ತಿ: ಇಲ್ಲ
- ವಾಹನ: ಇಲ್ಲ
- ಚಿನ್ನ: 4 ಕೆ.ಜಿ.
- ಬೆಳ್ಳಿ: 20 ಕೆ.ಜಿ.
- ಸಾಲ: ಇಲ್ಲ
- ಅಪರಾಧ ಪ್ರಕರಣ: ಇಲ್ಲ

ಪತ್ನಿ: ತ್ರಿಷಿಕಾ ದೇವಿ
- ಒಟ್ಟು ಆಸ್ತಿಯ ಮೌಲ್ಯ: ₹1.04 ಕೋಟಿ
- ನಗದು: ₹75 ಸಾವಿರ
- ಚರಾಸ್ತಿ: ₹1.04 ಕೋಟಿ
- ಸ್ಥಿರಾಸ್ತಿ: ಇಲ್ಲ
- ವಾಹನ: ಇಲ್ಲ
- ಚಿನ್ನ: 2 ಕೆ.ಜಿ.100 ಗ್ರಾಂ.
- ಬೆಳ್ಳಿ: 10 ಕೆ.ಜಿ.
- ಸಾಲ: ಇಲ್ಲ

ಮಗ: ಆದ್ಯವೀರ್
- ಒಟ್ಟು ಆಸ್ತಿಯ ಮೌಲ್ಯ: ₹3.63 ಕೋಟಿ
- ನಗದು: ₹5 ಸಾವಿರ
- ಸ್ಥಿರಾಸ್ತಿ: ಇಲ್ಲ
- ಚರಾಸ್ತಿ: ₹3.63 ಕೋಟಿ
- ವಾಹನ: ಇಲ್ಲ
- ಚಿನ್ನ: 500 ಗ್ರಾಂ.
- ಬೆಳ್ಳಿ: 10 ಕೆ.ಜಿ.
- ಸಾಲ: ಇಲ್ಲ

ಅಭ್ಯರ್ಥಿಯ ಹೆಸರು: ವೆಂಕಟರಮಣೇಗೌಡ (ಸ್ಟಾರ್ ಚಂದ್ರು)

- ಪಕ್ಷ: ಕಾಂಗ್ರೆಸ್
- ಒಟ್ಟು ಆಸ್ತಿಯ ಮೌಲ್ಯ: ₹410 ಕೋಟಿ
- ಚರಾಸ್ತಿ: ₹1,36,14,355
- ಸ್ಥಿರಾಸ್ತಿ: ₹236 ಕೋಟಿ
- ವಾಹನ: 3 ಟ್ರ್ಯಾಕ್ಟರ್ (ಕಾರು ಇಲ್ಲ)
- ಚಿನ್ನ: ಇಲ್ಲ
- ಬೆಳ್ಳಿ: ಇಲ್ಲ
- ಸಾಲ: ₹15.50 ಕೋಟಿ
- ಅಪರಾಧ ಪ್ರಕರಣ: ಇಲ್ಲ

ಪತ್ನಿ: ಕೆ.ಕುಸುಮಾ
- ಒಟ್ಟು ಆಸ್ತಿಯ ಮೌಲ್ಯ: ₹146 ಕೋಟಿ
- ಚರಾಸ್ತಿ: ₹64,94,175
- ಸ್ಥಿರಾಸ್ತಿ: ₹127 ಕೋಟಿ
- ವಾಹನ: ಇಲ್ಲ
- ಚಿನ್ನ: 4.2 ಕೆಜಿ (₹ 2.30 ಕೋಟಿ)
- ವಜ್ರ: 71 ಕ್ಯಾರೆಟ್ (₹ 15 ಲಕ್ಷ)
- ಬೆಳ್ಳಿ: 26 ಕೆ.ಜಿ (₹21.50 ಲಕ್ಷ)
- ಸಾಲ: ಇಲ್ಲ
- ಹಿಂದೂ ಅವಿಭಕ್ತ ಕುಟುಂಬದ ಆಸ್ತಿ (ಎಚ್‌ಯುಎಫ್)
- ಸ್ಥಿರಾಸ್ತಿ: ₹26 ಕೋಟಿ

ಸೋಮಣ್ಣ ಆಸ್ತಿ ವಿವರ

ಅಭ್ಯರ್ಥಿಯ ಹೆಸರು: ವಿ.ಸೋಮಣ್ಣ
ಪಕ್ಷ: ಬಿಜೆಪಿ

- ಒಟ್ಟು ಆಸ್ತಿಯ ಮೌಲ್ಯ: ₹17.74 ಕೋಟಿ
- ನಗದು: ₹8.12 ಲಕ್ಷ
- ಒಟ್ಟು ಚರಾಸ್ತಿ: ₹5.18 ಕೋಟಿ
- ಸ್ಥಿರಾಸ್ತಿ: ₹12.56 ಕೋಟಿ
- ವಾಹನ: ₹27 ಲಕ್ಷ
- ಚಿನ್ನ: ₹5.33 ಲಕ್ಷ
- ಬೆಳ್ಳಿ: ₹5.12 ಲಕ್ಷ
- ಸಾಲ: ₹6.44 ಕೋಟಿ
- ಅಪರಾಧ ಪ್ರಕರಣ: ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿದ ಪ್ರಕರಣ

ಪತ್ನಿ: ಪಿ.ಶೈಲಜಾ
- ಒಟ್ಟು ಆಸ್ತಿಯ ಮೌಲ್ಯ: ₹43.03 ಕೋಟಿ
- ನಗದು: ₹3 ಲಕ್ಷ
- ಒಟ್ಟು ಚರಾಸ್ತಿ: ₹4.38 ಕೋಟಿ
- ಸ್ಥಿರಾಸ್ತಿ: ₹38.65 ಕೋಟಿ
- ವಾಹನ: ₹10.07 ಲಕ್ಷ
- ಚಿನ್ನ: ₹98.42 ಲಕ್ಷ
- ಬೆಳ್ಳಿ: ₹7.22 ಲಕ್ಷ
- ಸಾಲ: ₹16.18 ಕೋಟಿ

ಒಂದು ವಾಹನ, ಒಂದು ಫಾಸ್ಟ್ಯಾಗ್ ಜಾರಿ

ನವದೆಹಲಿ (ಪಿಟಿಐ): ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ 'ಒಂದು ವಾಹನ, ಒಂದು ಫಾಸ್ಟ್ಯಾಗ್' ನಿಯಮವು ಸೋಮವಾರದಿಂದ ಜಾರಿಯಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಒಂದೇ ವಾಹನಕ್ಕೆ ಹಲವು ಫಾಸ್ಟ್ಯಾಗ್‌ಗಳನ್ನು ಅಳವಡಿಸಿಕೊಂಡಿದ್ದರೆ, ಅವು ಏಪ್ರಿಲ್ 1ರಿಂದ ಕಾರ್ಯನಿರ್ವಹಿಸುವುದಿಲ್ಲ' ಎಂದೂ ಅವರು ಹೇಳಿದ್ದಾರೆ. ಹಾಗೆಯೇ ಹಲವು ವಾಹನಗಳಿಗೆ ಒಂದೇ ಫಾಸ್ಟ್ಯಾಗ್ ಬಳಕೆಗೂ ಅವಕಾಶ ಇಲ್ಲ.

ಪೇಟಿಎಂ ಫಾಸ್ಟ್ಯಾಗ್ ಬಳಕೆದಾರರು ತೊಂದರೆಗಳನ್ನು ಅನುಭವಿಸುವ ಸಾಧ್ಯತೆ ಇದ್ದುದರಿಂದ 'ಒಂದು ವಾಹನ, ಒಂದು ಫಾಸ್ಟ್ಯಾಗ್' ಉಪ ಕ್ರಮವನ್ನು ಅಳವಡಿಸಿಕೊಳ್ಳಲು ವಾಹನ ಮಾಲೀಕರಿಗೆ ಮಾರ್ಚ್ ಅಂತ್ಯದವರೆಗೆ ಕಾಲಾವಕಾಶ ನೀಡಲಾಗಿತ್ತು.

ಮತ ಜಾಗೃತಿ
ಮಧ್ಯಪ್ರದೇಶದ ಜಬಲ್‌ಪುರದಲ್ಲಿ ಲೋಕಸಭಾ ಚುನಾವಣೆ ಪ್ರಚಾರದ ಭಾಗವಾಗಿ 'ಅಹಿಂಸಾ ನಡಿಗೆ' ಮತ ಜಾಗೃತಿ ಅಭಿಯಾನದಲ್ಲಿ ಪಾಲ್ಗೊಂಡಿದ್ದ ಜನರು –ಎಎಫ್‌ಪಿ ಚಿತ್ರ

ದ್ವಿತೀಯ ಪಿಯು: ಏ.10ಕ್ಕೆ ಫಲಿತಾಂಶ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿತೀಯ ಪಿಯು ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯ ಬಹುತೇಕ ಮುಕ್ತಾಯ ಹಂತಕ್ಕೆ ತಲುಪಿದ್ದು, ಇದೇ ಏ.10ಕ್ಕೆ ಫಲಿತಾಂಶ ಪ್ರಕಟಿಸಲು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಸಿದ್ಧತೆ ನಡೆಸಿದೆ.

ರಾಜ್ಯದ 1,124 ಕೇಂದ್ರಗಳಲ್ಲಿ ಮಾರ್ಚ್ 1ರಿಂದ 22ರವರೆಗೆ ಪರೀಕ್ಷೆಗಳು ನಡೆದಿದ್ದವು. ಹೆಸರು ನೋಂದಾಯಿಸಿಕೊಂಡಿದ್ದ 6.98 ಲಕ್ಷ ವಿದ್ಯಾರ್ಥಿಗಳಲ್ಲಿ ಶೇ 98ರಷ್ಟು ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು.

2024–25ನೇ ಸಾಲಿನ ಶೈಕ್ಷಣಿಕ ವರ್ಷ ಆರಂಭವಾಗುವ ಮೊದಲು ಮೂರು ವಾರ್ಷಿಕ ಪರೀಕ್ಷೆಗಳನ್ನು ನಡೆಸಿ, ಫಲಿತಾಂಶ ನೀಡಬೇಕಿದೆ.

ಚಿನಕುರಳಿ
ಪ್ರಕಾಶ್ ಶೆಟ್ಟಿ

ವಿಚಾರಣೆ ವೇಳೆ ಕೇಜ್ರಿವಾಲ್ ಹೇಳಿಕೆ: ಇ.ಡಿ

'ಆತಿಶಿ, ಸೌರಭ್ ಹೆಸರು ಉಲ್ಲೇಖ'

ಪ್ರಜಾವಾಣಿ ವಾರ್ತೆ

ನವದೆಹಲಿ: ಅಬಕಾರಿ ನೀತಿ ಹಗರಣದ ಆರೋಪಿ ವಿಜಯ್ ನಾಯರ್ ಜೊತೆಗೆ ತಮ್ಮ ಸಂಬಂಧ ಸೀಮಿತವಾಗಿತ್ತು. ಆದರೆ, ದೆಹಲಿಯ ಸಚಿವರಾದ ಆತಿಶಿ ಮರ್ಲೆನಾ ಮತ್ತು ಸೌರಭ್ ಭಾರದ್ವಾಜ್ ಅವರ ನಿರ್ದೇಶನದಂತೆ ನಾಯರ್ ಕೆಲಸ ಮಾಡುತ್ತಿದ್ದರು ಎಂಬುದಾಗಿ ದೆಹಲಿಯ ಮುಖ್ಯಮಂತ್ರಿ ಹೇಳಿದ್ದಾರೆ ಎಂದು ಜಾರಿ ನಿರ್ದೇಶನಾಲಯವು ದೆಹಲಿಯ ನ್ಯಾಯಾಲಯಕ್ಕೆ ಸೋಮವಾರ ಹೇಳಿದೆ.

ಈ ಪ್ರಕರಣದಲ್ಲಿ ಮಾರ್ಚ್ 21ರಂದು ಬಂಧಿತರಾಗಿರುವ ಕೇಜ್ರಿವಾಲ್ ತನಿಖೆಗೆ ಸಹಕರಿಸುತ್ತಿಲ್ಲ. ಹಾರಿಕೆಯ ಉತ್ತರಗಳನ್ನು ಕೊಡುತ್ತಿದ್ದಾರೆ. ಕಸ್ಟಡಿ ವಿಚಾರಣೆ ಸಂದರ್ಭದಲ್ಲಿಯೂ ಮಾಹಿತಿ ಮುಚ್ಚಿಟ್ಟಿದ್ದಾರೆ ಎಂದು ವಿಶೇಷ ನ್ಯಾಯಾಧೀಶೆ ಕಾವೇರಿ ಬವೇಜಾ ಅವರ ಮುಂದೆ ಇ.ಡಿ. ಆರೋಪಿಸಿದೆ.

ತಾವು ದೆಹಲಿಯ ಸಚಿವರೊಬ್ಬರ ಬಂಗಲೆಯಲ್ಲಿ ನೆಲೆಸಿ, ಮುಖ್ಯಮಂತ್ರಿಯವರ ಕ್ಯಾಂಪ್ ಕಚೇರಿಯಿಂದಲೇ ಕಾರ್ಯನಿರ್ವಹಿಸುತ್ತಿದ್ದುದಾಗಿ ವಿಜಯ್ ನಾಯರ್ ಹೇಳಿದ್ದಾರೆ. ಅಬಕಾರಿ ನೀತಿ ಹಗರಣದಲ್ಲಿ ಮೊದಲಿಗೆ ನಾಯರ್ ಅವರನ್ನು ಬಂಧಿಸಲಾಗಿದೆ.

ಮುಖ್ಯಮಂತ್ರಿಯವರ ಕ್ಯಾಂಪ್ ಕಚೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ವ್ಯಕ್ತಿಯೊಬ್ಬರು ಎಎಪಿಯ ಇತರ ಮುಖಂಡರ ಜೊತೆಗೆ ಕೆಲಸ ಕಾರ್ಯಗಳ ವಿವರಗಳನ್ನು ಯಾಕೆ ಹಂಚಿಕೊಳ್ಳಬೇಕು ಎಂಬ ಪ್ರಶ್ನೆಯನ್ನು ಕೇಜ್ರಿವಾಲ್ ಅವರಿಗೆ ಕೇಳಲಾಗಿದೆ. ಆದರೆ, ಅದಕ್ಕೆ ಅವರು ಸಮರ್ಪಕ ಉತ್ತರ ಕೊಟ್ಟಿಲ್ಲ. ಕ್ಯಾಂಪ್ ಕಚೇರಿಯು ಮುಖ್ಯಮಂತ್ರಿಗಾಗಿ ಕೆಲಸ ಮಾಡುತ್ತದೆಯೇ ಹೊರತು ಎಎಪಿಗಾಗಿ ಅಲ್ಲ ಎಂದು ಅವರಿಗೆ ಹೇಳಲಾಯಿತು. ಇದಕ್ಕೆ ಪ್ರತಿಕ್ರಿಯೆಯಾಗಿ ಕೇಜ್ರಿವಾಲ್ ಅವರು, ಕ್ಯಾಂಪ್ ಕಚೇರಿಯಲ್ಲಿ ಯಾರು ಕೆಲಸ ಮಾಡುತ್ತಿದ್ದರು ಎಂಬುದು ತಮಗೆ ತಿಳಿದಿಲ್ಲ ಎಂಬ ಹಾರಿಕೆಯ ಉತ್ತರವನ್ನು ಕೊಟ್ಟಿದ್ದಾರೆ ಎಂದು ಇ.ಡಿ ವಾದಿಸಿದೆ.

4Bನೇ ಪುಟ ನೋಡಿ

15ರ ವರೆಗೆ ನ್ಯಾಯಾಂಗ ಬಂಧನ

ಕೇಜ್ರಿವಾಲ್ ಅವರನ್ನು ಇನ್ನಷ್ಟು ವಿಚಾರಣೆ ನಡೆಸುವ ಅಗತ್ಯವಿದೆ. ಅವರನ್ನು ಇನ್ನೂ 15 ದಿನ ತನ್ನ ವಶಕ್ಕೆ ನೀಡಬೇಕು ಎಂದು ಇ.ಡಿ ಪ್ರಕರಣದ ವಿಚಾರಣೆ ನಡೆಸುತ್ತಿರುವ ವಿಶೇಷ ಕೋರ್ಟ್‌ಗೆ ಮನವಿ ಸಲ್ಲಿಸಿತು.

ವಿಚಾರಣೆ ಆಲಿಸಿದ ನ್ಯಾಯಾಧೀಶೆ ಕಾವೇರಿ ಬವೇಜಾ ಅವರು ಅಂತಿಮವಾಗಿ ಕೇಜ್ರಿವಾಲ್ ಅವರನ್ನು ಏ. 15ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದರು. ಆದೇಶದ ಹಿಂದೆಯೇ ಕೇಜ್ರಿವಾಲ್ ಅವರನ್ನು ತಿಹಾರ್ ಜೈಲಿಗೆ ಕರೆದೊಯ್ಯಲಾಯಿತು.

ಅರವಿಂದ ಕೇಜ್ರಿವಾಲ್ ಸೋಮವಾರ ವಿಶೇಷ ಕೋರ್ಟ್‌ಗೆ ಹಾಜರಾಗಲು ಬಂದ ಸಂದರ್ಭ –ಪಿಟಿಐ ಚಿತ್ರ

ನೈಋತ್ಯ ರೈಲ್ವೆ

ಟೆಂಡರ್ ಸೂಚನೆ ಸಂ. CAO/CN/BNC/116/2024 ದಿನಾಂಕ: 27.03.2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರಣೆ	ಅಂದಾಜು ಮೌಲ್ಯ
ಗದಗ-ವಾಡಿ ಹೊಸ ಬಿಜಿ ಲೈನ್: ಶಹಾಪುರ ಮತ್ತು ವಾಡಿ (ಜಂಕ್ಷನ್) ನಿಲ್ದಾಣದ ನಡುವೆ ಕಿಮಿ 210/500 ರಿಂದ 257/260 ವರೆಗೆ ನಾನಾ ಕಾಮಗಾರಿಗಳು. (ಟೆಂಡರ್ ಉಲ್ಲೇಖ ಸಂಖ್ಯೆ: W.496/GDG-WD-58)	ರೂ. 42,62,04,106/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 18-04-2024, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಎಂಜಿನಿಯರ್ / ನಿರ್ಮಾಣ ಕಾಮಗಾರಿಗಳು / ಬೆಂಗಳೂರು ಕಂಟೋನ್ಮೆಂಟ್

PUB/783/AAV/PRB/SWR/2023-24

South Western Railway-SWR SWRRLY SWRRLY

ಸಾರ್ವಜನಿಕ ಪ್ರಕಟಣೆ

ಈ ದಿನ ಪ್ರಕಟಿಸುತ್ತಿರುವ ವಿಚಾರ ಏನೆಂದರೆ, ಡಾ|| ಹರೀಶ್ ಕುಮಾರ್.ಎನ್. ಬಿನ್ ಲೇ|| ಪಿ. ನರಸಿಂಹಯ್ಯ & ಶ್ರೀಮತಿ ಡಿ.ಗೌರಮ್ಮ ಮತ್ತು ಶ್ರೀ ಲೇ|| ಹೆಚ್. ದಾಸಪ್ಪ ಹಾಗೂ ಶ್ರೀಮತಿ ಲೇ|| ಯಲ್ಲಮ್ಮರವರ ಮೊಮ್ಮಗನಾದ ನಾನು ಸಾರ್ವಜನಿಕರಲ್ಲಿ ವಿನಂತಿಸಿ ಕೊಳ್ಳುವುದೇನೆಂದರೆ, ನಮ್ಮ ತಂದೆ ತಾಯಿ ಹಾಗೂ ಅಜ್ಜ ಅಜ್ಜಿ ಇವರ ಪಿತ್ರಾರ್ಜಿತ ಆಸ್ತಿಗಳಾದ ಹಾರೋಹಳ್ಳಿ ಗ್ರಾಮದ 33 ಎಕರೆ ತೋಟ, ಯಲ್ಲಮ್ಮ ದಾಸಪ್ಪ ಮೆಡಿಕಲ್ ಕಾಲೇಜು & ರಿಸರ್ಚ್ ಫೌಂಡೇಶನ್ (ವೈಡಿಐಟಿ) ರಘುವನಹಳ್ಳಿ-5.5 ಎಕರೆ, ಶ್ರೀ ರಾಮಕೃಷ್ಣ ಲಾಡ್ಜ್ ಹಾಗೂ ರೆಸ್ಟೋರೆಂಟ್, ಶ್ರೀ ರಾಮಕೃಷ್ಣ ಹೋಟೆಲ್ಸ್, ಕಪಾಲಿ ಥಿಯೇಟರ್ ಕಾಂಪ್ಲೆಕ್ಸ್-ಗಾಂಧಿನಗರ ಬೆಂಗಳೂರು, ಯಲ್ಲಮ್ಮ ದಾಸಪ್ಪ ಹಾಸ್ಪಿಟಲ್, ಶಾಂತಿ ನಗರ, ವಾಣಿ ಥಿಯೇಟರ್-ಕನಕಪುರ, ಈ ಎಲ್ಲಾ ಆಸ್ತಿಗಳಲ್ಲಿ ಹಿಂದೂ ಅವಿಭಕ್ತ ಕುಟುಂಬದ ಎಲ್ಲಾ ಸದಸ್ಯರಿಗೂ ಸೇರಿರುವಂತಹ ಆಸ್ತಿಯ ಹಕ್ಕು ಹೊಂದಿರುವಂತಹ ಸ್ಥಿರಾ & ಚರಾ ಆಸ್ತಿಗಳನ್ನು ವಾಣಿಜ್ಯ ಸಂಕೀರ್ಣ & ಜಮೀನು ತೋಟಗಳನ್ನು ಕುಟುಂಬದ ಸದಸ್ಯರಾದ ಎಲ್ಲಾ ಹಕ್ಕುದಾರರುಗಳಿಗೆ ವಂಚಿಸುತ್ತಾ ಪಿತೂರಿ ನಡೆಸಿ, ನಮ್ಮ ಕುಟುಂಬದ ದಾಯಾದಿಗಳು ವಯೋ ವೃದ್ಧೆಯಾದ, ವಿಧವೆಯಾದ ಮಾತೃಶ್ರೀ ಡಿ.ಗೌರಮ್ಮರವರಿಗೆ ಮಂಕುಬೂದಿ ಎರಚಿ ಅನಾರೋಗ್ಯದಿಂದ ಬಳಲುತ್ತಿರುವ ಸಂಧರ್ಭದಲ್ಲಿ ವಂಚಿಸಿ ಈಗಾಗಲೇ ಒಮ್ಮೆ ಚೆಕ್ ಬೌನ್ಸ್ ಪ್ರಕರಣದಲ್ಲ ಮೂಲ ಅಪರಾಧಿ ಯನ್ನಾಗಿಸಿ ಜೈಲು ವಾಸಕ್ಕೆ ಕಾರಣರಾಗಿದ್ದ ಸಂದರ್ಭದಲ್ಲಿ ಪಟ್ಟಬದ್ಧ ಹಿತಾಸಕ್ತಿಗಳು ಹುನ್ನಾರ ನಡೆಸಿ, ಕುಟುಂಬದ ಆಸ್ತಿಯನ್ನು ಕಾನೂನು ಬಾಹಿರವಾಗಿ ಪರಭಾರೆ ಮಾಡಲು ಯಾವುದೇ ರೀತಿಯಾ ಕರಾರು ಒಪ್ಪಂದಗಳಿಗೆ ಸಾರ್ವಜನಿಕರು ಮೋಸ ಹೋಗಬಾರದಾಗಿ ಈ ಮೂಲಕ ಈ ಸಾರ್ವಜನಿಕ ಪ್ರಕಟಣೆಯನ್ನು ಬಹಿರಂಗವಾಗಿ ನೀಡುತ್ತಿದ್ದೇನೆ. ತತ್ಸಬಂಧ ಘನ ನ್ಯಾಯಾಲಯ ಗಳಲ್ಲಿ ಸಿವಿಲ್ ಹಾಗೂ ಕ್ರಿಮಿನಲ್ ಮೊಕದ್ದಮೆಗಳು 30 ವರ್ಷಗಳಿಂದಲೂ ನಡೆಯುತ್ತಿರುವಾಗ ಮಾರಾಟ, ಕ್ರಯ, ಒಪ್ಪಂದ ಮಾಡಿಕೊಂಡರೆ ಮುಂದೆ ಆಗುವ ಅನಾಹುತಗಳಿಗೆ, ಕಾನೂನು ತೊಡಕುಗಳಿಗೆ ಮಾರಾಟಗಾರರು ಹಾಗೂ ಕೊಳ್ಳುವವರ ಮೇಲೆ ಶಿಸ್ತು ಕಾನೂನು ಕ್ರಮ ಜರುಗಿಸುವುದಾಗಿ ಈ ಮೂಲಕ ಎಚ್ಚರಿಕೆ ನೀಡುತ್ತಿದ್ದೇನೆ.

ಡಾ|| ಹರೀಶ್ ಕುಮಾರ್,
ಶ್ರೀ ಅಪ್ಪಾಜಿಗೌರಮ್ಮ ಎಸ್ಟೇಟ್, ಹಾರೋಹಳ್ಳಿ ಹೋಬಳಿ & ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ.
ಮೊ: 9535953809.

ಸುಧಾ, ಮಯೂರ ಓದಿರಿ

ನೈಋತ್ಯ ರೈಲ್ವೆ

ಟೆಂಡರ್ ಸೂಚನೆ ಸಂ. 11/2024 ದಿನಾಂಕ: 26.03.2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ವಸ್ತುಗಳ ಸರಬರಾಜಿಗಾಗಿ ಐಆರ್‌ಇಪಿಎಸ್ ಮುಖಾಂತರ ಮಾತ್ರ ಇ-ಟೆಂಡರ್ ಆಹ್ವಾನಿಸಿದ್ದಾರೆ.

ಸಂಕ್ಷಿಪ್ತ ವಿವರಣೆ: FTRTIL WSPD ಐಟಂಗಳ ಸೆಟ್: ಎಲ್‌ಎಚ್‌ಬಿ ಮಾದರಿಯ ಕೋಚ್‌ಗಳ ಡಬ್ಲ್ಯೂಎಸ್‌ಪಿ ವ್ಯವಸ್ಥೆಗಾಗಿ ಎನ್2 ಬೋರ್ಡ್, ಫೇವಲಿ ಪಾರ್ಟ್. ಸಂಖ್ಯೆ ನಿರ್ಮಾಣದ ಎಂವಿ ಬೋರ್ಡ್, ಎನ್1 ಬೋರ್ಡ್ ಮತ್ತು ಜಿಇ ಬೋರ್ಡ್.

(ಟೆಂಡರ್ ಸಂಖ್ಯೆ L8236595A) (ಪ್ರಮಾಣ: 40 ಸಂಖ್ಯೆಗಳು)

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 16-04-2024, 10:30 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಹಿರಿಯ ವಿಭಾಗೀಯ ಸಾಮಗ್ರಿಗಳ ಪ್ರಬಂಧಕರು ಬೆಂಗಳೂರು

PUB/781/AAV/PRB/SWR/2023-24

South Western Railway-SWR SWRRLY SWRRLY

ನೈಋತ್ಯ ರೈಲ್ವೆ

ಟೆಂಡರ್ ಸೂಚನೆ ಸಂ. BE-29-2023-24-0T-33,34,35

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಒಟಿ ಸಂ.	ಕಾಮಗಾರಿಗಳ ಹೆಸರು	ಅಂದಾಜು ಮೌಲ್ಯ
33	ಕೆಎಸ್‌ಆರ್ ಬೆಂಗಳೂರು ವಿಭಾಗದ ಗೂಡ್ಸ್ ಶೆಡ್‌ಗಳ ಯಾರ್ಡ್‌ಗಳು ಮತ್ತು ಪ್ರಮುಖ ನಿಲ್ದಾಣಗಳ ಯಾರ್ಡ್‌ಗಳಲ್ಲಿ ಬೆಳಕಿನಲ್ಲಿ ಸುಧಾರಣೆ	ರೂ. 1,89,77,806/-
	ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 23-04-2024, 15:00 ಗಂಟೆಯವರೆಗೆ	
34	ಸುಸ್ಥಿರ ಕಟ್ಟಡಗಳಿಗೆ ಸಂಬಂಧಿಸಿದಂತೆ ಐಆರ್‌ಐಡಿಎಂ / ಹೆಜ್ಜಾಲದಲ್ಲಿ ಶಕ್ತಿ ದಕ್ಷ ವಿದ್ಯುತ್ ನೆಲೆಗಳು, ಆಕ್ಯುಪೆನ್ಸಿ / ಮೋಷನ್ ಸೆನ್ಸರ್‌ಗಳು ಮತ್ತು ಸೌರ ಬೀದಿ ದೀಪಗಳನ್ನು ಒದಗಿಸುವುದು, ಕೆಎಸ್‌ಆರ್ ಬೆಂಗಳೂರು ವಿಭಾಗ ಮತ್ತು ಬೆಂಗಳೂರು ಕಂಟೋನ್ಮೆಂಟ್‌ನಲ್ಲಿನ ಸೇವಾ ಕಟ್ಟಡಗಳಲ್ಲಿ ಸಾಂಪ್ರದಾಯಿಕ ಸೀಲಿಂಗ್ ಫ್ಯಾನ್‌ಗಳ ಬದಲಿಗೆ ಇಂಧನ ದಕ್ಷ ಬಿಎಲ್‌ಡಿಸಿ ಸೀಲಿಂಗ್ ಫ್ಯಾನ್‌ಗಳನ್ನು ಒದಗಿಸುವುದು, 50 ಹಾಸಿಗೆಗಳ ಹೊಸ ಆರ್‌ಪಿಎಫ್ ಬ್ಯಾರಕ್ ನಿರ್ಮಾಣ - ವಿದ್ಯುತ್ ವ್ಯವಸ್ಥೆಗಳು	ರೂ. 50,60,225/-
	ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 17-04-2024, 15:00 ಗಂಟೆಯವರೆಗೆ	
35	ಬ್ಯಾಕಪ್ ಪಂಪ್‌ಗಳನ್ನು ಒದಗಿಸುವುದರ ಜೊತೆಗೆ ಶಕ್ತಿ ದಕ್ಷತೆಯ ಕಾಮಗಾರಿಗಳ ಅಡಿಯಲ್ಲಿ ಶಕ್ತಿ ದಕ್ಷ ಬಿಇಇ 5 ಸ್ಟಾರ್ ರೇಟೆಡ್ ಪಂಪ್‌ಗಳೊಂದಿಗೆ ಹಳೆಯ ಬಿಇಇ ಅಲ್ಲದ ಪಂಪ್‌ಗಳನ್ನು ಬದಲಾಯಿಸುವುದು	ರೂ. 52,01,400/-
	ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 19-04-2024, 15:00 ಗಂಟೆಯವರೆಗೆ	

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಹಿರಿಯ ವಿಭಾಗೀಯ ವಿದ್ಯುತ್ ಎಂಜಿನಿಯರ್ ಬೆಂಗಳೂರು

PUB/782/AAV/PRB/SWR/2023-24

South Western Railway-SWR SWRRLY SWRRLY

ಬಾಂಬ್ ಸ್ಫೋಟ ಪ್ರಕರಣ • ಶಂಕಿತ ಮುಜಮೀಲ್ ವಿಚಾರಣೆ

‘ಹೆಗಡೆ ನಗರದಲ್ಲಿ ವಾಸ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಿ ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟ ಪ್ರಕರಣದಲ್ಲಿ ಬಂಧಿಸಲಾಗಿರುವ ಮುಜಮೀಲ್ ಶರೀಫ್ (31), ಬೆಂಗಳೂರಿನಲ್ಲಿ ಐದು ವರ್ಷಗಳಿಂದ ವಾಸವಿದ್ದನೆಂಬ ಸಂಗತಿ ಎನ್‌ಐಎ ಅಧಿಕಾರಿಗಳ ತನಿಖೆಯಿಂದ ಗೊತ್ತಾಗಿದೆ.

‘ಚಿಕ್ಕಮಗಳೂರು ಜಿಲ್ಲೆಯ ಕಳಸದ ಮುಜಮೀಲ್, 2019ರಲ್ಲಿ ಬೆಂಗಳೂರಿಗೆ ಬಂದಿದ್ದ. ಸ್ನೇಹಿತರ ಸಹಾಯದಿಂದ ಹೆಗಡೆನಗರದ ಕೊಠಡಿಯೊಂದರಲ್ಲಿ ಉಳಿದುಕೊಂಡಿದ್ದ. ಜಕ್ಕೂರು ಲೇಔಟ್‌ನಲ್ಲಿರುವ ಔಷಧಿ ಮಳಿಗೆಯೊಂದರಲ್ಲಿ ಕೆಲಸಕ್ಕೆ ಸೇರಿದ್ದ’ ಎಂದು ತನಿಖಾ ಸಂಸ್ಥೆ ಮೂಲಗಳು ಹೇಳಿವೆ.

‘ಮುಜಮೀಲ್ ಅವರ ಕುಟುಂಬದವರು ಸಹ ಕಳಸದಿಂದ ಚಿಕ್ಕಮಗಳೂರಿಗೆ ಸ್ಥಳಾಂತರಗೊಂಡಿದ್ದರು. ಬೆಂಗಳೂರಿನಲ್ಲಿದ್ದ ಮುಜಮೀಲ್, ಆಗಾಗ ಚಿಕ್ಕಮಗಳೂರಿಗೆ ಹೋಗಿ ಬರುತ್ತಿದ್ದ. ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿರುವುದಾಗಿ ಮನೆಯಲ್ಲಿ ಹೇಳಿದ್ದ. ಬೆಂಗಳೂರಿನ ಬಹುತೇಕ ಪ್ರದೇಶಗಳ ಪರಿಚಯ ಈತನಿಗಿತ್ತು’ ಎಂದು ಮೂಲಗಳು ತಿಳಿಸಿವೆ.

ಕೆಲಸ ಬಿಡಿಸಿದ್ದ ಮಾಲೀಕ: ‘ಜಕ್ಕೂರು ಲೇಔಟ್‌ನಲ್ಲಿರುವ ಪ್ರತಿಷ್ಠಿತ ಕ್ಲಿನಿಕ್ ಪಕ್ಕವೇ ಔಷಧಿ ಮಳಿಗೆ ಇದೆ. ಈ ಮಳಿಗೆಯಲ್ಲಿ ಸಹಾಯಕನಾಗಿ ಮುಜಮೀಲ್ ಕೆಲಸಕ್ಕೆ ಸೇರಿದ್ದ. ಈತನಿಗೆ ಪ್ರತಿ ತಿಂಗಳು ₹ 8,000 ಸಂಬಳ ನೀಡಲಾಗುತ್ತಿತ್ತು’ ಎಂದು ಮೂಲಗಳು ಹೇಳಿವೆ.

‘ಹೆಗಡೆನಗರದಿಂದಲೇ ನಿತ್ಯವೂ ಕೆಲಸಕ್ಕೆ ಹೋಗಿ ಬರುತ್ತಿದ್ದ ಮುಜಮೀಲ್, ಹೆಚ್ಚಾಗಿ ಬಸ್‌ಗಳಲ್ಲಿ ಸಂಚರಿಸುತ್ತಿದ್ದ. ಈತ, ಆರಂಭದಲ್ಲಿ ಚೆನ್ನಾಗಿ ಕೆಲಸ ಮಾಡುತ್ತಿದ್ದ. ನಂತರ, ಕೆಲಸಕ್ಕೆ ತಡವಾಗಿ ಬರಲಾರಂಭಿಸಿದ್ದ. ಏಕಾಏಕಿ ರಜೆ ಪಡೆದು, ಸಂಪರ್ಕಕ್ಕೂ ಸಿಗದೇ ನಾಪತ್ತೆಯಾಗುತ್ತಿದ್ದ. ಕೆಲಸದಲ್ಲೂ ನಿರಾಸಕ್ತಿ ತೋರುತ್ತಿದ್ದ. ಮಾಲೀಕರು ಎಷ್ಟೇ ಎಚ್ಚರಿಕೆ ನೀಡಿದರೂ ಸುಧಾರಿಸಿರಲಿಲ್ಲ. ಇದೇ ಕಾರಣಕ್ಕೆ ಮುಜಮೀಲ್‌ನನ್ನು ಕೆಲಸದಿಂದ ತೆಗೆದು ಹಾಕಲಾಗಿತ್ತು’ ಎಂದು ಮೂಲಗಳು ತಿಳಿಸಿವೆ.

ಹೋಟೆಲ್‌ನಲ್ಲಿ ಕೆಲಸ: ‘ಶಂಕಿತ ಮುಜಮೀಲ್, ಜಕ್ಕೂರು ಲೇಔಟ್ ವಿಳಾಸ ಬಳಸಿ ಗುರುತಿನ ಚೀಟಿಗಳನ್ನು ಪಡೆದುಕೊಂಡಿದ್ದ. ಔಷಧಿ ಮಳಿಗೆ ಕೆಲಸ ಹೋದ ನಂತರ ಹೋಟೆಲ್‌ವೊಂದಕ್ಕೆ ಸೇರಿದ್ದ. ಅಲ್ಲಿಯೂ ಜಕ್ಕೂರು ಲೇಔಟ್ ವಿಳಾಸದ ದಾಖಲೆಗಳನ್ನು ನೀಡಿದ್ದ. ತಾನು ಜಕ್ಕೂರು ಲೇಔಟ್ ನಿವಾಸಿಯೆಂದು ಹೇಳಿಕೊಂಡಿದ್ದ’ ಎಂದು ಮೂಲಗಳು ವಿವರಿಸಿವೆ.

‘ಕೆಲಸ ಜೊತೆಗೇ ಮುಜಮೀಲ್, ಶಂಕಿತ ಅಬ್ದುಲ್ ಮಥೀನ್ ಅಹ್ಮದ್ ತಾಹಾ ಜೊತೆ ಸಂಪರ್ಕದಲ್ಲಿದ್ದ. ತಾಹಾ ಮೂಲಕ ಮುಜಮೀಲ್‌ಗೆ ಶಂಕಿತ ಮುಸಾವೀರ್ ಹುಸೇನ್ ಶಾಜೀಬ್ ಪರಿಚಯವಾಗಿತ್ತು. ಬಳಿಕ, ಮೂವರು ಬಾಂಬ್ ಸ್ಫೋಟ ಹಾಗೂ ಭಯೋತ್ಪಾದನಾ ಕೃತ್ಯಗಳಿಗೆ ಸಂಚು ರೂಪಿಸುತ್ತಿದ್ದರು. ಇದಕ್ಕೆ ಹಲವರ ಸಹಕಾರವಿತ್ತು. ಜೊತೆಗೆ, ಎಲ್ಲರೂ ಆಗಾಗ ಭೇಟಿ ಸಹ ಆಗುತ್ತಿದ್ದರು. ಇದಕ್ಕೆ ಸಂಬಂಧಪಟ್ಟಂತೆ ಹಲವು ಪುರಾವೆಗಳು ಲಭ್ಯವಾಗಿವೆ’ ಎಂದು ತಿಳಿಸಿವೆ.

‘ಐಎಸ್ (ಇಸ್ಲಾಮಿಕ್ ಸ್ಟೇಟ್) ಉಗ್ರರ ಜೊತೆ ಒಡನಾಟ ಇಟ್ಟುಕೊಂಡಿದ್ದ ವ್ಯಕ್ತಿಗಳ ಜೊತೆಗೂ ಮುಜಮೀಲ್ ಸಂಪರ್ಕದಲ್ಲಿದ್ದ ಮಾಹಿತಿ ಲಭ್ಯವಾಗಿದೆ. ಆದರೆ, ಈ ಬಗ್ಗೆ ಮುಜಮೀಲ್ ಯಾವ ವಿಷಯವನ್ನೂ ಬಾಯ್ಬಿಡುತ್ತಿಲ್ಲ’ ಎಂದು ತಿಳಿಸಿವೆ.

‘ಕಚ್ಚಾ ಬಾಂಬ್ (ಐಇಡಿ) ತಯಾರಿಕೆಯಲ್ಲಿ ಅಬ್ದುಲ್ ಮಥೀನ್ ಅಹ್ಮದ್ ತಾಹಾ ಹಾಗೂ ಮುಸಾವೀರ್, ಪರಿಣಿತರು. ಇವರಿಬ್ಬರು ತಯಾರಿಸಿದ್ದ ಬಾಂಬ್‌ಗಳನ್ನು ಶಿವಮೊಗ್ಗದಲ್ಲಿ ಪರೀಕ್ಷಾರ್ಥವಾಗಿ ಸ್ಫೋಟಿಸಲಾಗಿತ್ತು. ಈ ಸಂಗತಿ ಮುಜಮೀಲ್‌ಗೂ ಗೊತ್ತಿತ್ತು. ಶಿವಮೊಗ್ಗದಲ್ಲಿ ಸಿಕ್ಕ ಬಾಂಬ್ ಅವಶೇಷಗಳು ಹಾಗೂ ರಾಮೇಶ್ವರಂ ಕೆಫೆಯಲ್ಲಿ ಸಿಕ್ಕ ಅವಶೇಷಗಳು ಬಹುತೇಕ ಸಾಮ್ಯತೆ ಹೊಂದಿವೆ’ ಎಂದು ಮೂಲಗಳು ಹೇಳಿವೆ.

‘ಮುಸಾವೀರ್ ಹಾಗೂ ಅಬ್ದುಲ್‌ನನ್ನು ಮೊಬೈಲ್ ವಿಚಾರವಾಗಿ ಕೆಲ ಬಾರಿ ಮಾತ್ರ ಭೇಟಿಯಾಗಿದ್ದೆ ಎಂಬುದಾಗಿ ಮುಜಮೀಲ್ ಹೇಳುತ್ತಿದ್ದಾನೆ. ಆದರೆ, ಮುಜಮೀಲ್ ಹಲವು ಬಾರಿ ಭೇಟಿಯಾಗಿದ್ದಕ್ಕೆ ಪುರಾವೆಗಳು ಸಿಕ್ಕಿವೆ. ಈ ಬಗ್ಗೆ ಹೆಚ್ಚಿನ ಮಾಹಿತಿ ಕಲೆಹಾಕಲಾಗುತ್ತಿದೆ’ ಎಂದು ತಿಳಿಸಿವೆ.

ಕಸ್ಟಡಿ ಅಂತ್ಯ ನಾಳೆ: ಬಂಧಿತ ಮುಜಮೀಲ್‌ನನ್ನು ಮಾರ್ಚ್ 28ರಂದು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದ ಎನ್‌ಐಎ ಅಧಿಕಾರಿಗಳು, ಹೆಚ್ಚಿನ ವಿಚಾರಣೆಗಾಗಿ ಕಸ್ಟಡಿಗೆ ಪಡೆದಿದ್ದರು. ಕಸ್ಟಡಿ ಅವಧಿ ಏಪ್ರಿಲ್ 3ರಂದು ಅಂತ್ಯವಾಗಲಿದ್ದು, ಅಧಿಕಾರಿಗಳು ಶಂಕಿತನನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಿದ್ದಾರೆ.

‘ಮುಜಮೀಲ್ ಓಡಾಡಿದ್ದ ಸ್ಥಳ, ಇತರೆ ಶಂಕಿತನನ್ನು ಭೇಟಿಯಾಗಿದ್ದ ಪ್ರದೇಶ, ಮನೆ ಹಾಗೂ ಮಳಿಗೆಗಳಿಗೆ ಕರೆದೊಯ್ದು ಮಹಜರು ಪ್ರಕ್ರಿಯೆ ನಡೆಸಲಾಗುತ್ತಿದೆ. ಜೊತೆಗೆ, ಇತರೆ ಆರೋಪಿಗಳ ಪತ್ತೆಗಾಗಿಯೂ ಈತನಿಂದ ಮಾಹಿತಿ ಪಡೆಯಲಾಗುಗುವ ದು’ ಎಂದು ಮೂಲಗಳು ಹೇಳಿವೆ.

‘ಕೆಲಸಕ್ಕೆ ಗೈರು: ನಾಪತ್ತೆ’

‘ಮುಜಮೀಲ್ ತಿಂಗಳಲ್ಲಿ ಹಲವು ಬಾರಿ ಕೆಲಸಕ್ಕೆ ಗೈರಾಗುತ್ತಿದ್ದ. ಯಾರಿಗೂ ಸುಳಿವು ನೀಡದಂತೆ ನಾಪತ್ತೆಯಾಗುತ್ತಿದ್ದ. ಇದೇ ಸಂದರ್ಭದಲ್ಲಿಯೇ ಈತ, ಬಾಂಬ್ ಸ್ಫೋಟಕ್ಕೆ ಸಂಚು ರೂಪಿಸುತ್ತಿದ್ದನೆಂಬ ಮಾಹಿತಿ ಇದೆ. ಜೊತೆಗೆ, ಕಚ್ಚಾ ಸಾಮಗ್ರಿ ಪೂರೈಕೆ ಹಾಗೂ ಇತರೆ ಕೆಲಸ ಮಾಡುತ್ತಿದ್ದನೆಂಬ ಅನುಮಾನವೂ ಇದೆ’ ಎಂದು ತನಿಖಾ ಸಂಸ್ಥೆ ಮೂಲಗಳು ಹೇಳಿವೆ.

ಸ್ವಾಮೀಜಿಗೆ ನಮನ

ಪೀಣ್ಯ ದಾಸರಹಳ್ಳಿ ಸಮೀಪದ ಹಾವನೂರು ಬಡಾವಣೆಯ ಭೂಮಿಕಾ ಸೇವಾ ಫೌಂಡೇಷನ್ ಕಚೇರಿಯಲ್ಲಿ ಶಿವಕುಮಾರ ಸ್ವಾಮೀಜಿಯವರ ಜನ್ಮದಿನದ ಪ್ರಯುಕ್ತ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಲಾಯಿತು. ಫೌಂಡೇಷನ್ ಅಧ್ಯಕ್ಷೆ ಲತಾ ಕುಂದರಗಿ, ಗೌರವ ಅಧ್ಯಕ್ಷ ಗುರುನಾಥ್, ಉಪಾಧ್ಯಕ್ಷೆ ಲಲಿತಾ ನೀಲಕಂಠ, ಸಾಹಿತಿಗಳಾದ ವೈ.ಬಿ.ಎಚ್ ಜಯದೇವ್, ಭಾರತಿ ವೈ. ಕೊಕಲೆ, ಕನ್ನಡ ಸೇನೆ ಖಜಾಂಚಿ ರಾಜೇಂದ್ರ ಕೊಣ್ಣೂರ, ಪದಾಧಿಕಾರಿಗಳಾದ ರಮೇಶ್ ಜಮಖಂಡಿ, ಮಂಜುಭಾಷಿಣಿ ಭಾಗವಹಿಸಿದ್ದರು.

ಭೂಕಬಳಿಕೆ: 2 ವರ್ಷ ಶಿಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಗೋಮಾಳ ಕಬಳಿಕೆ ಮಾಡಿದ್ದ ವ್ಯಕ್ತಿಗೆ ಎರಡು ವರ್ಷ ಸಾದಾ ಶಿಕ್ಷೆ, ₹25 ಸಾವಿರ ದಂಡ ವಿಧಿಸಿ ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯ ಆದೇಶಿಸಿದೆ.

ಬೆಂಗಳೂರು ದಕ್ಷಿಣ ತಾಲ್ಲೂಕು ಉತ್ತರಹಳ್ಳಿ ಹೋಬಳಿ ಉತ್ತರಿ ಗ್ರಾಮದ ಸರ್ವೆ ನಂ. 111ರಲ್ಲಿ 4 ಎಕರೆ 38 ಗುಂಟೆ ಸರ್ಕಾರಿ ಗೋಮಾಳವನ್ನು ಕಬಳಿಕೆ ಮಾಡಿರುವ ಕೆ.ಜಿ ನಗರದ ಎಸ್. ಆರ್. ನರಸಿಂಹ ಮೂರ್ತಿ ಅವರು, ಅಕ್ರಮವಾಗಿ ಮನೆಗಳನ್ನು ಕಟ್ಟುತ್ತಿದ್ದಾರೆ ಎಂದು ಕೆಂಗೇರಿಯ ಸಿ.ಎನ್. ರವಿ ದೂರು ನೀಡಿದ್ದರು.

‘ಜೆಟ್‌ಲ್ಯಾಗ್’ ವಿರುದ್ಧ ದರ್ಶನ್ ಸಾಕ್ಷಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅವಧಿ ಮೀರಿ ವ್ಯಾಪಾರ ನಡೆಸಿದ್ದ ಆರೋಪದಡಿ ರಾಜಾಜಿನಗರದ ‘ಜೆಟ್‌ಲ್ಯಾಗ್’ ರೆಸ್ಟೊಬಾರ್ ವಿರುದ್ಧ ಸುಬ್ರಹ್ಮಣ್ಯನಗರ ಠಾಣೆ ಪೊಲೀಸರು ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ (ಚಾರ್ಜ್‌ಶೀಟ್) ಸಲ್ಲಿಸಿದ್ದು, ನಟ ದರ್ಶನ್ ಅವರನ್ನು ಸಾಕ್ಷಿಯನ್ನಾಗಿ ಪರಿಗಣಿಸಿದ್ದಾರೆ.

‘ಕಾಟೇರ’ ಸಿನಿಮಾ ಬಿಡುಗಡೆಯ ಯಶಸ್ಸು ಸಂಭ್ರಮಿಸಲು ರಾಜಾಜಿನಗರದ ಡಾ.ರಾಜ್‌ಕುಮಾರ್ ರಸ್ತೆಯಲ್ಲಿರುವ ‘ಜೆಟ್‌ಲ್ಯಾಗ್’ ರೆಸ್ಟೊಬಾರ್‌ನಲ್ಲಿ ಜನವರಿ 3ರಂದು ತಡರಾತ್ರಿ ಪಾರ್ಟಿ ಆಯೋಜಿಸಲಾಗಿತ್ತು. ನಟ ದರ್ಶನ್, ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್, ನಿರ್ದೇಶಕ ತರುಣ್ ಸುಧೀರ್, ನಟರಾದ ನೀನಾಸಂ ಸತೀಶ್, ಡಾಲಿ ಧನಂಜಯ, ಚಿಕ್ಕಣ್ಣ ಹಾಗೂ ಇತರರು ಪಾರ್ಟಿಯಲ್ಲಿ ಪಾಲ್ಗೊಂಡಿದ್ದರು.

ನಟ ದರ್ಶನ್

‘ರಾತ್ರಿ 1 ಗಂಟೆವರೆಗೆ ಮಾತ್ರ ಪಾರ್ಟಿಗೆ ಅವಕಾಶವಿತ್ತು. ಆದರೆ, ಜನವರಿ 3ರಂದು ರಾತ್ರಿ 8 ಗಂಟೆಗೆ ಆರಂಭವಾದ ಪಾರ್ಟಿ ಮರುದಿನ ಜನವರಿ 4ರ ನಸುಕಿನ 3.30 ಗಂಟೆವರೆಗೂ ನಡೆದಿತ್ತು. ಪಾರ್ಟಿಯಲ್ಲಿದ್ದವರಿಗೆ ಮದ್ಯ ಹಾಗೂ ಊಟದ ವ್ಯವಸ್ಥೆ ಸಹ ಮಾಡಲಾಗಿತ್ತು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ತಡರಾತ್ರಿ ಸ್ಥಳಕ್ಕೆ ಹೋಗಿದ್ದ ಪೊಲೀಸರು, 1 ಗಂಟೆಗೆ ವ್ಯಾಪಾರ ಬಂದ್ ಮಾಡುವಂತೆ ಸೂಚಿಸಿ ತೆರಳಿದ್ದರು. ಆದರೆ, ರೆಸ್ಟೊಬಾರ್ ಬಂದ್ ಮಾಡಿರಲಿಲ್ಲ. ಪಾರ್ಟಿಗೆ ಸಂಬಂಧಪಟ್ಟ ಫೋಟೊಗಳು ಹಾಗೂ ವಿಡಿಯೊಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದ್ದವು. ಅವಧಿ ಮೀರಿ ವ್ಯಾಪಾರ ನಡೆಸಿದ್ದ ಆರೋಪದಡಿ ರೆಸ್ಟೊಬಾರ್ ಮಾಲೀಕರಾದ ಶಶಿರೇಖಾ ಜಗದೀಶ್ ಹಾಗೂ ವ್ಯವಸ್ಥಾಪಕ ಪ್ರಶಾಂತ್ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿತ್ತು. ಇದೀಗ, ಇಬ್ಬರ ವಿರುದ್ಧವೂ 39ನೇ ಎಸಿಎಂಎಂ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಲಾಗಿದೆ’ ಎಂದು ಮೂಲಗಳು ತಿಳಿಸಿವೆ.

ಊಟ ಮಾಡಿ ಮನೆಗೆ: ‘ಪ್ರಕರಣದ ವಿಚಾರಣೆಗೆ ಹಾಜರಾಗುವಂತೆ ದರ್ಶನ್ ಸೇರಿದಂತೆ ಎಂಟು ಮಂದಿಗೆ ನೋಟಿಸ್ ನೀಡಲಾಗಿತ್ತು. ವಿಚಾರಣೆಗೆ ಬಂದಿದ್ದ ಅವರು, ‘ರೆಸ್ಟೊಬಾರ್‌ನಲ್ಲಿ ಮದ್ಯದ ಪಾರ್ಟಿ ಮಾಡಿಲ್ಲ. ಊಟಕ್ಕೆಂದು ರೆಸ್ಟೊಬಾರ್‌ಗೆ ತೆರಳಿದ್ದೆವು. ಊಟ ಮಾಡಿ ಮನೆಗೆ ಹೋಗಿದ್ದೆವು’ ಎಂಬುದಾಗಿ ಹೇಳಿದ್ದರು. ಇವರೆಲ್ಲರನ್ನೂ ಸಾಕ್ಷಿಗಳನ್ನಾಗಿ ಪರಿಗಣಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಸುದ್ದಿ 2 ನಿಮಿಷ

ಯುಗಾದಿ ಹಬ್ಬಕ್ಕೆ ‘ಕಾಂಚೀಪುರಂ ವರಮಹಾಲಕ್ಷ್ಮಿ ಸಿಲ್ಕ್ಸ್’ ಕೊಡುಗೆ

ಬೆಂಗಳೂರು: ‘ಕಾಂಚೀಪುರಂ ವರಮಹಾಲಕ್ಷ್ಮಿ ಸಿಲ್ಕ್ಸ್’ ಮಳಿಗೆಯಲ್ಲಿ ಯುಗಾದಿ ಹಬ್ಬದ ಅಂಗವಾಗಿ ಕಾಂಚೀಪುರಂ, ಧರ್ಮಾವರಂ ಸೇರಿದಂತೆ ಗುಣ ಮಟ್ಟದ ಬ್ರಾಂಡೆಡ್ ರೇಷ್ಮೆ ಸೀರೆಗಳ ಪ್ರದರ್ಶನ ಮತ್ತು ಮಾರಾಟ ಮಾಡಲಾಗುತ್ತಿದೆ.

ಮಳಿಗೆಯಲ್ಲಿ ಸೀರೆಗಳ ಪ್ರದರ್ಶನದ ಜೊತೆಗೆ, ವಿಶೇಷ ಕೊಡುಗೆಗಳಿವೆ. ಹಬ್ಬದ ಸಂದರ್ಭದಲ್ಲಿ ರೇಷ್ಮೆ ಸೀರೆಗಳು ನೇಕಾರರ ಬೆಲೆಯಲ್ಲೇ ಗ್ರಾಹಕರಿಗೆ ಲಭ್ಯವಿವೆ.

ಗುಣಮಟ್ಟಕ್ಕೆ ಕಾಂಚೀಪುರಂ ರೇಷ್ಮೆ ಸೀರೆಗಳು ಪ್ರಸಿದ್ಧಿ ಪಡೆದಿದ್ದು, ನೇಕಾರರು ಕೈಯಿಂದ ನೇಯ್ದ ಸೀರೆ ಕಡಿಮೆ ದರದಲ್ಲಿ ಗ್ರಾಹಕರಿಗೆ ಸಿಗಲಿವೆ ಎಂದು ಪ್ರಕಟಣೆ ತಿಳಿಸಿದೆ.

ಮಳಿಗೆಯಲ್ಲಿ, ಕಾಂಚೀಪುರಂ, ಅರಣಿ, ಧರ್ಮಾವರಂ ಮತ್ತು ಹಗುರವಾದ ಕಾಂಚೀಪುರಂ ಸೀರೆಗಳಿವೆ. ವಿವಿಧ ವಿನ್ಯಾಸ, ಬಣ್ಣ ಮತ್ತು ಮಾದರಿಗಳ ಸೀರೆಗಳಿವೆ.

ದೇಶದ ವಿವಿಧೆಡೆ ಇರುವ ಕಾಂಚೀಪುರಂವರಮಹಾಲಕ್ಷ್ಮಿ ಸಿಲ್ಕ್ಸ್ ಮಳಿಗೆಯಲ್ಲಿ ಒಂದೇ ಸೂರಿನಡಿ ವೈವಿಧ್ಯಮಯ ರೇಷ್ಮೆ ಸೀರೆಗಳು ಲಭ್ಯವಿವೆ. ಈ ಬಾರಿ ಕಾಂಚೀಪುರಂ ವರಮಹಾಲಕ್ಷ್ಮಿ ಸಿಲ್ಕ್ಸ್‌ನೊಂದಿಗೆ ಯುಗಾದಿಯನ್ನು ಆಚರಿಸಿಕೊಳ್ಳಬಹುದು. ತಕ್ಷಣವೇ ನಮ್ಮ ಮಳಿಗೆಗೆ ಭೇಟಿ ನೀಡಿದರೆ, ಭಾರತೀಯ ಸಂಸ್ಕೃತಿ ಮತ್ತು ಪರಂಪರೆ ಸಾರುವ ರೇಷ್ಮೆ ಸೀರೆಗಳ ವೈಭವ ಕಣ್ತುಂಬಿಕೊಳ್ಳಬಹುದು. ಅಲ್ಲದೇ ತಮ್ಮಿಷ್ಟದ ಸೀರೆಗಳನ್ನು ಖರೀದಿಸಿ ಹಬ್ಬದಲ್ಲಿ ಸಂಭ್ರಮಿಸಬಹುದು ಎಂದಿದೆ.

ನಗರದಲ್ಲೂ ‘ಬಿಸಿಲ ಪ್ರಕೋಪ’

ಬೆಂಗಳೂರು: ನಗರದಲ್ಲಿ ಬಿಸಿಲ ಪ್ರಕೋಪ ಮುಂದುವರಿದಿದ್ದು ಮಧ್ಯಾಹ್ನದ ವೇಳೆಯಲ್ಲಿ ಮನೆಯಿಂದ ಜನರು ಹೊರಬರುವುದಕ್ಕೂ ಭಯ ಪಡುತ್ತಿದ್ದಾರೆ. ದಿನದಿಂದ ದಿನಕ್ಕೆ ವಾತಾವರಣ ಬಿಸಿ ಎನಿಸುತ್ತಿದೆ.

ಮಧ್ಯಾಹ್ನದ ವೇಳೆಯಲ್ಲಿ ಓಡಾಡಿದರೆ ತಲೆಸುತ್ತು ಕಾಣಿಸಿಕೊಳ್ಳುತ್ತಿದೆ ಎಂದು ವೃದ್ಧರು ಹಾಗೂ ಮಕ್ಕಳು ಹೇಳುತ್ತಿದ್ದಾರೆ.

ಕಾಂಕ್ರೀಟ್ ಹಾಗೂ ಡಾಂಬರ್ ರಸ್ತೆಗಳು ಕಾವಲಿಯಂತೆ ಸುಡುತ್ತಿವೆ. ಜನರು ದಾಹ ನೀಗಿಸಿಕೊಳ್ಳಲು ತಂಪು ಪಾನೀಯದ ಮೊರೆ ಹೋಗುತ್ತಿದ್ದಾರೆ.

ನಗರದ ಎಚ್‌ಎಎಲ್‌ನಲ್ಲಿ ಸೋಮವಾರ ಗರಿಷ್ಠ ಉಷ್ಣಾಂಶ 35.4, ಕೆಐಎಎಲ್‌ನಲ್ಲಿ 36.5 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿತ್ತು. ಮುಂದಿನ ಎರಡು ದಿನಗಳ ಕಾಲ ಗರಿಷ್ಠ ಉಷ್ಣಾಂಶ 36 ಡಿಗ್ರಿ ಸೆಲ್ಸಿಯಸ್ ಆಸುಪಾಸಿನಲ್ಲಿ ಇರಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ದಂಪತಿಗೆ ಕಿರುಕುಳ: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಸ್ಪತ್ರೆಯಿಂದ ಮನೆಗೆ ಹೊರಟಿದ್ದ ದಂಪತಿಯ ಕಾರು ಹಿಂಬಾಲಿಸಿ ಕಿರುಕುಳ ನೀಡಿದ್ದ ಆರೋಪದಡಿ ಇಬ್ಬರನ್ನು ಮಡಿವಾಳ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಭಾನುವಾರ ರಾತ್ರಿ ನಡೆದಿದ್ದ ಘಟನೆ ಸಂಬಂಧ ಸಂತ್ರಸ್ತ ಮಹಿಳೆಯಿಂದ ವಿಡಿಯೊ ಸಮೇತ ದೂರು ಪಡೆಯಲಾಗಿದೆ. ಕೃತ್ಯ ಎಸಗಿದ್ದ ಆರೋಪದಡಿ ಶೇಷಾದ್ರಿಪುರದ ಕಾಲ್ ಸೆಂಟರ್ ಉದ್ಯೋಗಿ ಜಗನ್ನಾಥ್ (28) ಮತ್ತು ಪದವಿ ವಿದ್ಯಾರ್ಥಿ ತೇಜಸ್ (21) ಎಂಬುವವರನ್ನು ಬಂಧಿಸಲಾಗಿದೆ. ಇನ್ನೊಬ್ಬ ಆರೋಪಿ ತಲೆಮರೆಸಿಕೊಂಡಿದ್ದಾನೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ದೂರುದಾರ ಮಹಿಳೆ ಹಾಗೂ ಅವರ ಪತಿ, ಸೇಂಟ್ ಜಾನ್ಸ್ ಆಸ್ಪತ್ರೆಗೆ ಭಾನುವಾರ ಹೋಗಿದ್ದರು. ಅಲ್ಲಿಂದ ರಾತ್ರಿ 8 ಗಂಟೆಗೆ ಮನೆಯತ್ತ ಹೊರಟಿದ್ದರು. ಮಹಿಳೆಯ ಪತಿಯೇ ಕಾರು ಚಲಾಯಿಸುತ್ತಿದ್ದರು. ಇದೇ ಸಂದರ್ಭದಲ್ಲಿ ಆರೋಪಿಗಳು, ಬೈಕ್‌ನಲ್ಲಿ ಹೊಸೂರಿನಿಂದ ನಗರಕ್ಕೆ ಬರುತ್ತಿದ್ದರು. ಮಹಿಳೆಯ ಪತಿ ಯಾವುದೇ ಇಂಡಿಕೇಟರ್ ಹಾಕದೇ ಎಡಕ್ಕೆ ಕಾರು ಚಲಾಯಿಸಿದ್ದರು. ಇದರಿಂದಾಗಿ ಆರೋಪಿಗಳ ಬೈಕ್‌ಗೆ ಕಾರು ಡಿಕ್ಕಿ ಹೊಡೆದಿತ್ತು’ ಎಂದು ತಿಳಿಸಿವೆ.

‘ಇದರಿಂದ ಸಿಟ್ಟಾಗಿದ್ದ ಆರೋಪಿಗಳು, ಮಹಿಳೆ ಹಾಗೂ ಅವರ ಪತಿಯನ್ನು ಪ್ರಶ್ನಿಸಲು ಮುಂದಾಗಿದ್ದರು. ಅಷ್ಟರಲ್ಲೇ ಮಹಿಳೆಯ ಪತಿ, ಆರೋಪಿಗಳಿಗೆ ಮಧ್ಯದ ಬೆರಳು ತೋರಿಸಿ ಕಾರು ಚಲಾಯಿಸಿಕೊಂಡು ಸ್ಥಳದಿಂದ ಹೊರಟಿದ್ದರು. ಮತ್ತಷ್ಟು ಕೋಪಗೊಂಡ ಆರೋಪಿಗಳು, ಬೈಕ್‌ಗಳಲ್ಲಿ ಕಾರು ಬೆನ್ನಟ್ಟಿದ್ದರು’ ಎಂದು ಹೇಳಿವೆ.

‘ಕಾರಿನ ಬಾಗಿಲು ಗಾಜು ತಟ್ಟಿದ್ದ ಆರೋಪಿಗಳು, ಅನುಚಿತವಾಗಿ ವರ್ತಿಸಿದ್ದರು. ಕಾರಿನ ಅಕ್ಕ-ಪಕ್ಕದಲ್ಲಿ ಅಡ್ಡಾದಿಡ್ಡಿಯಾಗಿ ಬೈಕ್ ಚಲಾಯಿಸಿದ್ದರು. ಆರೋಪಿಗಳ ಕೃತ್ಯವನ್ನು ಮೊಬೈಲ್‌ನಲ್ಲಿ ಸೆರೆಹಿಡಿದಿದ್ದ ಮಹಿಳೆ, ಸ್ನೇಹಿತರಿಗೆ ಕಳುಹಿಸಿದ್ದರು. ಅದೇ ವಿಡಿಯೊವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡಿದ್ದ ಸ್ನೇಹಿತರು, ‘ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳಿ’ ಎಂದು ಆಗ್ರಹಿಸಿದ್ದರು. ವಿಡಿಯೊ ಗಮನಕ್ಕೆ ಬರುತ್ತಿದ್ದಂತೆ ಮಹಿಳೆಯನ್ನು ಸಂಪರ್ಕಿಸಿ ದೂರು ಪಡೆದು ಕ್ರಮ ಕೈಗೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ರಸ್ತೆ ಬದಿ ಶೌಚ: ಚಕ್ರ ಹರಿದು ಬಾಲಕ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೂಡ್ಸ್ ವಾಹನದ ಚಕ್ರ ಮೈ ಮೇಲೆ ಹರಿದು 6 ವರ್ಷದ ಬಾಲಕ ಅಶ್ವಂತ್ ಎಂಬಾತ ಮೃತಪಟ್ಟಿದ್ದು, ಈ ಸಂಬಂಧ ಸಿಟಿ ಮಾರುಕಟ್ಟೆ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ವಿನೋಭನಗರ ಕೊಳಗೇರಿಯ ಅಶ್ವಂತ್ ಸೋಮವಾರ ಬೆಳಿಗ್ಗೆ ಸಿದ್ದಯ್ಯ ರಸ್ತೆಯ ಬದಿ ಶೌಚಕ್ಕೆ ಕುಳಿತಿದ್ದ ವೇಳೆ ಈ ಅವಘಡ ಸಂಭವಿಸಿದೆ. ಅಪಘಾತಕ್ಕೆ ಕಾರಣವಾದ ಗೂಡ್ಸ್ ವಾಹನದ ಚಾಲಕನನ್ನು ವಶಕ್ಕೆ ಪಡೆಯಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಶಶಿಕುಮಾರ್ ಅವರ ಮಗ ಅಶ್ವಂತ್, ನಿತ್ಯವೂ ರಸ್ತೆಬದಿ ಶೌಚಕ್ಕೆ ಕುಳಿತುಕೊಳ್ಳುತ್ತಿದ್ದ. ಸೋಮವಾರವೂ ಬೆಳಿಗ್ಗೆ ಶೌಚಕ್ಕೆ ಕುಳಿತಿದ್ದ. ಇದೇ ಜಾಗದಲ್ಲಿ ಗೂಡ್ಸ್ ವಾಹನ ನಿಲ್ಲಿಸಲಾಗಿತ್ತು.’ ‘ಶೌಚಕ್ಕೆ ಕುಳಿತಿದ್ದ ಅಶ್ವಂತ್‌ನನ್ನು ಚಾಲಕ ಗಮನಿಸಿರಲಿಲ್ಲ. ತನ್ನ ವಾಹನವನ್ನು ಹಿಮ್ಮುಖವಾಗಿ ಚಲಾಯಿಸಿದ್ದ. ಇದೇ ಸಂದರ್ಭದಲ್ಲಿ ಬಾಲಕನಿಗೆ ವಾಹನ ಗುದ್ದಿತ್ತು. ಬಳಿಕ,ಬಾಲಕನ ಮೈ ಮೇಲೇ ವಾಹನದ ಚಕ್ರ ಹರಿದಿತ್ತು’ ಎಂದು ಪೊಲೀಸರು ತಿಳಿಸಿದ್ದಾರೆ.

ಸವಾರ ಸಾವು: ಬೆಂಗಳೂರು: ಜಯನಗರ 7ನೇ ಹಂತದಲ್ಲಿ ರಸ್ತೆಯ ಹಂಪ್‌ನಿಂದ ದ್ವಿಚಕ್ರ ವಾಹನ ಉರುಳಿಬಿದ್ದಿದ್ದು, ಸವಾರ ಅರ್ಜುನ್ ಎಂಬುವವರು ಮೃತಪಟ್ಟಿದ್ದಾರೆ.

‘ರಾಜಸ್ಥಾನದ ಅರ್ಜುನ್, ಅರಕೆರೆಯಲ್ಲಿ ನೆಲೆಸಿದ್ದರು. ನಗರದ ಕಾಲೇಜೊಂದರಲ್ಲಿ ಬಿಬಿಎಂ ವ್ಯಾಸಂಗ ಮಾಡುತ್ತಿದ್ದರು. ಕೆಲವೇ ದಿನಗಳಲ್ಲಿ ತಮ್ಮೂರಿಗೆ ಹೋಗಲು ಸಿದ್ಧತೆ ನಡೆಸುತ್ತಿದ್ದ ಅವರು, ರೈಲು ಟಿಕೆಟ್ ಕಾಯ್ದಿರಿಸಲು ಹೊರಟಿದ್ದ ವೇಳೆಯೇ ಈ ಅವಘಡ ಸಂಭವಿಸಿದೆ’ ಎಂದು ಪೊಲೀಸರು ಹೇಳಿದರು. ‘ಅರ್ಜುನ್ ಅವರು ಸೋಮವಾರ ಬೆಳಿಗ್ಗೆ ಬಿಡಿಎ ಕಾಂಪ್ಲೆಕ್ಸ್ ಬಳಿ ಹೊರಟಿದ್ದರು. ಅದೇ ರಸ್ತೆಯಲ್ಲಿರುವ ಹಂಪ್‌ನಿಂದಾಗಿ ದ್ವಿಚಕ್ರ ವಾಹನ ಉರುಳಿ ಬಿದ್ದಿತ್ತು. ತೀವ್ರ ಗಾಯಗೊಂಡು ಅರ್ಜುನ್ ಮೃತಪಟ್ಟಿದ್ದಾರೆ’ ಎಂದು ತಿಳಿಸಿದರು.

ನಗರದಲ್ಲಿ ಇಂದು

ಪೊಲೀಸ್ ಧ್ವಜ ದಿನಾಚರಣೆ: ಅತಿಥಿಗಳು: ಅಲೋಕ್ ಮೋಹನ್, ರಜನೀಶ್ ಗೋಯಲ್, ಎಸ್.ಆರ್. ಉಮಾಶಂಕರ್, ಆಯೋಜನೆ: ಪೊಲೀಸ್ ಇಲಾಖೆ, ಸ್ಥಳ: ಕೆಎಸ್‌ಆರ್‌ಪಿ ಪರೇಡ್ ಮೈದಾನ, ಕೋರಮಂಗಲ, ಬೆಳಿಗ್ಗೆ 8

ನಿವೃತ್ತ ಉಪನ್ಯಾಸಕರು ಮತ್ತು ಪ್ರಾಂಶುಪಾಲರಿಗೆ ಬೀಳ್ಕೊಡುಗೆ ಸಮಾರಂಭ: ಅತಿಥಿ: ಮೂಡ್ನಾಕೂಡು ಚಿನ್ನಸ್ವಾಮಿ, ಅಧ್ಯಕ್ಷತೆ: ಕೆಂಪೇಗೌಡ, ಉಪಸ್ಥಿತಿ: ನಾಗಣ್ಣ ಜಿ., ಸುಪ್ರಿಯಾ ಜಿ.ಜೆ., ಆಯೋಜನೆ: ಪಿಯು ಕನ್ನಡ ಮೌಲ್ಯಮಾಪನ ಶಿಬಿರ ವಿವಿಎಸ್ ಪಿಯು ಕಾಲೇಜು, ಸ್ಥಳ: ಗಾಂಧಿ ಭವನ, ಪಿವಿಪಿ ಪಿಯು ಕಾಲೇಜು, ರಾಜಾಜಿನಗರ, ಬೆಳಿಗ್ಗೆ 9.30



ಮೂಡ್ನಾಕೂಡು ಚಿನ್ನಸ್ವಾಮಿ

ಪ್ರವಚನ ವಾಹಿನಿ: ‘ಷಟ್ ಪ್ರಶ್ನೋಪನಿಷತ್ ಚಿಂತನೆ’ ಉಪನ್ಯಾಸ: ಎ. ಗುರುಪ್ರಸಾದ್ ಆಚಾರ್ಯ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ,ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಬಸ್ ಗುದ್ದಿ ಸವಾರ ಸಾವು

ಬೆಂಗಳೂರು: ತುಮಕೂರು ರಸ್ತೆಯಲ್ಲಿರುವ ಜಾಲಹಳ್ಳಿ ವೃತ್ತದಲ್ಲಿ ಖಾಸಗಿ ಬಸ್ ಹಾಗೂ ಬೈಕ್ ನಡುವೆ ಅಪಘಾತ ಸಂಭವಿಸಿದ್ದು, ಸವಾರ ಯೋಗೇಶ್ (21) ಎಂಬುವವರು ಮೃತಪಟ್ಟಿದ್ದಾರೆ.

‘ಹಾಸನದ ಯೋಗೇಶ್, ನೆಲಮಂಗಲದ ಬೇಕರಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಭಾನುವಾರ ರಾತ್ರಿ ನೆಲಮಂಗಲದಿಂದ ನಗರಕ್ಕೆ ಬೈಕ್‌ನಲ್ಲಿ ಬರುತ್ತಿದ್ದ ಸಂದರ್ಭದಲ್ಲಿ ಈ ಅವಘಡ ಸಂಭವಿಸಿದೆ’ ಎಂದು ಪೀಣ್ಯ ಸಂಚಾರ ಠಾಣೆಯ ಮೂಲಗಳು ಹೇಳಿವೆ.

‘ಯೋಗೇಶ್ ಅವರು ರಾಕ್‌ಲೈನ್ ಮಾಲ್ ಮುಂಭಾಗದಲ್ಲಿ ಬೈಕ್‌ನಲ್ಲಿ ಹೊರಟಿದ್ದರು. ಅದೇ ಮಾರ್ಗದಲ್ಲಿ ಖಾಸಗಿ ಬಸ್ ತೆರಳುತ್ತಿತ್ತು. ಚಾಲಕ ಅತೀ ವೇಗದಲ್ಲಿ ನಿರ್ಲಕ್ಷ್ಯದಿಂದ ಬಸ್ ಚಲಾಯಿಸಿದ್ದ. ಇದರಿಂದಾಗಿ ಬಸ್, ಬೈಕ್‌ಗೆ ಡಿಕ್ಕಿ ಹೊಡೆದಿತ್ತು.’

‘ಯೋಗೇಶ್ ಸ್ಥಳದಲ್ಲಿ ಮೃತಪಟ್ಟಿದ್ದಾರೆ. ಬಸ್ ಬಿಟ್ಟು ಚಾಲಕ ಪರಾರಿಯಾಗಿದ್ದಾನೆ. ಚಾಲಕನ ವಿರುದ್ಧ ಪ್ರಕರಣ ದಾಖಲಾಗಿದೆ’ ಎಂದು ತಿಳಿಸಿವೆ.

ಸಾಹಿತಿ ಬರಗೂರು ರಾಮಚಂದ್ರಪ್ಪ ಅಭಿಮತ

‘ದಳವಾಯಿ ಸಾಂಸ್ಕೃತಿಕ ಶ್ರಮಜೀವಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿರಂತರ ಅಲೆಮಾರಿ ಆಗಿದ್ದ ರಾಜಪ್ಪ ದಳವಾಯಿ ಅವರು ಸಾಂಸ್ಕೃತಿಕ ಶ್ರಮಜೀವಿ ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಬಣ್ಣಿಸಿದರು.

ದಳವಾಯಿ ಅವರಿಗೆ ವಿದ್ಯಾರ್ಥಿಗಳು ಹಮ್ಮಿಕೊಂಡಿದ್ದ ‘ಶೈಕ್ಷಣಿಕ ಗೌರವ’ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ನಾನು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷನಾಗಿದ್ದ ಅವಧಿಯಲ್ಲಿ 125 ಪುಸ್ತಕಗಳನ್ನು ಏಕಕಾಲಕ್ಕೆ ಮುದ್ರಿಸಿ ಬಿಡುಗಡೆಗೊಳಿಸುವ ಕಾರ್ಯಕ್ರಮವನ್ನು ಆಯೋಜಿಸಿದ್ದೆ. ಆ ಸಮಯದಲ್ಲಿ ರಾಜಪ್ಪ ಅವರು ಹಗಲು, ರಾತ್ರಿ ಎನ್ನದೆ ಒಪ್ಪಿಕೊಂಡ ಕೆಲಸವನ್ನು ನಿರಂತರವಾಗಿ ನಿರ್ವಹಿಸಿದರು. ಎಷ್ಟೋ ಸಂದರ್ಭದಲ್ಲಿ ಪ್ರಿಂಟಿಗ್ ಪ್ರೆಸ್‌ನಲ್ಲಿ ರಾತ್ರಿವರೆಗೆ ಕೆಲಸ ಮಾಡಿ, ಪೇಪರ್ ಮೇಲೆ ಮಲಗಿ, ಬೆಳಿಗ್ಗೆ ಮತ್ತೆ ಎದ್ದು ಪ್ರೂಫ್ ರೀಡಿಂಗ್ ಕೆಲಸವನ್ನು ನಿರ್ವಹಿಸಿ ಯೋಜನೆ ಯಶಸ್ಸಾಗಲು ಕಾರಣರಾಗಿದ್ದರು’ ಎಂದು ನೆನಪಿಸಿಕೊಂಡರು.

‘ರಾಜಪ್ಪ ದಳವಾಯಿ ಯವರಿಗೆ ಸಿಗಬೇಕಾದ ಸ್ಥಾನಮಾನಗಳು ಸಿಗಲಿಲ್ಲ. ಬಹಳ ಸಂದರ್ಭಗಳಲ್ಲಿ ತಮ್ಮ ಕೆಲಸಕ್ಕಿಂತ ಬೇರೆಯವರ ಕೆಲಸಗಳಿಗೆ ಒತ್ತು ಕೊಟ್ಟು ನನ್ನ ಬಳಿ ಬರುತ್ತಿದ್ದರು’ ಎಂದರು.

ಕರ್ನಾಟಕ ಲೇಖಕಿಯ ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪ ಮಾತನಾಡಿ, ‘ಕನ್ನಡದ ಮಹತ್ವದ ನಾಟಕಕಾರರ ಸಾಲಿನಲ್ಲಿ ರಾಜಪ್ಪ ದಳವಾಯಿ ಅವರಿಗೆ ಸ್ಥಾನವಿದೆ. ಅವರು ಸಂಘಟನೆಯಲ್ಲಿ ತೊಡಗಿಕೊಂಡೇ ಮಹತ್ವದ ನಾಟಕಗಳನ್ನು ರಚಿಸಿದ್ದಾರೆ’ ಎಂದು ವಿವರಿಸಿದರು.

‘ವಿದ್ಯಾರ್ಥಿಗಳೇ ಸೇರಿ ರಾಜಪ್ಪ ದಳವಾಯಿ ಹೆಸರಿನಲ್ಲಿ ಟ್ರಸ್ಟ್ ಸ್ಥಾಪಿಸಿದ್ದೇವೆ. ಇದಕ್ಕೆ ವಿದ್ಯಾರ್ಥಿಗಳಿಂದಲೇ ಹಣ ಸಂಗ್ರಹಿಸಲಾಗಿದೆ. ಸಾಹಿತ್ಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿರುವವರನ್ನು ಗುರುತಿಸಿ ಪ್ರಶಸ್ತಿ ನೀಡಲಾಗುವುದು’ ಎಂದು ಪ್ರದೀಪ್ ಮಾಲ್ಗುಡಿ ಮಾಹಿತಿ ನೀಡಿದರು.

ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕ ಡಾ.ಡಾಮಿನಿಕ್, ರಾಜಪ್ಪ ದಳವಾಯಿಯವರ ಪತ್ನಿ ಮಂಜುಳಾ ಬಿ.ಸಿ., ರಾಜಪ್ಪ ದಳವಾಯಿ, ಬೆಂಗಳೂರು ವಿಶ್ವ ವಿದ್ಯಾಲಯದ ಕುಲಪತಿ, ಜಯಕರ್ ಎಸ್.ಎಂ. ಮಾತನಾಡಿದರು.

ಬೆಂಗಳೂರು ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ರಾಜಪ್ಪ ದಳವಾಯಿ ಅವರಿಗೆ ವಿದ್ಯಾರ್ಥಿಗಳು ‘ಶೈಕ್ಷಣಿಕ ಗೌರವ’ ನೀಡಿ ಸನ್ಮಾನಿಸಿದರು.

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUSINESS

Business Offers

Franchise

THERE IS SO MUCH MONEY TO MAKE IN THE TRAVEL BUSINESS

BECOME OUR FRANCHISEE NOW!

CHARIOT WORLD TOURS LTD FRANCHISE OPPORTUNITY

- Low investment
- Most recognised brand association
- World class operations
- Largest choice of tours for customers
- Top class business support
- Monthly commission payout

9945775555
atmanand@chariotworldtours.com

CHARIOT

CHARIOT WORLD TOURS LIMITED
3446/40, 1st 'F' Cross, Next to Bunts Sangha, Vijayanagar, Bangalore 40

JOB OPPORTUNITIES

Teachers/ Professors

TEACHERS REQUIRED for Maths, Science and Hindi High school and primary contact Kenmore school basavanagudi ph 9901501185 email kenmoreschool@gmail.com

PERSONAL

Change of Name

CHANGE OF NAME
I, ASHA C. W/o R.M. Suresh Singh Residing at # 207, Sudhas Apartment, 4th Cross, Govt.College Road, Brundavana Layout, Kadugodi, Bengaluru-560 067 have changed my name from ASHA C. to ASHA SURESH SINGH vide affidavit dated 30-03-2024 Sworn before Notary Y. R.Chandrasekar, Bangalore. Henceforth, I shall be known as ASHA SURESH SINGH only.

I, SANTHRUPTHY HANGALSHETHALLI VENKATESH W/O Avin.H.M. R/o.Gokul Estate, Kaskebailu, Kammaragodu Village Gonibeedu Post Mudigere Taluk. Chikmagalur District. Have changed my Name from SANTHRUPTHY HAGALSHETTY VENKATESH to SANTHRUPTHY HANGALSHETHALLI VENKATESH vide Affidavit Dated:30.3.2024 before Notary Surendra.D.S. Mudigere.

PUBLIC NOTICE

NABFINS Ltd.
No.3072, 14th Cross, K.R.Road, Banashankari 2nd Stage, Bengaluru- 560 070
REQUEST FOR PROPOSALS
NABFINS Limited invites responses to the Request for Proposal for selection of Life Insurer/s to offer Credit Life Group Insurance cover for the Borrowers and Co-obligants from the life insurance companies. For details of RFP please visit our website - https://nabfins.org/ Last date of submission of proposal is 25th April 2024.
Sd/-
General Manager

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE SELLING

Commerical

Ulsoor

ULSOOR OFFICE SALE FIRST FLOOR 500 SQFT FULLY FURNISHED CLOSE TO MG ROAD CONTACT: 9845098164

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

DH Classifieds More value, more impact | ಪ್ರಜಾವಾಣಿ
RECRUITMENT
BOOK YOUR JOB ADS IN DECCAN HERALD ALL KARNATAKA + PRAJAVANI BENGALURU CITY
CLASSIFIED DISPLAY @ 550/-* PER SQCM
SINGLE / DOUBLE / MULTIPLE COLUMN
www.dhclassifieds.com BOOK NOW
For more details contact:
+91 9901641752 | +91 9845114560 | +91 9886213331

ಶಾಸಕರು, ಸಂಸದರಿಂದ ಅವಗಣನೆ: ಕುಂಟುತ್ತಿದೆ ಬೆಂಗಳೂರು ಉಪನಗರ ರೈಲು ಯೋಜನೆ

ಬಿಎಸ್‌ಆರ್‌ಪಿ: ಜನಪ್ರತಿನಿಧಿಗಳ ನಿರ್ಲಕ್ಷ್ಯ

● ಬಾಲಕೃಷ್ಣ ಪಿ.ಎಚ್.

ಬೆಂಗಳೂರು: 'ಅಪ್ಪ-ಅಮ್ಮನ ಜಗಳದಲ್ಲಿ ಕೂಸು ಬಡವಾಯ್ತು' ಎನ್ನುವಂತೆ ಕೇಂದ್ರ, ರಾಜ್ಯ ಸರ್ಕಾರಗಳ ಹೊಯ್ದಾಟದಲ್ಲಿ ಬೆಂಗಳೂರು ಉಪನಗರ ರೈಲು ಯೋಜನೆ (ಬಿಎಸ್‌ಆರ್‌ಪಿ) ಕುಂಟುತ್ತಾ ಸಾಗಿದೆ. ಜನಪ್ರತಿನಿಧಿಗಳ ನಿರ್ಲಕ್ಷ್ಯದಿಂದ ಯೋಜನೆ ನಲುಗುತ್ತಿದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪಾಲುದಾರಿಕೆಯಲ್ಲಿ ಅನುಷ್ಠಾನಗೊಳ್ಳುತ್ತಿರುವ ಉಪನಗರ ರೈಲು ಯೋಜನೆಯ ನಾಲ್ಕು ಕಾರಿಡಾರ್‌ಗಳಿಗೆ 'ಸಂಪಿಗೆ', 'ಮಲ್ಲಿಗೆ', 'ಪಾರಿಜಾತ' ಮತ್ತು 'ಕನಕ' ಎಂದು ಹೂವುಗಳ ಹೆಸರು ಇಟ್ಟಿದ್ದರೂ ಕಾಮಗಾರಿ ಮಾತ್ರ ಹೂವು ಎತ್ತಿದಷ್ಟು ಹಗುರವಾಗಿ ಸಾಗುತ್ತಿಲ್ಲ.

2018ರಲ್ಲಿ ಬಿಎಸ್‌ಆರ್‌ಪಿ ಘೋಷಣೆಯಾಯಿತು. 2020ಕ್ಕೆ ಮಂಜೂರಾಯಿತು. ಕೋವಿಡ್ ಮತ್ತಿತರ ಕಾರಣಗಳಿಂದ ಎರಡು ವರ್ಷ ಕಾಮಗಾರಿ ನಡೆಯಲಿಲ್ಲ. 2022ರಲ್ಲಿ ಕಾಮಗಾರಿಗೆ ಚಾಲನೆ ನೀಡಿದ್ದ ಪ್ರಧಾನಿ ನರೇಂದ್ರಮೋದಿ 2025ಕ್ಕೆ ಪೂರ್ಣಗೊಳಿಸಲು ಗಡುವು ನೀಡಿದ್ದರು. ಬಳಿಕ ಮಂಜೂರಾತಿ ಪತ್ರದಲ್ಲಿ 2026ಕ್ಕೆ ಗಡುವು ವಿಸ್ತರಿಸಿತು. ರಾಜ್ಯ ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ. ಪಾಟೀಲ 2027ಕ್ಕೆ ಕಾಮಗಾರಿಗಳು ಮುಗಿಯುವುದಾಗಿ ಹೇಳಿದ್ದರು. ಹೀಗೆ ಗಡುವುಗಳು ಮುಂದಕ್ಕೆ ಹೋಗುತ್ತಿವೆಯೇ ಹೊರತು ಕಾರಿಡಾರ್‌ಗಳು ಮಾತ್ರ ಸಕಾಲಕ್ಕೆ ಸಿದ್ಧಗೊಳ್ಳುತ್ತಿಲ್ಲ.

ಸರ್ಕಾರಗಳ ಹೊಯ್ದಾಟ: ಹೀಲಲಿಗೆಯಿಂದ ರಾಜಾನುಕುಂಟೆ ಮಾರ್ಗದ (ಕನಕ ಮಾರ್ಗ) ಕಾರಿಡಾರ್-4 ನಿರ್ಮಾಣಕ್ಕಾಗಿ 193 ಎಕರೆ ಜಮೀನನ್ನು ನೈರುತ್ಯ ರೈಲ್ವೆಯು ಕರ್ನಾಟಕ ರೈಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಕಂಪನಿಗೆ (ಕೆ-ರೈಡ್) ಹಸ್ತಾಂತರ ಮಾಡಬೇಕಿತ್ತು. ಉಳಿದ 34 ಎಕರೆಯನ್ನು ಖಾಸಗಿಯವರಿಂದ ಸ್ವಾಧೀನಪಡಿಸಿಕೊಳ್ಳಬೇಕಿತ್ತು. ರೈಲ್ವೆಯಿಂದ ಜಮೀನು ಹಸ್ತಾಂತರವಾಗದ ಕಾರಣ ಟೆಂಡರ್ ವಿಳಂಬವಾಗಿತ್ತು. ಷರತ್ತಿನ ಪ್ರಕಾರ 2023ರ ಡಿಸೆಂಬರ್ ಅಂತ್ಯದೊಳಗೆ ಟೆಂಡರ್ ಕರೆಯಬೇಕಿತ್ತು. ಈ ಬಗ್ಗೆ ರೈಲ್ವೆ ಅಧಿಕಾರಿಗಳೂ ಸ್ಪಂದಿಸಲಿಲ್ಲ.

ಮತ ಮಂಥನ

ಸಂಸದರೂ ಒತ್ತಡ ಹಾಕಲಿಲ್ಲ. ಕೊನೆಗೆ 'ಶೀಘ್ರ ಜಮೀನು ಹಸ್ತಾಂತರಿಸಲಾಗುವುದು' ಎಂಬ ಭರವಸೆಯ ಆಧಾರದಲ್ಲಿ ಡಿಸೆಂಬರ್ ಒಳಗೆ ಟೆಂಡರ್ ಪ್ರಕ್ರಿಯೆ ನಡೆಸಲಾಗಿದೆ. ಆದರೆ, ಕಾಮಗಾರಿ ಮಾತ್ರ ಇನ್ನೂ ಆರಂಭವಾಗಿಲ್ಲ.

ಇತ್ತ ರಾಜ್ಯ ಸರ್ಕಾರ ಕೂಡ, ಕಾಮಗಾರಿ ವಿಳಂಬಕ್ಕೆ ಕೇಂದ್ರ ಸರ್ಕಾರದ ರೈಲ್ವೆ ಇಲಾಖೆ ಕಾರಣ ಎಂದು ಬೊಟ್ಟು ಮಾಡಿ ಸುಮ್ಮನಾಗಿದೆ. 34 ಎಕರೆ ಜಮೀನನ್ನು ಖಾಸಗಿಯವರಿಂದ ಸ್ವಾಧೀನಪಡಿಸಿಕೊಂಡು ಕೆ-ರೈಡ್‌ಗೆ ನೀಡಬೇಕಿದ್ದು, ಈ ಬಗ್ಗೆ ಶಾಸಕರಾಗಲಿ, ಸಚಿವರಾಗಲಿ ಮಾತನಾಡುತ್ತಿಲ್ಲ.

ಜನಪ್ರತಿನಿಧಿಗಳ ನಿರ್ಲಕ್ಷ್ಯ: ಬೆಂಗಳೂರಿನ ವಾಹನದಟ್ಟಣೆ ಕಡಿಮೆ ಮಾಡುವ ಈ ಯೋಜನೆಯು ಪ್ರಮುಖವಾಗಿ ಬೆಂಗಳೂರು ಉತ್ತರ, ದಕ್ಷಿಣ ಮತ್ತು ಕೇಂದ್ರ ಲೋಕಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿದೆ. ಈ ಮೂರೂ ಕ್ಷೇತ್ರಗಳ ಸಂಸದರು, ಶಾಸಕರು ಬಿಎಸ್‌ಆರ್‌ಪಿಯನ್ನು ಗಂಭೀರವಾಗಿ ಪರಿಗಣಿಸಲಿಲ್ಲ.

ಆಗಾಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಎರಡು ಸಾಲು ಬರೆದು 'ಮೈಲೇಜ್' ತೆಗೆದುಕೊಳ್ಳುವುದು ಬಿಟ್ಟರೆ ಅತ್ತ ಗಮನಹರಿಸಿದ್ದು ಕಡಿಮೆ. ಕೇಂದ್ರ ರೈಲ್ವೆ ಸಚಿವರು ವಹಿಸಿದಷ್ಟು ಮುತುವರ್ಜಿಯನ್ನೂ ಸ್ಥಳೀಯ ಸಂಸದರು ವಹಿಸಿಲ್ಲ ಎಂಬುದು ರೈಲ್ವೆ ಹೋರಾಟಗಾರರ ಆರೋಪ.

ಉಪ ನಗರ ರೈಲು ಯೋಜನೆಯಲ್ಲಿರುವ ನಾಲ್ಕು ಕಾರಿಡಾರ್‌ಗಳಲ್ಲಿ 'ಚಿಕ್ಕಬಾಣಾವರ-ಬೆನ್ನಿಗಾನಹಳ್ಳಿ ಮಾರ್ಗದ(ಮಲ್ಲಿಗೆ) 2ನೇ ಕಾರಿಡಾರ್ ಕಾಮಗಾರಿಯನ್ನು ಕೆ-ರೈಡ್ ಮೊದಲು ಕೈಗೆತ್ತಿಕೊಂಡಿತು. ಸದ್ಯಕ್ಕೆ ಇದೊಂದೇ ಕಾಮಗಾರಿ ಪ್ರಗತಿಯಲ್ಲಿರುವುದು. ಬೆಂಗಳೂರು ನಗರ-ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಸಂಪರ್ಕಿಸುವ ಕಾರಿಡಾರ್-1 (ಸಂಪಿಗೆ ಮಾರ್ಗ), ಕೆಂಗೇರಿ-ವೈಟ್‌ಫೀಲ್ಡ್ ಸಂಪರ್ಕದ ಕಾರಿಡಾರ್-3 (ಪಾರಿಜಾತ) ಕಾಮಗಾರಿ ಟೆಂಡರ್ ಹಂತಕ್ಕೂ ಬಂದಿಲ್ಲ.

ಯೋಜನೆಯ ವೆಚ್ಚದ ಅಂಕಿ-ಅಂಶ

₹2,479 ಕೋಟಿ ಕೇಂದ್ರ ಸರ್ಕಾರದ ಪಾಲು	₹763 ಕೋಟಿ ಕೇಂದ್ರ ಜಿಎಸ್‌ಟಿ, ಕಸ್ಟಮ್ಸ್ ಡ್ಯೂಟಿ
₹2,479 ಕೋಟಿ ರಾಜ್ಯ ಸರ್ಕಾರದ ಪಾಲು	₹2,608 ಕೋಟಿ ರಾಜ್ಯ ಜಿಎಸ್‌ಟಿ, ಭೂಮಿ, ವಿವಿಧ ಸುಂಕ
₹7,438 ಕೋಟಿ ಬಾಹ್ಯನಿಧಿ	₹15,767 ಕೋಟಿ ಯೋಜನೆಯ ಒಟ್ಟು ವೆಚ್ಚ

ಜನ ಏನಂತಾರೆ?

ಪ್ರಗತಿ ಪರಿಶೀಲನೆ ಮಾಡದ ಸಂಸದರು



ಸಂಸದರು ನಿಯಮಿತವಾಗಿ ಪ್ರಗತಿಪರಿಶೀಲನೆ ನಡೆಸಿದ್ದರೆ ಸಮಸ್ಯೆ ಅರ್ಥವಾಗುತ್ತಿತ್ತು. ಕರ್ತವ್ಯ ನಿರ್ವಹಿಸುವುದು ಬಿಟ್ಟು ಹೊರಗೆ ಟೀಕಿಸುತ್ತಾ ರಾಜಕಾರಣ ಮಾಡಿಕೊಂಡು ತಿರುಗಾಡಿದರು. ರಾಜ್ಯ ಸರ್ಕಾರವೂ ಪಟ್ಟು ಹಿಡಿದು ಕೆಲಸ ಮಾಡಿಸಿಲ್ಲ. ಮೂಲಸೌಕರ್ಯ ಅಭಿವೃದ್ಧಿ ಸಚಿವರು ಅಪರೂಪಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದು ಬಿಟ್ಟರೆ ನಿಯಮಿತವಾಗಿ ಪ್ರಗತಿ ಪರಿಶೀಲನೆ ನಡೆಸಲಿಲ್ಲ. ಜನಪ್ರತಿನಿಧಿಗಳು ಚುರುಕಾದರೆ ಅಧಿಕಾರಿಗಳು ಕೆಲಸ ಮಾಡುತ್ತಾರೆ.

ಸಂಜೀವ್ ದ್ಯಾಮಣ್ಣನವರ್, ರೈಲ್ವೆ ಹೋರಾಟಗಾರ

ಈಗ ಅಡ್ಡಗಾಲು ಬೇಕಿತ್ತೇ?

ಬಿಎಸ್‌ಆರ್‌ಪಿಯನ್ನು ಕೆ-ರೈಡ್‌ಗೆ ಒಪ್ಪಿಸಿದ ಬಳಿಕ ರಾಜ್ಯದಲ್ಲಿ ಮೂರು ವರ್ಷ ಬಿಜೆಪಿ ಆಡಳಿತವಿತ್ತು. ಆಗ ಯಾವುದೇ ಪ್ರಗತಿ ಕಂಡಿರಲಿಲ್ಲ. ಕೇಂದ್ರ ರೈಲ್ವೆ ಸಚಿವರ ಮುತುವರ್ಜಿಯಿಂದಾಗಿ ಕಾಮಗಾರಿಗೆ ಚಾಲನೆ ಸಿಕ್ಕಿತು. ಈ ಹಂತದಲ್ಲಿ ಕೆ-ರೈಡ್ ತಾಂತ್ರಿಕವಾಗಿ ಗಟ್ಟಿ ಇಲ್ಲ ಎಂದು ಸಂಸದರೊಬ್ಬರು ಹೇಳುತ್ತಾ ಕಾಮಗಾರಿಗೆ ಅಡ್ಡಗಾಲು ಹಾಕುತ್ತಿದ್ದಾರೆ. ತಾಂತ್ರಿಕ ನಿಪುಣರ ಕೊರತೆ ಇದ್ದರೆ, ಅದನ್ನು ನೀಗಿಸಬೇಕಿರುವುದು ಸಂಸದರ ಕರ್ತವ್ಯ. ನಗರದ ಮೂವರು ಸಂಸದರೂ ಬಿಎಸ್‌ಆರ್‌ಪಿ ಬಗ್ಗೆ ನಿರ್ಲಕ್ಷ್ಯ ವಹಿಸಿದ್ದಾರೆ.

ರಾಜಕುಮಾರ್ ದುಗಾರ್, ಸಿಟಿಜನ್ಸ್ ಫಾರ್ ಸಿಟಿಜನ್ಸ್ ಸಂಸ್ಥಾಪಕ

ಸಂವಹನದ ಕೊರತೆ

ಕೆ-ರೈಡ್ ಮತ್ತು ರೈಲ್ವೆ ನಡುವೆ ಸಂವಹನದ ಕೊರತೆಯಿದೆ. ರೈಲ್ವೆ ಇಲಾಖೆ ಸರಿಯಾಗಿ ಸ್ಪಂದಿಸುತ್ತಿಲ್ಲ. ಕೆ-ರೈಡ್‌ಗೆ ಕಾಯಂ ಎಂ.ಡಿ. ಇಲ್ಲ. ₹15 ಸಾವಿರ ಕೋಟಿಯ ಯೋಜನೆಯೊಂದು ಈ ಮಟ್ಟಿಗೆ ನಿರ್ಲಕ್ಷ್ಯಕ್ಕೆ ಒಳಗಾಗುತ್ತದೆ ಎಂದರೆ ಅದಕ್ಕೆ ಕೇಂದ್ರ, ರಾಜ್ಯದ ಜನಪ್ರತಿನಿಧಿಗಳೇ ನೇರ ಹೊಣೆ.

ಕೆ.ಎನ್. ಕೃಷ್ಣ ಪ್ರಸಾದ್, ರೈಲ್ವೆ ಹೋರಾಟಗಾರ

ಲೋಕಸಭಾ ಚುನಾವಣೆ | ಮತದಾರರು ಏನಂತಾರೆ?

ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಸೇರುವ ಹೆಬ್ಬಾಳದ ಮೇಲ್ಸೇತುವೆ ಮೇಲೆ ಪ್ರತಿನಿತ್ಯ ಸಂಚಾರ ದಟ್ಟಣೆ. ಸಂಚಾರದ ತೊಡಕಿನಿಂದಾಗಿ ಈ ಭಾಗದಲ್ಲಿ ಹೊಸದಾಗಿ ವ್ಯಾಪಾರ, ಉದ್ಯಮಗಳು ಬರುತ್ತಿಲ್ಲ. ಕೂಡಲೇ ಈ ಮೇಲ್ಸೇತುವೆ ಅಗಲೀಕರಣ ಮಾಡಬೇಕು. ಈ ಭಾಗದಲ್ಲಿ ಪಾದಚಾರಿ ಮಾರ್ಗಗಳು ಹದಗೆಟ್ಟು ಹೋಗಿವೆ, ಅವುಗಳನ್ನು ದುರಸ್ತಿಗೊಳಿಸಬೇಕು. ಸರಿಯಾದ ಸಮಯಕ್ಕೆ ಕಸ ವಿಲೇವಾರಿ ಆಗುತ್ತಿಲ್ಲ. ರಾಜಕಾಲುವೆಯಲ್ಲಿ ಹೂಳು ತುಂಬಿದ್ದು, ನೀರು ಸರಾಗವಾಗಿ ಹರಿಯುತ್ತಿಲ್ಲ. ಸಾರ್ವಜನಿಕ ಶೌಚಾಲಯಗಳನ್ನು ಹೆಚ್ಚಿಸುವ ಮೂಲಕ ಸ್ವಚ್ಛತೆ ಕಾಪಾಡಬೇಕು.

ಜಿ.ಪಿ. ದಯಾನಂದ, ಭುವನೇಶ್ವರಿನಗರ, ಹೆಬ್ಬಾಳ ದಾಸರಹಳ್ಳಿ



ನಗರದ ಯಾವುದೇ ಲೋಕಸಭಾ ಕ್ಷೇತ್ರದಿಂದ ಆಯ್ಕೆಯಾಗುವ ಅಭ್ಯರ್ಥಿಗಳು ಕ್ಷೇತ್ರಕ್ಕೆ ಅಗತ್ಯವಾದ ನೀರು, ವಿದ್ಯುತ್, ಒಳಚರಂಡಿ ವ್ಯವಸ್ಥೆ ಹಾಗೂ ಉತ್ತಮ ರಸ್ತೆಯಂತಹ ಮೂಲಸೌಕರ್ಯಗಳನ್ನು ಕಲ್ಪಿಸಬೇಕು. ಚುನಾವಣೆ ವೇಳೆಯಲ್ಲಿ ಜನರಿಗೆ ನೀಡುವ ಆಶ್ವಾಸನೆಗಳನ್ನು ಈಡೇರಿಸಬೇಕು. ಕ್ಷೇತ್ರದಲ್ಲಿ ಜನಸಂಪರ್ಕ ಸಭೆಗಳನ್ನು ಆಯೋಜಿಸಿ ಕ್ಷೇತ್ರದ ಜನರ ಅಹವಾಲುಗಳನ್ನು ಆಲಿಸಿ, ಅವುಗಳಿಗೆ ಸ್ಪಂದಿಸಬೇಕು. ಕ್ಷೇತ್ರಕ್ಕೆ ಮೀಸಲಾದ ಹಣವನ್ನು ಅಭಿವೃದ್ಧಿ ಯೋಜನೆಗಳಿಗೆ ಬಳಸಬೇಕು. ಈ ಸರಳ ಸೂತ್ರಗಳನ್ನು ಅರಿಯದ ಐದು ವರ್ಷಕ್ಕೊಮ್ಮೆ ದರ್ಶನ ಮಾಡುವ ಅಭ್ಯರ್ಥಿಗಳನ್ನು ತಿರಸ್ಕರಿಸುವ ಅಧಿಕಾರ ಮತದಾರ ಪ್ರಭುವಿಗೆ ಇದೆ.

ಎಂ.ಜೆ. ಅಭಿಷೇಕ್, ಬಿಟಿಎಂ ಲೇಔಟ್

ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರವು ಅತಿದೊಡ್ಡ ಕ್ಷೇತ್ರಗಳಲ್ಲಿ ಒಂದಾಗಿದೆ. ಇಲ್ಲಿ ಮಹಿಳಾ ಸುರಕ್ಷತೆಗೆ ಹೆಚ್ಚು ಆದ್ಯತೆ ನೀಡಬೇಕು. ಈ ಕ್ಷೇತ್ರಕ್ಕೆ ಈಗಾಗಲೇ 110 ಹಳ್ಳಿಗಳನ್ನು ಸೇರಿಸಲಾಗಿದೆ. ಆದರೆ, ಉತ್ತಮ ರಸ್ತೆ ಸೇರಿದಂತೆ ಮೂಲ ಸೌಕರ್ಯವೇ ಮರೀಚಿಕೆ ಆಗಿದೆ. ಇಲ್ಲಿರುವ ಉದ್ಯಾನಗಳ ನಿರ್ವಹಣೆಯೇ ಉತ್ತಮವಾಗಿಲ್ಲ. ಸರ್ಕಾರಿ ಗ್ರಂಥಾಲಯಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಬೇಕಾಗುವ ಪುಸ್ತಕಗಳ ಪೂರೈಕೆ ಮಾಡಬೇಕಾಗಿದೆ.

ಎಂ. ಕಿಟ್ಟೇಶ್, ಎಂಸಿಇಸಿಎಚ್‌ಎಸ್ ಬಡಾವಣೆ

ನನ್ನ ಕ್ಷೇತ್ರ ನನ್ನ ಕಾರ್ಯಸೂಚಿ

ಲೋಕಸಭೆ ಚುನಾವಣೆಯ ಅಭ್ಯರ್ಥಿಯು ನಿಮ್ಮ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಮಾಡಬೇಕಾಗಿರುವುದೇನು? ನಿಮ್ಮ ಕಾರ್ಯಸೂಚಿಯನ್ನು 100 ಪದಗಳ ಮಿತಿಯಲ್ಲಿ ಬರೆಯಿರಿ. ಹೆಸರು, ವಿಳಾಸ, ಭಾವಚಿತ್ರ ಜತೆಗಿರಲಿ

96060 38256

ಕೆಪಿಸಿಸಿ ಪುನರ್‌ರಚನೆ: 43 ಉಪಾಧ್ಯಕ್ಷರು 138 ಪ್ರಧಾನ ಕಾರ್ಯದರ್ಶಿ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭೆ ಚುನಾವಣೆಗೆ ಪ್ರಚಾರ ಚುರುಕುಗೊಂಡ ಬೆನ್ನಲ್ಲೆ, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯನ್ನು (ಕೆಪಿಸಿಸಿ) ಎಐಸಿಸಿ ಪುನರ್‌ರಚಿಸಿದೆ. ಒಟ್ಟು 43 ಉಪಾಧ್ಯಕ್ಷರು, 138 ಪ್ರಧಾನ ಕಾರ್ಯದರ್ಶಿಗಳನ್ನು ನೇಮಿಸಲಾಗಿದೆ.

ವಿ.ಎಸ್. ಉಗ್ರಪ್ಪ, ಆನಂದ ನ್ಯಾಮಗೌಡ, ಎಂ. ನಾರಾಯಣಸ್ವಾಮಿ, ಆರ್.ವಿ. ವೆಂಕಟೇಶ್, ಎಂ.ಸಿ. ವೇಣುಗೋಪಾಲ್, ಬಿ.ಎಲ್. ಶಂಕರ್, ಅಜಯಕುಮಾರ್ ಸರನಾಯಕ, ಅಕ್ಕೈ ಪದ್ಮಾಸಾಲಿ, ಎಚ್. ಆಂಜನೇಯ, ರಮಾನಾಥ ರೈ, ಮೋಹನ ಲಿಂಬಿಕಾಯಿ ಅವರನ್ನು ಉಪಾಧ್ಯಕ್ಷರಾಗಿ ನೇಮಿಸಲಾಗಿದೆ.

ಲೋಕಸಭೆ ಚುನಾವಣೆಯಲ್ಲಿ ಟಿಕೆಟ್ ಸಿಗದೆ ಮುನಿಸಿಕೊಂಡಿದ್ದ ವೀಣಾ ಕಾಶಪ್ಪನವರ, ಬಿಜೆಪಿ ತ್ಯಜಿಸಿ 'ಕೈ' ಹಿಡಿದಿದ್ದ ಪೂರ್ಣಿಮಾ ಶ್ರೀನಿವಾಸ್ ಸೇರಿದಂತೆ ಪ್ರಧಾನ ಕಾರ್ಯದರ್ಶಿ ಪಟ್ಟಿಯಲ್ಲಿ ವಿಜಯ ಮುಳುಗುಂದ್, ವಿ. ಶಂಕರ್, ಎಚ್. ನಾಗೇಶ್, ಶಂಕರ್ ಗುಹಾ, ನಟಿ ಭಾವನಾ, ಮದನ್ ಪಟೇಲ್, ರಕ್ಷಿತ್ ಶಿವರಾಮ್, ಮಿಥುನ್ ರೈ, ಸೌಮ್ಯಾ ರೆಡ್ಡಿ, ಬಸವನಗೌಡ ಬಾದರ್ಲಿ ಮುಂತಾದವರ ಹೆಸರು ಇದೆ.

ವಿನಯ್ ಕಾರ್ತಿಕ್ ಅವರನ್ನು ಖಜಾಂಚಿಯಾಗಿ, ಮಾಧ್ಯಮ ವಿಭಾಗದ ಅಧ್ಯಕ್ಷರಾಗಿ ರಮೇಶ್ ಬಾಬು, ಸಹ ಅಧ್ಯಕ್ಷರಾಗಿ ಐಶ್ವರ್ಯಾ ಮಹದೇವ್, ಉಪಾಧ್ಯಕ್ಷರಾಗಿ ಇ. ಸತ್ಯಪ್ರಕಾಶ್ ಅವರನ್ನು ನೇಮಿಸಲಾಗಿದೆ. ಸಾಮಾಜಿಕ ಮಾಧ್ಯಮ ವಿಭಾಗಕ್ಕೆ ಸಹ ಅಧ್ಯಕ್ಷರಾಗಿ ವಿಜಯ್ ಮತ್ತಿಕಟ್ಟಿ ಮತ್ತು ನಿಕೇತ್ ರಾಜ್ ಮೌರ್ಯ ಅವರನ್ನು ನೇಮಿಸಲಾಗಿದೆ.

'ಇಂಡಿಯಾ' ನಾಯಕರ ಸಭೆ ಇಂದು

ಬೆಂಗಳೂರು: ಲೋಕಸಭಾ ಚುನಾವಣೆಯ ಹಿನ್ನೆಲೆಯಲ್ಲಿ ರಾಜ್ಯದ 'ಇಂಡಿಯಾ' ಮೈತ್ರಿ ಕೂಟದ ಪಕ್ಷಗಳ ಸಭೆ ಕ್ವೀನ್ಸ್ ರಸ್ತೆಯಲ್ಲಿರುವ 'ಭಾರತ್ ಜೋಡೊ' ಭವನದಲ್ಲಿ ಮಂಗಳವಾರ (ಏಪ್ರಿಲ್ 2) ನಡೆಯಲಿದೆ ಎಂದು ಕೆಪಿಸಿಸಿ ಮಾಧ್ಯಮ ವಿಭಾಗದ ಉಪಾಧ್ಯಕ್ಷ ರಮೇಶ್ ಬಾಬು ತಿಳಿಸಿದ್ದಾರೆ.

'ರಾಜ್ಯದಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳಿಗೆ ಬೆಂಬಲ ನೀಡುವ ಕುರಿತಂತೆ ಕೆಲ ವಿಚಾರಗಳನ್ನು ಹಂಚಿಕೊಳ್ಳಲು ಈ ಸಭೆ ಕರೆಯಲಾಗಿದೆ, ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ. ಚಂದ್ರಶೇಖರ್ ಭಾಗವಹಿಸಲಿದ್ದಾರೆ. ಬಳಿಕ ಜಂಟಿ ಮಾಧ್ಯಮ ಗೋಷ್ಠಿಯಲ್ಲಿ ಮಾತನಾಡಲಿದ್ದಾರೆ' ಎಂದು ಅವರು ತಿಳಿಸಿದ್ದಾರೆ.

ಸುಧಾಕರ್ ಭೇಟಿ ಮಾಹಿತಿಯೇ ಇರಲಿಲ್ಲ: ವಿಶ್ವನಾಥ್

ಯಲಹಂಕ: 'ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ.ಕೆ. ಸುಧಾಕರ್ ನನ್ನನ್ನು ಭೇಟಿಯಾಗಲು ಬರುವ ಬಗ್ಗೆ ಯಾವುದೇ ಮಾಹಿತಿ ಇರಲಿಲ್ಲ. ಫೋನ್ ಕೂಡಾ ಮಾಡಿರಲಿಲ್ಲ' ಎಂದು ಶಾಸಕ ಎಸ್.ಆರ್. ವಿಶ್ವನಾಥ್ ಸ್ಪಷ್ಟಪಡಿಸಿದರು.

'ಭೇಟಿ ಮಾಡುವುದಾದರೆ ಸಹಜವಾಗಿ ಒಬ್ಬರೇ ಬರಬೇಕಾಗಿತ್ತು. ಅದು ಬಿಟ್ಟು ಮಾಧ್ಯಮದವರಿಗೆ ಮಾಹಿತಿ ನೀಡಿ, ಅವರೊಂದಿಗೆ ಬರುವ ಪ್ರಮೇಯ ಏನಿತ್ತು? ಇದಕ್ಕೆ ದೊಡ್ಡ ಪ್ರಚಾರ ಪಡೆದು, ಅನುಕಂಪ ಗಿಟ್ಟಿಸುವ ಅವಶ್ಯಕತೆಯೇನಿತ್ತು' ಎಂದು ಪ್ರಶ್ನಿಸಿದ ಅವರು, 'ಫೋನ್ ಮಾಡಿ ಬಂದಿದ್ದರೆ ಇದಕ್ಕೆ ಪುರಾವೆ ಒದಗಿಸಲಿ' ಎಂದು ಸವಾಲು ಹಾಕಿದರು.

'ಯಲಹಂಕದವರನ್ನು ಒಂದು ರೀತಿಯಲ್ಲಿ ಖಳನಾಯಕರಂತೆ ಬಿಂಬಿಸಲು ಹೊರಟಿದ್ದಾರೆ. ಮೊದಲು ಅವರ ವರ್ತನೆಯನ್ನು ಬದಲಿಸಿಕೊಳ್ಳಬೇಕು. ನನ್ನ ಅಥವಾ ಮುಖಂಡರ ಬಗ್ಗೆ ಮಾತನಾಡುವುದನ್ನು ನಿಲ್ಲಿಸಬೇಕು' ಎಂದರು.

'ಯಲಹಂಕದಲ್ಲಿ ಸುಧಾಕರ್ ಹೆಸರು ಹೇಳಿ ಮತ ಕೇಳಿದರೆ ಮೈನಸ್ ಆಗಬಹುದು. ನರೇಂದ್ರ ಮೋದಿ ಅವರ ಹೆಸರು ಹೇಳಿ ಮತ ಕೇಳಿದರೆ ಪ್ಲಸ್ ಆಗಲಿದೆ. ಚುನಾವಣೆಯಲ್ಲಿ ಯಾವ ರೀತಿ ಜವಾಬ್ದಾರಿ ನಿರ್ವಹಿಸಬೇಕು ಮತ್ತು ಕಾರ್ಯತಂತ್ರ ರೂಪಿಸಬೇಕು ಎಂಬುದರ ಬಗ್ಗೆ ಮುಖಂಡರೊಂದಿಗೆ ಚರ್ಚಿಸಿ ತೀರ್ಮಾನ ಕೈಗೊಂಡು, ಮೋದಿಯವರನ್ನು ಮತ್ತೊಮ್ಮೆ ಪ್ರಧಾನಿಯನ್ನಾಗಿಸುವ ನಿಟ್ಟಿನಲ್ಲಿ ಶಕ್ತಿಮೀರಿ ಪ್ರಯತ್ನಿಸಲಾಗುವುದು. ಇದರಲ್ಲಿ ಯಾವುದೇ ಸಂಶಯಬೇಡ' ಎಂದು ಸ್ಪಷ್ಟಪಡಿಸಿದರು.

'ಅಧಿಕಾರಿಗಳ ಅಕ್ರಮದಿಂದ ಸೌಮ್ಯಾ ಸೋಲು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಧಾನಸಭೆ ಚುನಾವಣೆಯಲ್ಲಿ ಜಯನಗರ ಕ್ಷೇತ್ರದಿಂದ ಸ್ಪರ್ಧಿಸಿದ್ದ ಕಾಂಗ್ರೆಸ್ ಅಭ್ಯರ್ಥಿ ಸೌಮ್ಯಾ ರೆಡ್ಡಿ ಸೋತಿಲ್ಲ. ಅಧಿಕಾರಿಗಳಿಂದ ಸೋಲಬೇಕಾಯಿತು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಅಭ್ಯರ್ಥಿಯಾಗಿ ಸೌಮ್ಯಾ ರೆಡ್ಡಿ ನಾಮಪತ್ರ ಸಲ್ಲಿಸುವ ಮೊದಲು ಜಯನಗರದಲ್ಲಿ ನಡೆದ ರ್‍ಯಾಲಿಯಲ್ಲಿ ಮಾತನಾಡಿದ ಅವರು, 'ಒತ್ತಡಕ್ಕೆ ಒಳಗಾಗಿ ನಾವು ಸೌಮ್ಯಾ ರೆಡ್ಡಿ ಅವರನ್ನು ಸೋಲಿಸಬೇಕಾಯಿತು ಎಂದು ಅಕ್ರಮದಲ್ಲಿ ಭಾಗಿಯಾಗಿದ್ದ ಅಧಿಕಾರಿಗಳು, ರಾಮಲಿಂಗಾರೆಡ್ಡಿ ಬಳಿ ಕ್ಷಮಾಪಣೆ ಕೇಳಿರುವ ಸಂಗತಿ ನನಗೆ ತಿಳಿಯಿತು' ಎಂದರು.

'ಇಡೀ ರಾಜ್ಯದಲ್ಲಿ ಯಾವ ಮೋದಿ ಅಲೆಯೂ ಇಲ್ಲ, ಬಿಜೆಪಿ ಅಲೆಯೂ ಇಲ್ಲ. ಇರುವುದು ಒಂದೇ ಗಾಳಿ, ಅದು ಕಾಂಗ್ರೆಸ್, ಗ್ಯಾರಂಟಿ ಗಾಳಿ' ಎಂದ ಅವರು, 'ಬೊಮ್ಮನಹಳ್ಳಿ, ಬಸವನಗುಡಿ ಸೇರಿದಂತೆ ಈ ಕ್ಷೇತ್ರದ ಎಲ್ಲ ಕಡೆಗಳಲ್ಲಿ ಸೌಮ್ಯಾ ಅವರಿಗೆ ಹೆಚ್ಚು ಮತಗಳು ಬರಲಿವೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸೌಮ್ಯಾ ರೆಡ್ಡಿ ಅವರು ನಾಮಪತ್ರ ಸಲ್ಲಿಸುವ ಮೊದಲು ಜಯನಗರದಲ್ಲಿ ನಡೆದ ರ್‍ಯಾಲಿಯಲ್ಲಿ ಡಿ.ಕೆ. ಶಿವಕುಮಾರ್ ಮಾತನಾಡಿದರು.ಯು.ಬಿ.ವೆಂಕಟೇಶ್, ರಾಮಲಿಂಗಾರೆಡ್ಡಿ, ಪಿ.ಜಿ.ಆರ್. ಸಿಂಧ್ಯ, ಶಾಸಕ ಪ್ರಿಯ ಕೃಷ್ಣ ಜತೆಗಿದ್ದರು

'ರಾಜ್ಯದ 28 ಲೋಕಸಭಾ ಕ್ಷೇತ್ರಗಳ ಪೈಕಿ ಬಂಟ, ರೆಡ್ಡಿ, ಸೇರಿ ಒಟ್ಟು ಎಂಟು ಮಂದಿ ಒಕ್ಕಲಿಗರಿಗೆ ಕಾಂಗ್ರೆಸ್ ಪಕ್ಷ ಟಿಕೆಟ್ ನೀಡಿದೆ. ಒಕ್ಕಲಿಗರನ್ನು ಸಿಎಂ ಮಾಡಲಿಲ್ಲವಲ್ಲ ಎನ್ನುವ ಟೀಕೆಗೆ ನಾವು ಈ ರೀತಿ ಉತ್ತರಿಸಿದ್ದೇವೆ. ಇದರ ಜತೆಗೆ ಆರು ಮಹಿಳೆಯರಿಗೆ ಟಿಕೆಟ್ ನೀಡಿದ್ದೇವೆ' ಎಂದರು.

'ನಾನೇಕೆ ತಲೆಕೆಡಿಸಿಕೊಳ್ಳಬೇಕು': ಅದಕ್ಕೂ ಮೊದಲು ಸದಾಶಿವನಗರದಲ್ಲಿರುವ ತಮ್ಮ ನಿವಾಸದ ಬಳಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಕುಮಾರಸ್ವಾಮಿ ಅವರನ್ನು ಉದ್ದೇಶಿಸಿ 'ವಿಷ' ಹೇಳಿಕೆ ನೀಡಿದ್ದೇನೆ. ಕುಂಬಳಕಾಯಿ ಕಳ್ಳ ಎಂದರೆ ಸುಮಲತಾ ಅವರು ಏಕೆ ಹೆಗಲು ಮುಟ್ಟಿ ನೋಡಿಕೊಳ್ಳಬೇಕು' ಎಂದು ಪ್ರಶ್ನಿಸಿದರು.

'ಅಂಬರೀಷ್ ಅವರಿಗೆ ಕಾಂಗ್ರೆಸ್ ಪಕ್ಷ ಏನು ಮಾಡಿದೆ ಎನ್ನುವುದು ಇಡೀ ದೇಶಕ್ಕೆ ಗೊತ್ತಿದೆ. ಅವರು ಕೊನೆಯುಸಿರು ಬಿಡುವ ವೇಳೆಯಲ್ಲಿ ಏನು ಹೇಳಿದರು ಎಂಬುದು ಗೊತ್ತಿದೆ. ನಾವು ಈಗ ಆ ವಿಚಾರಗಳನ್ನು ಮಾತನಾಡುವುದಿಲ್ಲ. ಸುಮಲತಾ ಅವರ ವಿಚಾರಕ್ಕೆ ಎಂದೂ ಹೋಗುವುದಿಲ್ಲ. ಅವರ ಬಗ್ಗೆ ನಾನೇಕೆ ತಲೆಕೆಡಿಸಿಕೊಳ್ಳಬೇಕು. ಪಕ್ಷದ ಸಿದ್ಧಾಂತದ ಬಗ್ಗೆ ಮಾತನಾಡಲಿ, ಉತ್ತರ ಕೊಡುತ್ತೇನೆ' ಎಂದರು.

'ನಿರುದ್ಯೋಗ ನಿವಾರಣೆಗೆ ಆದ್ಯತೆ'

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಅಭಿವೃದ್ಧಿಯಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯನ್ನು ರಾಜ್ಯದಲ್ಲಿಯೇ ಮೊದಲ ಸ್ಥಾನಕ್ಕೆ ಏರಿಸುವ ನಿಟ್ಟಿನಲ್ಲಿ ಕೆಲಸ ಮಾಡಬೇಕಾಗಿದೆ. ಅದನ್ನು ಲಕ್ಷ್ಯದಲ್ಲಿಟ್ಟುಕೊಂಡು ಪ್ರತ್ಯೇಕ ಪ್ರಣಾಳಿಕೆ ರೂಪಿಸುವುದಾಗಿ ಚಿಕ್ಕಬಳ್ಳಾಪುರ ಲೋಕಸಭೆ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ರಕ್ಷಾ ರಾಮಯ್ಯ ಹೇಳಿದ್ದಾರೆ.

ನಗರದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಕ್ಯಾನ್ಸರ್ ಮತ್ತು ಫ್ಲೋರೈಡ್ ನೀರಿನ ಸಮಸ್ಯೆ ಹೆಚ್ಚಿದೆ. ಪ್ರತಿ ತಾಲ್ಲೂಕಿನಲ್ಲಿ ಆರೋಗ್ಯ ಕೇಂದ್ರ ಹೆಚ್ಚಾಗಬೇಕು. ಗ್ರಾಮೀಣ ಭಾಗದಲ್ಲಿ ಶೇ 55ರಿಂದ 60ರಷ್ಟು ಮಂದಿ ಯುವಕರು ನಿರುದ್ಯೋಗಿಗಳಾಗಿದ್ದಾರೆ. ಈ ಸಮಸ್ಯೆ ನಿವಾರಣೆಗಾಗಿ ಕಾಂಗ್ರೆಸ್‌ಗೆ ಜನರು ಬೆಂಬಲಿಸಬೇಕು ಎಂದು ಮನವಿ ಮಾಡಿದರು.

ರಕ್ಷಾ ರಾಮಯ್ಯ

ವಿಧಾನ ಪರಿಷತ್ ಸದಸ್ಯ ಎಂ.ಆರ್. ಸೀತಾರಾಂ ಮಾತನಾಡಿ, ಚಿಕ್ಕಬಳ್ಳಾಪುರದಲ್ಲಿ ಧರ್ಮ ಯುದ್ಧ ನಡೆಯಲಿದೆ. ಧರ್ಮದ ರಕ್ಷಣೆಗೆ ಕಾಂಗ್ರೆಸ್‌ಗೆ ಬೆಂಬಲ ನೀಡಬೇಕು ಎಂದು ಕೋರಿದರು.

ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಎಚ್.ಮುನಿಯಪ್ಪ ಮಾತನಾಡಿ, ರಾಜ್ಯ ಸರ್ಕಾರವು ಗ್ಯಾರಂಟಿ ಯೋಜನೆಗಳ ಮೂಲಕ ಬಡವರ ಕಣ್ಣೀರು ಒರೆಸುವ ಕೆಲಸ ಮಾಡಿದೆ. ಎಲ್ಲ ವರ್ಗದ ಜನರಿಗೆ ಐದು ಗ್ಯಾರಂಟಿಗಳು ಶಕ್ತಿ ತುಂಬಿದೆ ಎಂದರು.

ಶಾಸಕ ಪ್ರದೀಪ್ ಈಶ್ವರ್ ,ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷ ಕೇಶವರೆಡ್ಡಿ, ಮಾಜಿ ಶಾಸಕ ಎಸ್. ಎಂ.ಮುನಿಯಪ್ಪ, ಶಿವಾನಂದ, ನಂದಿ ಆಂಜನಪ್ಪ, ಯಲಹಂಕದ ಕೇಶವ ರಾಜಣ್ಣ, ಎಸ್.ಎಂ.ರಫೀಕ್ ಭಾಗವಹಿಸಿದ್ದರು.

ಎಚ್. ನಿಂಗಪ್ಪ ಇಂದು ಜೆಡಿಎಸ್‌ಗೆ

ಬೆಂಗಳೂರು: ಕಾಂಗ್ರೆಸ್ ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡಿರುವ ತುಮಕೂರು ಗ್ರಾಮಾಂತರ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಎಚ್.ನಿಂಗಪ್ಪ ಅವರು ಮಂಗಳವಾರ ಜೆಡಿಎಸ್ ಸೇರಲಿದ್ದಾರೆ.

ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್. ಡಿ. ದೇವೇಗೌಡ ಅವರು ನಿಂಗಪ್ಪ ಅವರ ಮನೆಗೆ ಇತ್ತೀಚೆಗೆ ಭೇಟಿ ನೀಡಿದ್ದು, ಪಕ್ಷಕ್ಕೆ ಮರಳುವಂತೆ ಮನವೊಲಿಕೆ ನಡೆಸಿದ್ದರು. ಜೆಡಿಎಸ್ ರಾಜ್ಯ ಘಟಕದ ಕಚೇರಿಯಲ್ಲಿ ಮಂಗಳವಾರ ಬೆಳಿಗ್ಗೆ ನಡೆಯುವ ಕಾರ್ಯಕ್ರಮದಲ್ಲಿ ಅವರು ಪಕ್ಷ ಸೇರಲಿದ್ದಾರೆ ಎಂದು ಜೆಡಿಎಸ್ ಪ್ರಕಟಣೆ ತಿಳಿಸಿದೆ.

ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಪಿ.ಸಿ.ಮೋಹನ್(ಎಡದಿಂದ ಮೂರನೆಯವರು) ಅವರು ಸೋಮವಾರ ನಾಮಪತ್ರ ಸಲ್ಲಿಸುವುದಕ್ಕೂ ಮುನ್ನ ಬನ್ನಪ್ಪ ಉದ್ಯಾನದಲ್ಲಿ ನಡೆದ ಸಮಾವೇಶದಲ್ಲಿ ಪಕ್ಷದ ನಾಯಕರಾದ ಸಿ.ಟಿ ರವಿ, ಆರ್ ಅಶೋಕ, ಎಸ್. ಸುರೇಶ್ ಕುಮಾರ್, ಬಿ.ಎಸ್ ಯಡಿಯೂರಪ್ಪ, ಡಿ.ವಿ.ಸದಾನಂದಗೌಡ, ಅರವಿಂದ ಲಿಂಬಾವಳಿ ಮತ್ತು ಜನಾರ್ದನ ರೆಡ್ಡಿ ಅವರು ಕೈ ಎತ್ತಿ ಒಗ್ಗಟ್ಟು ಪ್ರದರ್ಶಿಸಿದರು —ಪ್ರಜಾವಾಣಿ ಚಿತ್ರ

ಪತ್ರಕರ್ತೆಯರ ಸಂಘದ ಪ್ರಶಸ್ತಿ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಪತ್ರಕರ್ತೆಯರ ಸಂಘವು ವಾರ್ಷಿಕ ಪ್ರಶಸ್ತಿಯನ್ನು ಪ್ರಕಟಿಸಿದ್ದು, ಮಾಧ್ಯಮ ಕ್ಷೇತ್ರದ ಸಾಧನೆಗೆ ದೂರದರ್ಶನದಲ್ಲಿ ಕಾರ್ಯನಿರ್ವಹಿಸುತ್ತಿರುವ ಗಾಯತ್ರಿ ಚಂದ್ರಶೇಖರ್ ಹಾಗೂ 'ಪ್ರಜಾವಾಣಿ'ಯ ಉಪ ಸಂಪಾದಕಿ ಎಚ್.ಅನಿತಾ ಆಯ್ಕೆಯಾಗಿದ್ದಾರೆ.

ಈ ವರ್ಷದ ಮಹಿಳಾ ಸಾಧಕರು ವಾರ್ಷಿಕ ಪ್ರಶಸ್ತಿಗೆ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) 'ಚಂದ್ರಯಾನ-3' ಯೋಜನೆಯ ಡೆಪ್ಯೂಟಿ ಪ್ರಾಜೆಕ್ಟ್ ಡೈರೆಕ್ಟರ್ ಎಂ.ವಿ.ರೂಪಾ ಆಯ್ಕೆ ಆಗಿದ್ದಾರೆ.

ಬೆಂಗಳೂರು ನಗರ ವಿ.ವಿ.ಯ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗದ ಆಶ್ರಯ ದಲ್ಲಿ ಸಂಘ ಇದೇ 3ರಂದು ಹಮ್ಮಿಕೊಂಡಿರುವ ಮಹಿಳಾ ದಿನಾಚರಣೆಯಲ್ಲಿ ಈ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ಗಾಯತ್ರಿ

ಎಚ್.ಅನಿತಾ

ಕಾತ್ಯಾಯಿನಿ

ಎಂ.ವಿ.ರೂಪಾ

ಇದೇ ಸಮಾರಂಭದಲ್ಲಿ ಬೆಂಗಳೂರು ನಗರ ವಿವಿಯ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗದ ವತಿಯಿಂದ ಸಾಮಾಜಿಕ ಕಾರ್ಯಕರ್ತೆ ಕಾತ್ಯಾಯಿನಿ ಚಾಮರಾಜ್ ಅವರಿಗೂ ಪ್ರಶಸ್ತಿ ಪ್ರದಾನ ಮಾಡಲಾಗುತ್ತಿದೆ ಎಂದು ಪತ್ರಕರ್ತೆಯರ ಸಂಘದ ಅಧ್ಯಕ್ಷೆ ಪದ್ಮಾ ಶಿವಮೊಗ್ಗ ತಿಳಿಸಿದ್ದಾರೆ.

ಬೆಂಗಳೂರು ಜಲಮಂಡಳಿ ಅಧ್ಯಕ್ಷ ಡಾ. ರಾಮ್‌ಪ್ರಸಾತ್ ಮನೋಹರ್ ಹೇಳಿಕೆ

ಪಂಚಸೂತ್ರ ಅಳವಡಿಕೆಗೆ ಏ.10ರ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೀರು ಉಳಿತಾಯದ ಪಂಚಸೂತ್ರಗಳನ್ನು ಏಪ್ರಿಲ್ 10ರೊಳಗೆ ಅಳವಡಿಸಿಕೊಳ್ಳಬೇಕು ಎಂದು ಬೆಂಗಳೂರು ಜಲಮಂಡಳಿ ಅಧ್ಯಕ್ಷ ಡಾ. ರಾಮ್‌ಪ್ರಸಾತ್ ಮನೋಹರ್ ಹೇಳಿದರು.

40 ಲಕ್ಷದಿಂದ 2 ಕೋಟಿ ಲೀಟರ್ ನೀರು ಬಳಸುವ ಗ್ರಾಹಕರ ಜೊತೆ ಸಭೆ ನಡೆಸಿ 'ಗ್ರೀನ್ ಸ್ಟಾರ್ ಚಾಲೆಂಜ್'ನ ಪಂಚ ಸೂತ್ರಗಳನ್ನು ಅಳವಡಿಸಿಕೊಳ್ಳುವಂತೆ ಸೂಚನೆ ನೀಡಿದರು. ಸರಬರಾಜು ಆಗುತ್ತಿರುವ ನೀರಿನಲ್ಲಿ ಏ.10 ನಂತರ ಶೇಕಡ 10ರಷ್ಟು ಕಡಿತಗೊಳಿಸಲಾಗುತ್ತದೆ ಎಂದರು.

'ನಗರದಲ್ಲಿ ಕುಡಿಯುವ ನೀರಿನ ಕೊರತೆ ಇಲ್ಲ. ಆದರೆ ಅಂತರ್ಜಲ ಕುಸಿತದಿಂದ ದಿನ ಬಳಕೆಯ ನೀರಿನ ಮೇಲೆ ಪರಿಣಾಮ ಬೀರಿದೆ. ಮುಂದಿನ ಎರಡು ತಿಂಗಳು ನೀರಿನ ಮಿತವ್ಯಯ ಬಳಕೆಯಿಂದ ನಾವು ಈ ಪರಿಸ್ಥಿತಿಯನ್ನು ನಿಭಾಯಿಸಬಹುದಾಗಿದೆ' ಎಂದು ಹೇಳಿದರು.

'ನೀರು ಉಳಿತಾಯ ಮಾಡುವಂತಹ ತಂತ್ರಜ್ಞಾನಗಳನ್ನ ಅಳವಡಿಸಿಕೊಳ್ಳುವುದು, ಸಂಸ್ಕರಿಸಿದ ನೀರಿನ ಬಳಕೆ ಹೆಚ್ಚಿಸಿಕೊಳ್ಳುವುದು, ಕೊಳವೆ ಬಾವಿಗಳ ಬಳಕೆಯಲ್ಲಿ ತಂತ್ರಜ್ಞಾನದ ಅಳವಡಿಕೆ, ಮಳೆ ನೀರು ಇಂಗುಗುಂಡಿಗಳನ್ನು ಅಳವಡಿಸಿಕೊಳ್ಳುವ ಈ ಪಂಚಸೂತ್ರಗಳನ್ನು ಕಾರ್ಯಗತ ಮಾಡುವ ಸವಾಲು ಸ್ವೀಕರಿಸಬೇಕು' ಎಂದರು.

ಪೈಪ್‌ಲೈನ್: ಖಾಸಗಿ ಅಪಾರ್ಟ್‌ಮೆಂಟ್ ಹಾಗೂ ಜಲಮಂಡಳಿ ತ್ಯಾಜ್ಯ ನೀರು ಶುದ್ಧಿಕರಣ ಘಟಕದಿಂದ 500 ಮೀಟರ್ ವ್ಯಾಪ್ತಿಯಲ್ಲಿ ನಿರ್ಮಾಣವಾಗುತ್ತಿರುವ ದೊಡ್ಡ ಕಟ್ಟಡಗಳ ಬಳಕೆಗೆ ಪ್ರತ್ಯೇಕ ಪೈಪ್ ಲೈನ್ ಮೂಲಕ ಸಂಸ್ಕರಿತ ನೀರು ಸರಬರಾಜು ಮಾಡಲಾಗುವುದು ಎಂದು ರಾಮ್‌ಪ್ರಸಾತ್ ಹೇಳಿದರು.

ಅಪಾರ್ಟ್‌ಮೆಂಟ್‌ಗಳು ಸಂಸ್ಕರಿಸಿದ ನೀರನ್ನು ಮಾರಾಟ ಮಾಡಲು ಈಗಾಗಲೇ ಅನುಮತಿ ನೀಡಲಾಗಿದೆ. ಕಟ್ಟಡ ನಿರ್ಮಾಣಕ್ಕೆ ಸಂಸ್ಕರಿಸಿದ ನೀರನ್ನು ಮಾತ್ರ ಬಳಕೆ ಮಾಡಬೇಕು ಎಂದು ಆದೇಶಿಸಲಾಗಿದೆ. ಜಲಮಂಡಳಿಗೆ 62 ಲಕ್ಷ ಲೀಟರ್ ಸಂಸ್ಕರಿಸಿದ ನೀರಿಗೆ ಬೇಡಿಕೆ ಬಂದಿದೆ. ಮುಂದಿನ ದಿನಗಳಲ್ಲಿ ಇದು ಇನ್ನಷ್ಟು ಹೆಚ್ಚಾಗುವ ಸಾಧ್ಯತೆ ಇದೆ. ಸಂಸ್ಕರಿಸಿದ ನೀರನ್ನು ಮಾರಾಟ ಮಾಡುವ ಮೂಲಕ ಜಲಮಂಡಳಿಗೆ ಆದಾಯವೂ ಹೆಚ್ಚಾಗಲಿದೆ ಎಂದು ತಿಳಿಸಿದರು.

ಹೆಚ್ಚು ಪ್ರಮಾಣದ ನೀರು ಬಳಕೆದಾರರಿಗೆ ಜಲಮಂಡಳಿ ವತಿಯಿಂದ ಸಸಿಗಳನ್ನು ವಿತರಿಸಲಾಯಿತು. ಜಲಮಂಡಳಿ ಅಧ್ಯಕ್ಷ ಡಾ. ರಾಮ್‌ಪ್ರಸಾತ್ ಮನೋಹರ್ ಉಪಸ್ಥಿತರಿದ್ದರು

ಸಿಂಟೆಕ್ಸ್ ಟ್ಯಾಂಕ್‌ಗಳಿಗೆ ನೀರು ಪೂರೈಕೆ

ವರದಿ ಪರಿಣಾಮ

ಬೆಂಗಳೂರು: ತಲಘಟ್ಟಪುರ ವ್ಯಾಪ್ತಿಯಲ್ಲಿ ಬೆಂಗಳೂರು ಜಲಮಂಡಳಿ ಜೋಡಿಸಿರುವ ಸಿಂಟೆಕ್ಸ್ ಟ್ಯಾಂಕ್‌ಗಳಿಗೆ ಸೋಮವಾರ ನೀರು ತುಂಬಿಸಲಾಗಿದೆ. ಒಂದು ತಿಂಗಳ ಹಿಂದೆಯೇ ಈ ಭಾಗದಲ್ಲಿ ಸಿಂಟೆಕ್ಸ್‌ಗಳನ್ನು ಜೋಡಿಸಲಾಗಿತ್ತು. ಆದರೆ, ನೀರು ತುಂಬಿಸಿರಲಿಲ್ಲ.

'ಪ್ರಜಾವಾಣಿ' ಪತ್ರಿಕೆಯಲ್ಲಿ ಮಾರ್ಚ್ 31ರಂದು (ಭಾನುವಾರ) 'ಟ್ಯಾಂಕ್‌ಗಳಿಗೆ ನೀರು ತುಂಬಿಸಲು ಆಗ್ರಹ' ಎಂಬ ಶೀರ್ಷಿಕೆ ಅಡಿಯಲ್ಲಿ ವರದಿ ಪ್ರಕಟವಾಗಿತ್ತು. ಇದರಿಂದ, ಎಚ್ಚೆತ್ತ ಜಲಮಂಡಳಿ ಅಧಿಕಾರಿಗಳು ಸೋಮವಾರ ತಲಘಟ್ಟಪುರ ವ್ಯಾಪ್ತಿಯ ಎಲ್ಲ ಸಿಂಟೆಕ್ಸ್ ಟ್ಯಾಂಕ್‌ಗಳಿಗೆ ನೀರು ತುಂಬಿಸಿದ್ದಾರೆ.

ಕ್ಷೇಮ ಕುಶಲ

ನೆಮ್ಮದಿಗಾಗಿ ವಿಹಂಗಮಯೋಗ

ರಶ್ಮಿ ಎಸ್.

'ಯೋಗವನ್ನು ಯೋಗಾದೊಂದಿಗೆ ಗೊಂದಲ ಮಾಡಿಕೊಳ್ಳಬೇಡಿ. ಯೋಗವೆಂದರೆ ಒಂದಾಗುವುದು. ಆದರೆ ಈಚೆಗೆ ಕಸರತ್ತುಗಳಿಗೆ, ದೇಹದಂಡನೆಗೆ ಸೀಮಿತವಾಗಿದೆ. 'ಯೋಗ'ವೆಂದರೆ ದೇಹ ಮತ್ತು ಮನಸ್ಸನ್ನು ಒಗ್ಗೂಡಿಸುವುದು. ಆತ್ಮವನ್ನು ಪರಮಾತ್ಮನೊಂದಿಗೆ ಒಗ್ಗೂಡಿಸುವುದು ವಿಹಂಗಮಯೋಗ' ಎಂದು ಸದ್ಗುರು ಸ್ವತಂತ್ರದೇವ ಮಹಾರಾಜ ಅವರು ವಿವರಿಸಿದರು.

ಈಚೆಗೆ ವಾರಾಣಸಿಯಿಂದ ಬೆಂಗಳೂರಿಗೆ ಭೇಟಿ ನೀಡಿದ್ದ ಅವರು, ವಿಹಂಗಮಯೋಗದ ಕುರಿತು ಪ್ರಜಾವಾಣಿಗೆ ವಿವರಿಸಿದರು.

ಸದ್ಯ ಎಲ್ಲರಿಗೂ ಧಾವಂತವಿದೆ. ತಮ್ಮನ್ನೇ ತಾವು ಮರೆತಂತೆ ಜನ ದೈನಂದಿನ ಬದುಕಿನಲ್ಲಿ ಕಳೆದುಹೋಗಿದ್ದಾರೆ. ಅದೇ ಕಾರಣದಿಂದ ಚಿಂತೆ, ರೋಗ, ಮಧುಮೇಹ, ಒತ್ತಡ, ಖಿನ್ನತೆ ಮುಂತಾದವುಗಳಿಂದ ಬಳಲುತ್ತಿದ್ದಾರೆ. ಕೆಲಸ ಮಾಡುವುದು, ವಿರಮಿಸುವುದು, ಊಟ ಮಾಡುವುದು, ಸಂಚರಿಸುವುದನ್ನೇ ಜೀವನವೆಂದು ಭಾವಿಸಿದ್ದಾರೆ. ಈ ಭೋಗಜೀವನವೇ ಜೀವನವಲ್ಲ. ಮನುಷ್ಯನ ಬದುಕಿಗೆ ಒಂದು ಅರ್ಥವಿದೆ. ಮನುಷ್ಯನ ಇರುವಿಕೆಗೆ ಒಂದು ಅರ್ಥವಿದೆ. ಅದನ್ನು ಅರಿಯುವುದೇ ವಿಹಂಗಮ ಯೋಗವಾಗಿದೆ.



ಸ್ವತಂತ್ರ ದೇವ ಮಹಾರಾಜ್ -ಪ್ರಜಾವಾಣಿ ಚಿತ್ರ/ ರಂಜು ಪಿ

> "ಗುರುವಿನ ಮುಖೇನ ದೊರೆಯುವ ಈ ವಿಹಂಗಮಯೋಗದ ಅಭ್ಯಾಸ ನಮ್ಮ ವ್ಯಕ್ತಿತ್ವವನ್ನು ಸಂಪೂರ್ಣವಾಗಿ ಬದಲಿಸುತ್ತದೆ. ಸುಖ-ಶಾಂತಿಯ ನಿಜವಾದ ಅರ್ಥಗಳು ದಕ್ಕುತ್ತ ಹೋಗುತ್ತವೆ."
>
> ಕುಮಾರ್ ಹೇಮಂತ್ ಸಿಂಗ್
>
> ಭೂವಿಜ್ಞಾನ ವಿಭಾಗ, ಐಐಟಿ ಬಾಂಬೆ

ಈ ಯೋಗದ ಮರ್ಮವೇನು?

ಹತ್ತೊಂಬತ್ತನೆಯ ಶತಮಾನದಿಂದೀಚೆಗೆ ಸದ್ಗುರು ಸದಾಫಲ ದೇವ ಗುರುಜಿ ಅವರು ವಿಹಂಗಮಯೋಗದಲ್ಲಿ ಸಾಧನೆ ಮಾಡಿದರು. ಯಾವುದೇ ಪ್ರಚಾರವಿಲ್ಲದೆ, ವಿಹಂಗಮ ಯೋಗಿಗಳಾಗಲು, ಯೋಗವನ್ನು ಅಭ್ಯಾಸ ಮಾಡುವಲ್ಲಿ ಆಸಕ್ತಿ ಇರುವವರಿಗೆ ಕಲಿಸುತ್ತಹೋದರು. ಸದ್ಯ ಸದ್ಗುರು ಸ್ವತಂತ್ರದೇವ ಮಹಾರಾಜ್ ಅವರು ಈ ಯೋಗವನ್ನು ಹೇಳಿಕೊಡುತ್ತಿದ್ದಾರೆ. ಛತ್ತಿಸ್‌ಗಢದಲ್ಲಿ ವಿಹಂಗಮ ಯೋಗ ಅತ್ಯಂತ ಜನಪ್ರಿಯವಾದ ಅಭ್ಯಾಸವಾಗಿದೆ. ವಾರಾಣಸಿಯಲ್ಲಿ 128 ಕಮಲದಳಗಳ ವಿನ್ಯಾಸದಲ್ಲಿರುವ ಸ್ವರವೇದ ಮಂದಿರದಲ್ಲಿ ಏಕಕಾಲಕ್ಕೆ 20000 ಜನರು ವಿಹಂಗಮಯೋಗದಲ್ಲಿ ತೊಡಗಿಕೊಳ್ಳುತ್ತಾರೆ. ಡಿಆರ್‌ಡಿಒದಲ್ಲಿ ವಿಜ್ಞಾನಿಯಾಗಿದ್ದ ಬಿಹಾರ ಮೂಲದ ಅಭಿಮನ್ಯು ಕುಮಾರ್ ಅವರ ಪ್ರಕಾರ, 'ವಿಹಂಗಮಯೋಗ ನಮ್ಮಲ್ಲಿ ಜ್ಞಾನದ ಹಸಿವನ್ನು ಬಿತ್ತುತ್ತದೆ. ವಿದ್ಯಾರ್ಥಿಗಳು ಓದು ಮತ್ತು ಅಧ್ಯಯನದಲ್ಲಿ ಗಂಭೀರವಾಗಿ ತೊಡಗಿಕೊಳ್ಳಲು ಇದು ಸಹಾಯ ಮಾಡುತ್ತದೆ.'

ಆಂತರಿಕ ಶಾಂತಿಯ ಶೋಧ ಮತ್ತು ಸ್ಥಾಪನೆಯೇ ವಿಹಂಗಮಯೋಗದ ಮೂಲ ಉದ್ದೇಶ. ಈ ಪಥದಲ್ಲಿ ಮನುಷ್ಯರು ಸರ್ವಶಕ್ತ ಸೃಷ್ಟಿಕರ್ತನೊಂದಿಗೆ ಸಂಪರ್ಕ ಸಾಧಿಸುತ್ತಾರೆ. ವಿಹಂಗಮಯೋಗದ ಮೊದಲ ಹೆಜ್ಜೆ ಅಲ್ಲಿ ಇಲ್ಲಿ ಚಂಚಲವಾಗಿರುವ, ಮರ್ಕಟದಂತಿರುವ ಮನಸ್ಸಿನ ಮೇಲೆ ನಿಯಂತ್ರಣ ಸಾಧಿಸುವುದಾಗಿದೆ. ಈ ಯೋಗವು ಅಭ್ಯಾಸದಿಂದ ಮಾತ್ರ ಸಾಧಿಸಬಲ್ಲೆವು. ನಿಮ್ಮ ದೃಷ್ಟಿಯನ್ನು ಮೂಗಿನ ತುದಿಯ ಮೇಲೆ ಕೇಂದ್ರೀಕರಿಸಿ, ಅಲೆದಾಡುವ ಮನವನ್ನು ಹಿಡಿದು ತರಬೇಕಿದೆ. ಈ ನಿಯಂತ್ರಣ, ಈ ಕಡಿವಾಣ ಕ್ರಮೇಣ ಸಾಧ್ಯವಾಗುತ್ತದೆ. ಹಾಗೆ ಸಾಧ್ಯವಾದ ನಂತರ ಎರಡನೆಯ ಹಂತಕ್ಕೆ ಪ್ರವೇಶಿಸುತ್ತೀರಿ. ಅಲ್ಲಿ ಅಂತರ್ಮುಖಿಯಾಗುತ್ತ ಹೋಗುತ್ತೀರಿ. ಅಂತರ್ಮುಖಿಯಾದಾಗ, ನಿಮ್ಮಲ್ಲಿ ಪ್ರಶ್ನೆಗಳು ಹುಟ್ಟುತ್ತವೆ. ನಾನು ಯಾರು? ಯಾಕಾಗಿ ಈ ಜನ್ಮ ಎಂದು. ಇಂಥ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವುದು ಸಾಧನೆ. ಆದರೆ ಈ ಪ್ರಶ್ನೆಗಳಿಂದ ನಿಮ್ಮಲ್ಲಿ ಸಕಾರಾತ್ಮಕ ಬದಲಾವಣೆ ಉಂಟಾಗುತ್ತದೆ.

ಯಾರಿಗೂ ಕೇಡನ್ನು ಬಯಸುವುದಿಲ್ಲ. ಒಳಿತನ್ನೇ ಮಾಡುತ್ತೀರಿ. ನಿಮ್ಮೊಳಗೆ ಅಮಿತವಾದ ಪ್ರೀತಿ, ಅಚಲವಾದ ವಿಶ್ವಾಸ ಹುಟ್ಟುತ್ತದೆ. ಅದು ಬೃಹತ್ ಬೆಳಕೊಂದನ್ನು ನೀಡುತ್ತದೆ. ಆ ಬೆಳಕು, ನಿಮ್ಮ ಒಳಹೊರಗನ್ನೂ ಬೆಳಗತೊಡಗುತ್ತದೆ.

ಯೋಗವೆಂದರೆ ಇದೇನೆ. ನಿಮ್ಮನ್ನು ನಿಮ್ಮ ಮನಸ್ಸು, ಆತ್ಮದೊಂದಿಗೆ ಬೆಸೆಯುತ್ತ, ದೇಹವನ್ನೂ ಒಂದೇ ಶ್ರುತಿಗೆ ತರುವುದಾಗಿದೆ. ಈ ದಿನಗಳಲ್ಲಿ ವ್ಯಕ್ತಿಗಳು ಅಶಾಂತರಾಗಲು ಕಾರಣವೆಂದರೆ ನಾವು ಮನಸ್ಸಿನ ಗುಲಾಮರಾಗಿದ್ದೇವೆ. ದೇಹವನ್ನು ಮನಸ್ಸು ನುಡಿದಂತೆ ನಡೆಯಲು ಬಿಟ್ಟಿದ್ದೇವೆ. ಮನಸ್ಸಿಗೆ ಯಾವ ಲಂಗುಲಗಾಮುಗಳೂ ಇರುವುದಿಲ್ಲ. ಅದರ ಬೇಕುಗಳಿಗೆ ಕೊನೆ ಇರುವುದಿಲ್ಲ. ಆದರೆ ಮನಸ್ಸನ್ನು ನಿಗ್ರಹಿಸಲು ಕಲಿತರೆ, ಮನಸ್ಸು ಆತ್ಮದ ಗುಲಾಮನಾಗಿಸಲು ವಿಹಂಗಮಯೋಗ ಪ್ರಬಲ ಸಾಧನವಾಗಿದೆ. ವಿಹಂಗಮ ಯೋಗದ ಅಭ್ಯಾಸ ಆರಂಭವಾದರೆ ಮಾನಸಿಕವಾಗಿಯೂ ದೈಹಿಕವಾಗಿಯೂ ಸದೃಢರಾಗುತ್ತೇವೆ. ಈ ಕಾರಣದಿಂದಲೇ ವಿಹಂಗಮಯೋಗ ಈಗ ಜನಪ್ರಿಯವಾಗುತ್ತಿದೆ. ಜನರಿಗೆ ಅಗತ್ಯವಿರುವ ಮಾನಸಿಕ ಶಾಂತಿ, ನೆಮ್ಮದಿಯ ಮೂಲಸೆಲೆ ವಿಹಂಗಮ ಯೋಗದಲ್ಲಿದೆ. ಅದನ್ನು ಅರಸಿಕೊಂಡು ಹೆಚ್ಚು ಜನರು ಈ ಯೋಗದ ಅಭ್ಯಾಸಿಗಳಾಗುತ್ತಿದ್ದಾರೆ.

ಈ ಧ್ಯಾನದಿಂದ, ನೈಜ ನೆಮ್ಮದಿ ಸಂತೋಷ ದಕ್ಕುವುದರೊಂದಿಗೆ, ವಿಶ್ವಶಾಂತಿ ಮೂಡುತ್ತದೆ. ಇದು ಯಾವುದೇ ಧರ್ಮಕ್ಕೆ ಸೀಮಿತವಾಗಿಲ್ಲ. ಯಾವ ಧರ್ಮದವರಾದರೂ ಇದನ್ನು ಅನುಸರಿಸಬಹುದಾಗಿದೆ. ವೈಯಕ್ತಿಕ ಶಾಂತಿ, ನೆಮ್ಮದಿ ಮೂಡುವುದರೊಂದಿಗೆ ವಿಶ್ವಶಾಂತಿ ಹಾಗೂ ಸಮಷ್ಟಿಪ್ರೀತಿ ಮೂಡುತ್ತದೆ. 'ವಸುಧೈವ ಕುಟುಂಬಕಮ್" ಎಂಬ ಭಾವ ಒಡಮೂಡುತ್ತದೆ. ಜಗತ್ತಿನಾದ್ಯಂತ ವಿಹಂಗಮಯೋಗದ ಅಭ್ಯಾಸ ಹೆಚ್ಚಾದರೆ ಸಮರಗಳಿಗೆ ಆಸ್ಪದವಿರದೆ, ಸೌಹಾರ್ದವೇ ಮೂಡುತ್ತದೆ.

ಪ್ರತಿದಿನವೂ ಹತ್ತು ನಿಮಿಷಗಳ ಅಭ್ಯಾಸ ನಿಮ್ಮನ್ನು ವಿಹಂಗಮಯೋಗದ ಹಲವು ಸ್ತರಗಳಿಗೆ ಕರೆದೊಯ್ಯಬಲ್ಲದು. ಜ್ಞಾನದ ಬೆಳಕು ಎಲ್ಲರನ್ನೂ ಆವರಿಸಲಿ ಎಂಬುದು ನಮ್ಮ ಆಶಯ. ಮನಃಶಾಂತಿಗೆ ಮನೋನಿಗ್ರಹ ಸಾಧಿಸಬೇಕು. ಇದಕ್ಕೆ ವಿಹಂಗಮಯೋಗವೇ ಸಾಧನವಾಗಿದೆ ಎನ್ನುತ್ತ ತಮ್ಮ ಮಾತಿಗೆ ಪೂರ್ಣವಿರಾಮವಿರಿಸಿದರು.

❖

ಉಪ್ಪು ತಿನ್ನದವರೂ ನೀರು ಕುಡಿಯಬೇಕು

ಡಾ. ಕುಶ್ವಂತ್ ಕೋಳಿಬೈಲು

ದೇಹದ ಪ್ರಮುಖ ಅಂಗಾಗಳಾದ ಹೃದಯ ಮತ್ತು ಶ್ವಾಸಕೋಶದಂತೆ ಮಾನವನ ಮೂತ್ರಪಿಂಡವೂ (ಕಿಡ್ನಿ) ನಿರಂತರವಾಗಿ ದಿನದ ಇಪ್ಪತ್ತನಾಲ್ಕು ಗಂಟೆಗಳ ಕಾಲ ತನ್ನ ಕೆಲಸದಲ್ಲಿ ತೊಡಗಿರುತ್ತದೆ. ಮೂತ್ರಪಿಂಡವು ಮೂತ್ರದ ಮೂಲಕ ದೇಹಕ್ಕೆ ಬೇಡವಾದ ಪದಾರ್ಥಗಳನ್ನು ಹೊರಹಾಕುವುದರ ಜೊತೆಗೆ ದೇಹದೊಳಗೆ ವಿವಿಧ ಸಂಕೀರ್ಣ ಜವಾಬ್ದಾರಿಯನ್ನು ನಿರ್ವಹಿಸುತ್ತದೆ. ದೇಹದೊಳಗಿನ ನೀರು ಮತ್ತು ಲವಣಗಳ ಪ್ರಮಾಣವನ್ನು ನಿಯಂತ್ರಿಸುವ ಮೂಲಕ ದೇಹದ ರಕ್ತದೊತ್ತಡ ಸಮತೋಲನವನ್ನು ಮೂತ್ರಪಿಂಡವು ಕಾಪಾಡುತ್ತದೆ. ನಾವು ಸೇವಿಸುವ ಔಷಧಗಳ ಕೆಲಸವಾದ ಮೇಲೆ ಅವುಗಳನ್ನು ನಿಷ್ಕ್ರಿಯಗೊಳಿಸಿ ದೇಹದಿಂದ ಹೊರಹಾಕುವ ಕೆಲಸವೂ ಮೂತ್ರಪಿಂಡಗಳದ್ದು. ಮೂತ್ರಪಿಂಡ ಹೊರಹಾಕುವ ವಿವಿಧ ಹಾರ್ಮೋನುಗಳು ರಕ್ತದ ಉತ್ಪಾದನೆ ಮತ್ತು ವಿಟಮಿನ್ ಡಿ ಉತ್ಪಾದನೆಯಲ್ಲಿಯೂ ಪ್ರಮುಖ ಪಾತ್ರ ನಿರ್ವಹಿಸುತ್ತದೆ. ನಮ್ಮೆಲ್ಲರ ದೇಹದಲ್ಲಿ ಸುಮಾರು ಐದು ಲೀಟರುಗಳಷ್ಟಿರುವ ರಕ್ತವನ್ನು ಮೂತ್ರಪಿಂಡವು ದಿನಕ್ಕೆ ಸುಮಾರು ನಲವತ್ತು ಸಲ ಜರಡಿ ಹಿಡಿಯುತ್ತದೆ (filter).

ಮೂತ್ರಪಿಂಡದೊಳಗೆ ಸುಮಾರು ಇನ್ನೂರು ಲೀಟರಿನಷ್ಟು ರಕ್ತವು ದಿನದ ಇಪ್ಪತ್ತನಾಲ್ಕು ಗಂಟೆಗಳಲ್ಲಿ ಸಂಚಾರ ಮಾಡುತ್ತದೆ. ಹೀಗೆ ಸಂಚರಿಸುವ ಇನ್ನೂರು ಲೀಟರಿನಲ್ಲಿ ಮೂತ್ರಪಿಂಡವು ಸುಮಾರು ಎರಡು ಲೀಟರಿನಷ್ಟು ನೀರಿನಂಶವನ್ನು ದೇಹಕ್ಕೆ ಅನಗತ್ಯವಾಗಿರುವ ಲವಣಗಳ ಜೊತೆಗೆ ಮೂತ್ರದ ರೂಪದಲ್ಲಿ ಹೊರಹಾಕುತ್ತದೆ. ಮೂತ್ರಪಿಂಡದಿಂದ ಹೊರಹಾಕಲ್ಪಟ ಸುಮಾರು ಎರಡು ಲೀಟರಿನಷ್ಟು ಮೂತ್ರವು ಮೂತ್ರಕೋಶದಲ್ಲಿ ಶೇಖರಿಸಲ್ಪಡುತ್ತದೆ. ಒಬ್ಬ ಆರೋಗ್ಯವಂತ ವ್ಯಕ್ತಿಯು ದಿನಕ್ಕೆ ಆರರಿಂದ ಎಂಟು ಬಾರಿ ಮೂತ್ರ ವಿಸರ್ಜನೆ ಮಾಡುವ ಮೂಲಕ ದೇಹದಿಂದ ಮೂತ್ರವನ್ನು ಹೊರಹಾಕುತ್ತಾನೆ, ಮತ್ತು ತನ್ನ ದೇಹದೊಳಗಿನ ನೀರು ಮತ್ತು ಲವಣದ ಪ್ರಮಾಣವನ್ನು ನಿಯಂತ್ರಿಸುತ್ತಾನೆ.

ನಾವು ದಿನಕ್ಕೆ ಸೇವಿಸುವ ನೀರಿನ ಪ್ರಮಾಣ ಮತ್ತು ವಾತಾವರಣದ ಉಷ್ಣತೆಯ ಮೇಲೆ ಮೂತ್ರಪಿಂಡವು ತನ್ನ ಕಾರ್ಯಾಚರಣೆಯಲ್ಲಿ ಬದಲಾವಣೆಗಳನ್ನು ಮಾಡಿಕೊಳ್ಳುತ್ತದೆ. ವಾತಾವರಣದಲ್ಲಿ ಉಷ್ಣತೆ ಹೆಚ್ಚಾಗಿದ್ದು ಮನುಷ್ಯ ಕಡಿಮೆ ನೀರನ್ನು ಸೇವಿಸಿದ್ದರೆ ಮೂತ್ರಪಿಂಡವು ಹೆಚ್ಚು ಸಾಂದ್ರತೆಯಿರುವ ಹಳದಿಬಣ್ಣದ ಮೂತ್ರವನ್ನು ಕಡಿಮೆ ಪ್ರಮಾಣದಲ್ಲಿ ಹೊರಹಾಕುವ ಮೂಲಕ ದೇಹದೊಳಗೆ ನೀರಿನಂಶವು ಹೆಚ್ಚು ಉಳಿದುಕೊಳ್ಳುವಂತೆ ಕಾರ್ಯನಿರ್ವಹಿಸುತ್ತದೆ. ಅಂತಹ ಸಂದರ್ಭದಲ್ಲಿ ದೇಹವು ದಿನಕ್ಕೆ ಸುಮಾರು ಎಂಟುನೂರು ಮಿಲಿ ಲೀಟರಿನಷ್ಟು ಮೂತ್ರವನ್ನು ಮಾತ್ರ ಹೊರಹಾಕುವ ಮೂಲಕ ದೇಹದೊಳಗೆ ನೀರು ಮತ್ತು ಲವಣಗಳ ಸಮತೋಲನವನ್ನು ಕಾಪಾಡಿಕೊಳ್ಳುತ್ತದೆ. ಆಹ್ಲಾದಕರ ವಾತಾವರಣದಲ್ಲಿ ಮನುಷ್ಯನು ಹೆಚ್ಚು ನೀರನ್ನು ಸೇವಿಸುತ್ತಿದ್ದರೆ ಮೂತ್ರಪಿಂಡವು ಸುಮಾರು ಮೂರರಿಂದ ನಾಲ್ಕು ಲೀಟರಿನಷ್ಟು ಸಾರಗುಂದಿಸಿದ ತೆಳುಬಣ್ಣದ ಮೂತ್ರವನ್ನು ಹೊರಹಾಕಿ ದೇಹದೊಳಗೆ ಅನಗತ್ಯ ಪ್ರಮಾಣದಲ್ಲಿ ನೀರು ಸೇರಿಕೊಳ್ಳದಂತೆ ಎಚ್ಚರವಹಿಸುತ್ತದೆ.

ಮಾನವನ ಮಿದುಳಿನ ಹೈಪೋಥೆಲಾಮಸ್ (hypothalamus) ಎಂಬ ಭಾಗವು ದೇಹದ ಬಾಯಾರಿಕೆಯನ್ನು ನಿಯಂತ್ರಿಸುತ್ತದೆ. ಬಾಯಾರಿಕೆಯ ಅನುಭವವನ್ನು ಮೂಡಿಸುವಲ್ಲಿ ಮತ್ತು ಬಾಯಾರಿಕೆಯಾಗುವ ಭಾವನೆಯನ್ನು ಅಳಿಸುವಲ್ಲಿ ಮೂತ್ರಪಿಂಡಗಳು ಪ್ರಮುಖ ಪಾತ್ರವನ್ನು ನಿರ್ವಹಿಸುತ್ತದೆ. ದೇಹದಲ್ಲಿ ನೀರಿನ ಅಂಶವು ಕಡಿಮೆಯಾಗಿ ರಕ್ತದ ಸಾಂದ್ರತೆಯ ಹೆಚ್ಚಾದಂತೆ ಅದನ್ನು ಮಿದುಳಿನ ಹೈಪೋಥೆಲಾಮಸ್ ಭಾಗವು ಮೊದಲಿಗೆ ಗ್ರಹಿಸುತ್ತದೆ.ಅದು ಬಾಯಾರಿಕೆಯ ಭಾವನೆಯನ್ನು ಹುಟ್ಟು ಹಾಕಿ. ಮನುಷ್ಯನಿಗೆ ನೀರನ್ನು ಕುಡಿಯಲು ಪ್ರೇರಣೆ ನೀಡುತ್ತದೆ. ಜೊತೆಗೆ ಹೈಪೋಥೆಲಾಮಸ್ ವಿವಿಧ ಹಾರ್ಮೋನುಗಳ ಮೂಲಕ ಮೂತ್ರಪಿಂಡಗಳಿಗೆ ಸಂದೇಶವನ್ನು ರವಾನಿಸಿ ಮೂತ್ರದ ಸಾಂದ್ರತೆಯನ್ನು ಹೆಚ್ಚು ಮಾಡುವ ಮೂಲಕ ದೇಹದೊಳಗೆ ಹೆಚ್ಚು ನೀರಿನಂಶವು ಉಳಿದುಕೊಳ್ಳುವಂತೆ ಮಾಡುತ್ತದೆ. ಯಾವುದೇ ಕಾರಣದಿಂದ ಮನುಷ್ಯ ಹೆಚ್ಚು ನೀರನ್ನು ಸೇವಿಸಿದ ನಂತರ ರಕ್ತದ ಸಾಂದ್ರತೆ ಕಡಿಮೆಯಾಗಿದ್ದರೆ ಹೈಪೋಥೆಲಾಮಸ್ ಬಾಯಾರಿಕೆಯ ಭಾವವನ್ನು ಕಡಿಮೆ ಮಾಡುವುದರ ಜೊತೆ ಜೊತೆಗೆ ವಿವಿಧ ಹಾರ್ಮೋನುಗಳ ಮೂಲಕ ಮೂತ್ರಪಿಂಡ ದೇಹದೊಳಗೆ ಹೆಚ್ಚಾಗಿರುವ ನೀರಿನ ಪ್ರಮಾಣವನ್ನು ಮೂತ್ರದ ಮೂಲಕ ಹೊರಹಾಕುವಂತೆ ಕಾರ್ಯನಿರ್ವಹಿಸುತ್ತದೆ. ಬಾಯಾರಿಕೆಯನ್ನು ವ್ಯಕ್ತಪಡಿಸಲಾಗದವರ ಸಾಲಿನಲ್ಲಿ ಬರುವ ಚಿಕ್ಕ ಮಕ್ಕಳು ಮತ್ತು ಹಾಸಿಗೆ ಹಿಡಿದಿರುವ ಹಿರಿಯರು ಪ್ರತಿ ನಿತ್ಯ ಸರಿಯಾದ ಪ್ರಮಾಣದಲ್ಲಿ ನೀರನ್ನು ಸೇವಿಸುವಂತೆ ನೋಡಿಕೊಳ್ಳಬೇಕು. ಆರೋಗ್ಯವಂತ ವ್ಯಕ್ತಿಯು ದಿನಕ್ಕೆ ಸುಮಾರು ಮೂರರಿಂದ ನಾಲ್ಕು ಲೀಟರಿನಷ್ಟು ನೀರನ್ನು ಸೇವಿಸುವ ಮೂಲಕ ತಮ್ಮ ದೇಹದೊಳಗಿನ ನೀರಿನ ಸಮತೋಲನವನ್ನು ಕಾಪಾಡಿಕೊಳ್ಳುತ್ತಾರೆ. ಬೇಸಿಗೆಯಲ್ಲಿ ದೇಹದ ತಾಪಮಾನವನ್ನು ತಣಿಸುವ ಸಲುವಾಗಿ ಬೆವರಿನ ಮೂಲಕ ದೇಹದಿಂದ ನೀರು ಮತ್ತು ಲವಣಗಳು ಹೊರಗೆ ಹೋಗುತ್ತವೆ. ಹಾಗಾಗಿ ಬೇಸಿಗೆಯ ಸಮಯದಲ್ಲಿ ದೇಹಕ್ಕೆ ಅಗತ್ಯವಿರುವ ಪ್ರಮಾಣದ ನೀರನ್ನು ಸೇವಿಸುವುದು ಅತಿಮುಖ್ಯ. ಒಬ್ಬ ಆರೋಗ್ಯವಂತ ವ್ಯಕ್ತಿಯು ತನ್ನ ಮೂತ್ರದ ಬಣ್ಣವನ್ನು ಗಮನಿಸುವ ಮೂಲಕ ಆತ ಬೇಸಿಗೆಯಲ್ಲಿ ಕುಡಿಯುವ ನೀರಿನ ಪ್ರಮಾಣವು ಸರಿಯಾಗಿದೆಯೊ ಇಲ್ಲವೊ ಎಂದು ಅಂದಾಜಿಸಬಹುದು.

ಮೂತ್ರದ ಸಾಂದ್ರತೆ ಹೆಚ್ಚಾಗಿ ಮೂತ್ರವು ಹೆಚ್ಚು ಕಾಲ ಶೇಖರಣೆಗೊಂಡರೆ ಅಥವಾ ಮೂತ್ರದ ಹರಿವಿನಲ್ಲಿ ಅಡಚಣೆಯಾದರೆ ಮೂತ್ರಪಿಂಡದಲ್ಲಿ ಅಥವಾ ಮೂತ್ರಕೋಶದೊಳಗೆ ಕೀಟಾಣುಗಳು ಬೆಳೆಯುವ ಸಾಧ್ಯತೆಯಿರುತ್ತದೆ. ಜ್ವರ ಮತ್ತು ಉರಿಮೂತ್ರದ ಲಕ್ಷಣಗಳು ಇಂತಹಾ ರೋಗಿಗಳಲ್ಲಿ ಕಾಣಿಸಿಕೊಂಡರೆ ಮೂತ್ರನಾಳದ ಸೋಂಕು ತಗಲಿರುವುದು ಖಚಿತವಾಗುತ್ತದೆ. ಕೆಲವು ಜನರಿಗೆ ಹುಟ್ಟಿನಿಂದಲೇ ಮೂತ್ರನಾಳದಲ್ಲಿ ಅಡಚಣೆಗಳಿದ್ದ ಪಕ್ಷದಲ್ಲಿ ಅಂತಹವರಿಗೆ ಮೂತ್ರನಾಳದ ಸೋಂಕು ಪದೇ ಪದೇ ಕಾಣಿಸಿಕೊಳ್ಳಬಹುದು. ಮೂತ್ರನಾಳದ ಸೋಂಕು ಪದೇ ಪದೇ ಉಂಟಾದರೆ ಮೂತ್ರದಲ್ಲಿ ಸೇರಿಕೊಂಡಿರುವ ಕೀಟಾಣುಗಳು ಮೂತ್ರಪಿಂಡಕ್ಕೆ ಹಾನಿಯುಂಟುಮಾಡಿ ಅವನ್ನು ನಿಷ್ಕ್ರಿಯಗೊಳಿಸಬಹುದು. ಮೂತ್ರಪಿಂಡದ ಕಾರ್ಯಕ್ಷಮತೆಯನ್ನು ಉತ್ತಮವಾಗಿಡುವ ಸಲುವಾಗಿ ಸರಿಯಾದ ಪ್ರಮಾಣದಲ್ಲಿ ನೀರು ಕುಡಿಯುವುದು ಅತ್ಯಗತ್ಯ. ನಾವು ದಿನನಿತ್ಯ ಸೇವಿಸುವ ನೀರಿನ ಪ್ರಮಾಣದ ಕುರಿತಾಗಿ ಬೇಸಿಗೆಯ ಕಾಲದಲ್ಲಿ ಹೆಚ್ಚಿನ ಕಾಳಜಿ ವಹಿಸಬೇಕು.

❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಗಣಿತ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ :

10) 6762 ನ್ನು ಅವಿಭಾಜ್ಯ ಅಪವರ್ತನಗಳ ಗುಣಲಬ್ಧವಾಗಿ ನಿರೂಪಿಸಿ.

ಉತ್ತರ : $6762 = 2 \times 3 \times 7^2 \times 23$

2	6762
3	3381
7	1127
7	161
	23

11) ತ್ರಿಭುಜ Δ ABCಯಲ್ಲಿ $XY \parallel BC$, $\frac{AY}{CY} = \frac{1}{2}$ ಮತ್ತು AX=4. ಆದರೆ BX ಬೆಲೆಯನ್ನು ಕಂಡುಹಿಡಿಯಿರಿ.



Ans : In Δ ABC, $\frac{AY}{CY} = \frac{AX}{BX} \Rightarrow \frac{1}{2} = \frac{4}{BX}$

$\therefore BX = 8$.

12) ಕೊಟ್ಟಿರುವ ಚಿತ್ರದಲ್ಲಿ, BCಯು ವ್ಯಾಸವಾದರೆ, Xನ ಬೆಲೆಯನ್ನು ಕಂಡುಹಿಡಿಯಿರಿ.



ಉತ್ತರ:- $x = 90^0$

13) $x^2 + 2x + 1$. ಬಹುಪದೋಕ್ತಿಯ ಶೂನ್ಯವನ್ನು ಕಂಡು ಹಿಡಿಯಿರಿ.

ಉತ್ತರ : $f(x) = x^2 + 2x + 1$.

$= X^2 + 1x + 1x + 1$

$= X(x+1) + 1(x+1)$

$= (x+1)(x+1)$

$= (x+1)^2$

$f(x) = 0$ ಆದಾಗ

$(x+1)^2 = 0$

$X + 1 = \sqrt{0}$

$X = 1 = 0$

$X = -1$

$x^2 + 2x + 1$. ಬಹುಪದೋಕ್ತಿಯ ಶೂನ್ಯವು –1 ಆಗಿದೆ.

14) $P(x) = x^2 + 4x + 4$ ನ್ನು $g(x) = x + 2$ರಿಂದ ಭಾಗಿಸಿ ಭಾಗಾಕಾರದ ಅಲ್ಗಾರಿದ್ಧಂ ಅನ್ನು ತಾಳೆ ನೋಡಿ.

ಉತ್ತರ :- $p(x) = x^2 + 4x + 4$; $g(x) = x + 2$

$$x + 2)\ x^2 + 4x + 4\ (x + 2$$
$$x^2 + 2x$$
$$(-)\quad(-)$$
$$2x + 4$$
$$2x + 4$$
$$(-)\quad(-)$$
$$00$$

$p(x) = [g(x) \times q(x)] + r(x)$

$x^2 + 4x + 4 = (x+2)(x+2) + 0$

$x^2 + 4x + 4 = x + 4x + 4$

ಭಾಗಾಕಾರದ ಆಲ್ಗಾರಿಥಂ ಅನ್ನು ತಾಳೆ ನೋಡಿದೆ

15) 3 ಸೆಂ.ಮೀ. ತ್ರಿಜ್ಯವುಳ್ಳ ವೃತ್ತಕ್ಕೆ, ವೃತ್ತ ಕೇಂದ್ರದಿಂದ 8 ಸೆಂ.ಮೀ. ದೂರದಲ್ಲಿನ ಬಾಹ್ಯ ಬಿಂದುವಿನಿಂದ ಒಂದು ಜೊತೆ ಸ್ಪರ್ಶಕಗಳನ್ನು ರಚಿಸಿರಿ.

ಉತ್ತರ: r = 3 ಸೆಂ.ಮೀ., d = 8 ಸೆಂ.ಮೀ.



AP ಮತ್ತು BP ಗಳು ಸ್ಪರ್ಶಕಗಳಾಗಿವೆ.

16) ಒಂದು ಘನ ಸಿಲಿಂಡರಿನ ಪೂರ್ಣ ಮೇಲ್ಮೈ ವಿಸ್ತೀರ್ಣ 462 ಸೆಂ.ಮೀ ಇದ್ದು, ಇದರ ವಕ್ರ ಮೂಲ್ಮೈ ವಿಸ್ತೀರ್ಣವು, ಪೂರ್ಣ ಮೇಲ್ಮೈ ವಿಸ್ತೀರ್ಣದ $\frac{1}{3}$ ರಷ್ಟಿದ್ದರೆ ಸಿಲಿಂಡರಿನ ತ್ರಿಜ್ಯವನ್ನು ಕಂಡುಹಿಡಿಯಿರಿ.

ಉತ್ತರ : ಘನ ಸಿಲಿಂಡರಿನ ವಕ್ರ ಮೂಲ್ಮೈ ವಿಸ್ತೀರ್ಣ = $\frac{1}{3}$ ಪೂರ್ಣ ಮೇಲ್ಮೈ ವಿಸ್ತೀರ್ಣ

$$C.S.A = \frac{1}{3}\ T.S.A$$

$$C.S.A = \frac{1}{3} \times 462$$

$$C.S.A = \frac{462}{3} = 154\,cm^2$$

ಪೂರ್ಣ ಮೇಲ್ಮೈ ವಿಸ್ತೀರ್ಣ $T.S.A = 2\pi rh + 2\pi r^2$

$\Rightarrow 462 = 154 + 2\pi r^2$

$2\pi r^2 = 462 - 154$

$\Rightarrow 2 \times \frac{22}{7} r^2 = 308$

$2 \times 22r^2 = 7 \times 308$

$\Rightarrow r^2 = \frac{7 \times 308}{2 \times 22}$

$\Rightarrow r^2 = 49 \Rightarrow r = \sqrt{49} = 7$ cm

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC CET PHYSICS

8) A uniform chain of length L is lying partly on a table, the remaining part hanging down from the edge of the table. If the coefficient of friction between the chain and the table is 0.5, what is the minimum length of the chain that should lie on the table to prevent the chain from slipping down to the ground?

(A) L/3 **(B) L/2**

(C) 2L/3 **(D) 3L/4**

Ans: (C) 2L/3

$$\frac{l}{L} = \frac{\mu}{\mu + 1}$$

$$\therefore l = \frac{L \times 0.5}{1.5} = L/3.$$

Where l is the part of length of the chain hanging and L is the total length of the chain.

Length of the chain lying on the table $= L - \frac{L}{3} = \frac{2L}{3}$.

9) A man weighing 70 kg, riding a motorbike weighing 230 kg at 54 km hr^{-1}, accelerates at 1 ms^{-2} for 10s, when suddenly a child rushes onto the road. The rider manages to apply the brakes screeching to bring his vehicle to a halt in 3s, just in time to save the child. What should have been the average retarding force on the vehicle?

(A) 1.5 N **(B) 4.5 N**

(C) 3.5 N **(D) None of the above**

Ans: D

Expln:- Total mass = m = 70 + 230 = 300 kg.

Velocity after $t = 10^5$ is $S = u + at$;

$V = 15 + 1 \times 10 = 25\ ms^{-1}$.

Hence initial momentum $P_1 = m \times V$

$= 7500\ kgms^{-1}$

Vehicle comes to rest after time t = 35

Hence final momentum $P_2 = 0$

$$F = \frac{dp}{dt} = \frac{P_2 - P_1}{t} = \frac{0 - 7500}{3} = 2.5\ kgN.$$

($\therefore$ None of the answers given is correct.)

10) The graph showing the variation of the magnetic field strength (B) with distance (r) from a long current conductor is



Ans: (C)

Expln:-

For a straight conductor, $B = \frac{\mu_0}{4\pi}(I/d)$; $B \alpha 1/d$.

Hence the graph C is correct.

11) Inside a cyclotron, a charged article is subjected to both an electric field and a magnetic field. It gains kinetic energy due to....

(A) Only the electric field

(B) only the magnetic field

(C) Both the fields (D) none of the fields.

Ans: (A) Only the electric field

Expln:- In a cyclotron electric field helps to increase the kinetic energy of the particle, where as, magnetic field helps to change the direction of charged particle.

12) A certain length of insulated wire can be bent to form either a single circular loop (case I) or a double loop of smaller radius (case II). When the same steady current is passed through the wire, the ratio of the magnetic field at the centre in case I to that in case II is

(A) 1 **(B) 2**

(C) 1/2 **(D) 1/4**

Ans: (D) 1/4

Expln:- For a circular loop B α n/R

Case 1 $\rightarrow n_1 = 1; R_1 = R$

Case 2 $\rightarrow n_2 = 2; R_2 = R/2$

$$\frac{B_1}{B_2} = \frac{n_1}{n_2} \times \frac{R_1}{R_2} \Rightarrow \frac{1}{2} \times \frac{R/2}{R} = 1/4$$

$\therefore B_1 : B_2 = 1 : 4$.

13) A rod of length 2 m slides with a speed of 5 ms^{-1} on a rectangular conducting frame as shown in figure. There exists a uniform magnetic field of 0.04 T perpendiculars to the plane of the figure. If the resistance of the rod is 3Ω then the current through the rod is …………….



A). 1.33 A B) 75mA

C). 133 mA D). 0.75 A

Ans: c

We know that the current,

$i = Blv/R = (0.04 \times 2 \times 5)/3 = 133$ mA

14) The ratio of magnetic field at the centre of a current carrying circular coil to its magnetic moment is 'x'. If the current and the radius both are doubled then the new ratio will become

A) x/8 B). 2x

C). 4x D). x/4

Answer: a

Expln:- Magnetic field at the center of the current carrying loop is given by $B = (\mu_0/4\pi) \times (2\pi i/a) = (\mu_0\ i)/2a$.

Magnetic moment at the center of the current carrying loop is given by $M = i\pi a^2$

thus $B/M = \mu_0/(2\pi a^3) = x$ (given) when both current and radius are doubled ratio become x/8 times.

ಆರ್‌ಟಿಐ ಅರ್ಜಿಗೆ 2015ರಲ್ಲಿ ನೀಡಿದ್ದ ಉತ್ತರ ಉಲ್ಲೇಖಿಸಿದ ಕಾಂಗ್ರೆಸ್

ಕಚ್ಚತೀವು ವಿವಾದ: ವಾಗ್ದಾಳಿ

ನವದೆಹಲಿ (ಪಿಟಿಐ): ಕಚ್ಚತೀವು ದ್ವೀಪದ ಕುರಿತ ವಿವಾದಕ್ಕೆ ಸಂಬಂಧಿಸಿ 2015ರಲ್ಲಿ ಆರ್‌ಟಿಐ ನೀಡಿದ್ದ ಉತ್ತರವನ್ನು ಉಲ್ಲೇಖಿಸಿ, ವಿರೋಧ ಪಕ್ಷಗಳು ಪ್ರಧಾನಿ ಮೋದಿ ಸರ್ಕಾರದ ವಿರುದ್ಧ ಸೋಮವಾರ ವಾಗ್ದಾಳಿ ನಡೆಸಿದವು.

‘ಕಚ್ಚತೀವು ದ್ವೀಪದ ಕುರಿತು ಆರ್‌ಟಿಐ ಮೂಲಕ ಪ್ರಶ್ನೆಗೆ 2015ರಲ್ಲಿ ನೀಡಿದ್ದ ಉತ್ತರದಲ್ಲಿ 1974 ಮತ್ತು 1976ರ ಒಪ್ಪಂದವು ಭಾರತಕ್ಕೆ ಸಂಬಂಧಿಸಿದ ಪ್ರದೇಶ ಸ್ವಾಧೀನಪಡಿಸಿಕೊಳ್ಳುವುದು ಅಥವಾ ಬಿಟ್ಟುಕೊಡುವ ಅಂಶ ಇರಲಿಲ್ಲ. ಚುನಾವಣಾ ರಾಜಕೀಯಕ್ಕಾಗಿ ಮೋದಿ ಸರ್ಕಾರ ತನ್ನ ನಿಲುವು ಬದಲಿಸಿ ಕೊಂಡಿದೆ’ ಎಂದು ಕಾಂಗ್ರೆಸ್ ಆರೋಪಿಸಿದೆ.

‘ಕಚ್ಚತೀವು ದ್ವೀಪಕ್ಕೆ ಸಂಬಂಧಿಸಿ ಕಾಂಗ್ರೆಸ್‌ನ ಪ್ರಧಾನಮಂತ್ರಿಗಳ ನಿಲುವಿನಲ್ಲಿ ವ್ಯತ್ಯಾಸವಿತ್ತು. ಕಾನೂನಿನ ಹೊರತಾಗಿ ಕಾಂಗ್ರೆಸ್ ಸರ್ಕಾರ ಭಾರತೀಯ ಮೀನುಗಾರರ ಹಕ್ಕುಗಳನ್ನು ಕಡೆಗಣಿಸಿದೆ’ ಎಂದು ವಿದೇಶಾಂಗ ಸಚಿವ ಎಸ್.ಜೈಶಂಕರ್ ನೀಡಿರುವ ಹೇಳಿಕೆಗೆ ಕಾಂಗ್ರೆಸ್ ತಿರುಗೇಟು ನೀಡಿದೆ.

ಕೇಂದ್ರ ಸರ್ಕಾರದ ವಿರುದ್ಧ ಕಿಡಿಕಾರಿದ ಕಾಂಗ್ರೆಸ್‌ನ ಹಿರಿಯ ನಾಯಕ ಪಿ.ಚಿದಂಬರಂ ಅವರು, ‘ಮಾತಿಗೆ ತಿರುಗೇಟು ನೀಡುವುದು ಹಳೆಯ ಪದ್ಧತಿ, ಟ್ವೀಟ್‌ಗೆ ಮರು ಟ್ವೀಟ್ ಎನ್ನುವುದು ಹೊಸ ಆಯುಧ. ವಿದೇಶಾಂಗ ಸಚಿವರು ದಯವಿಟ್ಟು 2015ರ ಜನವರಿ 27ರಂದು ಆರ್‌ಟಿಐ ನೀಡಿರುವ ಉತ್ತರವನ್ನು ಓದಬೇಕು. ಯಾವ ಪರಿಸ್ಥಿತಿಯಲ್ಲಿ ಭಾರತ ಸಣ್ಣ ದ್ವೀಪವನ್ನು ಶ್ರೀಲಂಕಾಕ್ಕೆ ಬಿಟ್ಟುಕೊಟ್ಟಿದೆ ಎನ್ನುವುದು ತಿಳಿಯುತ್ತದೆ’ ಎಂದು ಹೇಳಿದ್ದಾರೆ.

‘ಕಳೆದ 50 ವರ್ಷಗಳಿಂದ ಹಲವು ಮೀನುಗಾರರ ಬಂಧನವಾಗಿದೆ ಎಬುದು ಸತ್ಯ. ಭಾರತವೂ ಶ್ರೀಲಂಕಾದ ಹಲವಾರು ಮೀನುಗಾರರನ್ನು ಬಂಧಿಸಿದೆ. ಪ್ರತಿಯೊಂದು ಸರ್ಕಾರವೂ ಶ್ರೀಲಂಕಾದೊಂದಿಗೆ ಮಾತುಕತೆ ನಡೆಸಿ, ನಮ್ಮ ಮೀನುಗಾರರನ್ನು ಬಿಡಿಸಿಕೊಂಡಿದೆ. ಜೈಶಂಕರ್ ಅವರು ವಿದೇಶಾಂಗ ಇಲಾಖೆಯ ಅಧಿಕಾರಿಯಾಗಿದ್ದಾಗ, ವಿದೇಶಾಂಗ ಕಾರ್ಯದರ್ಶಿಯಾಗಿದ್ದಾಗ ಮತ್ತು ವಿದೇಶಾಂಗ ಸಚಿವರಾಗಿದ್ದಾಗಲೂ ಇದೇ ರೀತಿ ನಡೆಯುತ್ತಿದೆ. ಕಾಂಗ್ರೆಸ್ ಮತ್ತು ಡಿಎಂಕೆ ಮೇಲೆ ಆರೋಪ ಮಾಡುವಾಗ ಏನು ಬದಲಾಗಿದೆ’ ಎಂದು ಪ್ರಶ್ನಿಸಿದರು.

ಈ ಬಗ್ಗೆ ‘ಎಕ್ಸ್’ನಲ್ಲಿ ಪ್ರತಿಕ್ರಿಯಿಸಿರುವ ಶಿವಸೇನಾದ (ಉದ್ಧವ್ ಠಾಕ್ರೆ ಬಣ) ನಾಯಕಿ ಪ್ರಿಯಾಂಕಾ ಚತುರ್ವೇದಿ ಅವರು, ‘ಕಚ್ಚತೀವು ದ್ವೀಪದ ವಿಚಾರದಲ್ಲಿ ಯಾವುದೇ ಪ್ರಶ್ನೆಗಳು ಮೂಡಲು ಸಾಧ್ಯವಿಲ್ಲ. ಯಾಕೆಂದರೆ ಒಪ್ಪಂದಗಳ ಪ್ರಕಾರ ಆ ದ್ವೀಪವು ಭಾರತ –ಶ್ರೀಲಂಕಾ ಸಾಗರ ರೇಖೆಯ ಅನ್ವಯ ಶ್ರೀಲಂಕಾದ ಗಡಿಭಾಗದ ಒಳಗಿದೆ’ ಎಂದು ತಿಳಿಸಿದ್ದಾರೆ.

‘ವಿದೇಶಾಂಗ ಕಾರ್ಯದರ್ಶಿಯೊಬ್ಬರು ಸಚಿವರಾದ ತಕ್ಷಣ ಹೇಗೆ ಬಣ್ಣ ಬದಲಾಯಿಸಿದ್ದಾರೆ ಎಂಬುದನ್ನು ಇದು ತೋರಿಸುತ್ತದೆ. ಮೋದಿ ಸರ್ಕಾರದ ಸುಳ್ಳುಗಳಿಗೆ ಮಿತಿಯೇ ಇಲ್ಲ’ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಟೀಕಿಸಿದ್ದಾರೆ.

ಡಿಎಂಕೆ ವಿರುದ್ಧ ಪ್ರಧಾನಿ ಮೋದಿ ಕಿಡಿ

ನವದೆಹಲಿ (ಪಿಟಿಐ): ಕಚ್ಚತೀವು ದ್ವೀಪಕ್ಕೆ ಸಂಬಂಧಿಸಿ ತಮಿಳುನಾಡಿನ ಆಡಳಿತಾರೂಢ ಡಿಎಂಕೆ ವಿರುದ್ಧ ವಾಗ್ದಾಳಿ ನಡೆಸಿದ ಪ್ರಧಾನಿ ನರೇಂದ್ರ ಮೋದಿ ಅವರು, ‘ತಮಿಳುನಾಡಿನ ಹಿತಾಸಕ್ತಿಯನ್ನು ಕಾಪಾಡುವ ಕೆಲಸವನ್ನು ಡಿಎಂಕೆ ಮಾಡಿಲ್ಲ’ ಎಂದು ಆರೋಪಿಸಿದ್ದಾರೆ.

‘ಡಿಎಂಕೆಯು ಒಪ್ಪಂದವನ್ನು ಸಾರ್ವಜನಿಕವಾಗಿ ವಿರೋಧಿಸಿದ್ದರೂ ಮಾಜಿ ಮುಖ್ಯಮಂತ್ರಿ ಕರುಣಾನಿಧಿಯವರು ಒಪ್ಪಂದಕ್ಕೆ ಸಹಿ ಹಾಕಿದ್ದರು’ ಎಂಬ ಮಾಧ್ಯಮ ವರದಿಯನ್ನು ಉಲ್ಲೇಖಿಸಿ ‘ಎಕ್ಸ್’ನಲ್ಲಿ ಕಿಡಿಕಾರಿರುವ ಮೋದಿ, ‘ಇದು ಡಿಎಂಕೆಯ ದ್ವಂದ್ವ ನಿಲುವನ್ನು ತೋರಿಸುತ್ತದೆ’ ಎಂದರು.

‘ಕಾಂಗ್ರೆಸ್ ಮತ್ತು ಡಿಎಂಕೆ ಕೌಟುಂಬಿಕ ಪಕ್ಷ. ಅವರು, ಅವರ ಮಕ್ಕಳ ಬಗ್ಗೆ ಮಾತ್ರ ಯೋಚಿಸುತ್ತಾರೆ. ಇತರರ ಬಗ್ಗೆ ಅಲ್ಲ. . ಕಚ್ಚತೀವು ವಿಚಾರದಲ್ಲಿ ಅವರು ಕೈಗೊಂಡ ನಿರ್ದಾಕ್ಷಿಣ್ಯ ನಿಲುವು ನಮ್ಮ ಬಡ ಮೀನುಗಾರರು ಮತ್ತು ಮಹಿಳಾ ಮೀನುಗಾರರ ಹಿತಾಸಕ್ತಿಗೆ ಧಕ್ಕೆ ತಂದಿದೆ’ ಎಂದು ಆರೋಪಿಸಿದರು.

‘3 ಪ್ರಶ್ನೆಗಳಿಗೆ ಉತ್ತರಿಸಿ’

ಚೆನ್ನೈ(ಪಿಟಿಐ): ಕಚ್ಚತೀವು ದ್ವೀಪದ ವಿಚಾರದಲ್ಲಿ ಡಿಎಂಕೆ ವಿರುದ್ಧದ ಮೋದಿ ಟೀಕೆಗೆ ತಿರುಗೇಟು ನೀಡಿರುವ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ ಸ್ಟಾಲಿನ್ ಅವರು, ಬಿಜೆಪಿಗೆ ಮೀನುಗಾರರರ ಮೇಲೆ ದಿಢೀರ್ ಪ್ರೀತಿ ಹುಟ್ಟಿರುವ ಬಗ್ಗೆ ಮತ್ತು ರಾಜ್ಯವು ಕೋರಿರುವ ₹37000 ಕೋಟಿ ಪರಿಹಾರದ ಬಗ್ಗೆ ಪ್ರಶ್ನಿಸಿದ್ದಾರೆ.

‘ಎಕ್ಸ್’ನಲ್ಲಿ ಪ್ರತಿಕ್ರಿಯಿಸಿರುವ ಸ್ಟಾಲಿನ್, ‘ತಮಿಳುನಾಡಿದನ ಜನರು 3 ಪ್ರಶ್ನೆಗಳಿಗೆ ನಿಮ್ಮಿಂದ ಉತ್ತರ ಬಯಸುತ್ತಿದ್ದಾರೆ. 10 ವರ್ಷಗಳ ಕಾಲ ಕುಂಭಕರ್ಣನಂತೆ ನಿದ್ರೆಯಲ್ಲಿದ್ದ ಇವರು ಚುನಾವಣೆ ಸಂದರ್ಭದಲ್ಲಿ ದಿಢೀರನೆ ಮೀನುಗಾರರ ಮೇಲೆ ಯಾಕೆ ಪ್ರೀತಿ ತೋರುತ್ತಿದ್ದಾರೆ? ತಮಿಳುನಾಡು ಕೇಂದ್ರ ಸರ್ಕಾರಕ್ಕೆ ನೀಡುತ್ತಿರುವ ₹1 ತೆರಿಗೆಯಲ್ಲಿ ಕೇವಲ 29 ಪೈಸೆಯನ್ನು ಮಾತ್ರ ಯಾಕೆ ರಾಜ್ಯಕ್ಕೆ ನೀಡುತ್ತಿದೆ. ಪ್ರವಾಹದಿಂದ ತತ್ತರಿಸಿದ್ದ ತಮಿಳುನಾಡಿಗೆ ಕಿಂಚಿತ್ತೂ ಪರಿಹಾರ ನೀಡಲಿಲ್ಲ ಯಾಕೆ’ ಎಂದು ಅವರು ಪ್ರಶ್ನಿಸಿದರು.

ಪತ್ರಿಕಾ ಸ್ವಾತಂತ್ರ್ಯ: ದೇಶದ ಸ್ಥಿತಿ ಕಳವಳಕಾರಿ

ದತ್ತಿನಿಧಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪತ್ರಕರ್ತ ಪಿ.ಸಾಯಿನಾಥ್ ಬೇಸರ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ವಿಶ್ವ ಪತ್ರಿಕಾ ಸ್ವಾತಂತ್ರ್ಯ ಸೂಚ್ಯಂಕದಲ್ಲಿ ಭಾರತ ಪ್ರತಿ ವರ್ಷವೂ ಕುಸಿತದ ಹಂತದಲ್ಲಿದೆ. ಯಾವುದೇ ಪಕ್ಷದ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದಾಗಲೂ ಪತ್ರಿಕಾ ಸ್ವಾತಂತ್ರ್ಯ ಸೂಚ್ಯಂಕದಲ್ಲಿ ಸುಧಾರಣೆ ಕಾಣುತ್ತಿಲ್ಲ ಎಂದು ಪತ್ರಕರ್ತ ಪಿ.ಸಾಯಿನಾಥ್ ಕಳವಳ ವ್ಯಕ್ತಪಡಿಸಿದರು.

ನಗರದಲ್ಲಿ ಸೋಮವಾರ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಏರ್ಪಡಿಸಿದ್ದ ದತ್ತಿನಿಧಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ಪ್ಯಾರಿಸ್‌ನ ‘ರಿಪೋರ್ಟರ್ಸ್ ವಿದೌಟ್ ಬಾರ್ಡರ್ಸ್’ ಸಂಸ್ಥೆ ಈ ಸೂಚ್ಯಂಕವನ್ನು ಪ್ರತಿ ವರ್ಷ ಬಿಡುಗಡೆ ಮಾಡುತ್ತಿದೆ. 1990 ದಶಕಲ್ಲಿದ್ದ ಸೂಚ್ಯಂಕ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದ ಅವಧಿಯಲ್ಲಿ ಇನ್ನಷ್ಟು ಕುಸಿಯಿತು. ಸೂಚ್ಯಂಕದಲ್ಲಿ ಸುಧಾರಣೆ ತರಬೇಕಾದ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರದಲ್ಲಿ ಮತ್ತಷ್ಟು ಪಾತಾಳಕ್ಕೆ ಇಳಿಯಿತು. ಪ್ರತಿ ವರ್ಷವೂ ಪತ್ರಿಕಾ ಸ್ವಾತಂತ್ರ್ಯವನ್ನು ಕಳೆದುಕೊಳ್ಳುತ್ತಿದ್ದೇವೆ’ ಎಂದು ಆತಂಕ ಹೊರಹಾಕಿದರು.

‘2021ರ ಸೂಚ್ಯಂಕದಲ್ಲಿ ವಿಶ್ವದ 180 ದೇಶಗಳ ಪೈಕಿ ಭಾರತ 142ನೇ ಸ್ಥಾನದಲ್ಲಿತ್ತು. ಈ ಬಗ್ಗೆ ಆತಂಕಗೊಂಡ ವಿಶ್ವಗುರು, ‘ಪ್ಯಾರಿಸ್‌ನಲ್ಲಿ ಕುಳಿತವರು ಮಾಡುತ್ತಿರುವ ದೇಶದ್ರೋಹ’ ಎಂದು ಟೀಕಿಸಿದರು. ಇದನ್ನು ಪರಿಶೀಲಿಸಲು ಕೇಂದ್ರ ಸರ್ಕಾರ ಸಮಿತಿಯೊಂದನ್ನು ರಚಿಸಿತ್ತು. ಅದರಲ್ಲಿ ಪತ್ರಕರ್ತರಿಗಿಂತ ಅಧಿಕಾರಿಗಳೇ ಹೆಚ್ಚಾಗಿದ್ದರು. ಕಾಶ್ಮೀರದಲ್ಲಿ ಅಂತರ್ಜಾಲ ಸ್ಥಗಿತಗೊಳಿಸಿದ್ದು, ಅಲ್ಲಿನ ಪತ್ರಕರ್ತರ ಸ್ಥಿತಿಯ ಬಗ್ಗೆ ಸಮಿತಿ ಗಮನ ಹರಿಸಲೇ ಇಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

‘ಮಾಧ್ಯಮ ಮತ್ತು ಮನರಂಜನಾ ಕ್ಷೇತ್ರ ದೊಡ್ಡ ಉದ್ಯಮವಾಗಿ ಪರಿವರ್ತನೆ ಹೊಂದಿದೆ. ಅತಿ ಹೆಚ್ಚು ಮಾಧ್ಯಮಗಳನ್ನು ಹೊಂದಿದ ಅಂಬಾನಿ, ಬಿರ್ಲಾ ತರಹದ ಬಂಡವಾಳಶಾಹಿಗಳು ಸರ್ಕಾರಕ್ಕೆ ಹತ್ತಿರದಲ್ಲಿದ್ದಾರೆ. ದೇಶದ ಪ್ರಧಾನಿ 10 ವರ್ಷಗಳಿಂದ ಪತ್ರಿಕಾಗೋಷ್ಠಿ ನಡೆಸದಿದ್ದರೂ ಮಾಧ್ಯಮ ಪ್ರಶ್ನಿಸುತ್ತಿಲ್ಲ. ಭಾರತದಲ್ಲಿ ಮಾಧ್ಯಮಕ್ಕೆ ಸರ್ಕಾರಕ್ಕಿಂತ ಹೆಚ್ಚಾಗಿ ಮಾಲೀಕರು ಅಡ್ಡಿಯಾಗಿದ್ದಾರೆ’ ಎಂದು ಹೇಳಿದರು.

‘ಕೋವಿಡ್‌ನಿಂದ ಭಾರತದಲ್ಲಿ ಎಷ್ಟು ಜನರು ಮೃತಪಟ್ಟರು ಎಂಬುದನ್ನು ಯಾವ ಮಾಧ್ಯಮವೂ ಸರಿಯಾಗಿ ವರದಿ ಮಾಡಿಲ್ಲ. ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಬಿಡುಗಡೆ ಮಾಡಿದ ವರದಿಯ ಪ್ರಕಾರ ದೇಶದಲ್ಲಿ ಕೋವಿಡ್‌ಗೆ 47 ಲಕ್ಷ ಜನರು ಬಲಿಯಾಗಿದ್ದಾರೆ. ಕೇಂದ್ರ ಸರ್ಕಾರದ ವರದಿಯ ಪ್ರಕಾರ ಮೃತಪಟ್ಟವರ ಸಂಖ್ಯೆ 4.80 ಲಕ್ಷ ಮಾತ್ರ. ಸರ್ಕಾರದ ಈ ಬೋಗಸ್ ಅಂಕಿ–ಅಂಶವನ್ನು ಮಾಧ್ಯಮಗಳು ಪ್ರಶ್ನಿಸಲಿಲ್ಲ’ ಎಂದರು.

ಎಸ್‌ಆರ್‌ಎಸ್ ಸಮೂಹ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಬಿ.ಎ.ಲಿಂಗಾರೆಡ್ಡಿ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಜಿ.ಸಿ.ಲೋಕೇಶ್, ಉಪಾಧ್ಯಕ್ಷರಾದ ಅಜ್ಜಮಾಡ ರಮೇಶ್ ಕುಟ್ಟಪ್ಪ, ಭವಾನಿಸಿಂಗ್ ಠಾಕೂರ್, ಕಾರ್ಯದರ್ಶಿ ನಿಂಗಪ್ಪ ಚಾವಡಿ, ಖಜಾಂಚಿ ವಾಸುದೇವ ಹೊಳ್ಳ, ಜಿಲ್ಲಾ ಘಟಕದ ಅಧ್ಯಕ್ಷ ದಿನೇಶ್ ಗೌಡಗೆರೆ ಇದ್ದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಚಿತ್ರದುರ್ಗದಲ್ಲಿ ಸೋಮವಾರ ಏರ್ಪಡಿಸಿದ್ದ ದತ್ತಿನಿಧಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪತ್ರಕರ್ತರಾದ ಮಲ್ಲಿಗೆ ಮಾಚಮ್ಮ, ವಿ.ವೆಂಕಟೇಶ್, ಬಿ.ಎಂ.ಬಶೀರ್, ಕುಂತಿನಾಥ ಕಲಮನಿ, ಸಿ.ಜಿ.ಮಂಜುಳಾ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಸಂಘದ ಪ್ರಧಾನ ಕಾರ್ಯದರ್ಶಿ ಜಿ.ಸಿ.ಲೋಕೇಶ್, ಕೊಪ್ಪಳ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಬಿ.ಕೆ.ರವಿ, ಪತ್ರಕರ್ತ ಪಿ.ಸಾಯಿನಾಥ್, ಶಿವಾನಂದ ತಗಡೂರ, ಬಿ.ವಿ.ಮಲ್ಲಿಕಾರ್ಜುನಯ್ಯ ಇದ್ದರು

ಮುರುಘಾ ಮಠ: ಬಸವ ಕುಮಾರ ಸ್ವಾಮೀಜಿಗೆ ಧಾರ್ಮಿಕ ಉಸ್ತುವಾರಿ

ಬಸವ ಕುಮಾರ ಸ್ವಾಮೀಜಿ

ಬೆಂಗಳೂರು: ಸುಪ್ರೀಂ ಕೋರ್ಟ್ ನಿರ್ದೇಶನದ ಅನುಸಾರ, ಚಿತ್ರದುರ್ಗ ಮುರುಘ ರಾಜೇಂದ್ರ ಬೃಹನ್ಮಠದ ಧಾರ್ಮಿಕ ಕಾರ್ಯಗಳ ಅನೂಚಾನ ಮುಂದುವರಿಕೆ ಮತ್ತು ಮೇಲುಸ್ತುವಾರಿಗಾಗಿ, ‘ವನಶ್ರೀ ಸಂಸ್ಥಾನ ಮಠ’ದ (ಯೋಗವನ ಬೆಟ್ಟ) ಪೀಠಾಧಿಪತಿ ಬಸವ ಕುಮಾರ ಸ್ವಾಮೀಜಿ ಅವರನ್ನು ನೇಮಕ ಮಾಡಲಾಗಿದೆ.

ಈಗಾಗಲೇ ನಿವೃತ್ತ ಐಎಎಸ್ ಅಧಿಕಾರಿ ಶಿವಯೋಗಿ ಕಳಸದ ಅವರನ್ನು ಆಡಳಿತಾಧಿಕಾರಿ ಎಂದು ನೇಮಿಸಿದ್ದ ಸರ್ಕಾರ ಇವರ ಜೊತೆಗೆ ಮತ್ತೆ ಮೂವರು ಸದಸ್ಯರ ಹೊಸ ಸಮಿತಿ ಅಡಕಗೊಳಿಸಿದೆ. ಇವರಲ್ಲಿ ಬಸವ ಕುಮಾರ ಸ್ವಾಮೀಜಿ, ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ನಿವೃತ್ತ ಹೆಚ್ಚುವರಿ ನಿರ್ದೇಶಕ ಎಸ್.ಎನ್.ಚಂದ್ರಶೇಖರ್ ಮತ್ತು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಎಮಿರಿಟಸ್ ಪ್ರೊಫೆಸರ್ ಡಾ.ಪಿ.ಎಸ್.ಶಂಕರ್ ಇದ್ದಾರೆ. ಈ ಬಗ್ಗೆ ಕಂದಾಯ ಇಲಾಖೆ ಆದೇಶಿಸಿದೆ.

ಮಠದ ಪೀಠಾಧಿಪತಿ ಶಿವಮೂರ್ತಿ ಶರಣರು ಪೋಕ್ಸೊ ಪ್ರಕರಣದಲ್ಲಿ ಬಂಧನದ ನಂತರ ಬಸವಪ್ರಭು ಸ್ವಾಮೀಜಿ ಅವರನ್ನು ಧಾರ್ಮಿಕ ಕಾರ್ಯಗಳ ಮೇಲುಸ್ತುವಾರಿಗೆ ನೇಮಿಸಲಾಗಿತ್ತು. ಪ್ರಕರಣ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದು, ಇತ್ತೀಚೆಗೆ ‘ಸುಪ್ರೀಂ’ ಮಠ ಮತ್ತು ಎಸ್‌ಜೆಎಂ ವಿದ್ಯಾಪೀಠದ ದೈನಂದಿನ ಕಾರ್ಯ ಚಟುವಟಿಕೆಗಳ ನಿಭಾವಣೆಗೆ ಹೊಸ ಸಮಿತಿ ನೇಮಿಸಲು ನಿರ್ದೇಶಿಸಿತ್ತು.

ಸಿಇಟಿ–ನೀಟ್: ವಾಪಸು ಪಡೆಯದ ಶುಲ್ಕ ₹6 ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈದ್ಯಕೀಯ, ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಸಂದಾಯ ಮಾಡಿದ್ದ ಹೆಚ್ಚುವರಿ ಶುಲ್ಕ (ಕಾಷನ್ ಡೆಪಾಸಿಟ್) ವಾಪಸ್ ಪಡೆಯಲು ಅಭ್ಯರ್ಥಿಗಳು ತಮ್ಮ ಬ್ಯಾಂಕ್ ಖಾತೆಯ ವಿವರಗಳನ್ನು ಏಪ್ರಿಲ್ 10ರ ಒಳಗೆ ಸಲ್ಲಿಸುವಂತೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಸೂಚಿಸಿದೆ.

ನಿಗದಿತ ಶುಲ್ಕಕ್ಕಿಂತ ಹೆಚ್ಚಿನ ಮೊತ್ತ ಜಮೆ ಮಾಡಿರುವ ಹಾಗೂ ವಿವಿಧ ಹಂತಗಳಲ್ಲಿ ಸೀಟುಗಳನ್ನು ರದ್ದುಪಡಿಸಿಕೊಂಡ ಅಭ್ಯರ್ಥಿಗಳು ಶುಲ್ಕ ಮರುಪಾವತಿ ಪಡೆಯಲು ಅರ್ಹರಿರುತ್ತಾರೆ. ಬ್ಯಾಂಕ್ ಖಾತೆ ವಿವರ ಸರಿ ಇದ್ದವರ ಖಾತೆಗಳಿಗೆ ನೇರವಾಗಿ ಹಣ ವರ್ಗವಾಗಿದೆ. ಇನ್ನೂ ಸುಮಾರು 1,800 ಅಭ್ಯರ್ಥಿಗಳ ಬ್ಯಾಂಕ್ ಖಾತೆ ವಿವರಗಳು ಲಭ್ಯವಾಗಿಲ್ಲ ಎಂದಿದ್ದಾರೆ.

2022 ಹಾಗೂ 2023ನೇ ಸಾಲಿನ 1,436 ಎಂಜಿನಿಯರಿಂಗ್ ಹಾಗೂ 324 ವೈದ್ಯಕೀಯ ವಿದ್ಯಾರ್ಥಿಗಳಿಗೆ ಸುಮಾರು ₹6 ಕೋಟಿ ಹಣ ವಾಪಸ್ ಜಮೆ ಮಾಡಬೇಕಿದೆ.

ಪದವಿ ಮತ್ತು ಸ್ನಾತಕೋತ್ತರ ಪದವಿ ಪ್ರವೇಶ ಪಡೆದ ಅಭ್ಯರ್ಥಿಗಳೂ ತಮ್ಮ ಹೆಚ್ಚುವರಿ ಶುಲ್ಕ ವಾಪಸ್ ಪಡೆಯಬಹುದು ಎಂದು ಕೆಇಎ ತಿಳಿಸಿದೆ.

ಸಾಲ: ಕೇರಳ ಅರ್ಜಿ ಸಂವಿಧಾನ ಪೀಠಕ್ಕೆ

ನವದೆಹಲಿ (ಪಿಟಿಐ): ರಾಜ್ಯವು ಪಡೆಯಬಹುದಾದ ಸಾಲದ ಮೊತ್ತದ ಮೇಲೆ ಕೇಂದ್ರ ಸರ್ಕಾರ ಮಿತಿ ಹೇರಿದೆ ಎಂದು ದೂರಿ ಕೇರಳ ಸರ್ಕಾರ ಸಲ್ಲಿಸಿರುವ ಅರ್ಜಿಯನ್ನು ಸುಪ್ರೀಂ ಕೋರ್ಟ್‌ನ ವಿಭಾಗೀಯ ಪೀಠ ಐವರು ಸದಸ್ಯರ ಸಂವಿಧಾನ ಪೀಠಕ್ಕೆ ವರ್ಗಾಯಿಸಿದೆ.

ಕೇರಳ ಸರ್ಕಾರದ ಅರ್ಜಿ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಸೂರ್ಯಕಾಂತ್, ಕೆ.ವಿ. ವಿಶ್ವನಾಥನ್ ಅವರಿದ್ದ ಪೀಠ ನಡೆಸಿತು. ಕೇಂದ್ರ ಸರ್ಕಾರವು ರಾಜ್ಯದ ವಿಶೇಷ ಅಧಿಕಾರದಲ್ಲಿ ಹಸ್ತಕ್ಷೇಪ ನಡೆಸುತ್ತಿದೆ ಎಂದು ಕೇರಳ ದೂರಿದೆ.

ರಾಜ್ಯಗಳು ಪಡೆಯುವ ಸಾಲದ ಬಗ್ಗೆ ಉಲ್ಲೇಖವುಳ್ಳ ಸಂವಿಧಾನದ 293ನೆಯ ವಿಧಿ ಪ್ರಸ್ತಾಪಿಸಿದ ಪೀಠ, ಈ ವಿಚಾರವಾಗಿ ಸುಪ್ರೀಂ ಕೋರ್ಟ್‌ನಿಂದ ಇದುವರೆಗೆ ಯಾವುದೇ ವ್ಯಾಖ್ಯಾನ ಬಂದಿಲ್ಲ ಎಂದು ಹೇಳಿತು.

‘ಬಾಂಡ್ ವಿಷಯದಲ್ಲಿ ಪ್ರಧಾನಿ ಹೇಳಿಕೆ ಸುಳ್ಳು’

ನವದೆಹಲಿ (ಪಿಟಿಐ): ಚುನಾವಣಾ ಬಾಂಡ್ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರು ಸುಳ್ಳು ಹೇಳಿದ್ದಾರೆ ಎಂದು ಕಾಂಗ್ರೆಸ್ ಸೋಮವಾರ ಟೀಕಿಸಿದೆ. ‘ಮೋದಿ ನೇತೃತ್ವದ ಸರ್ಕಾರದ ಭ್ರಷ್ಟಾಚಾರ ಇಡೀ ದೇಶಕ್ಕೆ ತಿಳಿದಿದೆ. ಆದರೆ, ಇದನ್ನು ಸಾಬೀತುಮಾಡಲು ಸರಿಯಾದ ಸಾಕ್ಷಿ ಸಿಗುತ್ತಿಲ್ಲ’ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು ಹೇಳಿದ್ದಾರೆ.

ಮೋದಿ ಅವರು ‘ತಂತಿ’ ಸುದ್ದಿವಾಹಿನಿಗೆ ಭಾನುವಾರ ನೀಡಿದ ಸಂದರ್ಶನದಲ್ಲಿ, ಚುನಾವಣಾ ಬಾಂಡ್ ವಿವಾದದಿಂದಾಗಿ ತಮ್ಮ ಸರ್ಕಾರಕ್ಕೆ ಹಿನ್ನಡೆಯಾಗಿದೆ ಎಂಬುದನ್ನು ತಳ್ಳಿಹಾಕಿದ್ದರು.

‘ಟೆಂಡರ್ ಪ್ರಕ್ರಿಯೆ–ಮಧ್ಯಪ್ರವೇಶವಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಟೆಂಡರ್ ಪ್ರಕ್ರಿಯೆಯ ಪ್ರತಿಯೊಂದು ಹಂತಗಳಲ್ಲೂ ಮಧ್ಯ ಪ್ರವೇಶಿಸಲು ಆಗದು’ ಎಂದು ಹೈಕೋರ್ಟ್ ಖಡಕ್ ಅಭಿಪ್ರಾಯ ವ್ಯಕ್ತಪಡಿಸಿದೆ.

ರಾಸಾಯನಿಕ ಮತ್ತು ಸುಗಂಧ ದ್ರವ್ಯ ಪೂರೈಕೆಗೆ ಸಂಬಂಧಿಸಿದಂತೆ ‘ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ’ (ಕೆಎಸ್‌ಡಿಎಲ್) ಕರೆದಿದ್ದ ಟೆಂಡರ್ ಪ್ರಶ್ನಿಸಿ ಬೆಂಗಳೂರಿನ ಎಸ್‌ಪಿ ಎಂಟರ್ ಪ್ರೈಸಸ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ವಜಾಗೊಳಿಸಿದೆ.

‘ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದ ಅರ್ಜಿದಾರರನ್ನು ತಾಂತ್ರಿಕ ಬಿಡ್ ಹಂತದಲ್ಲೇ ತಿರಸ್ಕರಿಸಲಾಗಿದೆ. ತದನಂತರ ಯಶಸ್ವಿ ಬಿಡ್ಡರ್‌ಗೆ ಕಾರ್ಯಾದೇಶ ನೀಡಲಾಗಿದೆ. ಹಾಗಾಗಿ, ಈ ಹಂತದಲ್ಲಿ ಟೆಂಡರ್ ಪ್ರಕ್ರಿಯೆಯಲ್ಲಿ ಮಧ್ಯಪ್ರವೇಶ ಮಾಡಲು ಆಗದು. ಬೇಕಿದ್ದರೆ ಮೇಲ್ಮನವಿ ಪ್ರಾಧಿಕಾರದ ಮುಂದೆ ನಿಮ್ಮ ಅಹವಾಲು ಸಲ್ಲಿಸಿ’ ಎಂದು ಅರ್ಜಿದಾರರಿಗೆ ಸೂಚಿಸಿದೆ.

‘ಕೋರ್ಟ್, ಟೆಂಡರ್ ಪ್ರಕ್ರಿಯೆಯ ಮೇಲೆ ನಿಗಾ ವಹಿಸಬೇಕು ಎಂಬುದು ಅರ್ಜಿದಾರರ ಕೋರಿಕೆ. ಆದರೆ, ನ್ಯಾಯಾಲಯ ಟೆಂಡರ್ ಪರಿಶೀಲನಾ ಸಮಿತಿಯ ಸ್ಥಾನದಲ್ಲಿ ಕುಳಿತು ಪ್ರತಿಯೊಂದು ಹಂತದಲ್ಲೂ ಮೇಲ್ವಿಚಾರಣೆ ಮಾಡಲು ಸಾಧ್ಯವಿಲ್ಲ’ ಎಂದು ಹೇಳಿರುವ ನ್ಯಾಯಪೀಠ, ಅರ್ಜಿದಾರರ ಆಕ್ಷೇಪಣೆಗಳನ್ನು ಪುರಸ್ಕರಿಸಲು ನಿರಾಕರಿಸಿದೆ.

‘140 ಕೋಟಿ ಭಾರತೀಯರ ಧ್ವನಿ ದುರ್ಬಲಗೊಳಿಸಲು ಐ.ಟಿ. ಯತ್ನ’

ಪಕ್ಷಪಾತದ ಕ್ರಮ: ಪ್ರಿಯಾಂಕಾ

ನವದೆಹಲಿ (ಪಿಟಿಐ): ಕಾಂಗ್ರೆಸ್‌ಗೆ ಆದಾಯ ತೆರಿಗೆ ಇಲಾಖೆ (ಐಟಿ) ನೋಟಿಸ್ ನೀಡಿರುವುದಕ್ಕೆ ಸಂಬಂಧಿಸಿ ಪಕ್ಷದ ನಾಯಕಿ ಪ್ರಿಯಾಂಕಾ ಗಾಂಧಿ ಅವರು ಬಿಜೆಪಿ ವಿರುದ್ಧ ಹರಿಹಾಯ್ದಿದ್ದಾರೆ. ‘ಇದು ಪಕ್ಷಪಾತದಿಂದ ಕೂಡಿರುವ ಕ್ರಮವಾಗಿದ್ದು, 140 ಕೋಟಿ ಭಾರತೀಯರ ಧ್ವನಿ ದುರ್ಬಲಗೊಳಿಸಲು ಹೀಗೆ ಮಾಡಲಾಗಿದೆ’ ಎಂದು ಅವರು ಹೇಳಿದ್ದಾರೆ.

ಈ ಕುರಿತು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವ ಅವರು, ಬಿಜೆಪಿಯ ಪ್ರಜಾಪ್ರಭುತ್ವ ವಿರೋಧಿ ಯೋಜನೆಗಳು ಯಶಸ್ವಿಯಾಗಲು ಜನರು ಅವಕಾಶ ಕೊಡುವುದಿಲ್ಲ ಎಂದಿದ್ದಾರೆ.

‘₹3,567 ಕೋಟಿ ಮೊತ್ತದ ತೆರಿಗೆ ನೀಡಲು ಕಾಂಗ್ರೆಸ್‌ಗೆ ಏಕೆ ಹೇಳಲಾಗಿದೆ. ಪಕ್ಷದ ವಿರುದ್ಧ ಇರುವ ಆರೋಪವಾದರೂ ಏನು? 1994–95ನೇ ಸಾಲಿನಲ್ಲಿ, ಆನಂತರ 2014–15 ಮತ್ತು 2016–17ರಲ್ಲಿ ಪಕ್ಷದ ನಾಯಕರು ಮತ್ತು ಕಾರ್ಯಕರ್ತರು ನಗದು ರೂಪದಲ್ಲಿ ಹಣವನ್ನು ಪಕ್ಷದ ಖಾತೆಯಲ್ಲಿರಿಸಿದ್ದರು. ಆ ಕುರಿತ ಮಾಹಿತಿಯನ್ನು ಐಟಿ ಜೊತೆ ಈಗಾಗಲೇ ಹಂಚಿಕೊಳ್ಳಲಾಗಿದೆ. ಆದಾಗ್ಯೂ, ಕಾಂಗ್ರೆಸ್ ಪಕ್ಷವು ಮಾಹಿತಿ ಒದಗಿಸಿಲ್ಲ ಎಂದು ಕೇಂದ್ರ ಸರ್ಕಾರವು ಆರೋಪ ಹೊರಿಸುತ್ತಿದೆ’ ಎಂದು ಅವರು ಪೋಸ್ಟ್ ಮಾಡಿದ್ದಾರೆ.

‘ಕಿರುಕುಳ ನೀಡುವ ಸಂಸ್ಥೆ ಇ.ಡಿ’

ನವದೆಹಲಿ (ಪಿಟಿಐ): ‘ಜಾರಿ ನಿರ್ದೇಶನಾಲಯವು (ಇ.ಡಿ) ‘ಕಿರುಕುಳ ನೀಡುವ ಸಂಸ್ಥೆ’ಯಂತೆ ಕಾರ್ಯನಿರ್ವಹಿಸುತ್ತಿದ್ದು, ನಮ್ಮ ಕಕ್ಷಿದಾರರ ವಿರುದ್ಧ ಉದ್ದೇಶಪೂರ್ವಕವಾಗಿ ತನಿಖೆ ಕೈಗೊಂಡಿದೆ’ ಎಂದು ಬಿಆರ್‌ಎಸ್ ನಾಯಕಿ ಕೆ.ಕವಿತಾ ಪರ ವಕೀಲರು ವಿಶೇಷ ಕೋರ್ಟ್‌ಗೆ ತಿಳಿಸಿದ್ದಾರೆ.

ಪ್ರಿಯಾಂಕಾ ಗಾಂಧಿ ವಾದ್ರಾ

ದೆಹಲಿ ಅಬಕಾರಿ ನೀತಿ ಹಗರಣ ಕುರಿತ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ವಕೀಲ ಅಭಿಷೇಕ್ ಸಿಂಘ್ವಿ ಅವರು ಸೋಮವಾರ ವಿಶೇಷ ಕೋರ್ಟ್ ಎದುರು ವಾದ ಮಂಡಿಸಿದರು.

‘ಇ.ಡಿ ತನಿಖೆ ನಿಷ್ಪಕ್ಷಪಾತವಾಗಿಲ್ಲ. ತನಿಖೆ ಉದ್ದೇಶಪೂರ್ವಕವಾಗಿದೆ. ‘ಬಂಧಿಸುತ್ತೇವೆ. ಬಂಧಿಸಲಾಗದಿದ್ದರೆ, ಬೆಕ್ಕು–ಇಲಿಯಾಟ ಆಡುತ್ತೇವೆ’ ಎನ್ನುವಂತಿದೆ ಇ.ಡಿ ಕಾರ್ಯಶೈಲಿ. ಬಿಆರ್‌ಎಸ್ ನಾಯಕಿಗೆ ಮತ್ತೆ ಮತ್ತೆ ಸಮನ್ಸ್ ಜಾರಿಯಾಗಿದೆ. ದಿನಕ್ಕೊಂದು ಸಮನ್ಸ್ ನೀಡಿದರೆ ಅದಕ್ಕೆ ಖುಷಿಯಾಗುವುದೋ ಏನೋ’ ಎಂದು ಹೇಳಿದರು.

ಕೋರ್ಟ್ ವಿಚಾರಣೆಯನ್ನು ಏಪ್ರಿಲ್ 4ಕ್ಕೆ ಮುಂದೂಡಿದ್ದು, ಸಿಂಘ್ವಿ ಅವರು ಅಂದು ತಮ್ಮ ವಾದ ಮಂಡನೆ ಮುಂದುವರಿಸಲಿದ್ದಾರೆ.

ಬಿಜೆಪಿಯಿಂದ ಶಾಸಕರಿಗೆ ₹25 ಕೋಟಿ ಆಮಿಷ: ಎಎಪಿ

ನವದೆಹಲಿ (ಪಿಟಿಐ): ‘ನಾನು ಆಮ್ ಆದ್ಮಿ (ಎಎಪಿ) ಪಕ್ಷವನ್ನು ಬಿಟ್ಟು ನನ್ನೊಂದಿಗೆ 10 ಎಎಪಿ ಶಾಸಕರನ್ನು ಬಿಜೆಪಿಗೆ ಕರೆದುಕೊಂಡು ಹೋದರೆ, ಪ್ರತಿಯೊಬ್ಬ ಶಾಸಕರಿಗೂ ₹25 ಕೋಟಿ ನೀಡುವುದಾಗಿ ಬಿಜೆಪಿ ಆಮಿಷ ಒಡ್ಡಿದೆ’ ಎಂದು ಎಎಪಿ ಶಾಸಕ ರಿತುರಾಜ್ ಝಾ ಬಿಜೆಪಿ ವಿರುದ್ಧ ಗಂಭೀರ ಆರೋಪ ಮಾಡಿದ್ದಾರೆ.

ಸೋಮವಾರ ವಿಧಾನಸಭೆಯಲ್ಲಿ ಮಾತನಾಡಿದ ಅವರು, ‘ಬಿಜೆಪಿಯು ದೆಹಲಿ ಸರ್ಕಾರವನ್ನು ನಾಶಗೊಳಿಸಲು ಬಯಸಿದೆ. 2013, 2015, 2020ರ ವಿಧಾನಸಭೆ ಚುನಾವಣೆಗಳಲ್ಲಿ ಹಾಗೂ 2022ರ ದೆಹಲಿ ಪಾಲಿಕೆ ಚುನಾವಣೆಯಲ್ಲಿ 4 ಬಾರಿ ಪ್ರಧಾನಿ ನರೇಂದ್ರ ಮೋದಿಯವರನ್ನು ಸೋಲಿಸಿದ ಏಕೈಕ ನಾಯಕ ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್. ಇದೀಗ ಮೋದಿ ಮತ್ತೊಮ್ಮೆ ಕೀಳು ಮಟ್ಟದ ತಂತ್ರಗಾರಿಕೆಯನ್ನು ಆರಂಭಿಸಿದ್ದಾರೆ’ ಎಂದರು.

‘ಬಿಜೆಪಿ ಸೇರುವ ಪ್ರಸ್ತಾಪದೊಂದಿಗೆ ಭಾನುವಾರ ನನ್ನನ್ನು ಸಂಪರ್ಕಿಸಲಾಯಿತು. ಕಳೆದ ನಾಲ್ಕು ದಿನಗಳಿಂದ ನನ್ನನ್ನು ಸಂಪರ್ಕಿಸಲು ಕೆಲವರು ಪ್ರಯತ್ನಿಸುತ್ತಿದ್ದಾರೆ. ಭಾನುವಾರ ರಾತ್ರಿ 9.15ಕ್ಕೆ ನಾನು ಅವರನ್ನು ಭೇಟಿಯಾದೆ. ಅಲ್ಲಿ ಮೂರ್ನಾಲ್ಕು ಜನರು ಒಂದೆಡೆ ಕರೆದುಕೊಂಡು ಹೋಗಿ, ‘ನೋಡಿ ಒಪ್ಪದೇ ಹೋದರೆ ನಿಮಗೇನೂ ಸಿಗಲಾರದು. ರಾಷ್ಟ್ರಪತಿ ಆಳ್ವಿಕೆ ಹೇರಲಾಗುತ್ತದೆ. 10 ಶಾಸಕರನ್ನು ಕರೆತನ್ನಿ. ಪ್ರತಿಯೊಬ್ಬರಿಗೂ ₹25 ಕೋಟಿ ನೀಡುತ್ತೇವೆ. ಬಿಜೆಪಿ ಸರ್ಕಾರದಲ್ಲಿ ನಿಮ್ಮನ್ನು ಮಂತ್ರಿ ಮಾಡುತ್ತೇವೆ’ ಎಂದು ಆಮಿಷ ಒಡ್ಡಿದರು. ಎಎಪಿ ಶಾಸಕರು ಪಕ್ಷವನ್ನು ಬಿಡುವುದಿಲ್ಲ. ಹೀಗಾಗಿ ಬಿಜೆಪಿ ಮತ್ತೆ ‘ಆಪರೇಷನ್ ಕಮಲ’ ಆರಂಭಿಸಿದೆ’ ಎಂದು ಆರೋಪಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಬಿಜೆಪಿ ಶಾಸಕ ವಿಜೇಂದರ್ ಗುಪ್ತಾ, ‘ಬಿಜೆಪಿ ಸೇರಲು ನಿಮಗೆ ಕರೆ ಬಂದ ಬಳಿಕ ನೀವು ಪೊಲೀಸರಿಗೆ ದೂರು ನೀಡಿದ್ದೀರಾ’ ಎಂದು ಪ್ರಶ್ನಿಸಿದರು. ‘ತಮಗೆ ಹಣ ನೀಡುವುದಾಗಿ ಆಮಿಷ ಒಡ್ಡಿದ್ದಾರೆ ಎಂದು ಈ ಮೊದಲು ಎಎಪಿ ಶಾಸಕರು ಹತ್ತಾರು ಬಾರಿ ಆರೋಪಿಸಿದ್ದಾರೆ. ನೀವು ಎಷ್ಟು ದಿನ ಸುಳ್ಳು ಹೇಳುತ್ತೀರಿ’ ಎಂದು ಎಎಪಿ ವಿರುದ್ಧ ವಾಗ್ದಾಳಿ ನಡೆಸಿದರು.

ಸಾಹಿತಿ ರಾಧಾಕೃಷ್ಣನ್ ರಾಜೀನಾಮೆ

ಮಲಪ್ಪುರಂ (ಕೇರಳ) (ಪಿಟಿಐ): ಮಲಯಾಳಿ ಭಾಷೆಯ ಹೆಸರಾಂತ ಸಾಹಿತಿ ಸಿ. ರಾಧಾಕೃಷ್ಣನ್ ಅವರು ಕೇಂದ್ರ ಸಾಹಿತ್ಯ ಅಕಾಡೆಮಿ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದಾರೆ.



ಸಿ. ರಾಧಾಕೃಷ್ಣನ್

ಅಕಾಡೆಮಿಯು ಇತ್ತೀಚೆಗೆ ಆಯೋಜಿಸಿದ್ದ 39ನೇ ‘ಸಾಹಿತ್ಯೋತ್ಸವ: ಪತ್ರಗಳ ಹಬ್ಬ’ವನ್ನು ಕೇಂದ್ರ ಸಚಿವ ಅರ್ಜುನ್ ರಾಮ್ ಮೇಘವಾಲ್ ಉದ್ಘಾಟಿಸಿದ್ದರು. ಸಾಹಿತ್ಯದ ಗಂಧ–ಗಾಳಿ ಇಲ್ಲದವರು ಉತ್ಸವಕ್ಕೆ ಚಾಲನೆ ನೀಡಿದ್ದು, ಅದನ್ನು ಪ್ರತಿಭಟಿಸಿ ರಾಜೀನಾಮೆ ನೀಡಿರುವುದಾಗಿ ರಾಧಾಕೃಷ್ಣನ್ ತಿಳಿಸಿದ್ದಾರೆ.

ಅಕಾಡೆಮಿಯ ಕಾರ್ಯದರ್ಶಿಗೆ ಅವರು ರಾಜೀನಾಮೆ ಪತ್ರವನ್ನು ಬರೆದಿದ್ದು, ತಾವು ಯಾವುದೇ ರಾಜಕೀಯ ಪಕ್ಷದ ವಿರೋಧಿಯಲ್ಲ ಎಂಬ ಸ್ಪಷ್ಟನೆಯನ್ನೂ ಅವರು ನೀಡಿದ್ದಾರೆ.

‘ಸಾಹಿತ್ಯ ಅಕಾಡೆಮಿಯು ಪರಂಪರಾಗತವಾಗಿ ಸ್ವಾಯತ್ತ ಸಂಸ್ಥೆಯಾಗಿಯೇ ಅಸ್ತಿತ್ವ ಉಳಿಸಿಕೊಂಡು ಬಂದಿದೆ. ಇದೇ ಮೊದಲ ಬಾರಿಗೆ ರಾಜಕಾರಣಿಗೆ ಮಣೆ ಹಾಕಲಾಗುತ್ತಿದೆ’ ಎಂದಿರುವ ಅವರು, ಮೊದಲಿನಿಂದಲೂ ರಾಜಕೀಯದ ನೆರಳಿನಿಂದ ಹೊರಗೇ ಉಳಿದಿದ್ದ ಅಕಾಡೆಮಿಯಲ್ಲಿ ಇಂತಹ ಬೆಳವಣಿಗೆಗೆ ತಮ್ಮ ವಿರೋಧವನ್ನು ವ್ಯಕ್ತಪಡಿಸಿದ್ದಾರೆ. ಅಕಾಡೆಮಿಯ ದೈನಂದಿನ ಆಡಳಿತ ದಲ್ಲಿಯೂ ರಾಜಕಾರಣಿಗಳು ಮೂಗುತೂರಿಸುತ್ತಿದ್ದಾರೆ. ಸಂಸ್ಥೆಯ ಆಡಳಿತವನ್ನು ರಾಜಕೀಯಗೊಳಿಸುವುದು ಸರಿಯಲ್ಲ ಎಂದೂ ಅವರು ಹೇಳಿದ್ದಾರೆ.

‘ರಾಜಕೀಯ ನಾಯಕರು ಅಕಾಡೆಮಿಯ ಸಂವಿಧಾನವನ್ನು ಮರುರೂಪಿಸುವ ಜಾಣತನ ತೋರುತ್ತಿದ್ದಾರೆ ಎಂದು ತಿಳಿಯಿತು. ದೇಶದ ಸಾಂಸ್ಕೃತಿಕ ಕ್ಷೇತ್ರದಲ್ಲಿ ಪ್ರಜಾಸತ್ತಾತ್ಮವಾಗಿ ಇರುವ ಕೊನೆಯ ಸಂಸ್ಥೆಗೂ ಹೀಗೆ ಅಂತಿಮಸಂಸ್ಕಾರ ಮಾಡುವುದನ್ನು ಮೂಕಪ್ರೇಕನಾಗಿ ನೋಡಲು ನನ್ನಿಂದ ಸಾಧ್ಯವಿಲ್ಲ, ಕ್ಷಮಿಸಿ’ ಎಂದೂ ಅವರು ಪ್ರತಿಕ್ರಿಯಿಸಿದ್ದಾರೆ.

ರಾಧಾಕೃಷ್ಣನ್ ಅವರು ‘ಮುನ್ಬೇ ಪರಕ್ಕುನ್ನ ಪಕ್ಷಿಗಳ್’ (ಮೊದಲೇ ಹಾರುವ ಹಕ್ಕಿಗಳು), ‘ಸ್ಪಂದಮಾಪಿನಿಗಳೇ ನನ್ನಿ’ (ಭೂಕಂಪ ಅಳೆಯುವವರಿಗೆ ಕೃತಜ್ಞತೆಗಳು), ‘ತೀಕ್ಕಡಲ್ ಕಡಂಞು ತಿರುಮಧುರಂ’ (ಬೆಂಕಿಯ ಕಡಲು ಮಥಿಸಿ ಲಭಿಸಿದ ಮಾಧುರ್ಯ) ಕಾದಂಬರಿಗಳಿಂದ ಓದುಗರಿಗೆ ಪರಿಚಿತರು.

ಬಾಲಾಜಿ ಅರ್ಜಿ: ಇ.ಡಿ.ಗೆ ನೋಟಿಸ್

ನವದೆಹಲಿ (ಪಿಟಿಐ): ಹಣದ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಹಿಂದಿನ ವರ್ಷ ಬಂಧನಕ್ಕೊಳಗಾಗಿರುವ ತಮಿಳುನಾಡಿನ ಮಾಜಿ ಸಚಿವ ವಿ. ಸೆಂಥಿಲ್ ಬಾಲಾಜಿ ಅವರ ಜಾಮೀನು ಅರ್ಜಿಯ ಕುರಿತು ಜಾರಿ ನಿರ್ದೇಶನಾಲಯದಿಂದ (ಇ.ಡಿ) ಸುಪ್ರೀಂ ಕೋರ್ಟ್ ಸೋಮವಾರ ಪ್ರತಿಕ್ರಿಯೆ ಕೋರಿದೆ.

ನ್ಯಾಯಮೂರ್ತಿಗಳಾದ ಅಭಯ್ ಎಸ್ ಓಕಾ ಮತ್ತು ಉಜ್ಜಲ್ ಭುಯಾನ್ ಅವರನ್ನೊಳಗೊಂಡ ಪೀಠವು ಇ.ಡಿಗೆ ನೋಟಿಸ್ ಜಾರಿ ಮಾಡಿದ್ದು, ಏ. 29ರೊಳಗೆ ಉತ್ತರ ನೀಡುವಂತೆ ನಿರ್ದೇಶನ ನೀಡಿದೆ.

ಮದ್ರಾಸ್ ಹೈಕೋರ್ಟ್ ಫೆ. 28ರಂದು ಜಾಮೀನು ಅರ್ಜಿಯನ್ನು ವಜಾಗೊಳಿಸುವಾಗ, ‘ಈ ರೀತಿಯ ಪ್ರಕರಣದಲ್ಲಿ ಜಾಮೀನಿನ ಮೇಲೆ ಬಿಡುಗಡೆ ಮಾಡಿದರೆ ಅದು ತಪ್ಪು ಸಂದೇಶ ನೀಡಲಿದೆ ಹಾಗೂ ಸಾರ್ವಜನಿಕ ಹಿತಾಸಕ್ತಿಗೆ ವಿರುದ್ಧವಾಗಿರುತ್ತದೆ’ ಎಂದು ಹೇಳಿತ್ತು.

‘ಅರ್ಜಿದಾರರು ಎಂಟು ತಿಂಗಳಿಗಿಂತಲೂ ಹೆಚ್ಚು ಅವಧಿ ಜೈಲಿನಲ್ಲಿದ್ದಾರೆ. ಆದ್ದರಿಂದ, ಒಂದು ಕಾಲಮಿತಿಯೊಳಗೆ ಪ್ರಕರಣವನ್ನು ವಿಲೇವಾರಿ ಮಾಡಲು ವಿಶೇಷ ನ್ಯಾಯಾಲಯಕ್ಕೆ ನಿರ್ದೇಶಿಸುವುದು ಹೆಚ್ಚು ಸೂಕ್ತವಾಗಿದೆ. ಈ ಆದೇಶದ ಪ್ರತಿಯನ್ನು ಸ್ವೀಕರಿಸಿದ ದಿನಾಂಕದಿಂದ ಮೂರು ತಿಂಗಳ ಅವಧಿಯಲ್ಲಿ ಪ್ರಕರಣವನ್ನು ವಿಲೇವಾರಿ ಮಾಡಲು ಚೆನ್ನೈನ ಪ್ರಧಾನ ವಿಶೇಷ ನ್ಯಾಯಾಲಯಕ್ಕೆ ನಿರ್ದೇಶನ ನೀಡಬೇಕು’ ಎಂದು ಆದೇಶಿಸಿತ್ತು.

ಸುಪ್ರೀಂ ಕೋರ್ಟ್‌ನ ಮಾರ್ಗಸೂಚಿಗೆ ಅನುಗುಣವಾಗಿ ನಿತ್ಯ ವಿಚಾರಣೆ ನಡೆಸಬೇಕು ಎಂದು ಹೈಕೋರ್ಟ್ ಆದೇಶ ನೀಡಿದೆ.

ನಕ್ಸಲ್ ಶಿಬಿರದ ಮೇಲೆ ದಾಳಿ

ಗಢಚಿರೌಲಿ (ಪಿಟಿಐ): ಮಹಾರಾಷ್ಟ್ರ–ಛತ್ತೀಸಗಢದ ಗಡಿಯಲ್ಲಿನ ನಕ್ಸಲರ ಶಿಬಿರವನ್ನು ಭೇದಿಸಿರುವ ಗಢಚಿರೌಲಿ ಪೊಲೀಸರು ಜಿಲೆಟಿನ್ ಕಡ್ಡಿಗಳು, ಸ್ಫೋಟಕಗಳು ಮತ್ತಿತರ ಸಾಮಗ್ರಿಗಳನ್ನು ವಶಪಡಿಸಿಕೊಂಡಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಚ್ಯುಟಿನ್‌ಟೋಲಾ ಗ್ರಾಮದಲ್ಲಿ ಕೆಲವು ನಕ್ಸಲರು ಬಿಡಾರ ಹೂಡಿದ್ದಾರೆ ಎಂದು ಪೊಲೀಸರಿಗೆ ಶುಕ್ರವಾರ ರಾತ್ರಿಯೇ ಬೇಹುಗಾರಿಕಾ ಸಂಸ್ಥೆಯಿಂದ ಮಾಹಿತಿ ಸಿಕ್ಕಿತ್ತು. ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ವಿಧ್ವಂಸಕ ಕೃತ್ಯಗಳನ್ನು ನಡೆಸಲು ಅವರು ಹುನ್ನಾರ ಮಾಡುತ್ತಿದ್ದಾರೆ ಎಂಬ ಎಚ್ಚರಿಕೆಯೂ ದೊರೆತಿತ್ತು ಎಂದು ಗಢಚಿರೌಲಿಯ ಎಸ್.ಪಿ. ನೀಲೋತ್ಪಲ್ ಪ್ರಕಟಣೆಯಲ್ಲಿ ಹೇಳಿದ್ದಾರೆ.

ಶನಿವಾರ ಮುಂಜಾನೆ ಶಿಬಿರದ ಮೇಲೆ ದಾಳಿ ನಡೆಸಲಾಯಿತು. ನಕ್ಸಲರು ಅಷ್ಟರಲ್ಲಿ ಪರಾರಿಯಾಗಿದ್ದರು. ವೈರ್‌ಗಳು, ಬ್ಯಾಟರಿಗಳು, ವಾಕಿ–ಟಾಕಿ ಚಾರ್ಜರ್‌ಗಳು, ನಕ್ಸಲ್ ಬರಹಗಳಿದ್ದ ಪುಸ್ತಕಗಳನ್ನು ವಶಪಡಿಸಿಕೊಂಡಿರುವುದಾಗಿ ಪ್ರಕಟಣೆಯಲ್ಲಿ ಮಾಹಿತಿ ನೀಡಿದ್ದಾರೆ.

‘ಆತಿಶಿ, ಸೌರಭ್ ಹೆಸರು ಉಲ್ಲೇಖ’

ಒಂದನೇ ಪುಟದಿಂದ...

ಸಹ ಆರೋಪಿಗಳು ಮತ್ತು ಮದ್ಯದ ವ್ಯಾಪಾರದಲ್ಲಿ ತೊಡಗಿರುವವರ ಜೊತೆಗೆ ನಾಯರ್ ಅವರು 10 ಸಭೆಗಳನ್ನು ನಡೆಸಿದ್ದರ ಪುರಾವೆಗಳನ್ನು ತೋರಿಸಲಾಯಿತು. ಹಾಗಿದ್ದರೂ ಅವರು ತಮಗೇನೂ ಅರಿವಿಲ್ಲ ಎಂದರು ಎಂದು ಇ.ಡಿ ಆರೋಪಿಸಿದೆ.

ಕೇಜ್ರಿವಾಲ್ ಅವರು ದೆಹಲಿ ಅಬಕಾರಿ ನೀತಿ ಹಗರಣದ ಪ್ರಮುಖ ಸಂಚುಕೋರ. ಏಕೆಂದರೆ 2021–22ರಲ್ಲಿ ಈ ನೀತಿ ರೂಪಿಸುವಿಕೆಯಲ್ಲಿ ಅವರು ಭಾಗಿಯಾಗಿದ್ದರು. ಕೆಲವು ವ್ಯಕ್ತಿಗಳಿಗೆ ಅನುಕೂಲ ಮಾಡಿಕೊಡುವ ಮೂಲಕ ₹100 ಕೋಟಿಗೂ ಹೆಚ್ಚು ಲಂಚ ಪಡೆಯಲಾಗಿದೆ. ಹವಾಲಾ ಮೂಲಕ ಪಡೆದ ಈ ಹಣದಲ್ಲಿ ₹45 ಕೋಟಿಯನ್ನು ಗೋವಾ ಚುನಾವಣೆಗೆ ಖರ್ಚು ಮಾಡಲಾಗಿದೆ ಎಂದು ಇ.ಡಿ. ಪ್ರತಿಪಾದಿಸುತ್ತಿದೆ.

ಪ್ರಧಾನಿ ವಿರುದ್ಧ ಟೀಕೆ: ಕೋರ್ಟ್ ಸಭಾಂಗಣ ಪ್ರವೇಶಿಸುವ ಮೊದಲು ಸುದ್ದಿಗಾರರ ಜೊತೆಗೆ ಮಾತನಾಡಿದ ಕೇಜ್ರಿವಾಲ್ ತಮ್ಮ ಬಂಧನವನ್ನು ಉಲ್ಲೇಖಿಸಿ, ‘ಪ್ರಧಾನಿ ಅವರ ಈ ನಡೆಯು ದೇಶದ ದೃಷ್ಟಿಯಿಂದ ಒಳ್ಳೆಯದಲ್ಲ’ ಎಂದು ಅಭಿಪ್ರಾಯಪಟ್ಟರು.

ಕೇಜ್ರಿವಾಲ್ ಅವರ ಪತ್ನಿ ಸುನೀತಾ, ಎಎಪಿ ಸಚಿವರಾದ ಆತಿಶಿ, ಸೌರಭ್ ಭಾರದ್ವಾಜ್ ಅವರು ಈ ಸಂದರ್ಭದಲ್ಲಿ ಹಾಜರಿದ್ದರು.

ವರದಿಗೆ ಸೂಚನೆ: ‘ಕೇಜ್ರಿವಾಲ್ ಅವರು ಬಂಧನದ ಅವಧಿಯಲ್ಲಿ ದೆಹಲಿ ಮುಖ್ಯಮಂತ್ರಿ ಅಧಿಕಾರ ಬಳಸಿ ಆದೇಶ ಹೊರಡಿಸಿದ್ದಾರೆ’ ಎಂಬ ಕುರಿತು ವಿಶೇಷ ನ್ಯಾಯಾಧೀಶರ ಬಳಿ ಹೇಳಿಕೆ ದಾಖಲಿಸಲು ಜಾರಿ ನಿರ್ದೇಶನಾಲಯಕ್ಕೆ (ಇ.ಡಿ) ದೆಹಲಿ ಹೈಕೋರ್ಟ್ ಆದೇಶಿಸಿದೆ.

ಪ್ರಭಾರ ಮುಖ್ಯ ನ್ಯಾಯಮೂರ್ತಿ ಮನಮೋಹನ್, ನ್ಯಾಯಮೂರ್ತಿ ಮನ್‌ಮೀತ್ ಪಿ.ಎಸ್. ಅರೋರಾ ಅವರಿದ್ದ ಪೀಠ ಸೋಮವಾರ ಈ ಸೂಚನೆಯೊಂದಿಗೆ, ಆದೇಶ ನೀಡಿದ್ದನ್ನು ಪ್ರಶ್ನಿಸಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಲೇವಾರಿ ಮಾಡಿತು.

‘ಕೇಜ್ರಿವಾಲ್ ಭಾಗಿಯಾಗಿದ್ದಾರೆ ಎನ್ನಲಾದ ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ಕೋರ್ಟ್, ಅಗತ್ಯವಿದ್ದರೆ ನಿಯಮಾನುಸಾರ ಆದೇಶ ಹೊರಡಿಸಬಹುದು’ ಎಂದು ತಿಳಿಸಿತು.

ಇ.ಡಿ ತನಿಖೆಗೆ ಒತ್ತಾಯಿಸಿದ್ದೇ ಕಾಂಗ್ರೆಸ್: ಕೇರಳ ಸಿ.ಎಂ ವಿಜಯನ್

ಕೋಯಿಕ್ಕೋಡ್, ಕೇರಳ (ಪಿಟಿಐ): ‘ದೆಹಲಿ ಅಬಕಾರಿ ನೀತಿ ಹಗರಣ ಕುರಿತಂತೆ ಜಾರಿ ನಿರ್ದೇಶನಾಲಯದ (ಇ.ಡಿ) ತನಿಖೆಗೆ ಕಾಂಗ್ರೆಸ್ ಪಕ್ಷವೇ ಒತ್ತಾಯಿಸಿತ್ತು’ ಎಂದು ಕೇರಳ ಸಿ.ಎಂ ಪಿಣರಾಯಿ ವಿಜಯನ್ ಹೇಳಿದ್ದಾರೆ.

ಸಿಪಿಎಂ ನಾಯಕರೂ ಆದ ಪಿಣರಾಯಿ ವಿಜಯನ್ ಅವರ ಈ ಹೇಳಿಕೆಯನ್ನು ಪ್ರತಿಪಕ್ಷಗಳ ಮೈತ್ರಿಯಲ್ಲಿ ಬಿಕ್ಕಟ್ಟು ಎಂದೇ ಹೇಳಲಾಗಿದೆ. ಪ್ರತಿಪಕ್ಷಗಳ ಮೈತ್ರಿಕೂಟ ದೆಹಲಿಯಲ್ಲಿ ರ‍್ಯಾಲಿ ನಡೆಸಿದ ಹಿಂದೆಯೇ ಈ ಹೇಳಿಕೆ ಹೊರಬಿದ್ದಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪಿಣರಾಯಿ ವಿಜಯನ್ ಅವರು, ‘ದೆಹಲಿ ಸರ್ಕಾರದ ವಿರುದ್ಧ ಆರೋಪವನ್ನು ಹೊರಿಸಿ, ಇ.ಡಿ ತನಿಖೆಗೆ ಆಗ್ರಹಪಡಿಸಿದ್ದು ಹಾಗೂ ದೂರು ದಾಖಲಿಸಿದ್ದು ಇದೇ ಕಾಂಗ್ರೆಸ್ ಪಕ್ಷ’ ಎಂದು ಹೇಳಿದರು. ‘ಮನೀಶ್ ಸಿಸೋಡಿಯಾ ಅವರ ಬಂಧನವಾದಾಗ, ‘ಕೇಜ್ರಿವಾಲ್‌ರನ್ನು ಏಕೆ ಬಂಧಿಸಿಲ್ಲ’ ಎಂದು ಪ್ರಶ್ನಿಸಿದ್ದು ಇದೇ ಕಾಂಗ್ರೆಸ್. ಈಗ ಅದರ ನಿಲುವು ಬದಲಾಗಿದೆ. ಇದು ಸ್ವಾಗತಾರ್ಹ. ಆ ಪಕ್ಷಕ್ಕೆ ತಪ್ಪಿನ ಅರಿವಾಗಿದೆ’ ಎಂದು ಹೇಳಿದರು.

ಕೇಜ್ರಿವಾಲ್ ಬಂಧನ ವಿರೋಧಿಸಿ ದೆಹಲಿಯಲ್ಲಿ ನಡೆದ ರ‍್ಯಾಲಿ ಉಲ್ಲೇಖಿಸಿದ ಪಿಣರಾಯಿ ವಿಜಯನ್ ಅವರು, ‘ಬಿಜೆಪಿಯ ನಡೆಯನ್ನು ವಿರೋಧಿಸಿ ನಾವು ಒಟ್ಟಾಗಿ ನಿಲ್ಲುವುದು ಅನಿವಾರ್ಯವು ಆಗಿತ್ತು’ ಎಂದು ಹೇಳಿದರು. ಮೋದಿ ನೇತೃತ್ವದ ಕೇಂದ್ರ ಸರ್ಕಾರ ಎಲ್ಲ ಪ್ರತಿಪಕ್ಷಗಳನ್ನು ಗುರಿಯಾಗಿಸಿ ಕ್ರಮ ಕೈಗೊಳ್ಳುತ್ತಿದೆ ಎಂದೂ ಹೇಳಿದರು.

‘ಕಾಂಗ್ರೆಸ್ಸಿಗರೂ ಇ.ಡಿ ಪ್ರಕರಣ ಎದುರಿಸಿದವರೇ’

ಕಾಸರಗೋಡು (ಪಿಟಿಐ): ಕೇಂದ್ರೀಯ ಸಂಸ್ಥೆಗಳು ಕಾಂಗ್ರೆಸ್ಸೇತರ ಪಕ್ಷಗಳ ಮುಖಂಡರ ತನಿಖೆ ನಡೆಸುತ್ತಿರುವ ಬಗ್ಗೆ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ನೀಡಿರುವ ಹೇಳಿಕೆಗೆ ಪ್ರತಿಕ್ರಿಯಿಸಿದ ಕಾಂಗ್ರೆಸ್, ತನ್ನ ಪಕ್ಷದ ಮುಖ್ಯ ನಾಯಕರು ಕೂಡ ಇ.ಡಿ ತನಿಖೆ ಎದುರಿಸಿದವರೇ ಎಂದು ಹೇಳಿದೆ.

ದೆಹಲಿಯ ಅಬಕಾರಿ ನೀತಿ ಹಗರಣದ ಕುರಿತು ಇ.ಡಿ ತನಿಖೆ ಮಾಡುವಂತೆ ಕಾಂಗ್ರೆಸ್ ಒತ್ತಾಯಿಸಿದೆ ಎಂದು ವಿಜಯನ್ ಆರೋಪಿಸಿದ ಸ್ವಲ್ಪ ಸಮಯದ ನಂತರ ಕೇರಳ ವಿಧಾನಸಭೆಯ ವಿರೋಧ ಪಕ್ಷದ ನಾಯಕ ವಿ. ಡಿ. ಸತೀಶನ್ ಈ ಆರೋಪವನ್ನು ತಳ್ಳಿಹಾಕಿದ್ದಾರೆ. ಬಿಜೆಪಿ ಆಡಳಿತದಲ್ಲಿ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಮತ್ತು ಪಿ. ಚಿದಂಬರಂ ಎದುರುಸುತ್ತಿರುವ ಕಾನೂನು ಸವಾಲುಗಳ ಬಗ್ಗೆ ಮುಖ್ಯಮಂತ್ರಿಗಳಿಗೆ ಅರಿವಿಲ್ಲ ಎಂದರು.

‘ಆರೋಗ್ಯ ಸಮಸ್ಯೆಯನ್ನು ಎದುರಿಸುತ್ತಿರುವ ಸೋನಿಯಾ ಗಾಂಧಿ ಅವರನ್ನು ಗಂಟೆಗಟ್ಟಲೆ, ರಾಹುಲ್ ಗಾಂಧಿ ಅವರನ್ನು ದಿನವಿಡೀ ಇ.ಡಿ. ವಿಚಾರಣೆ ನಡೆಸಿತು. ಮಾಜಿ ಸಚಿವ ಪಿ. ಚಿದಬರಂರ ಮನೆ ಕಾಂಪೌಂಡ್ ಹಾರಿ ರಾತ್ರೋರಾತ್ರಿ ಬಂಧಿಸಿ, ಜೈಲಿಗಟ್ಟಿತ್ತು. ಅಲ್ಲದೆ, ಕರ್ನಾಟಕ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕೂಡ ಜೈಲು ಶಿಕ್ಷೆ ಅನುಭವಿಸಿದ್ದಾರೆ’ ಎಂದು ಪತ್ರಿಕಾಗೋಷ್ಠಿಯಲ್ಲಿ ಸತೀಶನ್ ಹೇಳಿದರು.

ಕೇಜ್ರಿವಾಲ್ ಅವರೇ ಸಿ.ಎಂ: ಎಎಪಿ

ನವದೆಹಲಿ (ಪಿಟಿಐ): ‘ಆಮ್ ಆದ್ಮಿ ಪಕ್ಷ (ಎಎಪಿ) ಮುಗಿಸಲು ಅರವಿಂದ ಕೇಜ್ರಿವಾಲ್ ಅವರನ್ನು ಜೈಲಿಗೆ ಕಳುಹಿಸಿದರೆ ಸಾಲದು ಎಂದು ಬಿಜೆಪಿ ಭಾವಿಸಿದಂತಿದೆ. ಇದೇ ಕಾರಣಕ್ಕೆ ಆತಿಶಿ, ಸೌರಭ್ ಹೆಸರನ್ನು ಉಲ್ಲೇಖಿಸಲಾಗಿದೆ’ ಎಂದು ಎಎಪಿ ನಾಯಕ ಜಾಸ್ಮೀನ್ ಶಾ ಪ್ರತಿಕ್ರಿಯಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎಷ್ಟು ದಿನವಾದರೂ ಜೈಲಿನಲ್ಲಿ ಇರಿಸಲಿ. ಕೇಜ್ಲಿವಾಲ್ ಅವರೇ ಮುಖ್ಯಮಂತ್ರಿಯಾಗಿ ಇರಲಿದ್ದಾರೆ. ಅವರು ಸಂವಿಧಾನದತ್ತವಾಗಿ ಪ್ರಮಾಣ ಸ್ವೀಕರಿಸಿದ್ದಾರೆ ಎಂದು ಹೇಳಿದರು.

‘ಒಂದೂವರೆ ವರ್ಷದ ಬಂಧನವಾದಾಗಲೇ ವಿಜಯ್ ನಾಯರ್, ತಾವು ಸಿ.ಎಂ ಜತೆಗೆ ಸಂವಹನ ನಡೆಸದೆ ಆತಿಶಿ, ಸೌರವ್ ಜತೆ ನಡೆಸುತ್ತಿರುವುದಾಗಿ ತಿಳಿಸಿದ್ದರು. ಇ.ಡಿ ಈಗ ಅದನ್ನು ಉಲ್ಲೇಖಿಸುತ್ತಿರುವ ಉದ್ದೇಶವೇನು’ ಎಂದು ಪ್ರಶ್ನಿಸಿದರು.

ಜೈಲಲ್ಲಿರಿಸುವುದೇ ಬಿಜೆಪಿ ಗುರಿ: ಸುನೀತಾ

ನವದೆಹಲಿ (ಪಿಟಿಐ): ‘ಲೋಕಸಭೆ ಚುನಾವಣೆಯ ಅವಧಿಯಲ್ಲಿ ಕೇಜ್ರಿವಾಲ್ ಅವರು ಜೈಲಿನಲ್ಲಿರಬೇಕು’ ಎಂಬುದೇ ಬಿಜೆಪಿಯ ಏಕಮಾತ್ರ ಗುರಿಯಾಗಿದೆ’ ಎಂದು ಅರವಿಂದ ಕೇಜ್ರಿವಾಲ್ ಅವರ ಪತ್ನಿ ಸುನೀತಾ ಆರೋಪಿಸಿದರು.

ಸೋಮವಾರ ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, ‘ಕೇಜ್ರಿವಾಲ್‌ರನ್ನು 11 ದಿನ ತನಿಖೆಗೆ ಒಳಪಡಿಸಲಾಗಿದೆ. ತಪ್ಪಿತಸ್ಥ ಎಂದು ಕೋರ್ಟ್ ಘೋಷಿಸಿಲ್ಲ. ಆದರೂ, ಅವರನ್ನು ಏಕೆ ಜೈಲಿನಲ್ಲಿ ಇಡಲಾಗಿದೆ’ ಎಂದು ಪ್ರಶ್ನಿಸಿದರು.

ದೇಶದ ಜನರು ಇಂತಹ ನಿರಂಕುಶ ಆಡಳಿತಕ್ಕೆ ತಕ್ಕ ಉತ್ತರ ನೀಡಲಿದ್ದಾರೆ ಎಂದೂ ಅವರು ಪ್ರತಿಕ್ರಿಯಿಸಿದರು.

ಬಿಜೆಪಿ ಜತೆಗಿನ ಮೈತ್ರಿ ವಿರುದ್ಧ ಡಿಕೆಶಿ ವಾಗ್ದಾಳಿ ● ಅದ್ದೂರಿ ಮೆರವಣಿಗೆಯೊಂದಿಗೆ ಸ್ಟಾರ್ ಚಂದ್ರು ನಾಮಪತ್ರ ಸಲ್ಲಿಕೆ

‘ದೇವೇಗೌಡ, ಎಚ್‌ಡಿಕೆ ಬದುಕಿದ್ದೂ ಸತ್ತಂತೆ’

ಪ್ರಜಾವಾಣಿ ವಾರ್ತೆ

ಮಂಡ್ಯ: ‘ಕೋಮುವಾದಿ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡು ಜಾತ್ಯತೀತ ಮೌಲ್ಯಗಳನ್ನು ಬಲಿಕೊಟ್ಟಿರುವ ಎಚ್.ಡಿ.ದೇವೇಗೌಡ ಹಾಗೂ ಎಚ್.ಡಿ.ಕುಮಾರಸ್ವಾಮಿ ಅವರು ಬದುಕಿದ್ದೂ ಸತ್ತಂತೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಾಗ್ದಾಳಿ ನಡೆಸಿದರು.

ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಸೋಮವಾರ ನಾಮಪತ್ರ ಸಲ್ಲಿಸಿದ ನಂತರ, ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಅವರು ಮಾತನಾಡಿದರು.

‘ಕುಮಾರಸ್ವಾಮಿ ಅವರಿಗೆ ರಾಜಕೀಯ ಜನ್ಮ ನೀಡಿದ ರಾಮನಗರ ಬಿಟ್ಟು ಮಂಡ್ಯಕ್ಕೆ ಬಂದಿದ್ದಾರೆ. ಅಲ್ಲಿಯ ಜನರಿಗೇ ನ್ಯಾಯ ಕೊಡಲು ಸಾಧ್ಯವಾಗಿಲ್ಲ. ಇನ್ನು ಮಂಡ್ಯ ಜನರಿಗೆ ನ್ಯಾಯ ಕೊಡಿಸುವರೇ? ಜೆಡಿಎಸ್‌ನಲ್ಲಿ ಜಾತ್ಯತೀತ ತತ್ವ ಉಳಿದಿಲ್ಲ. ತಮ್ಮ ಭಾವಮೈದುನನಿಗೆ ತಮ್ಮ ಪಕ್ಷದ ಚಿಹ್ನೆಯಡಿ ಟಿಕೆಟ್ ಕೊಡಿಸಲು ಸಾಧ್ಯವಾಗಲಿಲ್ಲ. ಕುಮಾರಸ್ವಾಮಿ ತಮ್ಮ ಪಕ್ಷವನ್ನು ಬಿಜೆಪಿ ಜೊತೆ ವಿಲೀನ ಮಾಡಿಕೊಳ್ಳಲಿ’ ಎಂದು ಆರೋಪಿಸಿದರು.

‘ಕುಮಾರಸ್ವಾಮಿಯನ್ನು ನಾವು ಮುಖ್ಯಮಂತ್ರಿ ಮಾಡಿದ್ದೆವು, ಆದರೆ ಅವರು ಅಧಿಕಾರ ಉಳಿಸಿಕೊಳ್ಳಲಿಲ್ಲ. ಕಿರುಕುಳ ಕೊಟ್ಟು ಕೆಳಗಿಳಿಸಿದರು ಎಂದು ನನ್ನ ವಿರುದ್ಧ ಆರೋಪಿಸುತ್ತಾರೆ. ಅಧಿಕಾರದಿಂದ ತೆಗೆದವರು ನಾವಲ್ಲ, ಈಗ ಅಧಿಕಾರದಿಂದ ಕೆಳಗಿಳಿಸಿದವರ ಜೊತೆಯಲ್ಲೇ ಹೋಗಿದ್ದಾರೆ’ ಎಂದರು.

‘ಮಂಡ್ಯ ಜನರು ಹೊರಗಿನ ಅಭ್ಯರ್ಥಿಗೆ ಎಂದೂ ಮಣೆ ಹಾಕಿದವರಲ್ಲ, ಸದಾ ಸ್ವಾಭಿಮಾನವನ್ನು ಎತ್ತಿ ಹಿಡಿದಿದ್ದಾರೆ. ಈ ಬಾರಿಯೂ ಸ್ಥಳೀಯ ಅಭ್ಯರ್ಥಿಯನ್ನು ಬೆಂಬಲಿಸಿ ಸ್ವಾಭಿಮಾನ ರಕ್ಷಿಸಲಿದ್ದಾರೆ’ ಎಂದರು.

ಅದ್ದೂರಿ ಮೆರವಣಿಗೆ: ಸ್ಟಾರ್ ಚಂದ್ರು ನಗರದ ಕಾಳಿಕಾಂಬಾ ದೇವಾಲಯದಲ್ಲಿ ಪೂಜೆ ಸಲ್ಲಿಸುವ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು. ಜನಪದ ತಂಡ, ಸಾವಿರಾರು ಜನರೊಂದಿಗೆ ಜಿಲ್ಲಾಧಿಕಾರಿ ಕಚೇರಿವರೆಗೂ ಮೆರವಣಿಗೆಯಲ್ಲಿ ತೆರಳಿ ಜಿಲ್ಲಾ ಚುನಾವಣಾಧಿಕಾರಿಗೆ ನಾಮಪತ್ರ ಸಲ್ಲಿಸಿದರು.

ಬಿರು ಬಿಸಿಲಿನಿಂದ ಬಸವಳಿಯುತ್ತಿದ್ದ ಜನರಿಗೆ ಕಾಂಗ್ರೆಸ್ ಕಾರ್ಯಕರ್ತರು ಕಲ್ಲಂಗಡಿ ಹಣ್ಣು ಹಾಗೂ ನೀರಿನ ಬಾಟಲಿ ವಿತರಿಸುತ್ತಿದ್ದರು. ಆಗ ಜನ ಮುಗಿಬಿದ್ದು ಕಲ್ಲಂಗಡಿ ಹಣ್ಣುಗಳನ್ನು ಹೊತ್ತೊಯ್ಯುತ್ತಿದ್ದ ದೃಶ್ಯಗಳು ಸಾಮಾನ್ಯವಾಗಿದ್ದವು. ಜಿಲ್ಲಾಧಿಕಾರಿ ಕಚೇರಿ ಬಳಿ ವಾಹನ ದಟ್ಟಣೆ ಹೆಚ್ಚಾಗಿ ಅಪಾರ ಜನರು ಕಚೇರಿ ಆವರಣಕ್ಕೆ ಬರಲು ಸಾಧ್ಯವಾಗಲಿಲ್ಲ.

ಸೆರಗೊಡ್ಡಿ ಮತ ಬೇಡಿದ ತಾಯಿ ಅನುಪಮಾ

ಹಾಸನ: ಕಾಂಗ್ರೆಸ್ ಅಭ್ಯರ್ಥಿ ಶ್ರೇಯಸ್ ಪಟೇಲ್ ಪರವಾಗಿ ಸೋಮವಾರ ನಡೆದ ರ್‍ಯಾಲಿಯಲ್ಲಿ, ಅವರ ತಾಯಿ ಅನುಪಮಾ ಅವರು ಸೆರಗೊಡ್ಡಿ ಕಣ್ಣೀರಿನೊಂದಿಗೆ ತಮ್ಮ ಪುತ್ರನ ಪರ ಮತಯಾಚನೆ ಮಾಡಿದರು.

‘ಪಂಚಾಯಿತಿಯಿಂದ ಪ್ರಧಾನಿವರೆಗೂ ಅವರಿಗೆ ಅಧಿಕಾರ ನೀಡಿದ್ದೀರಿ. ನನಗೆ ಇರುವುದು ಒಬ್ಬನೇ ಮಗ. ಮೂರು ಚುನಾವಣೆಗಳಲ್ಲಿಯೂ ನಮ್ಮನ್ನು ಸೋಲಿಸಿದ್ದೀರಿ. ಮೂರು ಬಾರಿ ಅವರ ಮುಂದೆ ಮಂಡಿಯೂರಿದ್ದೇವೆ. ನನ್ನ ಮಗನನ್ನು ನಿಮ್ಮ ಮಡಿಲಿಗೆ ಹಾಕಿದ್ದೇನೆ. ಈ ಬಾರಿಯಾದರೂ ನನ್ನ ಮಗನನ್ನು ಗೆಲ್ಲಿಸಿ ಕೊಡಿ’ ಎಂದು ಮನವಿ ಮಾಡಿದರು.

ಇದಕ್ಕೂ ಮೊದಲು, ಶ್ರೇಯಸ್ ಪಟೇಲ್ ಇಲ್ಲಿನ ಜಿಲ್ಲಾಧಿಕಾರಿ ಕಚೇರಿಯಲ್ಲಿ ಚುನಾವಣಾಧಿಕಾರಿ ಸಿ.ಸತ್ಯಭಾಮಾ ಅವರಿಗೆ ನಾಮಪತ್ರ ಸಲ್ಲಿಸಿದರು.

ಉಪ ಮುಖ್ಯಮಂತ್ರಿ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಬರುವುದು ತಡವಾಗಿದ್ದರಿಂದ ಗೃಹ ಸಚಿವ ಡಾ.ಜಿ. ಪರಮೇಶ್ವರ್, ಜಿಲ್ಲಾ ಉಸ್ತುವಾರಿ ಸಚಿವ ಕೆ.ಎನ್. ರಾಜಣ್ಣ, ಗ್ರಾಮ ಮಂಡಳಿ ಅಧ್ಯಕ್ಷ ಕೆ.ಎಂ. ಶಿವಲಿಂಗೇಗೌಡ, ಮಾಜಿ ಸಚಿವ ಬಿ. ಶಿವರಾಂ ಅವರೊಂದಿಗೆ ನಾಮಪತ್ರ ಸಲ್ಲಿಸಿದರು.

ನಂತರ ನಗರದ ಡೈರಿ ವೃತ್ತದಿಂದ ಕಾಂಗ್ರೆಸ್ ಕಚೇರಿವರೆಗೆ ನಡೆದ ರ್‍ಯಾಲಿಯಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪಾಲ್ಗೊಂಡು ಮತಯಾಚಿಸಿದರು.

‘ಮಗ, ಮೊಮ್ಮಗ, ಅಳಿಯ ಬಿಟ್ಟರೆ ಯಾರೂ ಇರಲಿಲ್ಲವೇ?’

ಹಾಸನ: ‘ಮಂಡ್ಯದಿಂದ ಮಗ, ಹಾಸನದಿಂದ ಮೊಮ್ಮಗ, ಬೆಂಗಳೂರು ಗ್ರಾಮಾಂತರದಿಂದ ಅಳಿಯನನ್ನು ಕಣಕ್ಕೆ ಇಳಿಸಿದ್ದೀರಿ. ಬೇರೆ ಯಾರೂ ಇರಲಿಲ್ಲವೇ’ ಎಂದು ಉಪ ಮುಖ್ಯಮಂತ್ರಿ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಎಚ್.ಡಿ. ದೇವೇಗೌಡರ ವಿರುದ್ಧ ವಾಗ್ದಾಳಿ ನಡೆಸಿದರು.

ಕುಮಾರಸ್ವಾಮಿ ಸರ್ಕಾರ ಬರುವುದು ಖಚಿತ: ದೇವೇಗೌಡ

ಹಾಸನ: ‘ಇವರೆಗೂ ನಾನು ಪ್ರಾಮಾಣಿಕವಾಗಿ ನಡೆದುಕೊಂಡಿದ್ದೇನೆ. ಯಾರು ಏನೇ ಕುತಂತ್ರ ಮಾಡಿದರೂ, ಏನೇ ಹೋರಾಟ ಮಾಡಿದರೂ ರಾಜ್ಯದಲ್ಲಿ ಮತ್ತೆ ಕುಮಾರಸ್ವಾಮಿ ಸರ್ಕಾರ ಬರುವುದು ಖಚಿತ’ ಎಂದು ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಹೇಳಿದರು.

ತಾಲ್ಲೂಕಿನ ಕಟ್ಟಾಯದಲ್ಲಿ ಸೋಮವಾರ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿ, ‘ಕಾವೇರಿ ನೀರಿಗಾಗಿ ಹೋರಾಡಿದ್ದೇನೆ. ಹೇಮಾವತಿ ನೀರನ್ನು ನಾವು ಬಳಸಬಾರದು ಎಂದು ಈಗ ಆದೇಶ ಮಾಡುತ್ತಾರೆ. ರಾಜ್ಯದಲ್ಲಿ ಅಧಿಕಾರದ ದರ್ಪ ಮಿತಿಮೀರಿದೆ. ಮೂರು ಸಲ ಬಂದು ಪ್ರಜ್ವಲ್ ರೇವಣ್ಣ ಅವರನ್ನು ಸೋಲಿಸುತ್ತೇನೆ ಎಂದು ಮುಖ್ಯಮಂತ್ರಿ ಹೇಳಿದ್ದಾರೆ. ಆದರೆ 1991ರಲ್ಲಿ ಹೇಗೆ ನನ್ನನ್ನು ಗೆಲ್ಲಿಸಿದ್ದೀರೋ, ಅದೇ ರೀತಿ ಈಗ ಪ್ರಜ್ವಲ್‌ಗೆ ಕೈ ಹಿಡಿಯಬೇಕು’ ಎಂದು ಮನವಿ ಮಾಡಿದರು.

‘ನಾನು ಮುಖ್ಯಮಂತ್ರಿಯಾಗಿದ್ದಾಗ ಕಟ್ಟಾಯ ಭಾಗದ ಜನರ ಅನುಕೂಲಕ್ಕೆ ಯಗಚಿ ಜಲಾಶಯ ನಿರ್ಮಿಸಿದೆ. ಆದರೆ 1999 ರಲ್ಲಿ ನನ್ನನ್ನು ಸೋಲಿಸಿದ ಜಿ. ಪುಟ್ಟಸ್ವಾಮಿ ಗೌಡರು, ಹಾಸನ ಜಿಲ್ಲೆಯ ಸುಮಾರು 45 ಸಾವಿರ ಎಕರೆ ಜಮೀನಿಗೆ ಅನುಕೂಲವಾಗಬೇಕಿದ್ದ ನೀರನ್ನು ಚಿಕ್ಕಮಗಳೂರಿಗೆ ಕೊಂಡೊಯ್ದರು. ಅದರಿಂದಾಗಿ ಈ ಭಾಗದ ಜನರಿಗೆ ಅನಾನುಕೂಲವಾಗಿದೆ’ ಎಂದರು.

‘ಧಮ್ಕಿ, ದರ ನಿಗದಿಯೂ ಸೇವೆಯೆ?’

ಎಚ್.ಡಿ. ಕುಮಾರಸ್ವಾಮಿ

ಬೆಂಗಳೂರು: ‘ಧಮ್ಕಿ ಹಾಕುವುದು ಮತ್ತು ಫ್ಲ್ಯಾಟ್‌ಗಳ ನಕ್ಷೆ ಮಂಜೂರಾತಿಗೆ ಪ್ರತಿ ಚದರ ಅಡಿಗೆ ₹ 100 ದರ ನಿಗದಿ ಮಾಡುವುದೂ ಜನರ ಸೇವೆ ಆಗುತ್ತದೆ’ ಎಂದು ಮಂಡ್ಯ ಲೋಕಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿಯಾಗಿರುವ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಪ್ರಶ್ನಿಸಿದರು.

‘ರಾಮನಗರ ಜನರ ಸೇವೆ ಮಾಡಲು ಅಣ್ಣ, ತಮ್ಮ ಇರುವುದು’ ಎಂಬ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿಕೆ ಕುರಿತು ಸುದ್ದಿಗಾರರಿಗೆ ಸೋಮವಾರ ಪ್ರತಿಕ್ರಿಯಿಸಿದ ಅವರು, ‘ಅವರು ಏನು ಸೇವೆ ಮಾಡುತ್ತಿದ್ದಾರೆ ಎನ್ನುವುದು ಎಲ್ಲರಿಗೂ ಗೊತ್ತಿದೆ. ಬೆಂಗಳೂರಿನಲ್ಲಿ ಫ್ಲ್ಯಾಟ್ ನಕ್ಷೆ ಅನುಮೋದನೆಗೆ ಅಡಿಗೆ ₹ 100 ದರ ನಿಗದಿ ಮಾಡಿರುವುದು ಸೇವೆ ಅಲ್ಲವೇ? ಎಲ್ಲರಿಗೂ ಧಮ್ಕಿ ಹಾಕುವುದೂ ಒಂದು ಸೇವೆ. ಅದನ್ನೆ ತಾನೆ ಮಾಡುತ್ತಾ ಇರುವುದು’ ಎಂದು ಕೇಳಿದರು.

‘ಅವರ ಸೇವೆಯೇ ಬೇರೆ ರೀತಿ. ಸೇವೆ ಮಾಡುತ್ತಿದ್ದಾರೋ ಅಥವಾ ರಾಜ್ಯವನ್ನು ಯಾವ ಪರಿಸ್ಥಿತಿಗೆ ತೆಗೆದುಕೊಂಡು ಹೋಗುತ್ತಿದ್ದಾರೋ ಮುಂದಿನ ದಿನಗಳಲ್ಲಿ ನೋಡೋಣ. ನಾವು ನಿದ್ದೆ ಮಾಡಲು ಬಂದಿದ್ದೇವಾ? ಅವರು ಮಾತ್ರ ಸೇವೆ ಮಾಡುವುದು. ಪಂಚಾಯಿತಿ ಸದಸ್ಯರ ರೀತಿ ಕೆಲಸ ಮಾಡುತ್ತಾರಂತೆ. ಪಾಪ, ಇವರು ಅಲ್ಲಿ ಹೋಗಿ ಕೈಹಾಕಿದರೆ ಪಂಚಾಯಿತಿ ಸದಸ್ಯರು ಏನು ಮಾಡಬೇಕು’ ಎಂದರು.

‘ಕೋವಿಡ್ ಸಮಯದಲ್ಲಿ ಕುಮಾರಸ್ವಾಮಿ ಎಲ್ಲಿ ಹೋಗಿದ್ದರು ಎಂದು ಕೇಳಿದ್ದಾರೆ. ಅನಿತಾ ಕುಮಾರಸ್ವಾಮಿ ರಾಮನಗರದ ಶಾಸಕರಾಗಿದ್ದರು. ನಾನು ಚನ್ನಪಟ್ಟಣದ ಶಾಸಕನಾಗಿದ್ದೆ. ನಾವು ಏನು ಸೇವೆ ಸಲ್ಲಿಸಿದ್ದೇವೋ ಅದನ್ನು ಮಾಡಿದ್ದೇವೆ. ಇವರಂತೆ ಡಂಗೂರ ಹೊಡೆದು ಪ್ರಚಾರ ತೆಗೆದುಕೊಂಡಿಲ್ಲ’ ಎಂದು ಹೇಳಿದರು.

ಭಯದಿಂದ ಮಾತನಾಡುತ್ತಿದ್ದಾರೆ: ‘ನಾನು ಸುಮಲತಾ ಅಂಬರೀಶ್ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿರುವುದಕ್ಕೆ ಕಾಂಗ್ರೆಸ್‌ನವರು ಭಯಗೊಂಡಿದ್ದಾರೆ. ಆರೋಗ್ಯಕರ ಚರ್ಚೆಯಾಗಿದೆ ಎಂದು ಸುಮಲತಾ ಹೇಳಿರುವುದು ಕಾಂಗ್ರೆಸ್ ಪಕ್ಷದವರಿಗೆ ಭಯ ಹುಟ್ಟಿಸಿದೆ’ ಎಂದು ಕುಮಾರಸ್ವಾಮಿ ಹೇಳಿದರು.

‘ಕರಾವಳಿ ಹೊರತುಪಡಿಸಿ ಎಲ್ಲ ಕ್ಷೇತ್ರಗಳಲ್ಲಿ ನಾನು ಪ್ರಚಾರದಲ್ಲಿ ಭಾಗವಹಿಸುತ್ತೇನೆ. ಬೆಂಗಳೂರು ಗ್ರಾಮಾಂತರದಲ್ಲೂ ಪ್ರಚಾರ ನಡೆಸುತ್ತೇನೆ’ ಎಂದರು.

ತಗ್ಗಿದ ಸಂಗಣ್ಣ ಮುನಿಸು: ಪ್ರಚಾರ

ಪ್ರಜಾವಾಣಿ ವಾರ್ತೆ



ಸಂಗಣ್ಣ ಕರಡಿ

ಕೊಪ್ಪಳ: ಕೊಪ್ಪಳ ಲೋಕಸಭಾ ಕ್ಷೇತ್ರದ ಬಿಜೆಪಿ ಟಿಕೆಟ್ ತಪ್ಪಿದ್ದರಿಂದ ಅಸಮಾಧಾನಗೊಂಡಿದ್ದ ಸಂಸದ ಸಂಗಣ್ಣ ಕರಡಿ ಅವರ ಮುನಿಸು ಕಡಿಮೆಯಾಗಿದ್ದು, ಪಕ್ಷದ ಅಭ್ಯರ್ಥಿ ಡಾ. ಬಸವರಾಜ್ ಕ್ಯಾವಟರ್ ಪರ ಸೋಮವಾರ ಪ್ರಚಾರ ಆರಂಭಿಸಿದರು. ಕುಷ್ಟಗಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಂಗಣ್ಣ ಪಾಲ್ಗೊಂಡರು.

ನಗರದಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಸಂಗಣ್ಣ ಕರಡಿ, ‘ನಾನು ಬಿಜೆಪಿಯಲ್ಲಿಯೇ ಇರುತ್ತೇನೆ. ಪ್ರಧಾನಿ ನರೇಂದ್ರ ಮೋದಿ ಅವರ ಕೈ ಬಲಪಡಿಸಲು ಶ್ರಮಿಸಬೇಕಿದೆ. ಅವರನ್ನು ಮತ್ತೆ ಪ್ರಧಾನಿ ಮಾಡಲು ಪ್ರಚಾರ ಮಾಡುತ್ತೇನೆ. ನನ್ನನ್ನು ರಾಜ್ಯಸಭಾ ಸದಸ್ಯ ಸ್ಥಾನಕ್ಕೆ ಪರಿಗಣಿಸಬೇಕು ಎನ್ನುವುದು ಕಾರ್ಯಕರ್ತರ ಬೇಡಿಕೆಯಾಗಿದೆ’ ಎಂದರು.

‘ಈಗಿನ ಪರಿಸ್ಥಿತಿಯಲ್ಲಿ ಟಿಕೆಟ್ ಬದಲಾವಣೆ ಕಷ್ಟ ಎನ್ನುವುದು ನನಗೂ ಗೊತ್ತು. ಮಂಗಳವಾರ ಅಮಿತ್ ಶಾ ರಾಜ್ಯಕ್ಕೆ ಬರಲಿದ್ದು, ಅವರೊಂದಿಗೆ ರಾಜ್ಯ ನಾಯಕರು ನನ್ನ ವಿಚಾರದ ಬಗ್ಗೆ ಚರ್ಚಿಸುವ ವಿಶ್ವಾಸವಿದೆ’ ಎಂದು ಭರವಸೆ ವ್ಯಕ್ತಪಡಿಸಿದರು.

ಬಿಜೆಪಿಯಲ್ಲಿ ಗುಲಾಮರಿಗೆ ಮಾತ್ರ ಬೆಲೆ: ಸತ್ಯಜಿತ್

ಪ್ರಜಾವಾಣಿ ವಾರ್ತೆ

ಸತ್ಯಜಿತ್ ಸುರತ್ಕಲ್

ಮಂಗಳೂರು: ‘ನಾನು ಬ್ರಾಹ್ಮಣ, ಲಿಂಗಾಯಿತ, ಒಕ್ಕಲಿಗ ಅಥವಾ ಬಂಟ ಆಗಿದ್ದರೆ ಬಿಜೆಪಿಯಲ್ಲಿ ಅವಕಾಶ ಸಿಗುತ್ತಿತ್ತೇನೋ. ಸ್ವಂತ ಶಕ್ತಿ ಇರುವವರಿಗೆ ಬೆಲೆ ಇಲ್ಲ, ಗುಲಾಮರಿಗೆ ಮಾತ್ರ ಇಲ್ಲಿ ಬೆಲೆ’ ಎಂದು ನಾರಾಯಣಗುರು ವಿಚಾರ ವೇದಿಕೆ ಅಧ್ಯಕ್ಷರಾಗಿರುವ ಹಿಂದುತ್ವವಾದಿ ಮುಖಂಡ ಸತ್ಯಜಿತ್ ಸುರತ್ಕಲ್ ಆರೋಪಿಸಿದರು.

ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ‘ನಾನು ಶೂದ್ರ ಸಮುದಾಯದಲ್ಲಿ ಹುಟ್ಟಿದವನು. ಶೂದ್ರರು ಸೇವೆ ಮಾಡುತ್ತ ಶೂದ್ರರಾಗಿಯೇ ಇರಬೇಕು ಎಂಬ ಮಾನಸಿಕತೆ ಬಿಜೆಪಿಯಲ್ಲಿದೆ’ ಎಂದು ಬಿಜೆಪಿ ಟಿಕೆಟ್ ಆಕಾಂಕ್ಷಿ ಆಗಿದ್ದ ಅವರು ಹೇಳಿದರು.

‘ಎರಡು ತಿಂಗಳುಗಳಿಂದ ‘ಟೀಂ ಸತ್ಯಜಿತ್ ಸುರತ್ಕಲ್’ ಹೆಸರಿನಲ್ಲಿ ಅಭಿಯಾನ, ಸಮಾವೇಶಗಳು ನಡೆದಿವೆ. ಬಿಜೆಪಿ ಟಿಕೆಟ್ ಘೋಷಣೆಯಾದ ನಂತರವೂ ನಮ್ಮ ತಂಡದವರು ಪಕ್ಷದಲ್ಲಿ ಸ್ಥಾನಮಾನ ಕೊಡುವಂತೆ ಕೇಳುವುದಾಗಿ ಹೇಳಿ, ನನ್ನನ್ನು ತಡೆದಿದ್ದರು. ಆದರೆ, ಟಿಕೆಟ್ ಘೋಷಣೆಯಾಗಿ ಇಷ್ಟು ದಿನ ಕಳೆದ ಮೇಲೂ ಯಾವುದೇ ಜವಾಬ್ದಾರಿ ನೀಡುವ ಬಗ್ಗೆ ಮಾತಿಲ್ಲ. ಹೀಗಾಗಿ, ಯಾವುದೇ ನಿರ್ಧಾರ ಕೈಗೊಳ್ಳಲು ನಾನು ಸ್ವತಂತ್ರ’ ಎಂದು ಸತ್ಯಜಿತ್ ಹೇಳಿದರು.

'ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ಪಕ್ಷಗಳನ್ನು ಪಕ್ಕಕ್ಕಿಟ್ಟು ಬಿಲ್ಲವ ಸಮುದಾಯದ ಅಭ್ಯರ್ಥಿಗಳನ್ನು ಬೆಂಬಲಿಸಲು ನಾರಾಯಣ ಗುರು ವಿಚಾರ ವೇದಿಕೆ ನಿರ್ಧರಿಸಿದೆ. ಸಮುದಾಯದ ಅಭ್ಯರ್ಥಿಗಳಿಗೆ ಮೂರು ಕ್ಷೇತ್ರಗಳಲ್ಲಿ ಟಿಕೆಟ್ ದೊರೆತಿದೆ.

ನಾರಾಯಣಗುರು ವಿಚಾರ ವೇದಿಕೆ ಪ್ರಮುಖರಾದ ಶಿವು ಹೂಗಾರ್, ಕೆ.ಪಿ. ಲಿಂಗೇಶ್, ಶಶಿಧರ ಎಂ. ಅಮೀನ್, ಜಗನ್ನಾಥ್ ಕೋಟೆ, ಸಂದೀಪ್ ಇದ್ದರು.

ಸಿದ್ದರಾಮಯ್ಯ, ಡಿಕೆಶಿ ಮಾತಿನಾಟ

ಒಂದನೇ ಪುಟದಿಂದ..

ವರುಣ ತಮ್ಮ ಪಾಲಿಗೆ ಅದೃಷ್ಟದ ಕ್ಷೇತ್ರ ಎಂದೂ ಸಿದ್ದರಾಮಯ್ಯ ಹೇಳಿದರು. ‘2013ರಲ್ಲಿ ನಾನು ಇಲ್ಲಿ 30 ಸಾವಿರ ಮತಗಳ ಅಂತರದಿಂದ ಗೆಲುವು ಸಾಧಿಸಿದೆ, ನಂತರ ಮುಖ್ಯಮಂತ್ರಿ ಯಾದೆ. ಕಳೆದ ವರ್ಷ ನಾನು 48 ಸಾವಿರಕ್ಕೂ ಹೆಚ್ಚಿನ ಮತಗಳ ಅಂತರದಿಂದ ಗೆಲುವು ಕಂಡೆ, ಎರಡನೆಯ ಬಾರಿಗೆ ಮುಖ್ಯಮಂತ್ರಿ ಆದೆ’ ಎಂದು ವಿವರಿಸಿದರು.

ಮಂಡ್ಯದಲ್ಲಿ ಮತದಾರರನ್ನು ಉದ್ದೇಶಿಸಿ ಶಿವಕುಮಾರ್ ಮಾತನಾಡಿದರು. ‘ಒಂದು ವಿಷಯ ಹೇಳಬೇಕು. ಮಂಡ್ಯದಲ್ಲಿ ಅತ್ಯಂತ ಹೆಚ್ಚಿನ ಸಂಖ್ಯೆಯ ಸ್ಥಾನಗಳನ್ನು ನೀವು ಕಾಂಗ್ರೆಸ್ಸಿಗೆ (ವಿಧಾನಸಭಾ ಚುನಾವಣೆಯಲ್ಲಿ) ನೀಡಿದಾಗ ನಿಮ್ಮ ಮನಸ್ಸಿನಲ್ಲಿ ಇದ್ದಿದ್ದು ನಾನು. ನಿಮ್ಮ ಹಾರೈಕೆಯು ನಿರರ್ಥಕವಾಗುವುದಿಲ್ಲ. ಅದರ ಬಗ್ಗೆ ಚಿಂತೆ ಬೇಡ’ ಎಂದರು.

ಹಳೆ ಮೈಸೂರು ಪ್ರಾಂತ್ಯದಲ್ಲಿ ಪ್ರಾಬಲ್ಯ ಹೊಂದಿರುವ ಒಕ್ಕಲಿಗ ಸಮುದಾಯದ ಬೆಂಬಲವನ್ನು ಸೋಮವಾರದ ಭಾಷಣದಲ್ಲಿ ಕೋರಿದ ಶಿವಕುಮಾರ್ ಅವರು, ‘ಕಾಂಗ್ರೆಸ್ ಪಕ್ಷವು ಎಂಟು ಮಂದಿ ಒಕ್ಕಲಿಗರನ್ನು ಹಾಗೂ ಆರು ಮಂದಿ ಮಹಿಳೆಯರನ್ನು ಕಣಕ್ಕೆ ಇಳಿಸಿದೆ. ಕರ್ನಾಟಕ ಪ್ರದೇಶ ಕಾಂಗ್ರೆಸ್ಸಿನ ಅಧ್ಯಕ್ಷನಾಗಿ ನಾನು ಈ ದೊಡ್ಡ ತೀರ್ಮಾನ ಕೈಗೊಂಡಿದ್ದೇನೆ’ ಎಂದು ಹೇಳಿದರು.

ರಾಜ್ಯದಲ್ಲಿ ಕಾಂಗ್ರೆಸ್ ದೊಡ್ಡ ಜಯ ಸಾಧಿಸಿದರೆ ತಮ್ಮ ತಂದೆ ಸಿದ್ದರಾಮಯ್ಯ ಅವರು ಐದು ವರ್ಷ ಯಾವ ಅಡ್ಡಿಯೂ ಇಲ್ಲದೆ ಮುಖ್ಯಮಂತ್ರಿಯಾಗಿ ಮುಂದುವರಿಯಲು ಸಾಧ್ಯವಾಗುತ್ತದೆ ಎಂದು ಡಾ. ಯತೀಂದ್ರ ಅವರು ಈಚೆಗೆ ಹೇಳಿದ್ದರು. ಕಾಂಗ್ರೆಸ್ ಸರ್ಕಾರ ರಚನೆಯಾಗುವ ಸಂದರ್ಭದಲ್ಲಿ ಶಿವಕುಮಾರ್ ಹಾಗೂ ಸಿದ್ದರಾಮಯ್ಯ ನಡುವೆ ಅಧಿಕಾರ ಹಂಚಿಕೆಯ ಸೂತ್ರವೊಂದನ್ನು ರೂಪಿಸಲಾಗಿದೆ. ಅದರ ಅನ್ವಯ, ಮುಖ್ಯಮಂತ್ರಿ ಹುದ್ದೆಯನ್ನು ಇವರಿಬ್ಬರೂ ತಲಾ ಎರಡೂವರೆ ವರ್ಷ ನಿರ್ವಹಿಸಲಿದ್ದಾರೆ ಎಂಬ ಮಾತುಗಳು ಇವೆ.

‘ಅಧಿಕಾರ ಕಳೆದುಕೊಳ್ಳುವ ಭಯ?’

ಬೆಂಗಳೂರು: ‘ವರುಣ ಕ್ಷೇತ್ರದಲ್ಲಿ 60 ಸಾವಿರ ಮತಗಳ ಲೀಡ್ ನೀಡದೇ ಇದ್ದರೆ ತಾವು ಅಧಿಕಾರ ಕಳೆದುಕೊಳ್ಳ ಬೇಕಾಗುತ್ತದೆ ಎಂದು ಹೇಳಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಯಾರ ಭಯ ಕಾಡಿದೆ’ ಎಂದು ಬಿಜೆಪಿ ಪ್ರಧಾನ ಕಾರ್ಯದರ್ಶಿ ವಿ.ಸುನಿಲ್‌ಕುಮಾರ್ ಪ್ರಶ್ನಿಸಿದ್ದಾರೆ.

‘ಸಿದ್ದರಾಮಯ್ಯ ಅವರೇ ನಿಮಗೆ ಯಾರ ಭಯ? ಹೈಕಮಾಂಡ್‌ನದ್ದೋ, ಶಿವಕುಮಾರ್ ಅವರದ್ದೋ ಅಥವಾ ಶಾಸಕರದ್ದೋ? ನಿಮಗೆ ನಿಮ್ಮ ಅಧಿಕಾರದ ಬಗ್ಗೆಯೇ ಗ್ಯಾರಂಟಿ ಇಲ್ಲ. ಇನ್ನು ಜನತೆಗೆ ಯಾವ ಗ್ಯಾರಂಟಿ ಕೊಡುತ್ತೀರಿ ಎನ್ನುವುದನ್ನು ನಾಡಿಗೆ ಸ್ಪಷ್ಟಪಡಿಸಿ’ ಎಂದಿದ್ದಾರೆ.

ಯಡಿಯೂರಪ್ಪ ಗಾಡ್‌ಫಾದರ್ ಎಂದ ರಘುಚಂದ್ರನ್

ಚಂದ್ರಪ್ಪ ಜತೆ ಸಂಧಾನ ಯಶಸ್ವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗ ಕ್ಷೇತ್ರದಲ್ಲಿ ಬಂಡಾಯ ಎದ್ದಿದ್ದ ಹೊಳಲ್ಕೆರೆ ಶಾಸಕ ಎಂ.ಚಂದ್ರಪ್ಪ ಅವರನ್ನು ಸಮಾಧಾನಗೊಳಿಸುವಲ್ಲಿ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಮತ್ತು ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಯಶಸ್ವಿಯಾಗಿದ್ದಾರೆ.

ತಮ್ಮ ಪುತ್ರ ರಘುಚಂದನ್ ಅವರನ್ನು ಕಣಕ್ಕೆ ಇಳಿಸಲು ಮುಂದಾಗಿದ್ದ ಚಂದ್ರಪ್ಪ ಅವರು ಆ ಪ್ರಯತ್ನವನ್ನು ಕೈಬಿಟ್ಟಿದ್ದು, ಪಕ್ಷದ ಅಭ್ಯರ್ಥಿ ಗೋವಿಂದ ಕಾರಜೋಳ ಅವರನ್ನು ಗೆಲ್ಲಿಸಲು ಕೆಲಸ ಮಾಡಲು ಒಪ್ಪಿಕೊಂಡಿದ್ದಾರೆ.

ಶಾಸಕ ಎಂ. ಚಂದ್ರಪ್ಪ ಮತ್ತು ಅವರ ಬೆಂಬಲಿಗರು ಯಡಿಯೂರಪ್ಪ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು. ಈ ಸಂದರ್ಭದಲ್ಲಿ ಬಿ.ವೈ.ವಿಜಯೇಂದ್ರ ಅವರೂ ಇದ್ದರು.

ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಅವರು ತಮ್ಮ ನಿವಾಸದಲ್ಲಿ ಹೊಳಲ್ಕೆರೆ ಶಾಸಕ ಎಂ.ಚಂದ್ರಪ್ಪ ಮತ್ತು ಅವರ ಬೆಂಬಲಿಗರ ಜತೆ ಮಾತುಕತೆ ನಡೆಸಿದರು. ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ರಘುಚಂದನ್ ಅವರೂ ಇದ್ದರು.

ಸಭೆಯ ಬಳಿಕ ಮಾತನಾಡಿದ ಚಂದ್ರಪ್ಪ ಅವರು, ‘ನನ್ನ ಮಗ ಪಕ್ಷೇತರನಾಗಿ ಸ್ಪರ್ಧಿಸುವುದಿಲ್ಲ. ಯಡಿಯೂರಪ್ಪ ಮತ್ತು ವಿಜಯೇಂದ್ರ ನಮಗೆ ಯಾವತ್ತೂ ಅನ್ಯಾಯ ಮಾಡಿಲ್ಲ. ಅವರು ನನ್ನೊಂದಿಗೆ ಮತ್ತು ಬೆಂಬಲಿಗರ ಜತೆ ಮಾತನಾಡಿದ್ದಾರೆ. ಅವರ ಮಾತಿಗೆ ಬೆಲೆ ಕೊಟ್ಟು ಪಕ್ಷೇತರನಾಗಿ ಕಣಕ್ಕೆ ಇಳಿಯುವುದಿಲ್ಲ. ಗೋವಿಂದ ಕಾರಜೋಳ ಪರವಾಗಿ ಪ್ರಚಾರದಲ್ಲಿ ಭಾಗಿಯಾಗುತ್ತೇವೆ. ನನ್ನ ಮಗನಿಗೆ ಮುಂದೆ ಉತ್ತಮ ಅವಕಾಶ ಸಿಗುವ ವಿಶ್ವಾಸವಿದೆ’ ಎಂದರು. ರಘುಚಂದನ್ ಮಾತನಾಡಿ, ಯಡಿಯೂರಪ್ಪ ನಮ್ಮ ಗಾಡ್‌ಫಾದರ್, ತಂದೆ ಸ್ಥಾನದಲ್ಲಿರುವ ಅವರ ಮಾತನ್ನು ಕೇಳುತ್ತೇವೆ’ ಎಂದರು.

ಗ್ಯಾರಂಟಿ ಆಮಿಷ ಆಕ್ಷೇಪ ವಿಚಾರಣೆ ಮುಂದೂಡಿಕೆ

ಬೆಂಗಳೂರು: ‘ಚುನಾವಣೆ ವೇಳೆ ಮತದಾರರಿಗೆ ಗ್ಯಾರಂಟಿ ಭಾಗ್ಯಗಳ ಆಮಿಷವೊಡ್ಡಿ ಮತ ಪಡೆಯುವ ರಾಜಕೀಯ ಪಕ್ಷಗಳ ಮಾದರಿಗೆ ಕರ್ನಾಟಕ ರಾಜ್ಯ ಅವಕಾಶ ಮಾಡಿಕೊಟ್ಟಿದ್ದು, ಇಂತಹ ನಡೆ ಮರುಕಳಿಸದಂತೆ ಕ್ರಮ ಕೈಗೊಳ್ಳಲು ಚುನಾವಣಾ ಆಯೋಗಕ್ಕೆ ನಿರ್ದೇಶಿಸಬೇಕು’ ಎಂದು ಕೋರಲಾದ ಅರ್ಜಿಗೆ ಸಂಬಂಧಿಸಿದಂತೆ ಎರಡು ವಾರಗಳಲ್ಲಿ ಆಕ್ಷೇಪಣೆ ಸಲ್ಲಿಸಿ’ ಎಂದು ಹೈಕೋರ್ಟ್ ಚುನಾವಣಾ ಆಯೋಗಕ್ಕೆ ನಿರ್ದೇಶಿಸಿದೆ.

ಈ ಸಂಬಂಧ ಜೆಡಿಎಸ್ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಎಂ.ಗೌತಮ ಗೌಡ, ಕೆ.ಆರ್.ಪ್ರಸಾದ್ ಮತ್ತು ಎ.ಮಂಜುನಾಥ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ಚುನಾವಣಾ ಆಯೋಗದ ಪರ ವಕೀಲರು ಹಾಜರಾಗಿ, ಅರ್ಜಿಗೆ ಆಕ್ಷೇಪಣೆ ಸಲ್ಲಿಸಲು ಕಾಲಾವಕಾಶ ನೀಡಬೇಕು ಎಂದು ಕೋರಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ಎರಡು ವಾರಗಳ ಕಾಲಾವಕಾಶ ನೀಡಿ ವಿಚಾರಣೆ ಮುಂದೂಡಿತು.

ಮನವಿ ಏನಿದೆ?: ‘ಚಾಲ್ತಿಯಲ್ಲಿರುವ ಕಾನೂನುಗಳನ್ನು ಪುನರ್ ಪರಿಶೀಲನೆಗೆ ಒಳಪಡಿಸಬೇಕು. ಮಾದರಿ ಚುನಾವಣಾ ನೀತಿ ಸಂಹಿತೆಗೆ ಸೂಕ್ತ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸಬೇಕು. ಯಾರು ಆಧುನಿಕ ತಂತ್ರಜ್ಞಾನ ಬಳಸಿ ಇಂತಹ ಗ್ಯಾರಂಟಿ ಆಮಿಷಗಳನ್ನು ಒಡ್ಡುತ್ತಾರೆಯೊ ಅವರನ್ನು ಜನಪ್ರತಿನಿಧಿಗಳ ಕಾಯ್ದೆ ಅನುಸಾರ ಮತ್ತು ಭಾರತೀಯ ದಂಡ ಸಂಹಿತೆಯ ಕಲಂಗಳಡಿ ಶಿಕ್ಷಿಸಲು ನಿರ್ದೇಶಿಸಬೇಕು’ ಎಂದು ಅರ್ಜಿದಾರರು ಮನವಿ ಮಾಡಿದ್ದಾರೆ.

ಅಮಿತ್ ಶಾ ವಿರುದ್ಧ ಹೇಳಿಕೆ: ಯತೀಂದ್ರಗೆ ನೋಟಿಸ್

ಚಾಮರಾಜನಗರ: ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಗೂಂಡಾ, ರೌಡಿ ಎಂದು ಕರೆದ ಪ್ರಕರಣಕ್ಕೆ ಸಂಬಂಧಿಸಿ ಕಾಂಗ್ರೆಸ್‌ನ ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಅವರಿಗೆ ಜಿಲ್ಲಾ ಚುನಾವಣಾಧಿಕಾರಿ ಶಿಲ್ಪಾ ನಾಗ್ ನೋಟಿಸ್ ಜಾರಿ ಮಾಡಿದ್ದಾರೆ.

ಹೇಳಿಕೆ ಬಗ್ಗೆ ವಿವರಣೆ ನೀಡುವಂತೆ ಸೂಚಿಸಿ ನೋಟಿಸ್ ಜಾರಿ ಮಾಡಿರುವುದನ್ನು ದೃಢಪಡಿಸಿರುವ ಶಿಲ್ಪಾ ನಾಗ್, ‘ಫ್ಲೈಯಿಂಗ್ ಸ್ಕ್ವಾಡ್, ಸ್ಥಳೀಯ ಚುನಾವಣಾಧಿಕಾರಿ ಮತ್ತು ಮಾದರಿ ನೀತಿ ಸಂಹಿತೆ ಜಾರಿ ನೋಡೆಲ್ ಅಧಿಕಾರಿ ನೀಡಿರುವ ವರದಿಗಳ ಆಧಾರದಲ್ಲಿ ನೋಟಿಸ್ ನೀಡಲಾಗಿದೆ’ ಎಂದರು. ಜಿಲ್ಲೆಯ ಹನೂರಿನಲ್ಲಿ ಇತ್ತೀಚೆಗೆ ನಡೆದ ಸಭೆಯಲ್ಲಿ ಕೇಂದ್ರದ ವಿರುದ್ಧ ವಾಗ್ದಾಳಿ ನಡೆಸಿದ್ದ ಯತೀಂದ್ರ ಅವರು ಅಮಿತ್ ಶಾ ವಿರುದ್ಧ ಹರಿಹಾಯ್ದಿದ್ದರು. ಆ ವೇಳೆ, ‘ಅವರೊಬ್ಬ, ಗೂಂಡಾ, ರೌಡಿ. ಗುಜರಾತ್‌ನಲ್ಲಿ ಅವರ ಮೇಲೆ ಕೊಲೆ ಪ್ರಕರಣಗಳಿವೆ. ಅಂತಹವರು ದೇಶದ ಉನ್ನತ ಸ್ಥಾನದಲ್ಲಿದ್ದಾರೆ’ ಎಂದು ಟೀಕಿಸಿದ್ದರು.

ಬಿಎಸ್‌ವೈ ವಿರುದ್ಧ ಪೋಕ್ಸೊ: ಬಾಲಕಿ ಹೇಳಿಕೆ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರ ವಿರುದ್ಧ ದಾಖಲಾಗಿರುವ ಪೋಕ್ಸೊ ಪ್ರಕರಣದ ತನಿಖೆ ನಡೆಸುತ್ತಿರುವ ಸಿಐಡಿ ಅಧಿಕಾರಿಗಳು, ಸಂತ್ರಸ್ತ ಬಾಲಕಿಯಿಂದ ಸಿಆರ್‌ಪಿಸಿ 164 ಅಡಿ ಹೇಳಿಕೆ ದಾಖಲಿಸಿಕೊಂಡಿದ್ದಾರೆ.

ಹದಿನೇಳು ವರ್ಷ ವಯಸ್ಸಿನ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ ಆರೋಪದ ಅಡಿಯಲ್ಲಿ ಬಿ.ಎಸ್. ಯಡಿಯೂರಪ್ಪ ವಿರುದ್ಧ ಸದಾಶಿವನಗರ ಠಾಣೆಯಲ್ಲಿ ಮಾರ್ಚ್ 14ರಂದು ಎಫ್‌ಐಆರ್ ದಾಖಲಾಗಿತ್ತು. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆಯಡಿ ದಾಖಲಾದ ಪ್ರಕರಣ ಇದಾಗಿದ್ದರಿಂದ, ನ್ಯಾಯಾಧೀಶರ ಎದುರು ಬಾಲಕಿಯಿಂದ ಹೇಳಿಕೆ ದಾಖಲಿಸುವ ಪ್ರಕ್ರಿಯೆ ನಡೆಸಲಾಗಿದೆ.

‘ರಾಜ್ಯ ಸರ್ಕಾರ ಆದೇಶ ಹೊರಡಿಸುತ್ತಿದ್ದಂತೆ, ಪ್ರಕರಣದ ತನಿಖೆಯನ್ನು ಕೈಗೆತ್ತಿಕೊಳ್ಳಲಾಗಿದೆ. ಸಂತ್ರಸ್ತ ಬಾಲಕಿಯಿಂದ ನ್ಯಾಯಾಧೀಶರ ಎದುರು ಹೇಳಿಕೆ ದಾಖಲಿಸಿಕೊಂಡು, ತನಿಖೆಯನ್ನು ಮುಂದುವರಿಸಲಾಗಿದೆ. ಬಾಲಕಿಯ ತಾಯಿಯಿಂದಲೂ ವಿವರಗಳನ್ನು ಪಡೆಯಲಾಗಿದ್ದು, ತನಿಖೆ ಮುಂದುವರಿಸಲಾಗಿದೆ’ ಎಂದು ಮೂಲಗಳು ಹೇಳಿವೆ.

ಕಾನೂನು ತಜ್ಞರ ಸಲಹೆ: ‘ಇದೊಂದು ಬಾಲಕಿಗೆ ಸಂಬಂಧಪಟ್ಟ ಸೂಕ್ಷ್ಮ ಪ್ರಕರಣ. ಹೀಗಾಗಿ, ಕಾನೂನು ತಜ್ಞರ ಅಭಿಪ್ರಾಯ ಪಡೆದು ತನಿಖೆ ಮುಂದುವರಿಸಲಾಗುತ್ತಿದೆ. ಎಲ್ಲ ಬಗೆಯ ಪುರಾವೆಗಳನ್ನು ಡಡಸಂಗ್ರಹಿಸುವ ಕೆಲಸವೂ ನಡೆದಿದೆ’ ಎಂದು ಮೂಲಗಳು ತಿಳಿಸಿವೆ.

ರಸ್ತೆಯಲ್ಲೇ ಇಫ್ತಾರ್ ಕೂಟ: ಸ್ಪಷ್ಟನೆ ಕೇಳಿದ ಎಆರ್‌ಒ

ಮಂಗಳೂರು: ‘ಆಟೊ ರಾಜಾಕನ್ನಾರ್’ ಜಿಲ್ಲಾ ಆಟೊ ಚಾಲಕರ ಸಂಘಟನೆಯು ಉಳ್ಳಾಲ ತಾಲ್ಲೂಕಿನ ಮುಡಿಪು ಜಂಕ್ಷನ್‌ನಲ್ಲಿ ಶುಕ್ರವಾರ ಇಫ್ತಾರ್ ಕೂಟವನ್ನು ರಸ್ತೆಯಲ್ಲೇ ಹಮ್ಮಿಕೊಂಡಿತ್ತು ಎಂಬ ದೂರಿನ ಕುರಿತು ಸಹಾಯಕ ಚುನಾವಣಾಧಿಕಾರಿ (ಎಆರ್‌ಒ) ಹರ್ಷವರ್ಧನ್ ಸ್ಪಷ್ಟನೆ ಕೇಳಿದ್ದಾರೆ.

‘ಅನುಮತಿ ಪಡೆದೇ ಇಫ್ತಾರ್ ಕೂಟ ಆಯೋಜಿಸಲಾಗಿತ್ತು. ರಸ್ತೆಯಲ್ಲಿ ಕಾರ್ಯಕ್ರಮ ಆಯೋಜಿಸಿದ್ದರಿಂದ ವಾಹನ ಸಂಚಾರಕ್ಕೆ ಅಡ್ಡಿ ಉಂಟಾಗಿತ್ತು ಎಂದು ದೂರು ಬಂದಿದ್ದರಿಂದ ಸಂಘಟಕರಿಂದ ಎಆರ್‌ಒ ಸ್ಪಷ್ಟನೆ ಕೇಳಿದ್ದಾರೆ’ ಎಂದು ಜಿಲ್ಲಾ ಚುನಾವಣಾಧಿಕಾರಿ ಮುಲ್ಲೈ ಮುಗಿಲನ್ ಎಂ.ಪಿ. ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು. ಇಫ್ತಾರ್ ಕೂಟದ ವಿಡಿಯೊಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದ್ದವು. ‘ಈ ಇಫ್ತಾರ್ ಕೂಟದಿಂದ ಚುನಾವಣಾ ನೀತಿ ಸಂಹಿತೆ ಉಲ್ಲಂಘನೆಯಾಗಿದೆ’ ಎಂದು ಆರೋಪಿಸಿ ಮುಡಿಪು ವಲಯದ ಹಿಂದೂ ಜಾಗರಣ ವೇದಿಕೆಯು ಎಆರ್‌ಒಗೆ ದೂರು ನೀಡಿತ್ತು.

ವೇದಿಕೆಯಲ್ಲಿ ಕಾಣಿಸದ ರಾಜಕೀಯ ಮುಖಂಡರು

ಶಿವಕುಮಾರ ಸ್ವಾಮೀಜಿ ಸ್ಮರಣೆ

ಪ್ರಜಾವಾಣಿ ವಾರ್ತೆ

ತುಮಕೂರು: ಸಿದ್ಧಗಂಗಾ ಮಠದ ಶಿವಕುಮಾರ ಸ್ವಾಮೀಜಿ 117ನೇ ವರ್ಷದ ಜಯಂತಿ ಹಾಗೂ ಗುರುವಂದನಾ ಕಾರ್ಯಕ್ರಮವನ್ನು ಮಠದಲ್ಲಿ ಸೋಮವಾರ ಆಚರಿಸಲಾಯಿತು.

ಲೋಕಸಭೆ ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿ ಇರುವುದರಿಂದ ಯಾವುದೇ ರಾಜಕೀಯ ಮುಖಂಡರಿಗೆ ವೇದಿಕೆಗೆ ಆಹ್ವಾನ ಇರಲಿಲ್ಲ. ವಿವಿಧ ಮಠಾಧೀಶರ ಸಮ್ಮುಖದಲ್ಲಿ ಸ್ವಾಮೀಜಿಗೆ ಗುರುವಂದನೆ ಸಲ್ಲಿಸಲಾಯಿತು.

ಬೆಳಗ್ಗೆಯಿಂದಲೇ ಮಠದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮ ಆರಂಭವಾದವು. ಶಿವಕುಮಾರ ಸ್ವಾಮೀಜಿ ಗದ್ದುಗೆಗೆ ಪೂಜೆ ಸಲ್ಲಿಸುವ ಮೂಲಕ ಜಯಂತಿ ಆಚರಣೆಗೆ ಚಾಲನೆ ನೀಡಲಾಯಿತು.

ಬಾಬಾ ರಾಮದೇವ್ 117 ದೀಪ ಬೆಳಗುವ ಮೂಲಕ ಶಿವಕುಮಾರ ಸ್ವಾಮೀಜಿ 117ನೇ ವರ್ಷದ ಜಯಂತಿಗೆ ಚಾಲನೆ ನೀಡಿದರು. ಸ್ವಾಮೀಜಿ ಹಾಗೂ ತಮ್ಮ ನಡುವಿನ ಸಂಬಂಧ ಮೆಲುಕು ಹಾಕಿದರು. ಸ್ವಾಮೀಜಿ ನಿಧನರಾದ ಸಮಯದಲ್ಲಿ ಮುಂದೆ ನಿಂತು ವಿಧಿವಿಧಾನ ನಡೆಸಿಕೊಟ್ಟಿದ್ದನ್ನು ನೆನಪಿಸಿಕೊಂಡರು.

ಶಿವಕುಮಾರ ಸ್ವಾಮೀಜಿ ನಡೆಸಿಕೊಂಡು ಬಂದ ತ್ರಿವಿಧ ದಾಸೋಹದ ಬಗ್ಗೆ ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮೆಚ್ಚುಗೆ ವ್ಯಕ್ತಪಡಿಸಿದರು. ಸಮಾಜದಲ್ಲಿ ಏನೆಲ್ಲ ಆಗಬೇಕೆಂದು ಹಲವರು ಆಸೆ ಪಡುತ್ತಾರೆ. ಆದರೆ ಸನ್ಯಾಸಿಯಾಗಲು ಯಾರೂ ಮುಂದೆ ಬರುವುದಿಲ್ಲ. ಉತ್ತಮ ಸ್ವಾಮೀಜಿ ಆಗುವವರು ಈ ಸಮಾಜಕ್ಕೆ ಬೇಕಾಗಿದ್ದಾರೆ ಎಂದರು.

ಸಿದ್ಧಗಂಗಾ ಮಠಾಧ್ಯಕ್ಷ ಸಿದ್ಧಲಿಂಗ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಮುಂಡರಗಿ ಅನ್ನದಾನೇಶ್ವರ ಮಠದ ಅನ್ನದಾನೇಶ್ವರ ಸ್ವಾಮೀಜಿ, ಧಾರವಾಡ ಮುರುಘಾ ಮಠದ ಮಲ್ಲಿಕಾರ್ಜುನ ಸ್ವಾಮೀಜಿ, ಗದಗ ವೀರೇಶ್ವರ ಪುಣ್ಯಾಶ್ರಮದ ಕಲ್ಲಯ್ಯ ಅಜ್ಜ ಮೊದಲಾದವರು ಶಿವಕುಮಾರ ಸ್ವಾಮೀಜಿಯವರ ಸೇವೆಯನ್ನು ಸ್ಮರಿಸಿದರು.

ತುಮಕೂರಿನ ಸಿದ್ಧಗಂಗಾ ಮಠದಲ್ಲಿ ಸೋಮವಾರ ಶಿವಕುಮಾರ ಸ್ವಾಮೀಜಿ ಗದ್ದುಗೆಗೆ ಸಿದ್ಧಲಿಂಗ ಸ್ವಾಮೀಜಿ ಪೂಜೆ ಸಲ್ಲಿಸಿದರು. ಮಠದ ಉತ್ತರಾಧಿಕಾರಿ ಶಿವಸಿದ್ಧೇಶ್ವರ ಸ್ವಾಮೀಜಿ ಮೊದಲಾದವರು ಉಪಸ್ಥಿತರಿದ್ದರು

2016ರ ಪ್ರಕರಣ: ಪ್ರಮುಖ ಆರೋಪಿ ಗೌಸ್ ಎನ್‌ಐಎ ಕಸ್ಟಡಿ ಅಂತ್ಯ

‘ರುದ್ರೇಶ್ ಹತ್ಯೆ: ಧರ್ಮಯುದ್ಧದ ಭಾಗ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಕಾರ್ಯಕರ್ತ ಆರ್.ರುದ್ರೇಶ್ ಹತ್ಯೆ ಪ್ರಕರಣದ ಪ್ರಮುಖ ಆರೋಪಿ ಎನ್ನಲಾದ ಮಹಮ್ಮದ್ ಗೌಸ್ ನಯಾಜಿ ಅಲಿಯಾಸ್ ಗೌಸ್‌ನನ್ನು (41) ವಿಚಾರಣೆಗಾಗಿ ಕಸ್ಟಡಿಗೆ ಪಡೆದಿದ್ದ ಎನ್‌ಐಎ (ರಾಷ್ಟ್ರೀಯ ತನಿಖಾ ದಳ) ಅಧಿಕಾರಿಗಳು, ಕೊಲೆ ಸಂಬಂಧ ಮತ್ತಷ್ಟು ಮಾಹಿತಿ ಕಲೆ ಹಾಕಿದ್ದಾರೆ.

‘ಆರ್‌ಎಸ್‌ಎಸ್ ಮುಖಂಡರನ್ನು ಕೊಲೆ ಮಾಡುವುದು ಧರ್ಮಯುದ್ಧವೆಂದು ಗೌಸ್ ಹಾಗೂ ಇತರೆ ಆರೋಪಿಗಳು ಭಾವಿಸಿದ್ದರು. ಈ ಧರ್ಮಯುದ್ಧದ ಭಾಗವಾಗಿಯೇ ರುದ್ರೇಶ್ ಹತ್ಯೆ ಮಾಡಿರುವುದಾಗಿ ಆರೋಪಿಗಳು ಹೇಳಿಕೊಂಡಿದ್ದಾರೆ’ ಎಂದು ತನಿಖಾ ಸಂಸ್ಥೆ ಮೂಲಗಳು ಹೇಳಿವೆ.

ಮೊಹಮ್ಮದ್ ಗೌಸ್ ನಯಾಜಿ

‘ಹತ್ಯೆ ಪ್ರಕರಣದಲ್ಲಿ ಹಲವರು ಭಾಗಿಯಾಗಿದ್ದ ಬಗ್ಗೆ ಅನುಮಾನವಿತ್ತು. ಹೀಗಾಗಿ, ಗೌಸ್‌ನನ್ನು ಕಸ್ಟಡಿಗೆ ಪಡೆಯಲಾಗಿತ್ತು. ಈತನ ವಿಚಾರಣೆಯಿಂದ ಕೆಲ ಪುರಾವೆಗಳನ್ನು ಕಲೆಹಾಕಲಾಗಿದೆ’ ಎಂದು ತಿಳಿಸಿವೆ.

ಮುಂಬೈ ನಿಲ್ದಾಣದಲ್ಲಿ ಸಿಕ್ಕಿಬಿದ್ದಿದ್ದ: ‘ಕಮರ್ಷಿಯಲ್ ಸ್ಟ್ರೀಟ್ ಠಾಣೆ ವ್ಯಾಪ್ತಿಯಲ್ಲಿ 2016ರ ಅಕ್ಟೋಬರ್ 16ರಂದು ಆರ್. ರುದ್ರೇಶ್ ಅವರನ್ನು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಲಾಗಿತ್ತು. ಈ ಸಂಬಂಧ ಸ್ಥಳೀಯ ಪೊಲೀಸರು ತನಿಖೆ ನಡೆಸಿದ್ದರು. ಬಳಿಕ, ತನಿಖೆ ಹೊಣೆಯನ್ನು ಎನ್‌ಐಎ ಅಧಿಕಾರಿಗಳಿಗೆ ವಹಿಸಲಾಗಿತ್ತು’ ಎಂದು ಮೂಲಗಳು ತಿಳಿಸಿವೆ.

‘ಪ್ರಕರಣದ ಬಹುತೇಕ ಆರೋಪಿಗಳನ್ನು ಎನ್‌ಐಎ ಅಧಿಕಾರಿಗಳು ಬಂಧಿಸಿದ್ದರು. ಪ್ರಕರಣ ದಾಖಲಾಗುತ್ತಿದ್ದ ತಲೆಮರೆಸಿಕೊಂಡಿದ್ದ ಮಹಮ್ಮದ್ ಗೌಸ್ ನಯಾಜಿ, ನಗರ ತೊರೆದು ತಾಂಜೇನಿಯಾದಲ್ಲಿ ತಲೆಮರೆಸಿಕೊಂಡಿದ್ದ. ಈತನ ಸುಳಿವು ನೀಡಿದವರಿಗೆ ₹ 5 ಲಕ್ಷ ನಗದು ಬಹುಮಾನವನ್ನೂ ಘೋಷಿಸಲಾಗಿತ್ತು. ಮಾರ್ಚ್ 2ರಂದು ಮುಂಬೈ ನಿಲ್ದಾಣಕ್ಕೆ ಬಂದಿದ್ದ ಈತನನ್ನು ಅಧಿಕಾರಿಗಳು ಬಂಧಿಸಿದ್ದರು’ ಎಂದು ಹೇಳಿವೆ.

‘ಬಂಧಿತ ಗೌಸ್‌ನನ್ನು ಆರಂಭದಲ್ಲಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿತ್ತು. ಪ್ರಕರಣದ ಮತ್ತಷ್ಟು ವಿಚಾರಣೆ ಅಗತ್ಯವಿದ್ದಿದ್ದರಿಂದ ಮಾರ್ಚ್ 28ರಂದು ಕಸ್ಟಡಿಗೆ ಪಡೆಯಲಾಗಿತ್ತು. ಏಪ್ರಿಲ್ 1ರಂದು ಕಸ್ಟಡಿ ಅವಧಿ ಮುಗಿದಿದ್ದು, ಈತನನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗುವುದು’ ಎಂದು ಮೂಲಗಳು ತಿಳಿಸಿವೆ.

ಬಂಡಾಯ ಶಮನಕ್ಕೆ ಶಾ ಪ್ರವೇಶ

ಒಂದನೇ ಪುಟದಿಂದ...

ಬೆಳಿಗ್ಗೆ ವೆಸ್ಟ್‌ಎಂಡ್ ಹೋಟೆಲ್‌ನಲ್ಲಿ ಬಿಜೆಪಿ– ಜೆಡಿಎಸ್ ನಾಯಕರ ಸಮನ್ವಯ ಸಮಿತಿ ಸಭೆಯೂ ನಡೆಯಲಿದೆ. ಆ ಬಳಿಕ ಶಾ ಅವರು ಬೆಳಿಗ್ಗೆ 11 ಗಂಟೆಗೆ ಬೆಂಗಳೂರು ಅರಮನೆ ಮೈದಾನದಲ್ಲಿ ಕಾರ್ಯಕರ್ತರ ಸಮಾವೇಶದಲ್ಲಿ ಭಾಗಹಿಸಲಿದ್ದಾರೆ. ‘ಇದರಲ್ಲಿ ಸುಮಾರು 5 ಸಾವಿರ ಕಾರ್ಯಕರ್ತರು ಭಾಗವಹಿಸಲಿದ್ದು, ನೇರವಾಗಿ ಐದು ಲೋಕಸಭಾ ಕ್ಷೇತ್ರಗಳ ಕಾರ್ಯಕರ್ತರ ಜತೆ ಮಾತುಕತೆ ನಡೆಸಲಿದ್ದಾರೆ’ ಎಂದು ಬಿಜೆಪಿ ಚುನಾವಣಾ ನಿರ್ವಹಣಾ ಸಮಿತಿ ಸಂಚಾಲಕ ವಿ.ಸುನಿಲ್‌ಕುಮಾರ್ ತಿಳಿಸಿದರು.

‘ಘೋಡೋ ವಿರುದ್ಧ ಜೋಡೋ, ಇದು ಕರ್ನಾಟಕ ಚುನಾವಣೆಯ ಘೋಷಣೆ. ಕಳೆದ ಬಾರಿ ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ಬಿಜೆಪಿ ಹಿನ್ನಡೆ ಅನುಭವಿಸಿತ್ತು. ಈ ಬಾರಿ ಮೊದಲ ವಿಜಯ ಇಲ್ಲಿಂದಲೇ ಆರಂಭವಾಗಲಿದೆ. ಆ ಕಾರಣಕ್ಕಾಗಿ ಗ್ರಾಮಾಂತರ ಕ್ಷೇತ್ರದಿಂದಲೇ ಅಮಿತ್ ಶಾ ಪ್ರಚಾರ ಆರಂಭಿಸುತ್ತಿದ್ದಾರೆ’ ಎಂದು ಅವರು ವಿವರಿಸಿದರು.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
ಪರಿಸರ ಭವನ, ನಂ.49, ಚರ್ಚ್ ರಸ್ತೆ, ಬೆಂಗಳೂರು–560001
ದೂರವಾಣಿ : 080–25581383, ಫ್ಯಾಕ್ಸ್ : 080–25586321
No. PCB 206 INFRA EPH 2023/6536 Date: 30/03/2024
ಪರಿಸರ ಸಾರ್ವಜನಿಕ ಸಭೆಯನ್ನು ಮುಂದೂಡಿರುವ ಬಗ್ಗೆ ಸೂಚನೆ
ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯವರು ಬಳ್ಳಾರಿ ಜಿಲ್ಲೆ, ಬಳ್ಳಾರಿ ತಾಲ್ಲೂಕು, ಕುಡುತಿನಿ ಗ್ರಾಮ ಇಲ್ಲಿ ಕುಡುತಿನಿ ಕೈಗಾರಿಕಾ ಪ್ರದೇಶ, 2ನೇ ಹಂತವನ್ನು ಅಭಿವೃದ್ಧಿ ಪಡಿಸಲು ಉದ್ದೇಶಿಸಿರುತ್ತಾರೆ. ಸದರಿ ಪ್ರಸ್ತಾಪಿತ ಯೋಜನೆಗೆ ಸಂಬಂಧಿಸಿದಂತೆ, ದಿನಾಂಕ: 02.04.2024ರ ಬೆಳಿಗ್ಗೆ 11.00 ಗಂಟೆಗೆ ಯೋಜನಾ ಸ್ಥಳ ಕುಡುತಿನಿ ಗ್ರಾಮ, ಕುಡುತಿನಿ ಕೈಗಾರಿಕಾ ಪ್ರದೇಶ, 2ನೇ ಹಂತ, ಬಳ್ಳಾರಿ ತಾಲ್ಲೂಕು, ಬಳ್ಳಾರಿ ಜಿಲ್ಲೆ ಇಲ್ಲಿ ಏರ್ಪಡಿಸಲಾಗಿದ್ದ ಪರಿಸರ ಸಾರ್ವಜನಿಕ ಸಭೆಯನ್ನು ಮಾನ್ಯ ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆರವರ ಆದೇಶದ ಮೇರೆಗೆ ಮುಂದೂಡಲಾಗಿದೆ.
ಸಹಿ/–
ಸದಸ್ಯ ಕಾರ್ಯದರ್ಶಿಗಳು

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಹೊರಗಿನ ಅಲಂಕಾರಕ್ಕಿಂತ ಒಳಗಿನ ಗುಣ ಮುಖ್ಯ. ವಿಷ ತುಂಬಿದ ಚಿನ್ನದ ಪಾತ್ರೆಗಿಂತ ಜೇನು ತುಂಬಿದ ಮಣ್ಣಿನ ಮಡಕೆ ಹೆಚ್ಚು ಮೌಲ್ಯಯುತ.

–ಗೌತಮ ಬುದ್ಧ

ಆಹಾರ ಪೋಲು ಸಮಸ್ಯೆ ಗಂಭೀರ ನಿವಾರಣೆಗೆ ಬೇಕು ಸಮನ್ವಯದ ಯತ್ನ

ವಿಶ್ವಸಂಸ್ಥೆ ಬಿಡುಗಡೆ ಮಾಡಿರುವ 'ಆಹಾರ ಪೋಲು ಸೂಚ್ಯಂಕ' ವರದಿಯು ಆಹಾರವನ್ನು ವ್ಯರ್ಥ ಮಾಡುತ್ತಿರುವುದಕ್ಕೆ ಸಂಬಂಧಿಸಿದ ಸಮಸ್ಯೆಯ ಕಡೆ ಮತ್ತೆ ಗಮನ ಸೆಳೆಯುವ ಕೆಲಸ ಮಾಡಿದೆ. ಈ ಸಮಸ್ಯೆಯು ಜಗತ್ತಿನ ಎಲ್ಲೆಡೆ ಗಂಭೀರ ಸ್ವರೂಪವನ್ನು ತಾಳುತ್ತಿದೆ. ವಿಶ್ವಸಂಸ್ಥೆಯ ಪರಿಸರ ಯೋಜನೆ (ಯುಎನ್‌ಇಪಿ) ಹಾಗೂ ಬ್ರಿಟನ್ ಮೂಲದ ಲಾಭದ ಉದ್ದೇಶವಿಲ್ಲದ ಸಂಸ್ಥೆಯೊಂದು ಸಿದ್ಧಪಡಿಸಿರುವ ವರದಿಯು 2022ರಲ್ಲಿ ಉತ್ಪಾದನೆಯಾದ ಆಹಾರ ಪದಾರ್ಥಗಳಲ್ಲಿ ಶೇಕಡ 19ರಷ್ಟು ವ್ಯರ್ಥವಾಗಿದೆ ಎಂದು ಹೇಳಿದೆ. ಅಂದರೆ, 10.50 ಸಾವಿರ ಕೋಟಿ ಟನ್ ಆಹಾರ ವ್ಯರ್ಥವಾಗಿದೆ. ಇದೇ ಅವಧಿಯಲ್ಲಿ ಜಗತ್ತಿನಾದ್ಯಂತ ಅಂದಾಜು 78.3 ಕೋಟಿ ಮಂದಿ ತೀವ್ರ ಹಸಿವಿನಿಂದ ನರಳಿದ್ದರು. ಆಹಾರವನ್ನು ಪೋಲು ಮಾಡುವುದು ಯಾವತ್ತಿನಿಂದಲೂ ಒಂದು ಗಂಭೀರ ಸಮಸ್ಯೆಯಾಗಿಯೇ ಉಳಿದಿದೆ. ವಿಶ್ವಸಂಸ್ಥೆಯು ಮಾರ್ಚ್ 30 ಅನ್ನು 'ಅಂತರರಾಷ್ಟ್ರೀಯ ಶೂನ್ಯ ವ್ಯರ್ಥ ದಿನ' ಎಂದು ಘೋಷಿಸಿದೆ. ವ್ಯರ್ಥವಾಗಿರುವ ಆಹಾರ ಪದಾರ್ಥಗಳ ಪ್ರಮಾಣವು ಪ್ರತಿ ವ್ಯಕ್ತಿಗೆ 132 ಕೆ.ಜಿ. ಆಗುತ್ತದೆ, ಇದು ಗ್ರಾಹಕರಿಗೆ ಲಭ್ಯವಿರುವ ಒಟ್ಟು ಆಹಾರ ಪದಾರ್ಥಗಳಲ್ಲಿ ಐದನೆಯ ಒಂದರಷ್ಟು ಎಂದು ವರದಿ ಹೇಳಿದೆ. ಆಹಾರ ಪೋಲು ಹೆಚ್ಚಿನ ಪ್ರಮಾಣದಲ್ಲಿ ಆಗುತ್ತಿರುವುದು ಮನೆಗಳ ಹಂತದಲ್ಲಿ.

ಬೆಳೆಯು ಕೃಷಿ ಜಮೀನಿನಿಂದ ಮನೆಗಳಿಗೆ ತಲುಪುವವರೆಗಿನ ಪ್ರತಿ ಹಂತದ ಮೇಲೂ ನಿಗಾ ಇರಿಸಬೇಕು. ಆಹಾರ ಪೋಲು ತಡೆ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕು

ವ್ಯರ್ಥವಾದ ಆಹಾರದ ಒಟ್ಟು ಪ್ರಮಾಣವು ವಿಶ್ವದ ಹಸಿವನ್ನು ಇಂಗಿಸಲು ಅಗತ್ಯವಿರುವುದಕ್ಕಿಂತ ನಾಲ್ಕು ಪಟ್ಟು ಹೆಚ್ಚು ಎಂದು ಅಂದಾಜು ಮಾಡಲಾಗಿದೆ. ಆಹಾರದ ಪೋಲನ್ನು ತಡೆದರೆ ಹಸಿವಿನ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದು ಎಂಬುದಷ್ಟೇ ಇಲ್ಲಿರುವ ಬಹುಮುಖ್ಯ ಅಂಶ ಅಲ್ಲ. ಏಕೆಂದರೆ, ಆಹಾರದ ಪೋಲು ಹಾಗೂ ಪರಿಸರದ ಮೇಲಿನ ದುಷ್ಪರಿಣಾಮದ ನಡುವೆ ನಂಟು ಇದೆ. ಆಹಾರ ಪೋಲಾಗುವುದು ಅಂದರೆ ಆಹಾರ ಉತ್ಪಾದನೆಗೆ ಬಳಸಿದ ನೀರು ಮತ್ತು ಜಮೀನು ಕೂಡ ವ್ಯರ್ಥವಾದಂತೆ. ಆಹಾರ ಪೋಲಾಗುವುದಕ್ಕೂ ಹಸಿರುಮನೆ ಪರಿಣಾಮವನ್ನು ಉಂಟುಮಾಡುವ ಅನಿಲಗಳ ಉತ್ಪಾದನೆಗೂ ನಂಟು ಇದೆ. ಆಹಾರ ಪೋಲಾಗುವ ಪ್ರಕ್ರಿಯೆಯು ಹಸಿರುಮನೆ ಪರಿಣಾಮ ಉಂಟುಮಾಡುವ ಅನಿಲಗಳ ಉತ್ಪಾದನೆಯಲ್ಲಿ ಶೇ 8ರಿಂದ ಶೇ 10ರಷ್ಟು ಪಾಲನ್ನು ಪಡೆದಿದೆ. ಜಾಗತಿಕ ಮಟ್ಟದಲ್ಲಿ ಸಾಗಾಟದ ಪ್ರಕ್ರಿಯೆಯು ಹೊರಸೂಸುವ ಅನಿಲಗಳ ಒಟ್ಟು ಪ್ರಮಾಣ ಕೂಡ ಇಷ್ಟೇ ಇರುತ್ತದೆ. ಹೀಗಾಗಿ, ಆಹಾರ ಪೋಲಾಗುವುದನ್ನು ತಡೆದಲ್ಲಿ ಆಹಾರ ಭದ್ರತೆಯನ್ನು ಖಾತರಿಪಡಿಸಲು ಸಾಧ್ಯವಾಗುತ್ತದೆ, ಎಲ್ಲ ದೇಶಗಳ ಅರ್ಥ ವ್ಯವಸ್ಥೆಗೆ ಒಂದಿಷ್ಟು ಬಲ ಸಿಗುತ್ತದೆ, ಹವಾಮಾನ ಬದಲಾವಣೆಯ ಸಮಸ್ಯೆಯನ್ನು ಎದುರಿಸಲು ನೆರವಾಗುತ್ತದೆ. ಇದು ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಗುರಿಗಳ ಪೈಕಿ ಒಂದು.

ಹೆಚ್ಚಿನ ತಲಾವಾರು ಆದಾಯ ಇರುವ ದೇಶಗಳಲ್ಲಿನ ಆಹಾರದ ಪೂರೈಕೆ ಹಾಗೂ ಬಳಕೆಯ ಕ್ರಮವು ಆಹಾರ ವ್ಯರ್ಥವಾಗುವುದಕ್ಕೆ ಹೆಚ್ಚು ಕಾರಣವಾಗುವಂತೆ ಇದೆ. ಕಡಿಮೆ ತಲಾವಾರು ಆದಾಯ ಇರುವ ದೇಶಗಳಲ್ಲಿ ಆಹಾರ ವ್ಯರ್ಥ ಮಾಡುವ ತಲಾವಾರು ಪ್ರಮಾಣ ಹಾಗೂ ಅದರಿಂದ ಪರಿಸರದ ಮೇಲೆ ಆಗುವ ದುಷ್ಪರಿಣಾಮವು ಹೆಚ್ಚಿನ ತಲಾವಾರು ಆದಾಯ ಇರುವ ದೇಶಗಳಿಗೆ ಹೋಲಿಸಿದರೆ ಅರ್ಧದಷ್ಟು ಮಾತ್ರ ಇದೆ. ಹೀಗಿದ್ದರೂ, ತಲಾವಾರು ಆಹಾರ ಪೋಲು ಪ್ರಮಾಣದಲ್ಲಿ ಬೇರೆ ಬೇರೆ ಪ್ರಮಾಣದ ಆದಾಯ ಇರುವ ದೇಶಗಳ ನಡುವೆ ಹೆಚ್ಚಿನ ವ್ಯತ್ಯಾಸವೇನೂ ಇಲ್ಲ. ಹೆಚ್ಚಿನ ತಾಪಮಾನ ಇರುವ ದೇಶಗಳಲ್ಲಿ ಆಹಾರ ಪೋಲಾಗುವ ಪ್ರಮಾಣವು ಹೆಚ್ಚಿದೆ. ಆಹಾರ ಪೋಲಾಗುವುದು ಬಹಳ ಸಂಕೀರ್ಣ ಸಮಸ್ಯೆಯಾದರೂ, ಬೇರೆ ಬೇರೆ ಹಂತಗಳಲ್ಲಿ ಸಮನ್ವಯದಿಂದ ಹಾಗೂ ವ್ಯವಸ್ಥಿತವಾಗಿ ಕೆಲಸ ಮಾಡಿದರೆ ಅದನ್ನು ನಿಯಂತ್ರಿಸಬಹುದು ಎಂದು ವರದಿಯಲ್ಲಿ ಹೇಳಲಾಗಿದೆ. ಸರ್ಕಾರಗಳು, ಬೇರೆ ಬೇರೆ ಹಂತಗಳಲ್ಲಿನ ಆಡಳಿತ ವ್ಯವಸ್ಥೆಗಳು, ಉದ್ಯಮ ಸಮೂಹಗಳು, ರೈತರ ಸಂಘಟನೆಗಳು ಹಾಗೂ ಸ್ವಯಂ ಸೇವಾ ಸಂಸ್ಥೆಗಳು ಒಟ್ಟಾಗಿ ಹಾಗೂ ಪ್ರತ್ಯೇಕವಾಗಿ ಕೆಲಸ ಮಾಡಿ ಆಹಾರ, ಬೆಳೆ ಮತ್ತು ಆಹಾರ ಉತ್ಪನ್ನಗಳ ಪೋಲನ್ನು ತಡೆಯುವ ವ್ಯವಸ್ಥೆಯನ್ನು ಕಟ್ಟಬೇಕಾದ ಅಗತ್ಯ ಇದೆ ಎಂದು ಹೇಳಲಾಗಿದೆ. ಕೃಷಿ ಜಮೀನಿನಲ್ಲಿ ಬೆಳೆ ಬೆಳೆದ ನಂತರ ಅದು ಮನೆಗಳಿಗೆ ತಲುಪುವವರೆಗಿನ ಪ್ರತಿ ಹಂತದ ಮೇಲೆಯೂ ನಿಗಾ ಇರಿಸಬೇಕು. ಅದಕ್ಕಿಂತ ಹೆಚ್ಚಾಗಿ, ಆಹಾರ ಪೋಲು ಮಾಡುವುದನ್ನು ತಡೆಯುವ ಅಗತ್ಯ ಇದೆ ಎಂಬ ಅರಿವನ್ನು ಸಾರ್ವಜನಿಕರಲ್ಲಿ ಮೂಡಿಸಬೇಕು. ಜನಸಂಖ್ಯೆಯ ಹೆಚ್ಚಳವನ್ನು ಕಾಣುತ್ತಿರುವ ಭಾರತವು ಎಲ್ಲ ಹಂತಗಳಲ್ಲಿಯೂ ಆಹಾರ ಪೋಲು ಅತ್ಯಂತ ಕನಿಷ್ಠ ಮಟ್ಟವನ್ನು ತಲುಪುವಂತೆ ಆಗುವುದನ್ನು ಖಾತರಿಪಡಿಸಬೇಕು.

ದಿನದ ಟ್ವೀಟ್

ತೆರಿಗೆ ವ್ಯವಸ್ಥೆ ಬದಲಾಗಲಿ

ಭಾರತದಲ್ಲಿ ಇಡೀ ತೆರಿಗೆ ವ್ಯವಸ್ಥೆಯೇ ಅತ್ಯಂತ ನಿರಾಶಾದಾಯಕ ಆಗಿದೆ. ಅರಬ್ ರಾಷ್ಟ್ರಗಳಲ್ಲಿ ಆದಾಯದ ಮೇಲೆ ತೆರಿಗೆ ವಿಧಿಸುವುದಿಲ್ಲ. ತೆರಿಗೆಯನ್ನು ಖರ್ಚುಗಳ ಮೇಲೆ ವಿಧಿಸಬೇಕೇ ವಿನಾ ಆದಾಯದ ಮೇಲಲ್ಲ.

ತಾರಿಣಿಪ್ರಸಾದ್ ಪಣಿ

ಕಿಡಿನುಡಿ

50 ವರ್ಷಗಳಿಂದಲೂ ಮೀನುಗಾರರನ್ನು ವಶಕ್ಕೆ ಪಡೆದಿರುವುದು ನಿಜ. ಹಾಗೇ ಭಾರತವು ಶ್ರೀಲಂಕಾದ ಹಲವು ಮೀನುಗಾರರನ್ನು ಬಂಧಿಸಿದೆ. ಎಲ್ಲ ಪಕ್ಷಗಳ ನೇತೃತ್ವದ ಸರ್ಕಾರಗಳೂ ಶ್ರೀಲಂಕಾದೊಂದಿಗೆ ಮಧ್ಯಸ್ಥಿಕೆ ವಹಿಸಿ ನಮ್ಮ ಮೀನುಗಾರರು ಬಿಡುಗಡೆಯಾಗುವಂತೆ ನೋಡಿಕೊಂಡಿವೆ. ಜೈಶಂಕರ್ ವಿದೇಶಾಂಗ ಸೇವೆ, ವಿದೇಶಾಂಗ ಕಾರ್ಯದರ್ಶಿ ಮತ್ತು ಈಗ ವಿದೇಶಾಂಗ ಸಚಿವರಾಗಿರುವಾಗಲೂ ಇದು ನಡೆದಿದೆ. ಈಗ ಕಾಂಗ್ರೆಸ್ ಮತ್ತು ಡಿಎಂಕೆ ವಿರುದ್ಧ ಜೈಶಂಕರ್ ವಾಗ್ದಾಳಿ ನಡೆಸುವಂತಹದ್ದು ಏನಿದೆ? ವಾಜಪೇಯಿ ಪ್ರಧಾನಿ ಆಗಿದ್ದಾಗ, ಬಿಜೆಪಿ ಅಧಿಕಾರದಲ್ಲಿದ್ದಾಗ ಮತ್ತು ತಮಿಳುನಾಡಿನ ವಿವಿಧ ರಾಜಕೀಯ ಪಕ್ಷಗಳ ಜೊತೆ ಮೈತ್ರಿ ಮಾಡಿಕೊಂಡಿದ್ದಾಗ ಮೀನುಗಾರರನ್ನು ಬಂಧಿಸಿರಲಿಲ್ಲವೇ? ಮೋದಿ, 2014ರಿಂದ ಅಧಿಕಾರದಲ್ಲಿ ಇರುವಾಗಿನಿಂದಲೂ ಮೀನುಗಾರರನ್ನು ಶ್ರೀಲಂಕಾ ಬಂಧಿಸಿಲ್ಲವೇ?

ಪಿ.ಚಿದಂಬರಂ, ಕಾಂಗ್ರೆಸ್ ಮುಖಂಡ

25 ವರ್ಷಗಳ ಹಿಂದೆ

ಶುಕ್ರವಾರ, 2-4-1999

• **ಪಂಚಾಯತ್ ರಾಜ್ ಕಾಯ್ದೆ ತಿದ್ದುಪಡಿಗೆ ಅಂಗೀಕಾರ**

ಬೆಂಗಳೂರು, ಏ. 1– ವಿರೋಧಿ ಕಾಂಗ್ರೆಸ್ ಸದಸ್ಯರ ಧರಣಿ ಹಾಗೂ ಬಿಜೆಪಿ ಸದಸ್ಯರ ಸಭಾತ್ಯಾಗದ ನಡುವೆ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ಮಸೂದೆ–1999ಕ್ಕೆ ವಿಧಾನಸಭೆ ಇಂದು ಅಂಗೀಕಾರ ನೀಡಿತು.

ಹಾಲಿ ಇರುವ ಗ್ರಾಮ ಪಂಚಾಯಿತಿಗಳ ಸಂಖ್ಯೆಯನ್ನು ಕಡಿಮೆ ಮಾಡಲು ಹಾಗೂ ಪಂಚಾಯಿತಿಗಳ ಗಾತ್ರವನ್ನು ದೊಡ್ಡದು ಮಾಡುವ ಉದ್ದೇಶದಿಂದ ಸರ್ಕಾರ ಈಗಾಗಲೇ ಸುಗ್ರೀವಾಜ್ಞೆ ಮೂಲಕ ಪಂಚಾಯತ್ ರಾಜ್ ಕಾಯ್ದೆಗೆ ತಿದ್ದುಪಡಿ ತಂದಿದ್ದು, ಈಗ ಸುಗ್ರೀವಾಜ್ಞೆಯ ಬದಲಿಗೆ ತಿದ್ದುಪಡಿ ಮಸೂದೆಯನ್ನು ಸದನದಲ್ಲಿ ಮಂಡಿಸಿತ್ತು.

• **ಉಪಸಭಾಪತಿಯಾಗಿ ಸಿಮೆಯೋನ್**

ಬೆಂಗಳೂರು, ಏ. 1– ಸಾಕಷ್ಟು ಕುತೂಹಲ ಕೆರಳಿಸಿದ್ದ ವಿಧಾನ ಪರಿಷತ್ತಿನ ಉಪಸಭಾಪತಿ ಸ್ಥಾನಕ್ಕೆ ಚುನಾವಣೆ ನಡೆದು, ಕೊನೆಗೂ ವಿರೋಧ ಪಕ್ಷಗಳ ಸಹಕಾರದಿಂದ ಆಡಳಿತ ಜನತಾದಳದ ಅಭ್ಯರ್ಥಿ ಡೇವಿಡ್ ಸಿಮೆಯೋನ್ ಉಪಸಭಾಪತಿಯಾಗಿ ಆಯ್ಕೆಯಾದರು.

ಈ ಚುನಾವಣೆಯಿಂದ ಸರ್ಕಾರಕ್ಕೆ ಆಗಬಹುದೆಂದು ನಿರೀಕ್ಷಿಸಿದ್ದ ಮುಖಭಂಗ ತಪ್ಪಿತು. ಆದರೆ ಮುಜುಗರ ತಪ್ಪಲಿಲ್ಲ.

50 ವರ್ಷಗಳ ಹಿಂದೆ

ಮಂಗಳವಾರ, 2-4-1974

• **ರಣಜಿ ವಿಜಯಿಗಳಿಗೆ ವೀರೋಚಿತ ಜಯ**

ಬೆಂಗಳೂರು, ಏ. 1– ರಣಜಿ ಟ್ರೋಫಿ ಕ್ರಿಕೆಟ್ ಪ್ರಶಸ್ತಿಯನ್ನು ಪ್ರಪ್ರಥಮ ಬಾರಿಗೆ ಗೆದ್ದು ತಂದು ಕರ್ನಾಟಕದ ಜನಕೋಟಿಯನ್ನು ಹರ್ಷಸಾಗರದಲ್ಲಿ ತೇಲಿಸಿರುವ ರಾಜ್ಯ ಕ್ರಿಕೆಟ್ ತಂಡಕ್ಕೆ ನಗರ ಇಂದು ವೀರೋಚಿತ ಸ್ವಾಗತ ನೀಡಿತು.

'ಶ್ರದ್ಧಾಪೂರ್ಣ ಶ್ರಮದಿಂದ ನೀವು ಗಳಿಸಿದ ಗೆಲುವು ಕನ್ನಡ ಜನಕೋಟಿಗೆ ಅಮಿತಾನಂದ ಉಂಟು ಮಾಡಿರುವುದಲ್ಲದೆ ಒಂದು ಶೋಭೆಯ ಅಧ್ಯಾಯವನ್ನೇ ಆರಂಭಿಸಿದೆ. ಇನ್ನೂ ಮಿಗಿಲಾದ ಖ್ಯಾತಿಯ ದಾರಿಯಲ್ಲಿ ಮುನ್ನಡೆಯುವಿರೆಂಬ ನಂಬಿಕೆ ನಮಗಿದೆ' ಎಂದು ರಾಜ್ಯ ಪತ್ರಕರ್ತರ ಸಂಘ ಇಂದು ಸಂಜೆ ವಿಜಯೀ ಟೀಮಿನ ಗೌರವಾರ್ಥ ಏರ್ಪಡಿಸಿದ್ದ ಸರಳ ಸುಂದರ ಸನ್ಮಾನ ಸಮಾರಂಭದಲ್ಲಿ ಅರ್ಪಿಸಿದ ಆದರದ ಅಭಿನಂದನಾ ಪತ್ರದಲ್ಲಿ ವಿವರಿಸಿದೆ.

• **ಏಪ್ರಿಲ್ ತಂದ ವರ್ಷ ಹರ್ಷ**

ಬೆಂಗಳೂರು, ಏ. 1– ಬೆಂಗಳೂರಿನಲ್ಲಿ ಸೆಖೆ ಆರಂಭವಾಗಿ ಕೆಲ ದಿನಗಳಾದವು. ಸಂಜೆ ನಗರದ ನಾನಾ ಪ್ರದೇಶಗಳಲ್ಲಿ ನಾನಾ ಪ್ರಮಾಣಗಳಲ್ಲಿ ಬಿದ್ದರೂ ಆದ ಮೊದಲ ಮಳೆಯನ್ನು ಜನ ಸ್ವಾಗತಿಸಿದರು.

ಬಿಸಿಲಿನ ಬೇಗೆಗೆ ಸಿಕ್ಕಿದ್ದ ಬೆಂಗಳೂರು ಜನತೆಗೆ ಸೋಮವಾರ ಸಂಜೆ ಬಿದ್ದ ಮಳೆಯು ತಂಪಿನ ಪರಿಹಾರ ತಂದಿತು.

ಅಮೆರಿಕದ ಅಧ್ಯಕ್ಷೀಯ ಚುನಾವಣೆ: ಟ್ರಂಪ್– ಬೈಡನ್ ನಡುವೆ ರೋಚಕ ಹಣಾಹಣಿ

ಅಧ್ಯಕ್ಷ ಬೈಡನ್ ಪುನರಾಯ್ಕೆ ಸುಲಭವೇ?

ಸೀಮೋಲ್ಲಂಘನ

ಸುಧೀಂದ್ರ ಬುಧ್ಯ

ಅಮೆರಿಕದಲ್ಲಿ ಅಧ್ಯಕ್ಷೀಯ ಚುನಾವಣೆಗೆ ವೇದಿಕೆ ಸಿದ್ಧವಾಗುತ್ತಿದೆ. ನವೆಂಬರ್ 5ರಂದು ನಡೆಯಲಿರುವ ಚುನಾವಣೆಯಲ್ಲಿ ಮತ್ತೊಮ್ಮೆ ಜೋ ಬೈಡನ್ ಮತ್ತು ಡೊನಾಲ್ಡ್ ಟ್ರಂಪ್ ಮುಖಾಮುಖಿಯಾಗಲಿದ್ದಾರೆ.ಹಾಲಿ ಅಧ್ಯಕ್ಷ ಮತ್ತು ಮಾಜಿ ಅಧ್ಯಕ್ಷ ಸ್ಪರ್ಧಿಸುತ್ತಿರುವ ಚುನಾವಣೆ ಇದು ಎನ್ನುವುದು ವಿಶೇಷ.

ಅಮೆರಿಕದ ಇತಿಹಾಸದಲ್ಲಿ ಇಂತಹ ಸಂದರ್ಭಗಳು ಅಪರೂಪ. 1956ರಲ್ಲಿ ಅಂದಿನ ಅಧ್ಯಕ್ಷ ಐಸೆನ್ ಹೋವರ್ ಎರಡನೆಯ ಬಾರಿ ಸ್ಟೀವನ್ಸನ್ ಅವರಿಗೆ ಚುನಾವಣೆಯಲ್ಲಿ ಮುಖಾಮುಖಿಯಾಗಿದ್ದರು. 1892ರ ಅಧ್ಯಕ್ಷೀಯ ಚುನಾವಣೆಯಲ್ಲಿ ಗ್ರೋವರ್ ಕ್ಲೀವ್‌ಲ್ಯಾಂಡ್ ಮತ್ತು ಬೆಂಜಮಿನ್ ಹ್ಯಾರಿಸನ್ ಚುನಾವಣೆಯಲ್ಲಿ ಸೆಣಸಿದಾಗ, ಈ ಇಬ್ಬರೂ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದವರೇ ಆಗಿದ್ದರು.

ಈ ಬಾರಿ ಡೆಮಾಕ್ರಟಿಕ್ ಪಕ್ಷದ ಪ್ರಾಥಮಿಕ ಹಂತದ ಚುನಾವಣೆ ಪೈಪೋಟಿಯಿಂದ ಕೂಡಿರಲಿಲ್ಲ. ಅಧ್ಯಕ್ಷ ಬೈಡನ್ ಎರಡನೆಯ ಅವಧಿಗೆ ಸ್ಪರ್ಧಿಸುವ ಉತ್ಸಾಹದಲ್ಲಿದ್ದರು. ಆದರೆ ಅವರ ವಯಸ್ಸು, ಆರೋಗ್ಯ ಮತ್ತು ಕುಸಿದ ಜನಪ್ರಿಯತೆಯ ಕಾರಣದಿಂದ ಅವರು ಕಣದಿಂದ ಹಿಂದೆ ಸರಿಯಬಹುದೇ ಎಂಬ ಪ್ರಶ್ನೆ ಉದ್ಭವಿಸಿತ್ತು. ಆದರೆ ಬೈಡನ್ ಅಭ್ಯರ್ಥಿಯಾಗುವುದಾಗಿ ಘೋಷಿಸಿದರು. ಪಕ್ಷ ಅವರನ್ನು ಬೆಂಬಲಿಸಿತು.

ರಿಪಬ್ಲಿಕನ್ ಪಕ್ಷದಲ್ಲಿ ಪ್ರಾಥಮಿಕ ಹಂತದ ಚುನಾವಣೆಗೂ ಮೊದಲು ನಾಲ್ಕಾರು ಹೆಸರುಗಳು ಸದ್ದು ಮಾಡಿದ್ದವು. ವಿಶ್ವಸಂಸ್ಥೆಯ ಮಾಜಿ ರಾಯಭಾರಿ ನಿಕ್ಕಿ ಹ್ಯಾಲೆ, ಭಾರತ ಮೂಲದ ಉದ್ಯಮಿ ವಿವೇಕ್ ರಾಮಸ್ವಾಮಿ, ಅಮೆರಿಕದ ವಿವಿಧ ರಾಜ್ಯಗಳಲ್ಲಿ ಕಾರ್ಯಕರ್ತರ ಹಲವು ಸಭೆಗಳನ್ನು ನಡೆಸಿ ಉತ್ಸಾಹ ತೋರಿದ್ದರು. ಆದರೆ ಜನವರಿಯಲ್ಲಿ ಐಯೋವಾ ರಾಜ್ಯದಲ್ಲಿ ಮೊದಲ ಪ್ರಾಥಮಿಕ ಹಂತದ ಚುನಾವಣೆ ನಡೆಯುವ ಹೊತ್ತಿಗೆ ಡೊನಾಲ್ಡ್ ಟ್ರಂಪ್ ಹೆಚ್ಚು ಜನಪ್ರಿಯ ಅಭ್ಯರ್ಥಿಯಾಗಿ ಹೊರಹೊಮ್ಮಿದರು. ಟ್ರಂಪ್ ಅವರನ್ನು ಅನುಮೋದಿಸಿ ವಿವೇಕ್ ಕಣದಿಂದ ಹಿಂದೆ ಸರಿದರು. ಮಾರ್ಚ್ 6ರ ಚುನಾವಣೆಯ ಬಳಿಕ ನಿಕ್ಕಿ ಹ್ಯಾಲೆ ಕಣದಿಂದ ಹೊರಗುಳಿದರು.

ಸಾಮಾನ್ಯವಾಗಿ ಅಮೆರಿಕದ ಅಧ್ಯಕ್ಷೀಯ ಚುನಾವಣೆಯಲ್ಲಿ ಆರ್ಥಿಕತೆ, ವಲಸೆ ನೀತಿ, ನಿರುದ್ಯೋಗ ಹಾಗೂ ಜನಕಲ್ಯಾಣ ಯೋಜನೆಗಳ ವಿಷಯದಲ್ಲಿ ಯಾವ ಅಭ್ಯರ್ಥಿಯ ನಿಲುವು ಏನಿದೆ ಎಂಬುದನ್ನು ಜನ ಗಮನಿಸುತ್ತಾರೆ. ಸಂಭಾವ್ಯ ಆರ್ಥಿಕ ಹಿಂಜರಿತದ ಅಪಾಯದಿಂದ ಸದ್ಯದ ಮಟ್ಟಿಗೆ ಅಮೆರಿಕ ತಪ್ಪಿಸಿಕೊಂಡಿದೆಯಾದರೂ, ಹಣದುಬ್ಬರ ಜನರನ್ನು ಕಂಗಾಲಾಗಿಸಿದೆ. ನಿರುದ್ಯೋಗ ಪ್ರಮಾಣದಲ್ಲಿ ಏರಿಕೆಯಾಗಿದೆ.

ಬೈಡನ್ ಅವರ ಸಾಮರ್ಥ್ಯ ಮತ್ತು ದೌರ್ಬಲ್ಯಗಳನ್ನು ನೋಡುವುದಾದರೆ, ಬೈಡನ್ ಓರ್ವ ಅನುಭವಿ. 1972ರಲ್ಲಿ ಪ್ರಥಮ ಬಾರಿಗೆ ಸೆನೆಟರ್ ಆದವರು. ಆ ಸ್ಥಾನವನ್ನು ಸತತವಾಗಿ ಕಾಯ್ದುಕೊಂಡವರು. 2008ರ ಅಧ್ಯಕ್ಷೀಯ ಚುನಾವಣೆಯಲ್ಲಿ ಬರಾಕ್ ಒಬಾಮ ಅವರಿಗೆ 'ರನ್ನಿಂಗ್ ಮೇಟ್' ಆಗಿ ಎರಡು ಅವಧಿಗೆ ಉಪಾಧ್ಯಕ್ಷರಾಗಿ ಕಾರ್ಯನಿರ್ವಹಿಸಿದರು. ಬೈಡನ್ ಅವರ ಬೆನ್ನಿಗಿದ್ದ ಈ ಆಡಳಿತಾತ್ಮಕ ಅನುಭವವು 2020ರ ಚುನಾವಣೆಯಲ್ಲಿ ಅವರತ್ತ ಮತದಾರರನ್ನು ಆಕರ್ಷಿಸಿತ್ತು.

ಟ್ರಂಪ್ ಅವರಿಗಿಂತ ನಾಲ್ಕು ವರ್ಷ ಹಿರಿಯರಾಗಿರುವ ಬೈಡನ್ ಒಂದೊಮ್ಮೆ ಈ ಚುನಾವಣೆಯಲ್ಲಿ ಗೆದ್ದರೆ, 81ರ ವಯೋಮಾನದಲ್ಲಿ ಅಧ್ಯಕ್ಷರಾದಂತೆ ಆಗುತ್ತದೆ ಮತ್ತು ಈ ವಿಷಯದಲ್ಲಿ ಬೈಡನ್ ತಮ್ಮದೇ ದಾಖಲೆಯನ್ನು ಮುರಿದು, ಅಮೆರಿಕದ ಇತಿಹಾಸದಲ್ಲೇ ಹೆಚ್ಚು ವಯಸ್ಸಾದ ಅಧ್ಯಕ್ಷ ಎನಿಸಿಕೊಳ್ಳಲಿದ್ದಾರೆ! ಇತ್ತೀಚೆಗೆ ಪ್ರಕಟವಾಗಿರುವ ಕೆಲವು ಸಮೀಕ್ಷೆಗಳಲ್ಲೂ ಜನ ಈ ಅಂಶವನ್ನು ಗುರುತಿಸಿ, ಬೈಡನ್ ಎರಡನೇ ಅವಧಿಯಲ್ಲಿ ಕ್ರಿಯಾಶೀಲರಾಗಿ ಕೆಲಸ ಮಾಡುವುದು ಸಾಧ್ಯವೇ ಎಂಬ ಪ್ರಶ್ನೆ ಎತ್ತಿದ್ದಾರೆ.

ಆರ್ಥಿಕತೆ ಮತ್ತು ವಲಸೆ ನೀತಿಯನ್ನು ಬೈಡನ್ ಅವರು ನಿರ್ವಹಿಸಿದ ಕುರಿತು ಜನರಲ್ಲಿ ಅಸಮಾಧಾನವಿದ್ದಂತೆ ಕಾಣುತ್ತಿದೆ. ಬೈಡನ್ ತಮ್ಮ ಅವಧಿಯಲ್ಲಿ ಅಮೆರಿಕದ ಆರ್ಥಿಕತೆಗೆ ಶಕ್ತಿ ತುಂಬಲು, ಉದ್ಯೋಗ ಸೃಷ್ಟಿಸಲು ವಿಶೇಷ ಯೋಜನೆಗಳನ್ನು ಘೋಷಿಸಿದರು. ಆದರೆ ಕೊರೊನಾದ ಹೊಡೆತದಿಂದ ಕುಗ್ಗಿದ ಅಮೆರಿಕದ ಆರ್ಥಿಕತೆ ಇನ್ನೂ ಸಂಪೂರ್ಣವಾಗಿ ಚೇತರಿಸಿಕೊಂಡಿಲ್ಲ. ಆ ಅಸಮಾಧಾನ ಜನರಲ್ಲಿ ಇದ್ದಂತೆ ಕಾಣುತ್ತಿದೆ.

ಉಕ್ರೇನ್ ಯುದ್ಧದ ವಿಷಯದಲ್ಲಿ ಅಮೆರಿಕ ಹೆಚ್ಚೇನೂ ಮಾಡಲು ಸಾಧ್ಯವಾಗಲಿಲ್ಲ ಮತ್ತು ಇಸ್ರೇಲ್–ಹಮಾಸ್ ಕದನದ ವಿಷಯವಾಗಿ ಅಮೆರಿಕ ದೃಢ ನಿಲುವು ಪ್ರಕಟಿಸಲಿಲ್ಲ ಎಂಬ ಸಂಗತಿಗಳು ಬೈಡನ್ ಅವರ ನಾಯಕತ್ವ ಗುಣವನ್ನು ಪ್ರಶ್ನಿಸುತ್ತಿವೆ.

ಇತ್ತ ಟ್ರಂಪ್ ಅವರ ಹಾದಿಯಲ್ಲಿ ಹಲವು ಬುಗುಟೆಗಳಿವೆ. ಡೊನಾಲ್ಡ್ ಟ್ರಂಪ್ ಅಮೆರಿಕ ಕಂಡ ಓರ್ವ ವಿವಾದಿತ ಅಧ್ಯಕ್ಷ. ಅವರ ಅಧಿಕಾರಾವಧಿಯಲ್ಲಿ ಸಂಸತ್ತಿನಲ್ಲಿ ಅವರನ್ನು ಎರಡು ಬಾರಿ ದೋಷಾರೋಪಣೆಗೆ ಗುರಿಪಡಿಸಲಾಗಿತ್ತು. 2020ರ ಚುನಾವಣೆಯಲ್ಲಿ ಅವರಿಗೆ ಬೈಡನ್ ಅವರ ಎದುರು ಸೋಲಾಯಿತು. ನಂತರ ಹಲವು ಅಹಿತಕಾರಿ ಬೆಳವಣಿಗೆಗಳು ನಡೆದವು.

ಈ ಬಾರಿ ರಿಪಬ್ಲಿಕನ್ ಪಕ್ಷದ ಅಭ್ಯರ್ಥಿಯಾಗಿರುವ ಟ್ರಂಪ್, ಬೈಡನ್ ಅವರ ದೌರ್ಬಲ್ಯಗಳ ವಿರುದ್ಧ ಮಾತನಾಡುತ್ತಿದ್ದಾರೆ. ಈ ಬಾರಿ ಅವರು ಚುನಾವಣೆ ಗೆಲ್ಲುವುದಕ್ಕೂ ಮೊದಲು ಕಾನೂನು ಸಮರವನ್ನು ಗೆಲ್ಲಬೇಕಿದೆ.



ಟ್ರಂಪ್ ನಾಲ್ಕು ಕ್ರಿಮಿನಲ್ ಪ್ರಕರಣಗಳನ್ನು ಎದುರಿಸುತ್ತಿದ್ದಾರೆ. 2020ರ ಚುನಾವಣೆಯ ಫಲಿತಾಂಶವನ್ನು ಬುಡಮೇಲು ಮಾಡಲು ನಡೆಸಿದ ಪ್ರಯತ್ನ, ಚುನಾವಣೆಯ ಬಳಿಕ ನಡೆದ ಸಂಸತ್ ಮೇಲಿನ ದಾಳಿಗೆ ಪ್ರಚೋದನೆ, ವರ್ಗೀಕೃತ ರಾಷ್ಟ್ರೀಯ ಭದ್ರತಾ ದಾಖಲೆಗಳನ್ನು ಕಾನೂನು ಬಾಹಿರವಾಗಿ ಇರಿಸಿಕೊಂಡಿರುವುದು ಹಾಗೂ ವ್ಯವಹಾರಕ್ಕೆ ಸಂಬಂಧಿಸಿದ ದಾಖಲೆಗಳನ್ನು ತೆರಿಗೆ ಕದಿಯಲು ತಿರುಚಿರುವ ಆರೋಪಗಳು ಟ್ರಂಪ್ ಅವರ ಮೇಲಿವೆ.

ಈ ವ್ಯಾಜ್ಯಗಳನ್ನೇ ಮುಂದಿಟ್ಟುಕೊಂಡು ಅವರನ್ನು ಚುನಾವಣೆಯಿಂದ ಹೊರಗಿಡುವ ಪ್ರಯತ್ನವೂ ನಡೆದಿತ್ತು. ಆದರೆ ಅಮೆರಿಕದ ಸರ್ವೋಚ್ಚ ನ್ಯಾಯಾಲಯವು ಟ್ರಂಪ್ ಅವರು ಅಧ್ಯಕ್ಷೀಯ ಚುನಾವಣೆಗೆ ಸ್ಪರ್ಧಿಸುವುದನ್ನು ತಡೆಯಲು ಸಾಧ್ಯವಿಲ್ಲ ಎಂಬ ತೀರ್ಪು ನೀಡಿತು.

ಸದ್ಯದ ಮಟ್ಟಿಗೆ ಚುನಾವಣೆ ಮತ್ತು ಕಾನೂನು ಸಮರವನ್ನು ಒಟ್ಟಿಗೇ ಗೆಲ್ಲುವ ಉತ್ಸಾಹದಲ್ಲಿ ಟ್ರಂಪ್ ಇರುವಂತೆ ಕಾಣುತ್ತಿದೆ. ಕಠಿಣ ವಲಸೆ ನೀತಿ, ಪೌರತ್ವ ಕಾಯ್ದೆಗೆ ತಿದ್ದುಪಡಿ ಹಿಂದಿನ ಚುನಾವಣೆಯಲ್ಲೂ ಟ್ರಂಪ್ ಅವರ ಪ್ರಣಾಳಿಕೆಯ ಪ್ರಧಾನ ಅಂಶಗಳಾಗಿದ್ದವು. ಈ ಬಾರಿಯೂ ಆ ಅಂಶಗಳಿವೆ.

ಅಮೆರಿಕದ ಅಧ್ಯಕ್ಷೀಯ ಚುನಾವಣೆಗೆ ಅದರದ್ದೇ ಆದ ಮಹತ್ವವಿದೆ. ಜಾಗತಿಕ ರಾಜಕೀಯ ಸಮೀಕರಣ ಹೇಗಿರಲಿದೆ, ಅಮೆರಿಕದ ಒಳಗೆ ವಲಸಿಗರು ಎಷ್ಟು ಸುರಕ್ಷಿತ, ಕೆಲಸದ ಅವಕಾಶಗಳು ಮುಕ್ತವಾಗಿ ಇರಲಿವೆಯೇ ಎಂಬ ಸಂಗತಿಗಳು ಅಧ್ಯಕ್ಷರು ಯಾರಾಗಲಿದ್ದಾರೆ ಎಂಬುದರ ಮೇಲೆ ಅವಲಂಬಿಸಿರುತ್ತವೆ. ಅಮೆರಿಕದ ಅಧ್ಯಕ್ಷರಾದವರು ವಿಶ್ವದ ಬಲಿಷ್ಠ ಸೇನೆಯೊಂದರ 'ಕಮಾಂಡರ್ ಇನ್ ಚೀಫ್' ಎನಿಸಿಕೊಳ್ಳುತ್ತಾರೆ. ವಿಶ್ವದ ಅತಿದೊಡ್ಡ ಅಣು ಶಸ್ತ್ರಾಗಾರದ ಕೀಲಿಕೈ ಅಧ್ಯಕ್ಷರ ಬಳಿ ಇರುತ್ತದೆ.

ಜಾಗತಿಕ ಆರ್ಥಿಕತೆಯು ಅಮೆರಿಕದ ಆರ್ಥಿಕತೆಯ ಏಳುಬೀಳಿನ ತಾಳಕ್ಕೆ ಹೆಜ್ಜೆ ಹಾಕುತ್ತದೆ. ಹಾಗಾಗಿ, ನಾಲ್ಕು ವರ್ಷಗಳಿಗೊಮ್ಮೆ ನಡೆಯುವ ಅಧ್ಯಕ್ಷೀಯ ಚುನಾವಣೆಯನ್ನು ಜಗತ್ತು ಕುತೂಹಲದಿಂದ ಗಮನಿಸುತ್ತದೆ.

ಪ್ರಸ್ತುತ ಅಧ್ಯಕ್ಷ ಬೈಡನ್ ಅವರು ಉಕ್ರೇನ್ ಬೆನ್ನಿಗೆ ಬಲವಾಗಿ ನಿಂತಿದ್ದಾರೆ. 'ನಾನು ಅಧ್ಯಕ್ಷನಾದರೆ ಒಂದು ದಿನದಲ್ಲಿ ಉಕ್ರೇನ್ ಯುದ್ಧಕ್ಕೆ ಕೊನೆ ಹಾಡುತ್ತೇನೆ' ಎಂದು ಟ್ರಂಪ್ ಅವರು ಚುನಾವಣಾ ಪ್ರಚಾರ ಮಾಡುತ್ತಿದ್ದಾರೆ. ಹಾಗಾಗಿ, ಯುದ್ಧದ ಮುಂದಿನ ಸ್ವರೂಪ ಅಮೆರಿಕದ ಅಧ್ಯಕ್ಷೀಯ ಚುನಾವಣೆಯ ಬಳಿಕ ತೀರ್ಮಾನವಾಗಬಹುದು. ಅದಲ್ಲದೆ ಇಸ್ರೇಲ್ ಮತ್ತು ಹಮಾಸ್ ನಡುವಿನ ಕದನ, ಚೀನಾ- ತೈವಾನ್ ವಿಷಯ, ಅಮೆರಿಕದ ಮುಂದಿನ ಅಧ್ಯಕ್ಷರು ಯಾರಾಗಬಹುದು ಎಂಬುದರ ಮೇಲೆ ಹೊಸ ತಿರುವನ್ನು ಪಡೆದುಕೊಳ್ಳಬಹುದು. ಭಾರತ ಮತ್ತು ಅಮೆರಿಕದ ಸಂಬಂಧವನ್ನು ನೋಡುವುದಾದರೆ, ಜಾಗತಿಕ ಸನ್ನಿವೇಶವು ಎರಡೂ ದೇಶಗಳನ್ನು ಬೆಸೆದಿದೆ. ಹಾಗಾಗಿ, ಭಾರತ ಮತ್ತು ಅಮೆರಿಕದಲ್ಲಿ ಯಾರು ಅಧಿಕಾರದಲ್ಲಿ ಇರುತ್ತಾರೆ ಎನ್ನುವುದು ಗೌಣವಾಗುತ್ತದೆ.

ಒಟ್ಟಿನಲ್ಲಿ, ಬೈಡನ್ ಮತ್ತು ಟ್ರಂಪ್ ಅವರ ನಡುವೆ ಎರಡನೆಯ ಬಾರಿಗೆ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧೆ ಏರ್ಪಟ್ಟಿರುವುದರಿಂದ ಅಮೆರಿಕದ ಅಧ್ಯಕ್ಷೀಯ ಚುನಾವಣೆ ಈ ಬಾರಿ ಹೆಚ್ಚು ರೋಚಕವಾಗಿರುತ್ತದೆ ಎಂಬುದಂತೂ ಖರೆ.

ಚುರುಮುರಿ

ಮಾಮಾಕಾರ!

• ಲಿಂಗರಾಜು ಡಿ.ಎಸ್.

'ಸಾ, ಈಗ ರಾಜಕೀಯದೇಲಿ ಅಳಿಯಂದ್ರುದೇ ಹವಾ. ಮಾವಂದ್ರೆಲ್ಲಾ ಅವರವರ ಪಕ್ಷದಿಂದ ಅಳೀಮಯ್ಯನಿಗೆ ಟಿಕೇಟಿಗೋಸ್ಕರ ಮಾಮಾಚಾರ ಮಾಡಕ್ಕೆ ನಿಂತವ್ರೆ' ರಾಜಕೀಯದ ಸುದ್ದಿ ಹೇಳಿದೆ.

'ಒಬ್ಬ ಮಾವ ಅವರ ಅಳಿಯನಿಗೆ ಬ್ಯಾರೆ ಪಕ್ಷದ ಟಿಕೆಟ್ ಕೊಡ್ಸಿ ಕ್ಷೇತ್ರನೂ ದಾನ ಮಾಡ್ಯವುರೆ. ಇನ್ನೊಬ್ಬ ಮಾವ 'ನನ್ನ ಅಳಿಯನಿಗೆ ಟಿಕೆಟ್ ಕೊಟ್ಟಿಲ್ಲ, ಬ್ಯಾರೆ ಮಾತೇ ಇಲ್ಲ' ಅಂತ ಹುಡ್ಕಿಕೆ ಹಾಕ್ಯಾ ನಿಂತವ್ರೆ' ಅಂದ ಚಂದ್ರು.

'ಹೂ ಕಯ್ಯಾ ಈಗ ಮಾವಂದ್ರಿಗೇ 'ಹೂಂ ಅಂತೀಯಾ ಮಾವ, ಉಹುಂ ಅಂತೀಯಾ' ಅಂತ ಪುಂಗಿ ಊದೋ ಮಾವಾಡಿಗ ಅಳಿಯಂದ್ರು, ಸೊಸೆದೀರು ಮುನ್ನೆಲೆಗೆ ಬಂದವ್ರೆ. ಇದಕ್ಕೆ ಅಂತ್ಲೇ ಮಾವನ ರಾಜಕೀಯ ಕ್ಯಾಕರಣ ಹುಟ್ಟಿಕ್ಯಂಡದೆ' ಅಂದುದ್ಕೆ ಎಲ್ಲರೂ ಗಾಬರಿಯಾದರು.

'ಅದ್ಯಾವುದ್ಲಾ ಮಾವನ ರಾಜಕೀಯ ಕ್ಯಾಕರಣ?' ಯಂಟಪ್ಪಣ್ಣ ಕೇಳಿತು.

'ಮಾವನಿಗೆ ಗೌರವ ತೋರಿಸಕ್ಕೆ ಮಾವನ ಮನೆ, ಮಾವನ ಮನೆಯನ್ನು, ಮಾವನ ಮನೆಯಿಂದ, ಮಾವನ ಮನೆಗೆ, ಮಾವನ ಮನೆಯ ದೆಸೆಯಿಂದ, ಮಾವನ ಮನೆಯ, ಮಾವನ ಮನೆಯಲ್ಲಿ ಅಂತ ಸಪ್ತಮಾವಭಕ್ತಿ ಪ್ರತ್ಯಯಗಳವೆ' ವಿವರಿಸಿದೆ.

'ಮಾವನವು ಸಕಲೆಂಟು ಸ್ವರಗಳು, ಕ್ರಿಯಾಪದ, ನಾಮಪದ, ಸಂಧಿಕಾರ್ಯಗಳು ಸೇರಿ ಸೊಸೆಯ, ಅಳಿಯನ ರಾಜಕೀಯ ಛಂದಸ್ಸು ರಚನೆಯಾಗಬಕು' ತುರೇಮಣೆ ಸೇರಿಸಿದರು.

'ಮಾವಂದೇ ಹೇಳ್ತೀರಲ್ಲ, ಅಪ್ಪಂದ್ರು ಏನೂ ಮಾಡೇ ಇಲ್ವಾ? ಅವರೇನು ತೌಡು ಕುಟ್ಟುತರ' ಯಂಟಪ್ಪಣ್ಣ ಕಿಚಾಯಿಸಿತು.

'ಯಾಕಿಲ್ಲ ಯಂಟಪ್ಪಣ್ಣ, ಅಪ್ಪಂದ್ರು ಕ್ಯಾಕರಣದಲ್ಲಿ ತಮ್ಮ ಸ್ವಯಂಕೃತಾಪರಾಧವಾದ ಮಕ್ಕಳಿಗೆ ಹಗ್ಗ-ಮೂಗುದಾರ ತೊಡಿಸಿ, ಲಾಳ ಕಟ್ಟಿಸಿ ರಾಜಕೀಯಕ್ಕೆ ರೆಡಿ ಮಾಡಿರತರೆ. ಹೈಕಮಾಂಡಿಂದ ಟಿಕೇಟು ಸಿಕ್ಕದಿದ್ರೆ ಮಕ್ಕಳ ಪರವಾಗಿ ತಾವೇ ಬಂಡಾಯದ ಜಲ್ಲಿಕಟ್ಟು ಮಾಡಕ್ಕೂ ತಯಾರಾಗಿರ್ತರೆ!' ಅಂತಂದೆ.

'ಸಾತಿವ್ರತ್ಯಕ್ಕೆ ಕಟ್ಟುಬಿದ್ದು ಹೆಂಡರನ್ನ ಚುನಾವಣೆಗೆ ಇಳಿಸಿರೋ ಗಂಡಯ್ಯದಿರದ್ದೂ ಇದೇ ಥರದ ಪತಿಷ್ಠೆ ಇರತದೆ ಕಪ್ಪ!' ಅಂದು ಯಂಟಪ್ಪಣ್ಣ ಪಟಾಕಿ ಹಾರಿಸಿತು.

ಸಂಗತ

ಪುಟ್ಟ ಮಸ್ತಕಕ್ಕೆ ಬೇಕೊಂದು ಪುಸ್ತಕ

ಕತೆಗಳ ಓದಿನಿಂದ ಮಕ್ಕಳ ಶಿಕ್ಷಣದ ಭವಿಷ್ಯ ಶಿಥಿಲವಾಗುವುದಿಲ್ಲ ಎಂಬ ಸತ್ಯವನ್ನು ಪೋಷಕರು ಮತ್ತು ಶಿಕ್ಷಕರು ಮನಗಾಣಬೇಕಾಗಿದೆ

• ಪ.ರಾಮಕೃಷ್ಣ ಶಾಸ್ತ್ರಿ

ಕೆಲವೇ ದಶಕಗಳ ಹಿಂದೆ ಪ್ರತಿ ಮನೆಯಲ್ಲೂ ರಾತ್ರಿ ಮಗು ಮಲಗಬೇಕಿದ್ದರೆ ಅಪ್ಪನೋ ಅಮ್ಮನೋ ಒಂದು ಕತೆ ಹೇಳಲೇಬೇಕಿತ್ತು. ಕಿನ್ನರರು, ರಾಕ್ಷಸರು, ಸತ್ಯವಂತರು, ದಯಾಶೀಲರ ಕತೆಗಳನ್ನು ಆಲಿಸಿ ಹ್ಞೂಂಗುಟ್ಟುತ್ತ ತನ್ನದೇ ಭ್ರಮಾಲೋಕದಲ್ಲಿ ತೇಲುತ್ತ ಮಗು ನಿದ್ರೆಗೆ ಜಾರುತ್ತಿತ್ತು. ಸರ್ಕಾರಿ ಶಾಲೆಗಳಲ್ಲಿ ಮಧ್ಯಾಹ್ನದ ನಂತರ ಒಂದು ಅವಧಿ ಕತೆ ಪುಸ್ತಕ ಓದಲು ಮೀಸಲಾಗಿರುತ್ತಿತ್ತು. ಪಠ್ಯದ ಜೊತೆಗೆ ಉಪಪಠ್ಯವಾಗಿ ಒಂದು ಕತೆ ಪುಸ್ತಕವನ್ನು ಬಳಸಲು ಶಿಕ್ಷಣ ಇಲಾಖೆ ಅವಕಾಶ ನೀಡಿತ್ತು.

ಆದರೆ ಬದಲಾದ ಕಾಲದಲ್ಲಿ ಮಗುವಿಗೊಂದು ಕತೆ ಹೇಳಿ ಮಲಗಿಸುವ ಪೋಷಕರೂ ಇಲ್ಲ, ಇಬ್ಬರೂ ದುಡಿಯುವ ಮನೆಗಳಲ್ಲಿ ಅದಕ್ಕೆ ಬಿಡುವೂ ಇಲ್ಲ. ಒಂದೊಮ್ಮೆ ಮಗು ಪಠ್ಯದ ಬದಲು ಬೇರೆ ಪುಸ್ತಕವನ್ನು ಮುಟ್ಟಿ ನೋಡಿದರೂ ಅದರ ಶೈಕ್ಷಣಿಕ ಭವಿಷ್ಯದ ಬಗೆಗೆ ಬಹು ದೊಡ್ಡ ಕನಸು ಹೊತ್ತಿರುವ ಹೆತ್ತವರು, ಅಂತಹ ಓದಿನ ಬಗೆಗೆ ಅಸ್ಪೃಶ್ಯ ಭಾವ ತಳೆದುಬಿಡುತ್ತಾರೆ. ಮಗುವಿನ ಗುರಿಯೇನಿದ್ದರೂ ಕಲಿತು ಉತ್ತಮ ಅಂಕ ಪಡೆದು ಉದ್ಯೋಗ ಗಳಿಸುವುದೇ ವಿನಾ ಕಾಗಕ್ಕ ಗೂಬಕ್ಕನ ಕತೆಗಳನ್ನು ಓದುವುದರಿಂದ ಯಾವುದೇ ಪುರುಷಾರ್ಥವನ್ನೂ ಸಾಧಿಸಿದಂತೆ ಆಗುವುದಿಲ್ಲ ಎಂದು ಅವರು ಎಂದೋ ತೀರ್ಮಾನಿಸಿಯಾಗಿದೆ.

ಇದರಿಂದಾಗಿ ಇಂದಿನ ವಿದ್ಯಾರ್ಥಿಗಳು ಅವರ ಪಾಠ ಪಠ್ಯದ ಹೊರಗಿನ ಪ್ರಪಂಚವನ್ನು ಅರಿಯುವುದಿಲ್ಲ. ನೈತಿಕ ಗುಣಗಳು, ಮಹಾಪುರುಷರು ಬಾಳಿ ಬದುಕಿದ ಬಗೆ, ಕರಟಕ-ದಮನಕರ ಪಂಚತಂತ್ರ ಯಾವುದೂ ಅವರ ಭವಿಷ್ಯದ ಸುಖೀ ಜೀವನಕ್ಕೆ ಅಗತ್ಯವೂ ಅಲ್ಲ ಎಂಬ ಮನೋಭಾವ ಮನೆಮಾಡಿದೆ. ಮಕ್ಕಳು ಕತೆ ಕೇಳುವುದು, ಪುಸ್ತಕ ಓದುವುದರಿಂದ ಹಿಂಜರಿದ ಪರಿಣಾಮವಾಗಿ, ಮಾರಾಟದ ದಾಖಲೆ ನಿರ್ಮಿಸಿದ್ದ ಮಕ್ಕಳ ನಿಯತಕಾಲಿಕಗಳು ನಿಂತುಹೋದವು. ಪ್ರಕಾಶನ ಪ್ರಪಂಚದಲ್ಲಿ ಮಕ್ಕಳ ಪುಸ್ತಕಗಳ ಪ್ರಕಟಣೆಯಲ್ಲಿ ಮುಂಚೂಣಿಯಲ್ಲಿದ್ದ ಸಂಸ್ಥೆಗಳು ಬಾಗಿಲು ಮುಚ್ಚಿದವು. ಕಾರ್ಟೂನ್ ಪುಸ್ತಕಗಳ ಸರಣಿಯನ್ನು ಹೊರತರುತ್ತಿದ್ದ ಹೆಸರಾಂತ ಪ್ರಕಾಶಕರು ಕೈಚೆಲ್ಲಿ ಹೋದರು.

ಮಕ್ಕಳು ಓದಿನಿಂದ ವಿಮುಖರಾಗಲು ಟಿ.ವಿ. ಮತ್ತು ಮೊಬೈಲ್ ಫೋನುಗಳು ಕಾರಣ ಎಂದು ಹೇಳುವವರಿದ್ದಾರೆ. ದೃಶ್ಯ ಮಾಧ್ಯಮವು ವಾಚ್ಯ ಮಾಧ್ಯಮವನ್ನು ಕೊಂದುಹಾಕಲು ಇವು ಪ್ರಬಲ ಕಾರಣಗಳೆಂಬುದು ಮಾತ್ರ ಒಪ್ಪತಕ್ಕದ್ದಲ್ಲ. ಓದಿನಿಂದ ಸಿಗುವ ಸುಖ ಮತ್ತು ಪುಸ್ತಕಗಳನ್ನು ಸಂಗ್ರಹಿಸಿಡುವುದರ ಮಹತ್ವವನ್ನು ಇಂದು ಪೋಷಕರು ಹಾಗೂ ಶಿಕ್ಷಣ ಸಂಸ್ಥೆಗಳು ತಿಳಿಹೇಳದೆ ಹೋಗಿರುವುದೇ ಪುಸ್ತಕ ಸಂಸ್ಕೃತಿಯ ಅವನತಿಗೆ ಮೂಲ ಎಂಬುದು ನಿಶ್ಚಿತ.

ಮಕ್ಕಳಿಗಾಗಿ ಸಾವಿರಾರು ಪುಸ್ತಕಗಳನ್ನು ಪ್ರಕಟಿಸಿದ ಬೆಂಗಳೂರಿನ ಹೆಸರಾಂತ ಪ್ರಕಾಶಕರು ಇತ್ತೀಚೆಗೆ ಮಕ್ಕಳ ಪುಸ್ತಕಗಳು ಮಾರಾಟವೇ ಆಗುತ್ತಿಲ್ಲ ಎಂದು ನೋವು ತೋಡಿಕೊಂಡಿದ್ದಾರೆ. ಅವರು ಮಕ್ಕಳ ಕತೆಗಳನ್ನು ಆ್ಯನಿಮೇಷನ್ ತಂತ್ರಜ್ಞಾನಕ್ಕೆ ಅಳವಡಿಸುವ ಕೆಲಸವನ್ನು ಮಾಡಿದರು. ಒಂದು ಕತೆಯ ಪ್ರತಿಯೊಂದು ಸಿ.ಡಿ. ತಯಾರಿಸಲು ನಲವತ್ತು ಸಾವಿರ ರೂಪಾಯಿ ಮುಗಿಸಿದ ಅವರು ಇದನ್ನು ವಿವರಿಸುತ್ತ, 'ಒಂದು ತಿಂಗಳಿನಲ್ಲಿ ಮಾರಾಟವಾದದ್ದು ಹದಿನಾಲ್ಕು ಸಾವಿರ ರೂಪಾಯಿ ಮೊತ್ತದ ಸಿ.ಡಿಗಳು ಮಾತ್ರ' ಎಂದು ವಿಷಾದದಿಂದ ಹೇಳಿದರು.

ಸಣ್ಣ ಕತೆಗಳ ರಚನೆಯ ವಿಧಾನ ಬದಲಾಗಿದೆ. ಮಾಸ್ತಿ, ಕಟ್ಟೀಮನಿಯವರ ಶೈಲಿ ಈಗ ಇಲ್ಲ. ಆದರೆ ಮಕ್ಕಳ ಕತೆಗಳ ರಚನೆಯಲ್ಲಿ ಹೊಸ ವಿಧಾನ ಇನ್ನೂ ಬಳಕೆಗೆ ಬಂದಿಲ್ಲ, ಅದೇ ರಾಕ್ಷಸ, ರಾಜಕುಮಾರಿ ಎನ್ನುವ ಆರೋಪವೂ ಇದೆ. ಆದರೆ ಹೊಸ ವಿಧಾನದ ಪ್ರಯತ್ನಗಳು ಆಗೇ ಇಲ್ಲ ಎಂದು ಹೇಳಲಾಗದು. ರಾಜಶೇಖರ ಭೂಸನೂರಮಠ ಅವರು ವೈಜ್ಞಾನಿಕ ಕತೆ, ಕಾದಂಬರಿಗಳನ್ನು ಬರೆದರು. ಹೊಸ ಶೈಲಿ, ಹೊಸ ವಿಧಾನ, ಸೃಜನಶೀಲ ಪ್ರಯೋಗಗಳು ನಡೆದರೂ ಮಾರಾಟ ದಾಖಲೆ ನಿರ್ಮಿಸಲು ಮಕ್ಕಳ ಪುಸ್ತಕಗಳು ಸಫಲವಾಗಲಿಲ್ಲ. ಮಕ್ಕಳ ಪುಸ್ತಕಗಳ ಪ್ರಕಟಣೆಯಲ್ಲಿ ಪ್ರಕಾಶಕರೂ ಅನಾಸಕ್ತರಾಗುತ್ತಿದ್ದಾರೆ. ಭಾರತದಲ್ಲಿ ಅದರಲ್ಲೂ ಕರ್ನಾಟಕದಲ್ಲಿ ವಿಶ್ವ ಮಕ್ಕಳ

ಪುಸ್ತಕ ದಿನದ ಆಚರಣೆ (ಏ. 2) ಸದ್ಯದ ಮಟ್ಟಿಗಂತೂ ಬರೀ ಶಾಸ್ತ್ರಾಚಾರವಾಗಬಹುದೇ ವಿನಾ ಅದರಿಂದ ದೊಡ್ಡ ಸಾಹಿತ್ಯ ಸೇವೆಯಂತೂ ನಡೆಯುವುದಿಲ್ಲ.

ಮಕ್ಕಳಿಗೆ ಕತೆ ಹೇಳುವುದು ಅವರ ನಿದ್ರೆಗೆ ಮಾತ್ರ ಸಹಾಯಕ ಎಂಬ ಭಾವದಿಂದ ಹೊರಬಂದು, ಪುಟ್ಟ ಮೆದುಳಿನ ವಿಕಸನಕ್ಕೆ ಅದರಿಂದ ಏನು ಲಾಭವಿದೆ ಎಂಬುದನ್ನು ಪೋಷಕರು ಅರಿತುಕೊಳ್ಳಬೇಕು. ಭಾಷೆಯ ಪರಿಪಕ್ವತೆ, ಕಲ್ಪನಾಶಕ್ತಿಯ ಉದ್ದೀಪನ, ಮನೋವಿಕಾಸ ಎಲ್ಲದಕ್ಕೂ ಕಾಲ್ಪನಿಕ ಕತೆಗಳು ಹೇಗೆ ಸಾಧಕ ಎನ್ನುವ ಸತ್ಯವನ್ನು ಹೆತ್ತವರು ಅರಿತುಕೊಳ್ಳಬೇಕು. ದಿನಕ್ಕೊಂದು ಕತೆ ಓದುವುದು ಅಥವಾ ಕೇಳುವುದು ಯಾವುದೇ ಮಗುವಿನ ಶೈಕ್ಷಣಿಕ ಬದುಕಿಗೆ ಧಕ್ಕೆ ತರಲಾರದು. ಮನೆಯಲ್ಲಿ ಮಗುವಿನದೇ ಒಂದು ಪುಸ್ತಕ ಸಂಗ್ರಹಾಲಯ ಸ್ಥಾಪಿಸಲು ಅದಕ್ಕೆ ಹಿರಿಯರು ನೆರವಾದಾಗಲೇ ವಿಶ್ವ ಮಕ್ಕಳ ಪುಸ್ತಕ ದಿನಾಚರಣೆಗೆ (ಏ. 2) ಅದು ಮಹತ್ವದ ಕೊಡುಗೆ ಎನಿಸಿಕೊಳ್ಳಲು ಸಾಧ್ಯ.

ಕ್ರಮಶಃ ಅಳಿದುಹೋಗುತ್ತಿರುವ ಸಾಹಿತ್ಯದ ಒಂದು ಪ್ರಕಾರದ ರಚನೆ ಪರಂಪರೆಯ ಉಳಿವು ಪೋಷಕರ ಕೈಯಲ್ಲಿದೆ. ಹಾಗೆಯೇ ಶಿಕ್ಷಕರು ಕೂಡ ಕತೆಗಳ ಓದಿನಿಂದ ಶಿಕ್ಷಣದ ಭವಿಷ್ಯ ಶಿಥಿಲವಾಗುವುದಿಲ್ಲ ಎಂಬ ಸತ್ಯವನ್ನು ಮನಗಾಣಬೇಕಾಗಿದೆ.

ವಾಚಕರ ವಾಣಿ

ಹೆಸರಿನ ತಂತ್ರಗಾರಿಕೆ ನಡೆಯದು

ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ. ಸಿ.ಎನ್.ಮಂಜುನಾಥ್ ಅವರ ವಿರುದ್ಧ ಅದೇ ಹೆಸರಿನ ಮತ್ತೊಬ್ಬ ಅಭ್ಯರ್ಥಿಯನ್ನು ಎಲ್ಲಿಂದಲೋ ಹುಡುಕಿ ತಂದು ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿಸಿರುವುದು ಅಚ್ಚರಿಯ ಸಂಗತಿಯೇನಲ್ಲ. ಇಂತಹ ತಂತ್ರಗಳು ವಿಧಾನಸಭಾ ಚುನಾವಣೆಯಲ್ಲೂ ನಡೆದಿದ್ದವು. ಆದರೆ ಈ ಬಗೆಯ ತಂತ್ರಗಾರಿಕೆ ಕೆಲಸಕ್ಕೆ ಬಾರದು. ಏಕೆಂದರೆ ಈ ರೀತಿಯಾದ ಹೆಸರಿನ ಗೊಂದಲದ ನಿವಾರಣೆಗಾಗಿ ಚುನಾವಣಾ ಆಯೋಗವು ಹಿಂದಿನ ವಿಧಾನಸಭಾ ಚುನಾವಣೆಯಲ್ಲಿ ಅಭ್ಯರ್ಥಿಗಳ ಭಾವಚಿತ್ರ ಹಾಗೂ ಪಕ್ಷದ ಚಿಹ್ನೆ ಎರಡನ್ನೂ ಮತಯಂತ್ರದಲ್ಲಿ ಸ್ಪಷ್ಟವಾಗಿ ನಮೂದಿಸಿತ್ತು. ಇದರಿಂದ ಮತದಾರರಲ್ಲಿ ಗೊಂದಲಕ್ಕೆ ಆಸ್ಪದ ಇರುವುದಿಲ್ಲ. ಆದ್ದರಿಂದ ಇಂತಹ ಕೆಳಮಟ್ಟದ ತಂತ್ರಗಾರಿಕೆ ಕೈಬಿಟ್ಟು, ಅಭಿವೃದ್ಧಿಪರ ವಿಚಾರಗಳಿಂದ ಮತದಾರರ ಮನ ಗೆಲ್ಲುವುದು ಹೆಚ್ಚು ಸೂಕ್ತ.

ಸುರೇಂದ್ರ ಪೈ, ಭಟ್ಕಳ

ಅನಿವಾರ್ಯವಾದ ಪಕ್ಷಾಂತರ ರಾಜಕೀಯ

90ರ ದಶಕದಲ್ಲಿ ಖಾಸಗಿ ಟಿ.ವಿ. ವಾಹಿನಿಯೊಂದರಲ್ಲಿ ಪ್ರಸಾರವಾಗುತ್ತಿದ್ದ 'ಮುಖಾಮುಖಿ' ಎಂಬ ಜನಪ್ರಿಯ ಕಾರ್ಯಕ್ರಮದಲ್ಲಿ ಹಿರಿಯ ರಾಜಕಾರಣಿಗಳು ಹಾಗೂ ಇತರ ಖ್ಯಾತನಾಮರ ಸಂದರ್ಶನ ಮಾಡಿ, ಕೆಲವು ಖಡಕ್ ಪ್ರಶ್ನೆಗಳ ಮೂಲಕ ಅವರನ್ನು ಇಕ್ಕಟ್ಟಿಗೆ ಸಿಲುಕಿಸುತ್ತಿದ್ದ ತೇಜಸ್ವಿನಿ ಗೌಡ ಈಗ ಬಿಜೆಪಿ ತೊರೆದು ಕಾಂಗ್ರೆಸ್ ಸೇರಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ. ಅಂದಿನ ಕಾಲದಲ್ಲಿ ಅವರ ಈ ಕಾರ್ಯಕ್ರಮ ಬಹಳ ಜನಪ್ರಿಯವಾಗಿತ್ತು. ಬಳಿಕ 2004ರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದಿಂದ ಲೋಕಸಭೆಗೆ ಆಯ್ಕೆಯಾಗಿದ್ದ ತೇಜಸ್ವಿನಿ, ನಂತರ 2014ರಲ್ಲಿ ಬಿಜೆಪಿಗೆ ಸೇರ್ಪಡೆಗೊಂಡು, ಟಿ.ವಿ. ಚರ್ಚೆ- ಸಂವಾದ ಮತ್ತು ಸಂದರ್ಶನ ಕಾರ್ಯಕ್ರಮಗಳಲ್ಲಿ ತಮ್ಮ ಮಾತಿನ ಮೋಡಿಯಿಂದ ಪಕ್ಷವನ್ನು ಸಮರ್ಥಿಸಿಕೊಳ್ಳುತ್ತಿದ್ದ ರೀತಿ ಕಣ್ಣಿಗೆ ಕಟ್ಟಿದಂತಿದೆ. ಬಿಜೆಪಿಯಲ್ಲಿ ತಮಗೆ ಉಳಿಗಾಲವಿಲ್ಲ ಎಂದು ಭಾವಿಸಿ, ಮರಳಿ ಗೂಡಿಗೆ ಅನ್ನುವಂತೆ ಅವರೀಗ ಕಾಂಗ್ರೆಸ್ ಸೇರಿದ್ದಾರೆ.

ಇಂದಿನ ರಾಜಕೀಯ ವ್ಯವಸ್ಥೆಯಲ್ಲಿ ಪಕ್ಷಾಂತರ ಅನಿವಾರ್ಯವಾಗಿ ಹೋಗಿದೆ. ಅದನ್ನು ತಪ್ಪು ಎನ್ನುವ ಕಾಲ ಸಹ ದೂರವಾಗಿದೆ. ಏನಾದರೂ ಅಪೇಕ್ಷೆ ಇಟ್ಟುಕೊಂಡೇ ತಮಗೆ ಇಷ್ಟವಾದ ಪಕ್ಷಕ್ಕೆ ಎಡತಾಕುವ ರಾಜಕಾರಣಿಗಳು, ಅಲ್ಲಿ ತಮಗೆ ಬೆಲೆ ಸಿಗದೇಹೋದರೆ ಬೇರೊಂದು ಪಕ್ಷಕ್ಕೆ ಅನಿವಾರ್ಯವಾಗಿ ಜಿಗಿಯಲೇ ಬೇಕಾಗುತ್ತದೆ. ಏಕೆಂದರೆ ರಾಜಕೀಯ ನಿಂತ ನೀರಲ್ಲ, ಅಲ್ಲವೇ?

ಕೆ.ವಿ.ವಾಸು, ಮೈಸೂರು

ಸ್ವಾಮಿಗಳ ನಡೆ ಮೇಲ್ಪಂಕ್ತಿಯಾಗಲಿ

ಜ್ಞಾನಯೋಗಾಶ್ರಮದ ಸಿದ್ಧೇಶ್ವರ ಸ್ವಾಮಿಗಳು ಕಲಬುರಗಿ ಜಿಲ್ಲೆಯ ಮರ್ತೂರು ಎಂಬ ಗ್ರಾಮಕ್ಕೆ 'ಮಿತಾಕ್ಷರ ಸಂಹಿತೆ'ಯ ಕರ್ತೃ ವಿಜ್ಞಾನೇಶ್ವರರ ಸ್ಮಾರಕವನ್ನು ಉದ್ಘಾಟಿಸಲು ಬಂದಿದ್ದರು. ವೇದಿಕೆಯ ಮೇಲೆ ಒಂದೇ ರೀತಿಯ ಆಸನಗಳನ್ನು ಹಾಕಲಾಗಿತ್ತು. ಆದರೆ ಸಿದ್ಧೇಶ್ವರ ಸ್ವಾಮಿಗಳು ಕುಳಿತುಕೊಳ್ಳುವ ಆಸನದ ಮೇಲೆ ಒಂದು ಬಿಳಿ ವಸ್ತ್ರವನ್ನು ಹಾಕಲಾಗಿತ್ತು. ಅದನ್ನು ನೋಡಿದ ಶ್ರೀಗಳು ಆ ವಸ್ತ್ರವನ್ನು ತೆಗೆಸಿದರು. ಇತರ ಅತಿಥಿಗಳಿಗಿಂತ ತಾನು 'ಮೇಲು' ಅಲ್ಲ ಎಂಬುದನ್ನು ಆ ಮೂಲಕ ನಿರೂಪಿಸಿದರು!

ಹುಬ್ಬಳ್ಳಿಯಲ್ಲಿ ಕೆಲ ದಿನಗಳ ಹಿಂದೆ ಹಮ್ಮಿಕೊಳ್ಳಲಾಗಿದ್ದ ಜಯಂತಿಯೊಂದರ ಕಾರ್ಯಕ್ರಮದ ವೇದಿಕೆಯ ಮೇಲೆ ಎತ್ತರದ ಸಿಂಹಾಸನದಲ್ಲಿ ಒಬ್ಬರು ಸ್ವಾಮಿಗಳು ಕುಳಿತಿದ್ದರೆ, ಕೆಳಗಿನ ಆಸನದಲ್ಲಿ ಮತ್ತೊಬ್ಬರು ಸ್ವಾಮೀಜಿ ಕುಳಿತಿದ್ದುದನ್ನು ದೃಶ್ಯ ಮಾಧ್ಯಮದಲ್ಲಿ ನೋಡಿ ಖೇದವೆನಿಸಿತು. ಸನ್ಯಾಸಿಗಳ ಮಧ್ಯೆಯೇ ಇಂಥ ಭೇದ ಬುದ್ಧಿಯಿದ್ದರೆ ಭಕ್ತರನ್ನು ಇವರು ಯಾವ ರೀತಿ ಕಾಣುತ್ತಾರೆ? ಬಸವಣ್ಣನವರ ತತ್ವಕ್ಕೆ ಅಪಚಾರವಾಗುವ ಈ ವರ್ತನೆ ದೂರವಾಗಿ, ಸಿದ್ಧೇಶ್ವರ ಸ್ವಾಮಿಗಳ ನಡೆ ಇಂತಹವರಿಗೆ ಮೇಲ್ಪಂಕ್ತಿಯಾಗಲಿ.

ಶಿವಕುಮಾರ ಬಂಡೋಳಿ, ಹುಣಸಗಿ

ರೈಲುಗಳಲ್ಲಿ ಬದಲಾಗಲಿ ಶೌಚಾಲಯ ವ್ಯವಸ್ಥೆ

ಮೈಸೂರಿನಿಂದ ಬೆಂಗಳೂರಿಗೆ ಹೊರಡುವ ಬಹುತೇಕ ಎಲ್ಲ ರೈಲುಗಾಡಿಗಳಲ್ಲಿ ಓಬಿರಾಯನ ಕಾಲದ ಶೌಚಾಲಯಗಳ ವ್ಯವಸ್ಥೆಯೇ ಇದೆ. ರೈಲುಗಾಡಿಗಳಲ್ಲಿ ಹೆಚ್ಚಾಗಿ ಪ್ರಯಾಣಿಸುವ ಹಿರಿಯ ನಾಗರಿಕರಲ್ಲಿ ಕೆಲವರು ಮಂಡಿ ನೋವಿನಿಂದ ಬಳಲುತ್ತಿರುತ್ತಾರೆ. ಅವರಿಗೆ ಈ ಶೌಚಾಲಯಗಳನ್ನು ಬಳಸುವುದು ಕಷ್ಟವಾಗುತ್ತದೆ ಮತ್ತು ಕೆಲವೊಮ್ಮೆ ಅದು ಮುಜುಗರಕ್ಕೂ ಕಾರಣವಾಗುತ್ತದೆ. ಹೀಗಾಗಿ, ಇಲ್ಲಿ ಕಮೋಡ್‌ಗಳನ್ನು ಅಳವಡಿಸುವುದು ಸೂಕ್ತ.

ಬೂಕನಕೆರೆ ವಿಜೇಂದ್ರ, ಮೈಸೂರು

ಸಾಲುಮರದ ಪರಿಕಲ್ಪನೆ ಕೊನೆಯಾಯಿತೇ?

ಸಾಲುಮರ ಎಂದಾಕ್ಷಣ ನೆನಪಾಗುವುದು ರಾಜ್ಯದ ಹೆಮ್ಮೆಯ ಸಾಲುಮರದ ತಿಮ್ಮಕ್ಕ ಮತ್ತು ಅವರು ನೆಟ್ಟ ಸಾಲುಮರದ ಸಾಧನೆ. ಇಂಥ ಸಾಲುಮರದ ಪರಿಕಲ್ಪನೆ ಪುರಾತನವಾದುದಾಗಿದ್ದು, ಹಳೆಯ ಕಾಲದ ಎಲ್ಲ ರಸ್ತೆಗಳ ಬದಿಯಲ್ಲೂ ವೈವಿಧ್ಯಮಯ ವೃಕ್ಷಗಳು ಸಾಲುಸಾಲಾಗಿ ಕಂಗೊಳಿಸುತ್ತಿದ್ದುದನ್ನು ಇತ್ತೀಚಿನವರೆಗೂ ಕಂಡಿದ್ದೇವೆ. ಪ್ರಸ್ತುತ ರಾಷ್ಟ್ರದಾದ್ಯಂತ ಹೆದ್ದಾರಿ ಯೋಜನೆಗಳು ಭರದಿಂದ ಅನುಷ್ಠಾನಗೊಳ್ಳುತ್ತಿವೆ. ಚತುಷ್ಪಥ, ಷಟ್ಪಥದಂತಹ ನವೀನ ವಿನ್ಯಾಸಗಳಲ್ಲಿ ರಾಷ್ಟ್ರೀಯ, ರಾಜ್ಯ ಹೆದ್ದಾರಿಗಳು ಆಕರ್ಷಕವಾಗಿ ರೂಪುಗೊಳ್ಳುತ್ತಿವೆ. ನಗರಗಳಿಂದ ಹಿಡಿದು ಹಳ್ಳಿಹಳ್ಳಿಯ ರಸ್ತೆಗಳೂ ಟಾರ್-ಕಾಂಕ್ರೀಟ್ ರಸ್ತೆಗಳಾಗಿ ಮಾರ್ಪಡುತ್ತಿವೆ. ಹೆಚ್ಚುತ್ತಿರುವ ಜನ-ವಾಹನ ಸಂಚಾರದ ಸುರಕ್ಷತೆಗಾಗಿ, ವೇಗದ ಸಂಚಾರಕ್ಕಾಗಿ, ಒಟ್ಟಾರೆ ಅಭಿವೃದ್ಧಿಗಾಗಿ ಇವು ಅನಿವಾರ್ಯವೂ ಸ್ವಾಗತಾರ್ಹವೂ ಆದ ಸಾಧನೆಗಳೇ.

ಆದರೆ ಇದಕ್ಕಾಗಿ, ನೂರಾರು ವರ್ಷಗಳಿಂದ ರಸ್ತೆಯುದ್ದಕ್ಕೂ ತಂಪೆರೆಯುತ್ತ ಪರಿಸರ ಸಮತೋಲನ ಕಾಯುತ್ತಿದ್ದ, ಪಕ್ಷಿ-ಪ್ರಾಣಿಗಳಿಗೆ ಆಸರೆಯಾಗಿದ್ದ ಲಕ್ಷಾಂತರ ಸಾಲುಮರಗಳನ್ನು ನಾವೀಗ ಕಳೆದುಕೊಳ್ಳುತ್ತಿದ್ದೇವೆ. ಅತ್ಯಾಕರ್ಷಕ, ಅತ್ಯಾಧುನಿಕ ತಂತ್ರಜ್ಞಾನದ ಟಾರ್–ಕಾಂಕ್ರೀಟ್ ರಸ್ತೆಗಳನ್ನು ನೋಡಬಹುದೇ ವಿನಾ ಪುರಾತನ ಪರಿಕಲ್ಪನೆಯ ಸುಂದರ ಸಾಲುಮರದ ದೃಶ್ಯವೇ ಇಲ್ಲದಂತಾಗಿದೆ. ಹೊಸ ಹೊಸ ರಸ್ತೆಗಳ ನಿರ್ಮಾಣದೊಡನೆ, ರಸ್ತೆಗಳ ಬದಿಯಲ್ಲಿ ವೈವಿಧ್ಯಮಯ ವೃಕ್ಷಗಳನ್ನು ಬೆಳೆಸುವ ನಮ್ಮ ಪುರಾತನ ಸಾಲುಮರದ ಪರಿಕಲ್ಪನೆಗೆ ಈಗ ಅಂತ್ಯ ಹಾಡಲಾಗಿದೆಯೇ?

ಆರ್.ಎಸ್.ಅಯ್ಯರ್, ತುಮಕೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕಚ್ಚತೀವು ದ್ವೀಪ

ಸರ್ಕಾರ ಹೇಳಿದ್ದೇ ಒಂದು ಮೋದಿಯ ಮಾತೇ ಇನ್ನೊಂದು

ಲೋಕಸಭಾ ಚುನಾವಣೆಯ ಆರಂಭಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು 'ಕಚ್ಚತೀವು' ದ್ವೀಪದ ವಿಷಯವನ್ನು ಪ್ರಸ್ತಾಪಿಸಿದ್ದಾರೆ. 'ಕಚ್ಚತೀವು ದ್ವೀಪವನ್ನು ಶ್ರೀಲಂಕಾಕ್ಕೆ ಕಾಂಗ್ರೆಸ್ ಬಿಟ್ಟುಕೊಟ್ಟಿದೆ' ಎಂದು ಮೋದಿ ಅವರು ತಮ್ಮ ವೈಯಕ್ತಿಕ ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಿದ್ದಾರೆ. ಆದರೆ ಮೋದಿ ಅವರ ಈ ಆರೋಪ ಸುಳ್ಳು ಎನ್ನುತ್ತವೆ ಸರ್ಕಾರದ ದಾಖಲೆಗಳು. ಎಲ್ಲಕ್ಕಿಂತ ಮುಖ್ಯವಾಗಿ, 'ಕಚ್ಚತೀವು ದ್ವೀಪವು ಎಂದಿಗೂ ಭಾರತಕ್ಕೆ ಸೇರಿರಲೇ ಇಲ್ಲ' ಎಂದು ಮೋದಿ ಅವರ ಸರ್ಕಾರವೇ ಈ ಹಿಂದೆ ಆರ್‌ಟಿಐ ಪ್ರಶ್ನೆಯೊಂದಕ್ಕೆ ಉತ್ತರ ನೀಡಿತ್ತು. ತಮ್ಮದೇ ಸರ್ಕಾರ ನೀಡಿದ್ದ ಉತ್ತರಕ್ಕೆ ವ್ಯತಿರಿಕ್ತವಾದ ಆರೋಪವನ್ನು ಪ್ರಧಾನಿ ಈಗ ಮಾಡಿದ್ದಾರೆ

● ಜಯಸಿಂಹ ಆರ್.

ಲೋಕಸಭಾ ಚುನಾವಣೆಯಲ್ಲಿ ಈಗ ಶ್ರೀಲಂಕಾದ ಕಚ್ಚತೀವು ದ್ವೀಪವೂ ಪ್ರಮುಖ ವಿಷಯದ ಸ್ಥಾನ ಪಡೆದಿದೆ. ಶ್ರೀಲಂಕಾದ ಜಲಗಡಿಯಲ್ಲಿ ಇರುವ 256 ಎಕರೆ ವಿಸ್ತೀರ್ಣದ ಈ ಸಣ್ಣ ದ್ವೀಪವನ್ನು ಪ್ರಧಾನಿ ನರೇಂದ್ರ ಮೋದಿ ಚುನಾವಣೆಯ ಕಣಕ್ಕೆ ಎಳೆದುತಂದಿದ್ದಾರೆ. ಮೋದಿ ಅವರು ತಮ್ಮ ವೈಯಕ್ತಿಕ ಎಕ್ಸ್ ಖಾತೆಯಲ್ಲಿ ಭಾನುವಾರ ಒಂದು ಪೋಸ್ಟ್ ಮಾಡಿದ್ದರು. ಕಾಂಗ್ರೆಸ್ ಸರ್ಕಾರವು ಕಚ್ಚತೀವು ದ್ವೀಪವನ್ನು ಶ್ರೀಲಂಕಾಕ್ಕೆ ಬಿಟ್ಟುಕೊಟ್ಟಿತ್ತು. ಇದರಿಂದ ಭಾರತೀಯರು ಆಕ್ರೋಶಗೊಂಡಿದ್ದರು. ದೇಶದ ಸಮಗ್ರತೆ ಮತ್ತು ಏಕತೆಯನ್ನು ದುರ್ಬಲಗೊಳಿಸುವುದೇ ಕಾಂಗ್ರೆಸ್‌ನ ಕಾರ್ಯವೈಖರಿ. ಈ ಕಾರಣದಿಂದ ಕಾಂಗ್ರೆಸ್ ಅನ್ನು ನಂಬಲು ಸಾಧ್ಯವಿಲ್ಲ ಎಂದು ಮೋದಿ ಆರೋಪಿಸಿದ್ದರು. ಈ ಆರೋಪಕ್ಕೆ ಮೋದಿ ಅವರು ಪತ್ರಿಕಾ ವರದಿಯೊಂದನ್ನು ಆಧಾರವಾಗಿ ಬಳಸಿಕೊಂಡಿದ್ದಾರೆ. ಆದರೆ ಮೋದಿ ಅವರ ಅಧಿಕಾರದ ಅವಧಿಯಲ್ಲೇ ವಿದೇಶಾಂಗ ವ್ಯವಹಾರಗಳ ಸಚಿವಾಲಯವು ಕಚ್ಚತೀವು ದ್ವೀಪವು ಭಾರತಕ್ಕೆ ಎಂದಿಗೂ ಸೇರಿರಲಿಲ್ಲ ಎಂದೇ ಹೇಳಿತ್ತು.

ರಾಮೇಶ್ವರದಿಂದ ಈಶಾನ್ಯ ದಿಕ್ಕಿನಲ್ಲಿ ಇರುವ ಈ ಸಣ್ಣ ದ್ವೀಪವು ಸ್ವಾತಂತ್ರ್ಯಾನಂತರ ಭಾರತ ಮತ್ತು ಶ್ರೀಲಂಕಾ ನಡುವೆ ವಿವಾದಕ್ಕೆ ಕಾರಣವಾಗಿತ್ತು. ಈ ದ್ವೀಪವು ತಮಗೆ ಸೇರಿದ್ದು ಎಂದು ಶ್ರೀಲಂಕಾವು ಡಚ್ಚರು ಮತ್ತು ಬ್ರಿಟಿಷರ ಆಳ್ವಿಕೆ ಅವಧಿಯ ದಾಖಲೆಗಳನ್ನು ತೋರಿಸಿತ್ತು. ರಾಮನಾಥಪುರದ ಅರಸು ಮನೆತನ ಇದರ ಒಡೆತನ ಹೊಂದಿತ್ತು ಎಂದು ಪ್ರತಿಪಾದಿಸಿತ್ತಾದರೂ, ಅದನ್ನು ಬೆಂಬಲಿಸುವ ಯಾವುದೇ ದಾಖಲೆಗಳನ್ನು ಒದಗಿಸಿರಲಿಲ್ಲ. ಎರಡು ದಶಕಕ್ಕೂ ಮೀರಿದ ಅವಧಿಯಲ್ಲಿ ಹಲವು ಸುತ್ತಿನ ಮಾತುಕತೆಗಳ ನಂತರ 1973ರಲ್ಲಿ ಭಾರತ-ಶ್ರೀಲಂಕಾ ಜಲಗಡಿಯನ್ನು ಅಂತಿಮಗೊಳಿಸಲು ನಿರ್ಧರಿಸಲಾಯಿತು. ಆ ಸಂಬಂಧ 1974ರಲ್ಲಿ ಒಪ್ಪಂದ ಮಾಡಿಕೊಳ್ಳಲಾಯಿತು.

1974ರ ಒಪ್ಪಂದದಲ್ಲಿ ಗುರುತಿಸಲಾದ ಜಲಗಡಿಯ ಪ್ರಕಾರ ಕಚ್ಚತೀವು ದ್ವೀಪವು ಶ್ರೀಲಂಕಾಕ್ಕೆ ಸೇರಿತು. ಆದರೆ ಈ ದ್ವೀಪವನ್ನು ಶ್ರೀಲಂಕಾದಿಂದ ಪಡೆದುಕೊಳ್ಳಬೇಕು ಎಂಬ ಕೂಗೂ ರಾಜಕೀಯ ವಲಯದಲ್ಲಿ ಇದ್ದೇ ಇತ್ತು. ಈ ಬಗ್ಗೆ ಸಂಸತ್ತಿನ ಉಭಯ ಸದನಗಳಲ್ಲಿ ಪ್ರಶ್ನೆಗಳನ್ನು ಎತ್ತಿದಾಗ ಎಲ್ಲಾ ಸರ್ಕಾರಗಳು, ಕಚ್ಚತೀವು ದ್ವೀಪದ ವಿಚಾರ ಈಗಾಗಲೇ ಮುಗಿದಿದೆ. ಅಲ್ಲಿನ ಕೆಲವು ಹಕ್ಕುಗಳ ಬಗ್ಗೆ ಮಾತ್ರ ವಿವಾದವಿದೆ ಎಂದೇ ಹೇಳಿಕೆ ನೀಡಿದ್ದವು. ಈ ಬಗ್ಗೆ ಪ್ರಶ್ನೆ ಕೇಳಿ, ಅಲಾಡಿ ಗುರುಸ್ವಾಮಿ ಅವರು 2015ರ ಜನವರಿಯಲ್ಲಿ ವಿದೇಶಾಂಗ ವ್ಯವಹಾರಗಳ ಸಚಿವಾಲಯಕ್ಕೆ ಮಾಹಿತಿ ಹಕ್ಕು ಕಾಯ್ದೆ ಅಡಿ ಅರ್ಜಿ ಸಲ್ಲಿಸಿದ್ದರು. ಸಚಿವೆ ಸುಷ್ಮಾ ಸ್ವರಾಜ್ ನೇತೃತ್ವದ ವಿದೇಶಾಂಗ ವ್ಯವಹಾರಗಳ ಸಚಿವಾಲಯವು ಆ ಅರ್ಜಿಗೆ ಅದೇ ಜನವರಿ 27ರಂದು ಉತ್ತರ ನೀಡಿತ್ತು.

ಉತ್ತರದಲ್ಲಿ, '1974 ಮತ್ತು 1976ರ ಒಪ್ಪಂದಗಳ ಪ್ರಕಾರ ಕಚ್ಚತೀವು ದ್ವೀಪವು ಶ್ರೀಲಂಕಾದ ವ್ಯಾಪ್ತಿಯಲ್ಲಿ ಬರುತ್ತದೆ. ಅಲ್ಲಿಯವರೆಗೆ ಆ ದ್ವೀಪವು ಯಾರ ವ್ಯಾಪ್ತಿಗೆ ಸೇರುತ್ತದೆ ಎಂಬುದನ್ನು ಗುರುತಿಸಿರಲೇ ಇಲ್ಲ. ಹೀಗಾಗಿ ಎರಡೂ ದೇಶಗಳ ಮಧ್ಯೆ ಜಲಗಡಿಯನ್ನು ಗುರುತಿಸುವ ಅವಧಿಯಲ್ಲಿ ಭಾರತವು ಕಚ್ಚತೀವು ದ್ವೀಪವನ್ನು ಶ್ರೀಲಂಕಾಕ್ಕೆ ಬಿಟ್ಟುಕೊಡುವ ಅಥವಾ ಸ್ವಾಧೀನಪಡಿಸಿಕೊಳ್ಳುವ ಪ್ರಶ್ನೆಯೇ ಉದ್ಭವಿಸುವುದಿಲ್ಲ' ಎಂದು ಸಚಿವಾಲಯವು ವಿವರಿಸಿತ್ತು. ಜತೆಗೆ ಒಪ್ಪಂದಗಳಿಗೆ ಸಂಬಂಧಿಸಿದ ದಾಖಲೆಗಳನ್ನೂ ಉತ್ತರದೊಂದಿಗೆ ನೀಡಿತ್ತು. ಮೋದಿ ಅವರ ಸರ್ಕಾರದ್ದೇ ಸಚಿವಾಲಯವು ಅಧಿಕೃತವಾಗಿ ನೀಡಿದ್ದ ದಾಖಲೆಗಳ ಪ್ರಕಾರ ಕಚ್ಚತೀವು ದ್ವೀಪವು ಎಂದಿಗೂ ಭಾರತಕ್ಕೆ ಸೇರಿರಲೇ ಇಲ್ಲ.

ತಮಿಳುನಾಡಿನ ಕನ್ಯಾಕುಮಾರಿ ಮತ್ತು ರಾಮನಾಥಪುರ ಜಿಲ್ಲೆಯ ಮೀನುಗಾರರು ಪಾಕ್ ಜಲಸಂಧಿ ಮತ್ತು ಮನ್ನಾರ್ ಜಲಸಂಧಿಯಲ್ಲಿ ಮೀನುಗಾರಿಕೆ ನಡೆಸುತ್ತಾರೆ. ಆಗ ಶ್ರೀಲಂಕಾದ ಜಲಗಡಿಯನ್ನು ಪ್ರವೇಶಿಸಿದ ಮೀನುಗಾರರನ್ನು ಅಲ್ಲಿನ ನೌಕಾಪಡೆ ಬಂಧಿಸುತ್ತದೆ. ಕನ್ಯಾಕುಮಾರಿಯಲ್ಲಿ ಬಿಜೆಪಿಯ ಮತನೆಲೆ ಇದೆ. 2014ರಲ್ಲಿ ಬಿಜೆಪಿಯ ಅಭ್ಯರ್ಥಿ ಇಲ್ಲಿಂದ ಗೆದ್ದು ಸಂಸತ್ತು ಪ್ರವೇಶಿಸಿದ್ದರು. ಮೀನುಗಾರ ಮತದಾರರೇ ಅಧಿಕವಾಗಿರುವ ಈ ಕ್ಷೇತ್ರದಿಂದ ಮತ್ತೆ ಆರಿಸಿಬರಲು ಬಿಜೆಪಿ ತಂತ್ರ ರೂಪಿಸಿದೆ. ಈ ಕಾರಣದಿಂದಲೇ ಈಗ ಕಚ್ಚತೀವು ದ್ವೀಪದ ವಿಚಾರವನ್ನು ರಾಜಕೀಯಕ್ಕೆ ಎಳೆದುತರುತ್ತಿದೆ ಎಂಬುದು ಕಾಂಗ್ರೆಸ್ ಮತ್ತು ಡಿಎಂಕೆ ನಾಯಕರ ಪ್ರತಿಕ್ರಿಯೆ.



* ಮನ್ನಾರ್ ಜಲಸಂಧಿಯಿಂದ ದಕ್ಷಿಣಕ್ಕೆ ರಚಿಸಲಾದ ಜಲಗಡಿಗೆ ಸಂಬಂಧಿಸಿದಂತೆ 1976ರಲ್ಲಿ ಒಪ್ಪಂದ ಮಾಡಿಕೊಳ್ಳಲಾಗಿತ್ತು. ಕಚ್ಚತೀವು ದ್ವೀಪದ ಸಂಬಂಧ ಎರಡೂ ದೇಶಗಳ ಹಕ್ಕುಗಳಿಗೆ ಈ ಒಪ್ಪಂದದಲ್ಲಿ ಯಾವುದೇ ಬದಲಾವಣೆ ಮಾಡಿರಲಿಲ್ಲ

ಬಿಜೆಪಿ ಅವಧಿಯಲ್ಲೇ ಹೆಚ್ಚು ಮೀನುಗಾರರ ಬಂಧನ

ಶ್ರೀಲಂಕಾವು ತಮಿಳುನಾಡಿನ ಮೀನುಗಾರರನ್ನು ಬಂಧಿಸುತ್ತಿರುವ ವಿಷಯವು ಚುನಾವಣೆಯ ಹೊಸ್ತಿಲಲ್ಲಿ ಮುನ್ನೆಲೆಗೆ ಬಂದಿದೆ. ಸೋಮವಾರ ಈ ವಿಷಯವನ್ನು ಪ್ರಸ್ತಾಪಿಸಿರುವ ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಅವರು, '20 ವರ್ಷಗಳಲ್ಲಿ ತಮಿಳುನಾಡಿನ 6,184 ಮೀನುಗಾರರನ್ನು ಶ್ರೀಲಂಕಾ ಬಂಧಿಸಿದೆ' ಎಂದು ಹೇಳಿದ್ದಾರೆ. ಇದಕ್ಕೆ ತಿರುಗೇಟು ನೀಡಿರುವ ಕಾಂಗ್ರೆಸ್ ನಾಯಕ ಪಿ.ಚಿದಂಬರಂ, 'ಅಟಲ್ ಬಿಹಾರಿ ವಾಜಪೇಯಿ ಅವರ ಅವಧಿಯಲ್ಲಿ ಶ್ರೀಲಂಕಾ ಮೀನುಗಾರರನ್ನು ಬಂಧಿಸಿರಲಿಲ್ಲವೇ' ಎಂದು ಪ್ರಶ್ನಿಸಿದ್ದಾರೆ. ಈ ರಾಜಕೀಯ ಜಟಾಪಟಿ ಒಂದೆಡೆಯಾದರೆ, ದತ್ತಾಂಶಗಳು ಇನ್ನೊಂದು ಕತೆ ಹೇಳುತ್ತವೆ.

ಈ 20 ವರ್ಷ, ಅಂದರೆ 2004ರಿಂದ 2024ರ ಮಾರ್ಚ್ ಮೂರನೇ ವಾರದವರೆಗೆ ಶ್ರೀಲಂಕಾವು ತಮಿಳುನಾಡಿನ ಒಟ್ಟು 6,184 ಮೀನುಗಾರರನ್ನು ಬಂಧಿಸಿದೆ. ಈ 20 ವರ್ಷಗಳಲ್ಲಿ ಕಾಂಗ್ರೆಸ್ ನೇತೃತ್ವದ ಮೊದಲ ಹತ್ತು ವರ್ಷಗಳ ಆಡಳಿತಾವಧಿಯಲ್ಲಿ ಬಂಧನಕ್ಕೆ ಒಳಗಾಗಿದ್ದು 2,915 ಮೀನುಗಾರರು. ಆದರೆ ನಂತರದಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎರಡೂ ಸರ್ಕಾರಗಳ ಅವಧಿಯಲ್ಲಿ ಶ್ರೀಲಂಕಾವು ಬಂಧಿಸಿದ ತಮಿಳುನಾಡಿನ ಮೀನುಗಾರರ ಸಂಖ್ಯೆ 3,269. ಇದು ಯುಪಿಎ ಸರ್ಕಾರದ ಅವಧಿಯಲ್ಲಿನ ಬಂಧನಗಳಿಗಿಂತ ಹೆಚ್ಚು. ಇನ್ನೂ ಕಳವಳಕಾರಿ ಅಂಶವೆಂದರೆ ಈ ವರ್ಷದ ಮೊದಲ 80 ದಿನಗಳಲ್ಲಿ ಶ್ರೀಲಂಕಾವು ತಮಿಳುನಾಡಿನ 132 ಮೀನುಗಾರರನ್ನು ಬಂಧಿಸಿದೆ.

ಶ್ರೀಲಂಕಾ ಬಂಧಿಸಿದ ತಮಿಳುನಾಡಿನ ಮೀನುಗಾರರ ವಿವರ



ಆಧಾರ: 1974ರ ಭಾರತ–ಶ್ರೀಲಂಕಾ ಅಂತರರಾಷ್ಟ್ರೀಯ ಜಲಗಡಿ ಒಪ್ಪಂದ, 1976ರ ಭಾರತ–ಶ್ರೀಲಂಕಾ ಅಂತರರಾಷ್ಟ್ರೀಯ ಜಲಗಡಿ ಒಪ್ಪಂದ, ವಿದೇಶಾಂಗ ಸಚಿವಾಲಯವು ಆರ್‌ಟಿಐ ಅಡಿ ನೀಡಿದ ಉತ್ತರ, ವಿದೇಶಾಂಗ ಸಚಿವಾಲಯವು ಲೋಕಸಭೆ ಮತ್ತು ರಾಜ್ಯಸಭೆಗೆ ನೀಡಿದ ಲಿಖಿತ ಉತ್ತರಗಳು, ಪಿಟಿಐ

ನಮ್ಮ ಮೀನುಗಾರರಿಗೂ ಇವೆ ಹಕ್ಕುಗಳು

1974ರಲ್ಲಿ ಒಪ್ಪಂದ ಮಾಡಿಕೊಂಡಾಗ ಕಚ್ಚತೀವು ದ್ವೀಪದ ಮೇಲೆ ತಮಿಳುನಾಡಿನ ಮೀನುಗಾರರಿಗೆ ಕೆಲವು ಹಕ್ಕುಗಳನ್ನು ಉಳಿಸಿಕೊಳ್ಳಲಾಗಿತ್ತು.

ಅದಕ್ಕೂ ಮೊದಲು ತಮಿಳುನಾಡು ಮತ್ತು ಶ್ರೀಲಂಕಾದ ಮೀನುಗಾರರು ದ್ವೀಪದ ಸುತ್ತ-ಮುತ್ತ ಮೀನುಗಾರಿಕೆ ನಡೆಸುತ್ತಿದ್ದರು. ಶ್ರೀಲಂಕಾ ಮತ್ತು ಭಾರತದ ನಟ್ಟನಡುವೆ ಇರುವ ಈ ದ್ವೀಪವನ್ನು, ಮೀನುಗಾರಿಕೆ ವೇಳೆ ವಿಶ್ರಾಂತಿ ಪಡೆಯಲು ಮತ್ತು ಬಲೆ ಒಣಗಿಸಿಕೊಳ್ಳಲು ಬಳಸುತ್ತಿದ್ದರು. ಅದರ ಹೊರತಾಗಿ ಈ ದ್ವೀಪವು ಸಂಪೂರ್ಣ ನಿರ್ಜನವಾಗಿತ್ತು. ಈ ದ್ವೀಪದಲ್ಲಿ ಸಂತ ಅಂಥೋಣಿಯವರ ಚರ್ಚ್ ಇದೆ. ವರ್ಷದಲ್ಲಿ ಒಮ್ಮೆ ಎರಡೂ ಕಡೆಯ ಮೀನುಗಾರರು ಇಲ್ಲಿ ಸೇರಿ ಸಂತ ಅಂಥೋಣಿಯವರ ಹಬ್ಬವನ್ನು ಆಚರಿಸುತ್ತಾರೆ.

1974ರಲ್ಲಿ ಒಪ್ಪಂದ ಮಾಡಿಕೊಂಡಾಗ ಭಾರತದ ಮೀನುಗಾರರು ದ್ವೀಪದ ಸುತ್ತ ಮೀನುಗಾರಿಕೆ ನಡೆಸುವ ಹಕ್ಕನ್ನು ನೀಡಲು ಶ್ರೀಲಂಕಾ ನಿರಾಕರಿಸಿತು. ಶ್ರೀಲಂಕಾದ ಪೂರ್ವಾನುಮತಿ ಮತ್ತು ವೀಸಾ ಇಲ್ಲದೇ ತಮಿಳುನಾಡಿನ ಮೀನುಗಾರರು ದ್ವೀಪದಲ್ಲಿ ಸಂತ ಅಂಥೋಣಿಯವರ ಹಬ್ಬ ಆಚರಿಸಲು, ಮೀನುಗಾರಿಕೆ ವೇಳೆ ವಿಶ್ರಾಂತಿ ಪಡೆಯಲು ಮತ್ತು ಬಲೆ ಒಣಗಿಸುವ ಹಕ್ಕುಗಳನ್ನು ಭಾರತ ಸರ್ಕಾರವು ಉಳಿಸಿಕೊಂಡಿತು. 1986ರವರೆಗೂ ಇದು ಅವ್ಯಾಹತವಾಗಿ ನಡೆಯುತ್ತಿತ್ತು. ಆದರೆ ಆನಂತರ ಎಲ್‌ಟಿಟಿಇ ಚಟುವಟಿಕೆಗಳು ತೀವ್ರವಾದ ಕಾರಣ ಭದ್ರತೆಯ ನೆಪವೊಡ್ಡಿ, ಶ್ರೀಲಂಕಾವು ಈ ಹಕ್ಕುಗಳಿಗೆ ನಿರ್ಬಂಧ ಹೇರಿತು.

ಆದರೆ ಈಗ ತಮಿಳುನಾಡಿನ ಮೀನುಗಾರರು ಸಂತ ಅಂಥೋಣಿಯವರ ಹಬ್ಬ ಆಚರಿಸಲು ಕಚ್ಚತೀವು ದ್ವೀಪಕ್ಕೆ ಭೇಟಿ ನೀಡಬಹುದಾಗಿದೆ. ವಿಶ್ರಾಂತಿ ಪಡೆಯುವ ಮತ್ತು ಬಲೆ ಒಣಗಿಸುವ ಹಕ್ಕು ಇದೆಯಾದರೂ, ಆ ಚಟುವಟಿಕೆ ನಡೆಸಿದವರ ಮೇಲೂ ಮೀನುಗಾರಿಕೆ ನಡೆಸಿದ ಆರೋಪ ಹೊರಿಸಿ ಬಂಧಿಸಲಾಗುತ್ತಿದೆ.

ಈ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲು ಭಾರತ ಸರ್ಕಾರವು ಶ್ರೀಲಂಕಾ ಜತೆಗೆ ಹಲವು ಸುತ್ತಿನ ಮಾತುಕತೆ ನಡೆಸಿದೆಯಾದರೂ, ಅದು ಫಲಪ್ರದವಾಗಿಲ್ಲ.

ಸಿನಿ ಬಿಟ್ಸ್

ಆರ್‌ಸಿ ಸ್ಟುಡಿಯೊಸ್ ಚಿತ್ರಕ್ಕೆ ಸೆಂಚುರಿ ಸ್ಟಾರ್ ನಾಯಕ

ವರ್ಷದ ಆರಂಭದಲ್ಲಿ ತಮ್ಮ 'ಆರ್‌ಸಿ ಸ್ಟುಡಿಯೊಸ್'ನಡಿ ನಿರ್ಮಾಣವಾಗಲಿರುವ ಐದು ಸಿನಿಮಾಗಳನ್ನು ಘೋಷಿಸಿದ್ದ ನಿರ್ದೇಶಕ ಆರ್. ಚಂದ್ರು, ಇದೀಗ ಸೆಂಚುರಿ ಸ್ಟಾರ್ ಜೊತೆಗೆ ಹೊಸ ಪ್ರಾಜೆಕ್ಟ್ ಘೋಷಿಸಿದ್ದಾರೆ.

ಆರ್. ಚಂದ್ರು, ಶಿವರಾಜ್‌ಕುಮಾರ್

ಈ ಕುರಿತು ಟ್ವೀಟ್ ಮಾಡಿರುವ ಚಂದ್ರು, 'ಕನ್ನಡದ ಸೂಪರ್‌ಹಿಟ್ ಚಿತ್ರ 'ಮೈಲಾರಿ' ಮುಹೂರ್ತಕ್ಕೆ 14 ವರ್ಷಗಳು ತುಂಬಿದ ಈ ಸಂದರ್ಭದಲ್ಲಿ, ಕರುನಾಡ ಚಕ್ರವರ್ತಿ ಶಿವರಾಜ್ ಕುಮಾರ್ ಅವರಿಗೆ ಹೊಸ ಚಿತ್ರ ಆರಂಭಿಸುತ್ತಿರುವುದು ಮತ್ತಷ್ಟು ಖುಷಿ ತಂದಿದೆ' ಎಂದಿದ್ದಾರೆ. ಇದು 'ಆರ್‌ಸಿ ಸ್ಟುಡಿಯೊಸ್'ನ ಆರನೇ ಪ್ರಾಜೆಕ್ಟ್ ಆಗಿರಲಿದೆ. ಸಿನಿಮಾದ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ಚಿತ್ರತಂಡ ಹಂಚಿಕೊಂಡಿಲ್ಲ.

ಕನ್ನಡ ಚಿತ್ರರಂಗದ ಇತಿಹಾಸದಲ್ಲೇ ಮೊದಲ ಬಾರಿಗೆ ಏಕಕಾಲದಲ್ಲಿ ಐದು ಸಿನಿಮಾಗಳ ನಿರ್ಮಾಣವನ್ನು 'ಆರ್‌ಸಿ ಸ್ಟುಡಿಯೊಸ್' ಘೋಷಿಸಿತ್ತು. 'ಕಬ್ಜ-2', 'ಡಾಗ್', 'ಫಾದರ್', 'ಪಿ.ಒ.ಕೆ', 'ಶ್ರೀ ರಾಮ ಬಾಣ ಚರಿತ' ಸಿನಿಮಾಗಳನ್ನು ನಿರ್ಮಾಣ ಮಾಡುತ್ತಿರುವುದಾಗಿ ಕಳೆದ ಜನವರಿಯಲ್ಲಿ ಚಂದ್ರು ಘೋಷಿಸಿದ್ದರು. ಇದರಲ್ಲಿ 'ಕಬ್ಜ-2' ಮತ್ತು 'ಪಿ.ಒ.ಕೆ' ಸಿನಿಮಾಗಳನ್ನು ನಿರ್ದೇಶಿಸುತ್ತಿರುವುದಾಗಿ ಚಂದ್ರು ಹೇಳಿದ್ದರು. ಉಳಿದೆಲ್ಲ ಸಿನಿಮಾಗಳನ್ನು ಚಂದ್ರು ನಿರ್ಮಾಣ ಮಾಡುತ್ತಿದ್ದಾರೆ. ❖

ಜಾಣನಾದ ದಡ್ಡ ಪ್ರವೀಣ

ರಿಷಬ್ ಶೆಟ್ಟಿ ನಿರ್ದೇಶನದ 'ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕಾಸರಗೋಡು' ಚಿತ್ರದಲ್ಲಿ ದಡ್ಡ ಪ್ರವೀಣನ ಪಾತ್ರದಲ್ಲಿ ಕಾಣಿಸಿಕೊಂಡಿದ್ದ ನಟ ರಂಜನ್ ಬಳಿಕ 'ಕಾಂತಾರ' ಸಿನಿಮಾದಲ್ಲೂ ಮಿಂಚಿದ್ದರು. ಇದೀಗ 'ಸ್ಕ್ಯಾಮ್ 1770' ಚಿತ್ರದಲ್ಲಿ ಜಾಣ ವಿದ್ಯಾರ್ಥಿಯಾಗಿ ರಂಜನ್ ಕಾಣಿಸಿಕೊಂಡಿದ್ದು, ಶಿಕ್ಷಣ ಕ್ಷೇತ್ರದ ದೊಡ್ಡ ಸ್ಕ್ಯಾಮ್ ಹಿಂದೆ ಬಿದ್ದಿದ್ದಾರೆ.

ವಿಕಾಸ್ ಪುಷ್ಪಗಿರಿ ಆ್ಯಕ್ಷನ್ ಕಟ್ ಹೇಳಿರುವ 'ಸ್ಕ್ಯಾಮ್ 1770' ಚಿತ್ರದ ಟ್ರೇಲರ್ ಇತ್ತೀಚೆಗೆ ಬಿಡುಗಡೆಯಾಯಿತು. ಡಿ ಕ್ರಿಯೇಷನ್ಸ್ ಲಾಂಛನದಲ್ಲಿ ದೇವರಾಜ್ ಆರ್. ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. 'ಪ್ರಸ್ತುತ ಶಿಕ್ಷಣ ವ್ಯವಸ್ಥೆ ಕುರಿತಾದ ಚಿತ್ರ ಇದಾಗಿದೆ. ಶಿಕ್ಷಣ ಇಂದು ವ್ಯವಹಾರ ಆಗಿದೆ. ಮಕ್ಕಳಿಗೆ ವಿದ್ಯಾಭ್ಯಾಸ ತಪ್ಪಿದ್ದರೆ ಬದುಕುವುದು ಕಷ್ಟ. ಆದರೆ ಅಂತಹ ವಿದ್ಯಾಭ್ಯಾಸ ಇಂದು ಬಡವರಿಗೆ ಹಾಗೂ ಮಧ್ಯಮವರ್ಗದ ಜನರಿಗೆ ದುಬಾರಿಯಾಗಿದೆ. ಪ್ರಸ್ತುತ ಶಿಕ್ಷಣ ವ್ಯವಸ್ಥೆಯಲ್ಲಿನ ನ್ಯೂನತೆಗಳನ್ನು ತೋರಿಸುವ ಪ್ರಯತ್ನ ಇದಾಗಿದೆ. ಏಪ್ರಿಲ್ 12 ರಂದು ಚಿತ್ರ ತೆರೆಗೆ ಬರಲಿದೆ' ಎನ್ನುತ್ತಾರೆ ವಿಕಾಸ್ ಪುಷ್ಪಗಿರಿ.

'ಸ.ಹಿ.ಪ್ರಾ.ಶಾಲೆ ಕಾಸರಗೋಡು' ಚಿತ್ರದಲ್ಲಿ 'ದಡ್ಡ ಪ್ರವೀಣ'ನಾಗಿದ್ದ ನಾನು ಇದರಲ್ಲಿ ಜಾಣ ವಿದ್ಯಾರ್ಥಿಯ ಪಾತ್ರ ಮಾಡಿದ್ದೇನೆ. ಸ್ಕ್ಯಾಮ್ ಬಯಲಿಗೆಳೆಯುವ ವಿದ್ಯಾರ್ಥಿಯಾಗಿ ನಾನು ಕಾಣಿಸಿಕೊಂಡಿದ್ದೇನೆ' ಎಂದರು ರಂಜನ್. ಚಿತ್ರದಲ್ಲಿ ನಾಯಕಿಯಾಗಿ ನಿಶ್ಚಿತ ನಟಿಸಿದ್ದು, ಹರಿಣಿ, ನಾರಾಯಣಸ್ವಾಮಿ, ನಟನ ಪ್ರಶಾಂತ್, ರಾಘು ಶಿವಮೊಗ್ಗ ಮುಂತಾದವರಿದ್ದಾರೆ. ❖

ನಿಶ್ಚಿತ, ರಂಜನ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ಆದ್ಯತೆಯೇ ಸಾಧನೆಗೆ ದಾರಿ

ನುಡಿ ಬೆಳಗು

ಪಿ. ಚಂದ್ರಿಕಾ

ಬುದ್ಧ ಹೇಳಿದ, 'ಪ್ರತಿಯೊಬ್ಬ ಮನುಷ್ಯನೂ ಮೋಕ್ಷವನ್ನು ಪಡೆಯಬಹುದು ಅಂತಹ ಶಕ್ತಿ ಪ್ರತಿಯೊಂದು ಜೀವಕ್ಕೂ ಇದೆ' ಎಂದು. ಶಿಷ್ಯ ಕೇಳಿದ, 'ಮೋಕ್ಷವನ್ನು ಪಡೆದುಕೊಳ್ಳುವುದೇ ಮನುಷ್ಯನ ಗುರಿಯಾದರೆ, ಎಲ್ಲ ಮನುಷ್ಯರಿಗೂ ಅದು ಏಕೆ ಸಿಗುತ್ತಿಲ್ಲ? ಅದಕ್ಕಾಗಿ ನೀನು ಸಹಾಯ ಮಾಡಬೇಕಲ್ಲವೇ?' ಎಂದು. 'ಸಹಾಯ ಮಾಡೋಣ, ಆದರೆ ಅದು ಅವರ ಬೇಕುಗಳ ಪಟ್ಟಿಯಲ್ಲಿ ಇದೆಯಾ ಇಲ್ಲವಾ? ತಿಳಿಯಬೇಕು. ನಿನಗೆ ಪರಿಚಿತರಿರುವ ಎಲ್ಲರ ಹತ್ತಿರ ಹೋಗಿ, ಏನನ್ನೂ ಹೇಳದೆ, ಅವರ ಅಗತ್ಯದ ಪಟ್ಟಿಯನ್ನು ಕೇಳಿ ತೆಗೆದುಕೊಂಡು ಬಾ' ಎಂದನು ಬುದ್ಧ. ಶಿಷ್ಯ ಮನೆ ಮನೆಗಳನ್ನು ಸುತ್ತಿದ, ಕಂಡವರನ್ನೆಲ್ಲಾ ಕೆದಕಿ ಕೆದಕಿ ಕೇಳಿದ.

ಕೇಳಿದವರೆಲ್ಲಾ ಚಿನ್ನ ಬೆಳ್ಳಿ, ಹಣ, ಬಂಗಲೆ, ವಸ್ತ್ರ... ಹೀಗೆ ಯಾವ ಯಾವುದನ್ನೋ ಆದ್ಯತೆಯಾಗಿ ಪಟ್ಟಿ ಮಾಡಿಕೊಟ್ಟರು. ಶಿಷ್ಯನಿಗೆ ತಲೆ ಕೆಟ್ಟು ಹೋಯಿತು. ಜಗತ್ತಿನ ಎಲ್ಲ ಜೀವಗಳ ಉದ್ಧರಣ ಆಗಬೇಕೆಂದು ಬುದ್ಧನನ್ನು ಪ್ರಶ್ನಿಸಿದವನಿಗೆ ಜನರ ಆದ್ಯತೆಯಲ್ಲಿ ಮೋಕ್ಷವೇ ಇಲ್ಲವಲ್ಲ ಎನ್ನುವ ಖೇದವೂ ಆಯಿತು. ಕಡೆಗೆ ಅವನು ಕೂಗಿ ಕೇಳಿದ, 'ನಿಮಗೆ ಯಾರಿಗೂ ಮೋಕ್ಷ ಬೇಡವೇ?' ಕೆಲವರು ನಕ್ಕರು, 'ಹುಚ್ಚಾ ಬದುಕಿರುವವರೆಗೂ ಹೊಟ್ಟೆ ತುಂಬಿಸಿಕೊಳ್ಳಬೇಕು. ಅದಕ್ಕೆ ಹಣಬೇಕು. ಇರಲಿಕ್ಕೆ ಮನೆ ಬೇಕು ಅದಕ್ಕೆ ದುಡಿಯಬೇಕು, ನಿನ್ನ ಮಾತನ್ನು ಕೇಳಿದರೆ ನಾವು ಸಾಯುವುದಲ್ಲದೆ, ಮನೆಯಲ್ಲಿರುವವರನ್ನೆಲ್ಲಾ ಸಾಯಿಸಬೇಕಾಗುತ್ತದೆ' ಎಂದರು.

ಶಿಷ್ಯ ಸಪ್ಪಗೆ ಮುಖಮಾಡಿ ಬುದ್ಧನ ಹತ್ತಿರ ಬಂದು ಪಟ್ಟಿಯನ್ನು ಇಡುತ್ತಾನೆ. ಕಿರುನಗೆಯಿಂದ ಬುದ್ಧ ಆ ಪಟ್ಟಿಯನ್ನು ಕೈಗೆತ್ತಿಕೊಂಡು ನೋಡುತ್ತಾನೆ. ಆ ಪಟ್ಟಿಯಲ್ಲಿ ನೂರಾರು ಜನರ ನೂರಾರು ಅಪೇಕ್ಷೆಗಳ ರಾಶಿಯಿದೆ, ಮೋಕ್ಷ ಎನ್ನುವ ಪದವೇ ಇರಲಿಲ್ಲ. ಬುದ್ಧ ಕೇಳಿದ, 'ನಿನ್ನ ಪಟ್ಟಿಯಲ್ಲಿರುವ ಜನರಿಗೆ ಮೋಕ್ಷದ ಅಪೇಕ್ಷೆಯೇ ಇಲ್ಲವಲ್ಲ'. ಅದಕ್ಕೆ ಶಿಷ್ಯ, 'ಅದೇ ಗುರುವೇ ನನಗೂ ಅಚ್ಚರಿಯಾಗುತ್ತಿರುವುದು, ಪ್ರತಿಯೊಬ್ಬ ಮನುಷ್ಯನೂ ಮೋಕ್ಷವನ್ನು ಸಾಧಿಸಬಲ್ಲವನಾಗಿದ್ದರೆ, ಅದೇಕೆ ಅವನ ಪಟ್ಟಿಯಲ್ಲಿ ಇಲ್ಲ? ಇವರಿಗೆಲ್ಲಾ ಮೋಕ್ಷ ದೊರೆಯುವುದು ಹೇಗೆ? ಅದರ ಬಗ್ಗೆ ಯೋಚನೆ ಮಾಡದೆ ಇದ್ದರೆ ಅವರು ಮೋಕ್ಷಕ್ಕೆ ಅನರ್ಹರೇ?' ಎಂದು.

ಬುದ್ಧ ನಕ್ಕ, 'ನಿಜ ಮೋಕ್ಷ ಮಾತ್ರವಲ್ಲ, ಯಾವುದೇ ಆದರೂ ಅದರ ಬಗ್ಗೆ ಯೋಚಿಸದೆ ಹೋದರೆ ಅದು ಸಿಗಲಾರದು. ಸಿಗಲಿಲ್ಲ ಎಂದ ಮಾತ್ರಕ್ಕೆ ಅವನಿಗೆ ಅದನ್ನು ಪಡೆಯುವ ಯೋಗ್ಯತೆ ಇಲ್ಲ ಎಂದಲ್ಲ. ಹೊರಗಿನ ಅಪೇಕ್ಷೆಗಳನ್ನು ಬಿಟ್ಟು ಯಾರು ಮೋಕ್ಷದ ಆಕಾಂಕ್ಷಿಗಳಾಗಿರುತ್ತಾರೋ ಅವರು ಅದನ್ನು ಗಳಿಸಿಕೊಳ್ಳುತ್ತಾರೆ. ಹೊರಗಿನ ವಸ್ತುಗಳ ಪ್ರಲೋಭನೆಗೆ ಬಿದ್ದವನು ಅದನ್ನು ಮರೆತುಬಿಡುತ್ತಾನೆ. ಹೀಗಾಗಿ ಅದು ಅವನ ಬಳಿಗೆ ಬರುವುದಿಲ್ಲ. ನನಗೆ ನಿಶ್ಚಿತವಾಗಿ ಗೊತ್ತಿಗೆ ಯಾರು ಬೇಕಾದರೂ ಮೋಕ್ಷವನ್ನು ಪಡೆದುಕೊಳ್ಳಬಲ್ಲರು. ಆದರೆ ಎಲ್ಲರೂ ಮೋಕ್ಷಾಕಾಂಕ್ಷಿಗಳು ಹೌದಾ ಅಲ್ಲವಾ ಗೊತ್ತಿಲ್ಲ' ಎನ್ನುತ್ತಾನೆ.

ಬುದ್ಧ ತನಗೆ ಗೊತ್ತಿಲ್ಲದ್ದನ್ನು ಗೊತ್ತಿಲ್ಲವೆಂದು ಹೇಳುತ್ತಿದ್ದ. ಗೊತ್ತಿಲ್ಲದ್ದನ್ನು ಗೊತ್ತಿಲ್ಲ ಎಂದರೆ ಮನುಷ್ಯ ದೊಡ್ಡವನಾಗಿಬಿಡುತ್ತಾನೆ. ಅದೇ ಜ್ಞಾನೋದಯ. ಹುಡುಕಾಟದಲ್ಲಿ ಇದೇ ಮಹತ್ವದ್ದು ಅಲ್ಲವೇ... ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಮಂಗಳವಾರ ಏಪ್ರಿಲ್ 2, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಕೃಷ್ಣ ಅಷ್ಟಮಿ ಗಂ. 20-09 ನಕ್ಷತ್ರ: ಪೂರ್ವಾಷಾಢ ಗಂ. 22-49 ಯೋಗ: ಪರಿಘ ಗಂ. 18-35 ಕರಣ: ಬಾಲವ ಗಂ. 08-45, ಮೀನ ಮಾಸದ 19 ನೇ ದಿನ, ಮಳೆನಕ್ಷತ್ರ: ರೇವತಿ 1.

ರಾಹುಕಾಲ : ಮಧ್ಯಾಹ್ನ 03-00 - 04-30, ಸೂರ್ಯೋದಯ : 06-29 ಸೂರ್ಯಾಸ್ತ : 06-39, ಮುಸ್ಲಿಂ ದಿನಾಂಕ : 22 ರಂಜಾನ್

ದಿನ ವಿಶೇಷ : ವಾರ್ಸಿತಾಪಾರಂಭ (ಜೈನ್), ಸೀತಲಾಷ್ಟಮಿ

ಅದೃಷ್ಟ ಸಂಖ್ಯೆ : 7, 12

ಮೇಷ: ಶತ್ರುಗಳು ವಂಚನೆ ಮಾಡುವ ಸಲುವಾಗಿ ಮಿತ್ರರಾಗುವಂತೆ ನಟನೆ ಮಾಡಿಯಾರು. ಸ್ವಪ್ನದಲ್ಲಿ ಕೂಡಾ ಅಂಥವರ ಬಗ್ಗೆ ಜಾಗ್ರತರಾಗಿರಿ. ನೂತನ ಅಧಿಕಾರಿಗಳ ಆಗಮನದಿಂದ ಕಚೇರಿಯಲ್ಲಿ ಕೆಲಸಗಳು ತೋರಿಬರಲಿದೆ.

ವೃಷಭ: ಎಲೆಕ್ಟ್ರಾನಿಕ್ಸ್ ಉಪಕರಣ ವ್ಯಾಪಾರಿಗಳಿಗೆ ಒಳ್ಳೆಯ ಲಾಭ ಪ್ರಾಪ್ತಿಯಾಗುತ್ತದೆ. ಲೆಕ್ಕಪತ್ರಗಳನ್ನು ಪರಿಶೀಲಿಸಿ ಸರಿಪಡಿಸಿಕೊಳ್ಳುವ ಕಾರ್ಯದ ಬಗ್ಗೆ ಯೋಚನೆ ಮಾಡಿ. ವಿದ್ಯಾರ್ಥಿಗಳಿಗೆ ಓದಿನಲ್ಲಿ ಆಸಕ್ತಿ ಹೆಚ್ಚುವುದು.

ಮಿಥುನ: ಸಾಂಸಾರಿಕವಾಗಿ ಹಾಗೂ ಸಾಮಾಜಿಕವಾಗಿ ವರ್ತನೆಯಲ್ಲಿ ಸಮತೋಲನವನ್ನು ಹಾಗೂ ಸ್ಥಿರತೆಯನ್ನು ಕಾಯ್ದುಕೊಳ್ಳುವುದು ಉತ್ತಮ. ಕೆಲಸಗಳ ಬಗ್ಗೆ ನಿಗಾ ಕೊಡುವಂತೆ ಅಧಿಕಾರಿಗಳಿಂದ ಆದೇಶವಾಗುವುದು.

ಕರ್ಕಾಟಕ: ಮಕ್ಕಳ ಹೊಸ ವ್ಯವಹಾರದಲ್ಲಿ ತಂದೆ-ತಾಯಿಯ ಆಶೀರ್ವಾದ ಮತ್ತು ಸಹಕಾರ ದೊರೆಯಲಿದೆ. ಆಲೋಚನೆಯಂತೆಯೇ ನೂತನ ಮನೆ ಕೊಳ್ಳಲು ಹಣದ ವ್ಯವಸ್ಥೆಯಾಗಲಿದೆ.

ಸಿಂಹ: ಉತ್ತಮ ಗುಣಗಳು ಪರಿಸ್ಥಿತಿಯೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಲು ಸಹಾಯ ಮಾಡುವುದು. ಸಮಾಜದಲ್ಲಿ ಗೌರವ ಕಾಪಾಡಿಕೊಳ್ಳುವ ಬಗ್ಗೆ ಗಮನಹರಿಸಿ. ಹಣಕಾಸಿನ ಹೊಸ ಮೂಲವೊಂದು ಸೃಷ್ಟಿಯಾಗುವುದು.

ಕನ್ಯಾ: ನೂತನ ಕಾರ್ಯವನ್ನು ಆರಂಭಿಸಲು ಸಮಯಾವಕಾಶ ಒದಗಿ ಬರುವುದು. ಕಬ್ಬಿಣ, ಸಿಮೆಂಟ್ ವ್ಯಾಪಾರಿಗಳಿಗೆ ಒಳ್ಳೆಯ ಆದಾಯವು ದೊರೆಯುತ್ತದೆ.

ತುಲಾ: ಸಾಲದ ಹಣ ಮರುಪಾವತಿ ಮಾಡುವುದರಿಂದ ಆತ್ಮಾಭಿಮಾನವನ್ನು ಕಾಪಾಡಿಕೊಳ್ಳಬಹುದು. ಕೆಲಸವನ್ನು ಆಲಸ್ಯದಿಂದಾಗಲಿ ಅಥವಾ ತಾಂತ್ರಿಕ ದೋಷದಿಂದಾಗಲಿ ಮುಂದೂಡುವುದು ಸರಿಯಲ್ಲ.

ವೃಶ್ಚಿಕ: ನಿಂತಿರುವ ಕಾರ್ಯಗಳನ್ನು ಬೇರೆ ಬೇರೆ ಪರ್ಯಾಯ ಮಾರ್ಗವನ್ನು ಹುಡುಕಿಕೊಂಡು ಕೆಲಸವನ್ನು ಸಂಪೂರ್ಣವಾಗಿ ಮುಗಿಸುವ ಪ್ರಯತ್ನ ನಡೆಸಿ. ಕಳೆದು ಹೋಗಿದ್ದ ವಸ್ತುಗಳು ಪತ್ತೆಯಾಗಿ ಕೈ ಸೇರುವುದು.

ಧನು: ಮನೋಬಲದಿಂದಾಗಿ ನಡೆಯಬೇಕಾದ ಕೆಲಸ ಕಾರ್ಯಗಳು ಚುರುಕಾಗಿ ನಡೆಯುವುದು. ಹೈನುಗಾರಿಕೆಯಲ್ಲಿ ಆದಾಯ ಹೆಚ್ಚಿಸಿಕೊಳ್ಳುವಿರಿ. ಅವಿವಾಹಿತರಿಗೆ ಕಂಕಣ ಭಾಗ್ಯ ದೊರೆಯುವುದು.

ಮಕರ: ಬೌದ್ಧಿಕ ಚಟುವಟಿಕೆಗಳ ಬೆಳವಣಿಗೆಗೆ ಬೇಕಾದ ಪ್ರತಿಭಾನ್ವಿತರ ಸಮಾಗಮ ಆಗಲಿದೆ. ಉಪಯೋಗಿಸಿಕೊಳ್ಳುವುದು ಸ್ವಂತಿಕೆಯ ವಿಚಾರವಾಗಿರುತ್ತದೆ. ಕೃಷಿಕರಿಗೆ ಕೆಲಸದಲ್ಲಿ ಬಿಡುವಿಲ್ಲದಂತೆ ಆಗುವುದು.

ಕುಂಭ: ಆಫೀಸಿನಲ್ಲಿ ಉಂಟಾಗಿದ್ದ ಸಮಸ್ಯೆಗಳು ತನ್ನಿಂತಾನೆ ಬಗೆಹರಿದು ಮನಸ್ಸು ನಿರಾಳವಾಗಲಿದೆ. ನಿರುದ್ಯೋಗಿಗಳಿಗೆ ಅನಿರೀಕ್ಷಿತ ಉದ್ಯೋಗ ಪ್ರಾಪ್ತಿಯಾಗುತ್ತದೆ. ತಂಗಿಗಾಗಿ ಖರ್ಚು ಮಾಡಬೇಕಾದ ಸಂದರ್ಭ ಬರುವುದು.

ಮೀನ: ಉದ್ಯೋಗಕ್ಕೆ ಸಂಬಂಧಿಸಿದ ಸಂಶೋಧನಾತ್ಮಕ ಪ್ರಯತ್ನಗಳು ಫಲಕಾರಿಯಾಗಿ ಆರ್ಥಿಕಾನುಕೂಲದ ಜೊತೆಗೆ ಸಾಮಾಜಿಕವಾಗಿ ತೂಕದ ವ್ಯಕ್ತಿಯಾಗುವಿರಿ. ಕಬ್ಬಿಣದ ಕೆಲಸ ಮಾಡುವವರು ಕೆಲಸದಲ್ಲಿ ಜಾಗ್ರತರಾಗಿರಿ.

ಪದಬಂಧ 5639

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ನೀರಿನ ಹಬೆ (2)
3.ಹಾಡಿನ ಧಾಟಿಯಲ್ಲೇ ಮೂಡಿದ ಒಲವು (2)
5.ಭೇದ ಭಾವವಿಲ್ಲದಿರುವಿಕೆ (5)
6.ದೂರವೇನಲ್ಲ! ಬಹಳ ಹತ್ತಿರ! (3)
7.ಮಾವು ಅಥವಾ ನೆಲ್ಲಿಕಾಯಿಯ ಮುರಬ್ಬ (3)
8.ಅರಸನೊಡನೆ ನೆಪವಿರುವ ಆಡಳಿತ ತಂತ್ರ! (5)
9.ಮಾಸದ ಹಿಂದೆ ಕಟ್ಟಿರುವ ಗೋರಿ (3)
10.ಕೃಪಾ ದೃಷ್ಟಿಯಿದು (3)
13.ಹಲ್ಲುಗಳನ್ನು ತೊಳೆಯುವುದು (5)
14.ಜರೂರತೆಯಲ್ಲಿರುವ ಮುಪ್ಪು! (2)
15.ಅಂಕಣದಲ್ಲಿರುವ ಸಂಖ್ಯೆ (2)

ಮೇಲಿಂದ ಕೆಳಕ್ಕೆ

1.ಆಹಾರವನ್ನು ಸೇವಿಸದಿರುವಿಕೆ (4)
2.ಕುಂಕುಮ ಅಥವಾ ಅರಿಶಿಣ ಸವರಿದ ಅಕ್ಕಿ (3)
4.ನೇಣಿಗೇರಿಸುವ ಕಂಬ (4)
5.ಯಾವುದೇ ಅಪರಾಧ ಮಾಡದಿರುವವನು (5)
7.ಸ್ವಭಾವವನ್ನು ಹೊಗಳಿ ಹೇಳುವುದು (5)
9.ಒಳ್ಳೆಯ ಕುಲದಲ್ಲಿ ಹುಟ್ಟಿದವನು (4)
11.ಜೈನ ಸನ್ಯಾಸಿ (4)
12.ಜ್ಞಾನಿ ಇಲ್ಲಿದ್ದಾನೆ (3)



5638ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸಂದೇಹ 4.ಸದಾಶಯ
6.ಮರೀಚಿಕೆ 8.ಖಚಿತ
11.ಗುಲಾಮ 13.ಹಸುಗೂಸು
17.ಮಹಾರಾಜ
18.ರುಮಾಲು

ಮೇಲಿಂದ ಕೆಳಕ್ಕೆ:
1.ಸಂಪ್ರತಿ 2.ಹಸನ್ಮುಖ
3.ಇಣಚಿ 5.ಯಮ
7.ಕೆಸರು 9.ತರಗು
10.ವ್ಯಾಮೋಹ 12.ಮಹಜರು
14.ಸುಶ್ರಾವ್ಯ 15.ಸುಮ
16.ಬಯಲು

ಸುಡೊಕು 6024

				5		7		2
		3	6		7			
		7		3		6		9
	6			1		8		7
7		9	5				1	
	8			9		3		5
	7		3		1			
5				2			7	3
	3		9		5		6	8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ

6023 ಸುಡೊಕು

5	6	1	8	7	4	2	9	3
3	7	2	6	1	9	8	5	4
9	8	4	5	2	3	1	6	7
1	2	5	7	3	6	4	8	9
4	3	8	2	9	5	6	7	1
6	9	7	4	8	1	3	2	5
8	1	9	3	5	2	7	4	6
7	4	3	9	6	8	5	1	2
2	5	6	1	4	7	9	3	8

ಪ್ರಜಾ ಮತ 2024
ಜನತಂತ್ರದ ಹಬ್ಬ

ಗುಸುಗುಸು

ಯಾರಿಗೆ ಹನುಮ ಸೈನ್ಯದ ಬಲ?

ಪುರಾಣಗಳಲ್ಲಿ ರಾಮಾಂಜನೇಯ ಯುದ್ಧ ನಡೆದ ಕಥೆಗಳಿವೆ. ಆದರೆ, ರಾಮ–ಲಕ್ಷ್ಮಣರ ಮಧ್ಯೆ ಬರಿ ಪ್ರೀತಿಯದೇ ಕಥನ. ಶಿವಮೊಗ್ಗ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ತಂದೆ ಮತ್ತು ನಾನು ರಾಮ–ಲಕ್ಷ್ಮಣರ ರೀತಿ ಊರೂರು ತಿರುಗಿ ಪಕ್ಷ ಕಟ್ಟಿ, ಬೆಳೆಸಿದ್ದೆವು ಎಂದು ಸದಾ ಕನವರಿಸುತ್ತಿದ್ದವರೇ ಈಗ ರಾಮನ ವಿರುದ್ಧ ಪರೋಕ್ಷ 'ಸಮರ' ಸಾರಿರುವುದು ದಿನಕ್ಕೊಂದು 'ರಾಮಾಯಣ'ಕ್ಕೆ ದಾರಿಯಾಗಿದೆಯಂತೆ.

ಅಸಲಿ ವಿಷಯ ಏನೆಂದರೆ, ಅಂದು ರಾಮ–ಲಕ್ಷ್ಮಣರ ಜತೆಗಿದ್ದ ಹನುಮನ ಸೈನ್ಯ (ಸಂಘ–ಪರಿವಾರ) ಶಿವಮೊಗ್ಗ ಕ್ಷೇತ್ರದ ಲೋಕ ಯುದ್ಧದಲ್ಲಿ ಯಾರ ಕಡೆ ಇದೆ ಎನ್ನುವ ಸಂಶಯಕ್ಕೆ ಉತ್ತರವೇ ಸಿಕ್ಕಿಲ್ಲ. ಕಟ್ಟಾ ಹಿಂದುತ್ವವಾದಿಯಾದ ತನಗೆ ಸಮಸ್ತ ಸೈನ್ಯದ ಬಲವಿದೆ ಎಂದು ಸ್ವತಃ ಬಂಡಾಯಗಾರ ಹೇಳಿಕೊಂಡರೂ, ಕಳೆದ ವಿಧಾನಸಭಾ ಚುನಾವಣೆಯಲ್ಲಿ ಇವರೇ ಮುಂದೆ ನಿಂತು ಗೆಲ್ಲಿಸಿದ್ದ 'ಚೆನ್ನಿಗ' ಹನುಮಂತನೇ ರಾಮ ಪರಿವಾರದ ಬೆನ್ನಿಗೆ ನಿಂತಿರುವುದು ಗಂಟಲಿಗೆ ಬಿಸಿ ತುಪ್ಪ ಸುರಿದುಕೊಂಡ ಅನುಭವವಾಗಿದೆಯಂತೆ.

'ರಾಷ್ಟ್ರಭಕ್ತರ' ಪ್ರಚಾರ ಸಭೆಗಳ ಬ್ಯಾನರ್‌ಗಳಲ್ಲಿ ತಮ್ಮ ಚಿತ್ರದ ಜತೆಗೆ ಪ್ರಧಾನಿ ಚಿತ್ರಗಳನ್ನೂ ಎದ್ದು ಕಾಣುವಂತೆ ಹಾಕಿದ್ದು, ಮೋದಿ–ಅಮಿತ್ ಆಶೀರ್ವಾದ ತಮಗಿದೆ ಎಂದು ಈಶ್ವರಪ್ಪ ಬಿಂಬಿಸಿಕೊಳ್ಳುತ್ತಿದ್ದಾರೆ. ರಾಮ ಹಾಗೂ ರಾಮನ ಪರಿವಾರ ನಿಮಗೆ ಟಿಕೆಟ್ ತಪ್ಪಿಸಿದೆ ಎನ್ನುತ್ತೀರಿ. ರಾಮನ ಪ್ರಾಣ ಪ್ರತಿಷ್ಠಾಪನೆ ಮಾಡಿದವರ ಕೃಪೆ ನಿಮ್ಮ ಮೇಲಿರುವಾಗ ಕರ್ನಾಟಕದ ರಾಮ ನಿಮಗೆ ಹೇಗೆ ಟಿಕೆಟ್ ತಪ್ಪಿಸಲು ಸಾಧ್ಯ ಎಂಬ ಸಂಘದ ಕಾರ್ಯಕರ್ತರ ಪ್ರಶ್ನೆಗೆ ಉತ್ತರವನ್ನೇ ನೀಡುತ್ತಿಲ್ಲವಂತೆ!

ಮತ ಆಮಿಷ: ಆಯೋಗದ ವಶ

₹23.57 ಕೋಟಿ ನಗದು

ಉಚಿತ ಉಡುಗೊರೆ	₹1.73 ಕೋಟಿ
ಮದ್ಯ	₹29.34 ಕೋಟಿ (9.16 ಲಕ್ಷ ಲೀ)
ಮಾದಕವಸ್ತು	₹2.06 ಕೋಟಿ (265.47 ಕೆ.ಜಿ.)
ಚಿನ್ನ	₹9.18 ಕೋಟಿ (15.38 ಕೆ.ಜಿ.)
ಬೆಳ್ಳಿ	₹27.23 ಲಕ್ಷ (59.04 ಕೆ.ಜಿ.)

ಎಂಥಾ ಮಾತು!

ಜಲಜೀವನ್ ಮಿಷನ್ ಆರಂಭವಾಗಿ ಇಷ್ಟು ವರ್ಷ ಆಗಿದ್ದರೂ ಎಲ್ಲ ಮನೆಗಳಿಗೆ ನೀರು ಕೊಡುವ ಕೆಲಸ ಮಾಡಿರಲಿಲ್ಲ. ನಾನು ಮುಖ್ಯಮಂತ್ರಿಯಾದಾಗ ಮನೆಗಳಿಗೆ ನಲ್ಲಿ ನೀರು ಕೊಡುವುದರಲ್ಲಿ ಕರ್ನಾಟಕ 20ನೇ ಸ್ಥಾನದಲ್ಲಿತ್ತು. ನಾನು ಮುಖ್ಯಮಂತ್ರಿಯಾದ ಮೇಲೆ ನಂಬರ್ ಒನ್ ಸ್ಥಾನಕ್ಕೆ ಬಂದಿದೆ. ಪ್ರಧಾನಿ ಮೋದಿಯವರು ಕೋವಿಡ್ ಸಂದರ್ಭದಲ್ಲಿ ಎಲ್ಲರಿಗೂ ವ್ಯಾಕ್ಸಿನ್ ಕೊಡಿಸಿದರು. ಕಾಂಗ್ರೆಸ್‌ನವರೂ ಲಸಿಕೆ ತೆಗೆದುಕೊಂಡಿದ್ದಾರೆ. ಜೀವ ಉಳಿಸಿದ ಉಪಕಾರ ತೀರಿಸಲು, ನೀರು ಕೊಟ್ಟ ಋಣ ತೀರಿಸಲು ಮೋದಿಯವರಿಗೆ ಮತ ಹಾಕಬೇಕು

ಬಸವರಾಜ ಬೊಮ್ಮಾಯಿ, ಹಾವೇರಿ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ

ಕ್ಷೇತ್ರ ಮಹಾತ್ಮೆ

ತುಮಕೂರು



ತುಮಕೂರು ಯಾರಿಗೆಲ್ಲ ಊರು ಎಂಬ ಪ್ರಶ್ನೆ ಈ ಬಾರಿ ಚುನಾವಣೆಯಲ್ಲಿ ಮತ್ತೆ ಎದುರಾಗಿದೆ. ದಶಕಗಳ ಹಾಸನ ಪ್ರತಿನಿಧಿಸಿದ್ದ ಎಚ್‌.ಡಿ. ದೇವೇಗೌಡರು 2019ರಲ್ಲಿ ಜೆಡಿಎಸ್–ಕಾಂಗ್ರೆಸ್ ಮೈತ್ರಿ ಅಭ್ಯರ್ಥಿಯಾಗಿ ಇಲ್ಲಿ ಸ್ಪರ್ಧಿಸಿದ್ದರಿಂದಾಗಿ ಕ್ಷೇತ್ರ ದೇಶದ ಗಮನ ಸೆಳೆದಿತ್ತು. ಮೈತ್ರಿಯ ಬಿರುಕು, ಗೌಡರ ಕುಟುಂಬ ರಾಜಕಾರಣಕ್ಕೆ ವಿರೋಧ, ಲಿಂಗಾಯತರ ಒಗ್ಗಟ್ಟು ಗೌಡರ ಸೋಲಿಗೆ ಕಾರಣವಾಗಿತ್ತು. ಈ ಬಾರಿ ಬಿಜೆಪಿ–ಜೆಡಿಎಸ್ ಮೈತ್ರಿಯಾಗಿದ್ದ ಮತ್ತೊಮ್ಮ ನುರಿತ ರಾಜಕಾರಣಿ ಬಿನ್ನಿಪೇಟೆ ಸೋಮಣ್ಣ, 'ಸಿದ್ದಗಂಗೆ'ಯ ಆಶ್ರಯ ನೆಚ್ಚಿದ್ದಾರೆ. ಮೈಸೂರು, ಚಾಮರಾಜನಗರ ಹೀಗೆ ಎರಡೂ ಜಿಲ್ಲೆಗಳಲ್ಲಿ ಸೋಲನುಭವಿಸಿ, ಗೆಲುವಿನ ಕೊನೆ ಆಸರೆ ಸಿಗಬಹುದೆಂಬ ಹಂಬಲ ಅವರದ್ದು. ಲಿಂಗಾಯತರು, ಜೆಡಿಎಸ್ ಕಾರಣಕ್ಕೆ ಒಕ್ಕಲಿಗರು ಕೈ ಹಿಡಿದರೆ, ಯಡಿಯೂರಪ್ಪ ಬಲ ಸಿಕ್ಕರೆ ಸೋಮಣ್ಣ ತುಮಕೂರಿಗೇ ಅಣ್ಣ. ಹಾಲಿ ಸಂಸದ ಜಿ.ಎಸ್. ಬಸವರಾಜ್, ಸೋಮಣ್ಣಗಾಗಿ 'ತ್ಯಾಗ' ಮಾಡಿದ್ದಾರೆ. ತ್ಯಾಗದ ಫಲ ಸಿಗದಂತೆ ಮಾಜಿ ಸಚಿವ ಜೆ.ಸಿ. ಮಾಧುಸ್ವಾಮಿ, ಬಲವಾಗಿಯೇ ಗುದ್ದುತ್ತಿದ್ದಾರೆ. ಬಿಜೆಪಿಗೆ ಹೋಗಿ, ವಾಪಸ್ ಕಾಂಗ್ರೆಸ್‌ಗೆ ಕಾಲಿಟ್ಟ ಮಾಜಿ ಸಂಸದ ಮುದ್ದಹನುಮೇಗೌಡರು, ಈಗ 'ಕೈ' ಅರಳಿಸುವ ನಿರೀಕ್ಷೆಯಲ್ಲಿದ್ದಾರೆ. ಹೊರಜಿಲ್ಲೆಯವರ ಬಗೆಗಿರುವ ಆಕ್ಷೇಪ, 'ಗ್ಯಾರಂಟಿ' ಬಲ, ಒಕ್ಕಲಿಗರ ಮತಗಳು 'ಗೌಡಿಕೆ'ಗೆ ಗರಿ ನೀಡಲಿದೆ ಎಂಬುದು ಗೌಡರ ಕನಸು.

ತೆರಿಗೆ ಪಾಲು

ಮತ 'ಪಾಲಿ'ಗೆ ಊರುಗೋಲು?

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ಕೇಂದ್ರ ಸರ್ಕಾರವು ತೆರಿಗೆ ಪಾಲು ಮತ್ತು ಅನುದಾನದ ಹಂಚಿಕೆಯಲ್ಲಿ ಕರ್ನಾಟಕ್ಕೆ ಭಾರಿ ಅನ್ಯಾಯ ಮಾಡುತ್ತಿದೆ ಎಂಬ ವಾದವನ್ನು ರಾಷ್ಟ್ರ ರಾಜಧಾನಿಯ ಅಂಗಳದವರೆಗೂ ಕೊಂಡೊಯ್ದಿರುವ ರಾಜ್ಯದ ಕಾಂಗ್ರೆಸ್ ಸರ್ಕಾರ, ಲೋಕಸಭಾ ಚುನಾವಣೆಯ ಅಂಗಳದಲ್ಲಿ 'ರಾಷ್ಟ್ರೀಯವಾದ'ಕ್ಕೆ ಎದುರಾಗಿ 'ಪ್ರಾದೇಶಿಕ ಅಸ್ಮಿತೆ'ಯ ಗುರಾಣಿಯನ್ನು ಒಡ್ಡಿದೆ.

ಸಂಪತ್ತಿನ ಹಂಚಿಕೆಯಲ್ಲಿನ ಅಸಮಾನತೆಯ ವಿಚಾರ ಸದ್ದು ಮಾಡುತ್ತಲೇ ಇದೆ. ಈ ಚರ್ಚೆ ಹೆಮ್ಮರವಾಗಿ ಬೆಳೆದು ಬಿಜೆಪಿಯ 'ಮತ ಖಜಾನೆ'ಗೆ ತೂತು ಕೊರೆದು ತನಗೆ ಲಾಭ ತಂದು ಕೊಡಬಹುದು ಎಂಬ ಆಸೆ ಕಾಂಗ್ರೆಸ್‌ನಲ್ಲಿದ್ದರೆ, ಈ ಚರ್ಚೆಯನ್ನೇ ಗೌಣವಾಗಿಸಿ ನಷ್ಟದ ಹೊರೆ ಬೀಳದಂತೆ ತಪ್ಪಿಸಿ-ಕೊಳ್ಳುವ ಕಾರ್ಯತಂತ್ರ ಬಿಜೆಪಿ ಪಾಳಯದಲ್ಲಿ ನಡೆಯುತ್ತಿದೆ.

ತೆರಿಗೆ ಪಾಲಿನ ಹಂಚಿಕೆ ಮತ್ತು ಅನುದಾನಗಳ ಬಿಡುಗಡೆ ವಿಷಯದಲ್ಲಿ ವರ್ಷದಿಂದ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಮಧ್ಯೆ ತಣ್ಣನೆಯ ಜಟಾಪಟಿ ನಡೆಯುತ್ತಲೇ ಇತ್ತು. 2024ರ ಜನವರಿಯಲ್ಲೇ ಈ ವಿಚಾರಗಳನ್ನು ರಾಜಕೀಯ ಚರ್ಚೆಯ ಮುನ್ನೆಲೆಗೆ ತಂದ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ, ಮೂರು ತಿಂಗಳವರೆಗೂ ಚರ್ಚೆಯ ಕಾವು ಕಳೆದುಕೊಳ್ಳದಂತೆ ಹಿಡಿದಿಟ್ಟುಕೊಳ್ಳುವಲ್ಲಿ ಯಶಸ್ವಿಯಾಗಿದೆ.

ಆರಂಭದಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಮಧ್ಯೆ ಮಾತಿನ ಸಮರಕ್ಕೆ ಸೀಮಿತವಾಗಿದ್ದ 'ಸಂಪತ್ತಿನ ಹಂಚಿಕೆ'ಯ ವಿಷಯ ಈಗ ಕರ್ನಾಟಕದ ಉದ್ದಗಲಕ್ಕೂ ಸಾಮಾಜಿಕ ಮಾಧ್ಯಮಗಳಲ್ಲಿ ಚರ್ಚೆಯ ಕೇಂದ್ರವಾಗಿದೆ. ಚುನಾವಣೆಯನ್ನೇ ಗುರಿಯಾಗಿಸಿಕೊಂಡು ಈ ವಿಚಾರವನ್ನು ವಿಸ್ತೃತವಾಗಿ ಚರ್ಚಿಸುವ, ಮಾಹಿತಿ ಹಂಚುವ ಕೆಲಸವೂ ಎಡೆಬಿಡದೆ ನಡೆಯುತ್ತಿದೆ. ರಾಜ್ಯ ಸರ್ಕಾರವೇ ಹೊತ್ತಿಸಿದ ಅಸಮಾಧಾನದ ಕಿಡಿಯನ್ನು ಜ್ವಾಲೆಯನ್ನಾಗಿ ಪರಿವರ್ತಿಸಲು 'ಪ್ರಾದೇಶಿಕ ಅಸ್ಮಿತೆ'ಯ ಪರ ಇರುವವರು ಮಾಡುತ್ತಿದ್ದಾರೆ. 'ನಮ್ಮ ತೆರಿಗೆ ನಮ್ಮ ಹಕ್ಕು' ಎಂಬ ಕೂಗು ಸಾಮಾಜಿಕ ಮಾಧ್ಯಮಗಳಲ್ಲಿ ಜೋರಾಗಿಯೇ ಸದ್ದು ಮಾಡುತ್ತಿದೆ.

ರಾಜ್ಯಕ್ಕೆ ₹ 1.87 ಲಕ್ಷ ಕೋಟಿ ನಷ್ಟ?: ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಹಂಚಿಕೆಯಲ್ಲಿನ ಅಸಮಾನತೆ ಕುರಿತು ರಾಜ್ಯ ಸರ್ಕಾರ ಚರ್ಚೆ ಆರಂಭವಾಗಿತ್ತು. ಸೆಸ್, ಸರ್‌ಚಾರ್ಜ್‌ಗಳ ರೂಪದಲ್ಲಿ ಕೇಂದ್ರ ಸರ್ಕಾರದ ಬೊಕ್ಕಸ ಸೇರುತ್ತಿರುವ ಮೊತ್ತದಲ್ಲಿ ರಾಜ್ಯಕ್ಕೆ ಪಾಲು ದೊರಕುತ್ತಿಲ್ಲ ಎಂಬುದನ್ನೂ ಚರ್ಚೆಯ ವ್ಯಾಪ್ತಿಗೆ ತರಲಾಗಿದೆ. ಎಲ್ಲವೂ ಸೇರಿದಂತೆ 2019ರಿಂದ 2024ರ ಅವಧಿಯಲ್ಲಿ ಕರ್ನಾಟಕಕ್ಕೆ ಕೇಂದ್ರ ಸರ್ಕಾರದಿಂದ ₹ 1,87,687 ಕೋಟಿಯಷ್ಟು ನಷ್ಟವಾಗಿದೆ ಎಂಬ ಪ್ರಬಲವಾದ ವಾದವೊಂದನ್ನು ರಾಜ್ಯ ಸರ್ಕಾರ ಮಂಡಿಸಿದೆ.

ರಾಜ್ಯದಲ್ಲಿ ಸಂಗ್ರಹವಾಗುವ ಪ್ರತಿ ₹ 100 ತೆರಿಗೆಯಲ್ಲಿ ವಾಪಸ್ ರಾಜ್ಯಕ್ಕೆ ₹ 12ರಿಂದ ₹13ರಷ್ಟು ಮಾತ್ರ ಸಿಗುತ್ತಿದೆ ಎಂಬುದು ರಾಜ್ಯ ಸರ್ಕಾರದ ವಾದ. 15ನೇ ಹಣಕಾಸು ಆಯೋಗವು ತೆರಿಗೆ ಪಾಲು ಹಂಚಿಕೆಗೆ ರೂಪಿಸಿರುವ ಮಾನದಂಡಗಳಿಂದ ಕರ್ನಾಟಕಕ್ಕೆ ಅನ್ಯಾಯವಾಗುತ್ತಿದ್ದು, ಉತ್ತರದ ರಾಜ್ಯಗಳಿಗೆ ಸಿಂಹಪಾಲು ದೊರಕುತ್ತಿದೆ ಎಂದು ರಾಜ್ಯ ಸರ್ಕಾರ ವಾದಿಸಿದೆ. ಕೇಂದ್ರ ಸರ್ಕಾರ ಮಾತ್ರವಲ್ಲ, 2019ರಿಂದ 2023ರವರೆಗೆ ರಾಜ್ಯದಲ್ಲಿ ಆಡಳಿತ ನಡೆಸಿದ ಬಿಜೆಪಿ ನೇತೃತ್ವದ ಸರ್ಕಾರವೂ ಕರ್ನಾಟಕಕ್ಕೆ ಆಗಿರುವ ನಷ್ಟಕ್ಕೆ ಹೊಣೆ ಎಂದು ಅಪಾದಿಸುತ್ತಿರುವ ರಾಜ್ಯ ಸರ್ಕಾರ, ಬಿಜೆಪಿಯ ಕೇಂದ್ರ ಮತ್ತು ರಾಜ್ಯದ ನಾಯಕರನ್ನು ಇಕ್ಕಟ್ಟಿಗೆ ಸಿಲುಕಿಸುವ ಪ್ರಯತ್ನ ಮಾಡಿದೆ.

ರಾಜ್ಯ ಸರ್ಕಾರದ ಆಪಾದನೆಗಳಿಗೆ ಸಂಸತ್ತಿನ ಒಳಗೆ ಮತ್ತು ಹೊರಗೆ ಉತ್ತರ ನೀಡಿರುವ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ನಷ್ಟದ ವಾದದಲ್ಲಿ ಹುರುಳೇ ಇಲ್ಲ ಎಂಬ ಪ್ರತಿವಾದ ಮಂಡಿಸಿದ್ದಾರೆ. ರಾಜ್ಯ ಸರ್ಕಾರ ಕಲ್ಪಿತ ಲೆಕ್ಕಾಚಾರಗಳ ಆಧಾರದಲ್ಲಿ ನಷ್ಟವನ್ನು ಬಿಂಬಿಸುತ್ತಿದೆ ಎಂಬುದು ಅವರ ಟೀಕೆ. ಕೇಂದ್ರದ ಹಲವು ಸಚಿವರು ಸೇರಿದಂತೆ ಬಿಜೆಪಿಯ ಅನೇಕ ನಾಯಕರು ನಿರ್ಮಲಾ ಮಾತಿಗೆ ದನಿಗೂಡಿಸಿದ್ದಾರೆ.

ಇಷ್ಟು ದಿನಗಳ ಕಾಲ ಪತ್ರ ಸಮರ, ಸಾಮಾಜಿಕ ಮಾಧ್ಯಮಗಳ ಚರ್ಚೆ, ಪತ್ರಿಕಾಗೋಷ್ಠಿಗಳಿಗೆ ಸೀಮಿತವಾಗಿದ್ದ 'ತೆರಿಗೆ ಅನ್ಯಾಯ'ದ ವಿಷಯ ಈಗ ಚುನಾವಣಾ ಅಖಾಡದಲ್ಲಿ ಸವಾಲು– ಜವಾಬಿಗೆ ಕಾರಣವಾಗಲಿದೆ. ❖

ರಾಜ್ಯ ಸರ್ಕಾರದ ವಾದವೇನು?

- ರಾಜ್ಯದಿಂದ ಪ್ರತಿ ವರ್ಷ ತೆರಿಗೆ, ಸೆಸ್, ಸುಂಕದ ರೂಪದಲ್ಲಿ ₹ 4 ಲಕ್ಷ ಕೋಟಿಗೂ ಹೆಚ್ಚು ಸಂಗ್ರಹವಾಗುತ್ತಿದೆ. ಆದರೆ, ಕೇಂದ್ರ ಸರ್ಕಾರ ಕರ್ನಾಟಕಕ್ಕೆ ₹ 50,000 ಕೋಟಿಯಿಂದ ₹ 53,000 ಕೋಟಿಯಷ್ಟು ಮಾತ್ರ ನೀಡುತ್ತಿದೆ.
- ಕೇಂದ್ರ ಸರ್ಕಾರದ ಬಜೆಟ್ ಗಾತ್ರ ದುಪ್ಪಟ್ಟಾದರೂ, ರಾಜ್ಯಕ್ಕೆ ತೆರಿಗೆ ಪಾಲು ಮತ್ತು ಕೇಂದ್ರ ಪುರಸ್ಕೃತ ಯೋಜನೆಯ ಅನುದಾನದ ಬಾಬ್ತು ದೊರಕುತ್ತಿರುವ ಮೊತ್ತದಲ್ಲಿ ಹೆಚ್ಚಳ ಆಗಿಲ್ಲ.
- ಕೇಂದ್ರ ಸರ್ಕಾರವು ರಾಜ್ಯಕ್ಕೆ ನೀಡುತ್ತಿರುವ ತೆರಿಗೆ ಪಾಲು ಮತ್ತು ಅನುದಾನದ ಮೊತ್ತ 2018–19ಕ್ಕೆ ಹೋಲಿಸಿದರೆ ಈಗ ಶೇಕಡ 40ರಿಂದ ಶೇ 45ರಷ್ಟು ಕಡಿಮೆಯಾಗಿದೆ.

ಕೇಂದ್ರ ಸರ್ಕಾರದ ಪ್ರತಿವಾದ ಏನು?

- ಕರ್ನಾಟಕಕ್ಕೆ ಕೇಂದ್ರ ಸರ್ಕಾರ ಯಾವ ಅನುದಾನವನ್ನೂ ತಡೆ ಹಿಡಿದಿಲ್ಲ. ಯುಪಿಎ ಮೈತ್ರಿಕೂಟದ ನೇತೃತ್ವದ ಹಿಂದಿನ ಸರ್ಕಾರದ ಅವಧಿಗೆ ಹೋಲಿಸಿದರೆ ಎನ್‌ಡಿಎ ಸರ್ಕಾರದ ಅವಧಿಯಲ್ಲಿ ತೆರಿಗೆ ಪಾಲು ಮತ್ತು ಅನುದಾನದ ಪ್ರಮಾಣ ಹೆಚ್ಚಳವಾಗಿದೆ.
- ಯುಪಿಎ ಅಧಿಕಾರದಲ್ಲಿದ್ದ 2004ರಿಂದ 2014ರ ಅವಧಿಯಲ್ಲಿ ಕರ್ನಾಟಕಕ್ಕೆ ₹ 81,795 ಕೋಟಿ ಅನುದಾನ ಸಿಕ್ಕಿತ್ತು. ಎನ್‌ಡಿಎ ಅಧಿಕಾರದಲ್ಲಿರುವ 2014ರಿಂದ 2024ರ ಅವಧಿಯಲ್ಲಿ ಕರ್ನಾಟಕಕ್ಕೆ ₹ 2,93,226 ಕೋಟಿ ಅನುದಾನ ನೀಡಲಾಗಿದೆ.
- ಅನುದಾನ ತಡೆ ಹಿಡಿದಿರುವ ಆರೋಪಕ್ಕೆ ಆಧಾರಗಳಿಲ್ಲ. ಮುಂಗಡವಾಗಿ ಕರ್ನಾಟಕಕ್ಕೆ ಅನುದಾನ ಬಿಡುಗಡೆ ಮಾಡಿದ ಉದಾಹರಣೆಗಳಿವೆ. ಅದಕ್ಕೆ ದಾಖಲೆಗಳೂ ಇವೆ.

ಐದು ವರ್ಷಗಳ ಅವಧಿಯಲ್ಲಿ ಕೇಂದ್ರ ಸರ್ಕಾರದಿಂದ ತೆರಿಗೆ ಪಾಲು ಮತ್ತು ಅನುದಾನದ ಹಂಚಿಕೆಯಲ್ಲಿ ದೊಡ್ಡ ಅನ್ಯಾಯವಾಗಿದೆ. ರಾಜ್ಯದಿಂದ ಆಯ್ಕೆಯಾದ ನಿರ್ಮಲಾ ಸೀತಾರಾಮನ್ ಅವರೇ ದೊಡ್ಡ ಅನ್ಯಾಯ ಮಾಡಿಬಿಟ್ಟರು

ಸಿದ್ದರಾಮಯ್ಯ, ಮುಖ್ಯಮಂತ್ರಿ

ತೆರಿಗೆ ಪಾಲು ಮತ್ತು ಅನುದಾನದ ಹಂಚಿಕೆಯಲ್ಲಿ ಅನ್ಯಾಯವಾಗಿದೆ ಎಂದು ಕಾಂಗ್ರೆಸ್ ನೇತೃತ್ವದ ಕರ್ನಾಟಕ ಸರ್ಕಾರ ಸುಳ್ಳು ಆರೋಪ ಮಾಡುತ್ತಿದೆ. ರಾಜ್ಯದ ಜನರನ್ನು ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದೆ

ನಿರ್ಮಲಾ ಸೀತಾರಾಮನ್
ಕೇಂದ್ರ ಹಣಕಾಸು ಸಚಿವೆ

ಪ್ರೀತಂ ಗೌಡ ಮನವೊಲಿಕೆಗೆ ಬಿ.ವೈ. ವಿಜಯೇಂದ್ರ ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಸನ ಲೋಕಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಪ್ರಜ್ವಲ್ ರೇವಣ್ಣ ಮತ್ತು ಬಿಜೆಪಿಯ ಮಾಜಿ ಶಾಸಕ ಪ್ರೀತಂ ಗೌಡ ಅವರನ್ನು ಮುಖಾಮುಖಿಯಾಗಿಸುವ ಮೂಲಕ ಇಬ್ಬರ ಮಧ್ಯೆ ಸಂಧಾನ ನಡೆಸುವ ಪ್ರಯತ್ನವನ್ನು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಸೋಮವಾರ ನಡೆಸಿದರು.

ನಗರದ ಶಾಂಗ್ರಿಲಾ ಹೋಟೆಲ್‌ನಲ್ಲಿ ರಾತ್ರಿ ನಡೆದ ಸಭೆಯಲ್ಲಿ ಜೆಡಿಎಸ್ ಶಾಸಕ ಎಚ್‌.ಡಿ. ರೇವಣ್ಣ ಕೂಡ ಇದ್ದರು. ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿಯಾಗಿ ಪ್ರಜ್ವಲ್ ಸ್ಪರ್ಧಿಸುವುದನ್ನು ವಿರೋಧಿಸಿದ್ದ ಪ್ರೀತಂ ಗೌಡ, ಚುನಾವಣಾ ಪ್ರಚಾರದಿಂದ ದೂರ ಉಳಿದಿದ್ದರು. ವೈಮನಸ್ಸು ಮರೆತು ಚುನಾವಣಾ ಪ್ರಚಾರದಲ್ಲಿ ಸಕ್ರಿಯವಾಗುವಂತೆ ಪ್ರೀತಂ ಅವರನ್ನು ಮನವೊಲಿಸಲು ವಿಜಯೇಂದ್ರ ಪ್ರಯತ್ನಿಸಿದರು.

ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಪ್ರಜ್ವಲ್, 'ವಿಜಯೇಂದ್ರ ಅವರ ನೇತೃತ್ವದಲ್ಲಿ ಹಾಸನ ಜಿಲ್ಲೆಯ ಬಿಜೆಪಿ ಮುಖಂಡರ ಸಭೆ ನಡೆಯಿತು. ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಪ್ರಯತ್ನ ಸಭೆಯಲ್ಲಿ ನಡೆದಿದೆ. ಭಿನ್ನಾಭಿಪ್ರಾಯ ಮರೆತು ಒಗ್ಗಟ್ಟಿನಿಂದ ಕೆಲಸ ಮಾಡುವಂತೆ ವಿಜಯೇಂದ್ರ ಸೂಚಿಸಿದ್ದಾರೆ' ಎಂದರು. 'ಗುರುವಾರ ನಾಮಪತ್ರ ಸಲ್ಲಿಸುತ್ತೇನೆ. ಆ ಸಂದರ್ಭದಲ್ಲಿ ಎಲ್ಲರೂ ಹಾಜರಿರುತ್ತಾರೆ' ಎಂದು ಹೇಳಿದರು.

'ಪ್ರೀತಂ ಗೌಡ ನಿಮ್ಮೊಂದಿಗೆ ಪ್ರಚಾರಕ್ಕೆ ಬರುತ್ತಾರಾ' ಎಂಬ ಪ್ರಶ್ನೆಗೆ, 'ಬರಲೇಬೇಕಲ್ಲವೆ? ಇದು ನರೇಂದ್ರ ಮೋದಿಯವರನ್ನು ಮತ್ತೊಮ್ಮೆ ಪ್ರಧಾನಿ ಮಾಡಲು ನಡೆಯುವ ಪ್ರಯತ್ನ. ಎಲ್ಲರೂ ಒಟ್ಟಿಗೆ ಹೋಗಲೇಬೇಕಿದೆ' ಎಂದರು.

ದೇಗುಲಹಳ್ಳಿ ಸ್ವಾಮೀಜಿ ಕಣಕ್ಕೆ

ಪ್ರಜಾವಾಣಿ ವಾರ್ತೆ

ಚನ್ನಮ್ಮನ ಕಿತ್ತೂರು (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ದೇಗುಲಹಳ್ಳಿ ಹಾಗೂ ಅಂಬಡಗಟ್ಟಿ ಗುರು ಮಡಿವಾಳೇಶ್ವರ ಮಠಗಳಿಗೆ ಪೀಠಾಧ್ಯಕ್ಷರಾಗಿರುವ ವೀರೇಶ್ವರ ಸ್ವಾಮೀಜಿ ಅವರು ಬೆಳಗಾವಿ ಲೋಕಸಭಾ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಲು ನಿರ್ಧರಿಸಿದ್ದಾರೆ.

ವೀರೇಶ್ವರ ಸ್ವಾಮೀಜಿ

ಅಂಬಡಗಟ್ಟಿ ಶ್ರೀಮಠದಲ್ಲಿ 'ಪ್ರಜಾವಾಣಿ'ಯೊಂದಿಗೆ ಸೋಮವಾರ ಮಾತನಾಡಿದ ಅವರು, 'ಭಕ್ತರ ನಿರ್ಣಯ ಮತ್ತು ವೈಯಕ್ತಿಕ ಆಸಕ್ತಿಯಿಂದಾಗಿ ಈ ಬಾರಿಯ ಲೋಕಸಭೆ ಚುನಾವಣೆಗೆ ಸ್ಪರ್ಧಿಸುತ್ತಿದ್ದೇನೆ. ಯಾವುದೇ ಪಕ್ಷ ಅಥವಾ ವ್ಯಕ್ತಿಯ ವಿರುದ್ಧ ಮುನಿಸಿನಿಂದಾಗಿ ಸ್ಪರ್ಧಿಸುತ್ತಿಲ್ಲ. ಭಕ್ತ ಬಳಗ ಸ್ಪರ್ಧಿಸುವಂತೆ ಒತ್ತಾಯ ಮಾಡುತ್ತಿದೆ. ಅವರೊಂದಿಗೆ ಚರ್ಚಿಸಿ ಈ ನಿರ್ಣಯಕ್ಕೆ ಬಂದಿರುವೆ' ಎಂದು ತಿಳಿಸಿದರು.

'ಧಾರ್ಮಿಕ ಮತ್ತು ರಾಜಕೀಯ ಕ್ಷೇತ್ರಗಳ ಉದ್ದೇಶ ಸಮಾಜಸೇವೆ, ಸಮಾಜ ಸುಧಾರಣೆ ಆಗಿದೆ. ಬೆಳಗಾವಿ ಕ್ಷೇತ್ರದಲ್ಲಿ ಬರುವ ಎಂಟು ವಿಧಾನಸಭೆ ಕ್ಷೇತ್ರಗಳಲ್ಲಿ ನಮ್ಮದೇ ಆದ ಭಕ್ತ ಬಳಗವನ್ನು ಹೊಂದಿದ್ದೇವೆ. ಅವರೆಲ್ಲ ನನ್ನ ಪರವಾಗಿ ಚುನಾವಣೆಯಲ್ಲಿ ದುಡಿಯಲಿದ್ದಾರೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಪ್ರಮುಖ ಅಭ್ಯರ್ಥಿಗಳ ಆಸ್ತಿ ವಿವರ

ಅಭ್ಯರ್ಥಿಯ ಹೆಸರು

ಪಿ.ಸಿ.ಮೋಹನ್

ಕ್ಷೇತ್ರ: ಬೆಂಗಳೂರು ಕೇಂದ್ರ		ಪತ್ನಿ: ಶೈಲಜಾ ಮೋಹನ್
ಪಕ್ಷ	ಬಿಜೆಪಿ	
ಒಟ್ಟು ಆಸ್ತಿಯ ಮೌಲ್ಯ	₹19.18 ಕೋಟಿ	₹22.21 ಕೋಟಿ
ಚರಾಸ್ತಿ	₹10.46 ಕೋಟಿ	₹4.39 ಕೋಟಿ
ಸ್ಥಿರಾಸ್ತಿ	₹6.02 ಕೋಟಿ	₹7.25 ಕೋಟಿ
ವಾಹನ	–	–
ಚಿನ್ನ	500 ಗ್ರಾಂ	500 ಗ್ರಾಂ
ಬೆಳ್ಳಿ	3 ಕೆ.ಜಿ	5 ಕೆ.ಜಿ
ಸಾಲ	₹5.79 ಕೋಟಿ	₹10.07 ಕೋಟಿ
ಅಪರಾಧ ಪ್ರಕರಣ	2	–

ಅಭ್ಯರ್ಥಿಯ ಹೆಸರು

ಎಂ.ಮಲ್ಲೇಶ್ ಬಾಬು

ಕ್ಷೇತ್ರ: ಕೋಲಾರ		ಪತ್ನಿ: ಮಂಜುಳಾ ಬಿ.ಎಲ್.
ಪಕ್ಷ	ಜೆಡಿಎಸ್	
ಒಟ್ಟು ಆಸ್ತಿಯ ಮೌಲ್ಯ	₹22.55 ಕೋಟಿ	₹1.30 ಕೋಟಿ
ಚರಾಸ್ತಿ	₹5.80 ಕೋಟಿ	₹32.59 ಲಕ್ಷ
ಸ್ಥಿರಾಸ್ತಿ	₹16.75 ಕೋಟಿ	₹98 ಲಕ್ಷ
ವಾಹನ: ಇನೋವಾ, ನಿಸಾನ್, ಹೀರೊ ಹೊಂಡಾ ಬೈಕ್ (ಒಟ್ಟು ಮೌಲ್ಯ ₹42.12 ಲಕ್ಷ)		ಇಲ್ಲ
ಚಿನ್ನ	164 ಗ್ರಾಂ	600 ಗ್ರಾಂ
ಬೆಳ್ಳಿ	ಇಲ್ಲ	ಇಲ್ಲ
ಸಾಲ	₹3.27 ಕೋಟಿ	₹17.16 ಲಕ್ಷ
ಅಪರಾಧ ಪ್ರಕರಣ	1	–

ಅಭ್ಯರ್ಥಿಯ ಹೆಸರು



ಎಂ.ಎಸ್.ರಕ್ಷಾ ರಾಮಯ್ಯ

ಕ್ಷೇತ್ರ: ಚಿಕ್ಕಬಳ್ಳಾಪುರ		ಪತ್ನಿ: ಅಶಿತ ರಕ್ಷಾ ರಾಮಯ್ಯ
ಪಕ್ಷ	ಕಾಂಗ್ರೆಸ್	
ಒಟ್ಟು ಆಸ್ತಿಯ ಮೌಲ್ಯ	₹82.83 ಕೋಟಿ	₹17.02 ಕೋಟಿ
ಚರಾಸ್ತಿ	₹54.98 ಕೋಟಿ	₹7.23 ಕೋಟಿ
ಸ್ಥಿರಾಸ್ತಿ	₹27.85 ಕೋಟಿ	₹9.79 ಕೋಟಿ
ವಾಹನ; ಟೊಯೋಟಾ ಲ್ಯಾಂಡ್ ಕ್ರೂಸರ್, ಮಹೇಂದ್ರ ಬೊಲೆರೊ, ಹಮ್ಮರ್ ಮತ್ತು ಮರ್ಸಿಡಿಸ್ ಬೆಂಜ್ ಕಾರು		ಇಲ್ಲ
ಚಿನ್ನ	853 ಗ್ರಾಂ	5.26 ಕೆ.ಜಿ
ಬೆಳ್ಳಿ	5.16 ಕೆ.ಜಿ	24.12 ಕೆ.ಜಿ
ಸಾಲ	₹20.93 ಕೋಟಿ	₹10.55 ಕೋಟಿ

ಅಭ್ಯರ್ಥಿಯ ಹೆಸರು

ಡಾ.ಕೆ. ಸುಧಾಕರ್

ಕ್ಷೇತ್ರ: ಚಿಕ್ಕಬಳ್ಳಾಪುರ		ಪತ್ನಿ ಡಾ.ಪ್ರೀತಿ ಜಿ.ಎ
ಪಕ್ಷ	ಬಿಜೆಪಿ	
ಒಟ್ಟು ಆಸ್ತಿಯ ಮೌಲ್ಯ	₹7.71 ಕೋಟಿ	₹24.04 ಕೋಟಿ
ಚರಾಸ್ತಿ	₹2.69 ಕೋಟಿ	₹5.52 ಕೋಟಿ
ಸ್ಥಿರಾಸ್ತಿ	₹5.01 ಕೋಟಿ	₹18.52 ಕೋಟಿ
ವಾಹನ: ಲ್ಯಾನ್ಸರ್ ಕಾರು, ಮೂರು ಟ್ರಾಕ್ಟರ್		1 ಹೋಂಡಾ ಆಕ್ಟಿವಾ ಸ್ಕೂಟರ್
ಚಿನ್ನ	160 ಗ್ರಾಂ	1 ಕೆ.ಜಿ, ನಾಲ್ಕು ಜೊತೆ ವಜ್ರ
ಬೆಳ್ಳಿ	9 ಕೆ.ಜಿ	21 ಕೆ.ಜಿ
ಸಾಲ	₹1.31 ಕೋಟಿ	₹19.03 ಕೋಟಿ

ಅಭ್ಯರ್ಥಿಯ ಹೆಸರು

ಶ್ರೇಯಸ್ ಪಟೇಲ್

ಕ್ಷೇತ್ರ: ಹಾಸನ		ಪತ್ನಿ: ಅಕ್ಷತಾ
ಪಕ್ಷ	ಕಾಂಗ್ರೆಸ್	
ಒಟ್ಟು ಆಸ್ತಿಯ ಮೌಲ್ಯ	₹40.99 ಕೋಟಿ	₹1.68 ಕೋಟಿ
ಚರಾಸ್ತಿ	₹1.40 ಕೋಟಿ	₹31.14 ಲಕ್ಷ
ಸ್ಥಿರಾಸ್ತಿ	₹39.58 ಕೋಟಿ	₹1.36 ಕೋಟಿ
ವಾಹನ: ಇನ್ನೋವಾ ಕ್ರಿಸ್ಟಾ ಕಾರು, ಮಹಿಂದ್ರಾ ಟ್ರ್ಯಾಕ್ಟರ್		ಇಲ್ಲ
ಚಿನ್ನ	1,200 ಗ್ರಾಂ	450 ಗ್ರಾಂ
ಬೆಳ್ಳಿ	ಇಲ್ಲ	ಇಲ್ಲ
ಸಾಲ	ಇಲ್ಲ	₹88.80 ಲಕ್ಷ
ಅಪರಾಧ ಪ್ರಕರಣ	1	–

ಅಭ್ಯರ್ಥಿಯ ಹೆಸರು

ಸೌಮ್ಯಾ ರೆಡ್ಡಿ

ಕ್ಷೇತ್ರ: ಬೆಂಗಳೂರು ದಕ್ಷಿಣ	
ಪಕ್ಷ	ಕಾಂಗ್ರೆಸ್
ಒಟ್ಟು ಆಸ್ತಿಯ ಮೌಲ್ಯ	₹2.30 ಕೋಟಿ
ಚರಾಸ್ತಿ	₹1.01 ಕೋಟಿ
ಸ್ಥಿರಾಸ್ತಿ	₹1.28 ಕೋಟಿ
ವಾಹನ	ಇನ್ನೋವಾ ಕಾರು
ಚಿನ್ನ	950 ಗ್ರಾಂ
ಬೆಳ್ಳಿ	5 ಕೆ.ಜಿ
ಸಾಲ	₹1.50 ಕೋಟಿ
ಅಪರಾಧ ಪ್ರಕರಣ	ಸಾರ್ವಜನಿಕ ಆಸ್ತಿ ಹಾನಿ ಸೇರಿದಂತೆ ಆರು

ಕಣದತ್ತ ಕಿರುನೋಟ

ಸೊಸೆಯಂದಿರ ಸೆಣಸು ಭಾರಿ ಬಿರುಸು

ಮಹಿಳೆಯರ ನಡುವೆ ತೀವ್ರ ಪೈಪೋಟಿ ಏರ್ಪಟ್ಟಿರುವ ಈ ಕ್ಷೇತ್ರ, ರಾಜ್ಯದಲ್ಲಿ ಕುತೂಹಲ ಕೆರಳಿಸಿದೆ. ದಾವಣಗೆರೆಯ ಪ್ರತಿಷ್ಠಿತ ಕುಟುಂಬಗಳೆರಡರ ಸ್ಪರ್ಧೆ ಎಂದೇ ಬಿಂಬಿತವಾಗಿದೆ. ದಾವಣಗೆರೆ ಜಿಲ್ಲೆಯ 7 ಹಾಗೂ ವಿಜಯನಗರ ಜಿಲ್ಲೆಯ ಹರಪನಹಳ್ಳಿ ವಿಧಾನಸಭೆ ಕ್ಷೇತ್ರ ಈ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರಲಿವೆ.

ಕಾಂಗ್ರೆಸ್‌ನಿಂದ ಶಾಮನೂರು ಶಿವಶಂಕರಪ್ಪ ಕುಟುಂಬದಿಂದ ಅವರ ಸೊಸೆ ಡಾ.ಪ್ರಭಾ ಮಲ್ಲಿಕಾರ್ಜುನ್ (ಸಚಿವ ಎಸ್‌.ಎಸ್‌. ಮಲ್ಲಿಕಾರ್ಜುನ್ ಪತ್ನಿ) ಹಾಗೂ ಬಿಜೆಪಿಯಿಂದ ಮಾಜಿ ಸಂಸದ, ದಿವಂಗತ ಜಿ.ಎನ್‌. ಮಲ್ಲಿಕಾರ್ಜುನಪ್ಪ ಅವರ ಸೊಸೆ ಗಾಯತ್ರಿ ಸಿದ್ದೇಶ್ವರ (ಸಂಸದ ಜಿ.ಎಂ. ಸಿದ್ದೇಶ್ವರ ಅವರ ಪತ್ನಿ) ಕಣದಲ್ಲಿದ್ದಾರೆ. ಇಬ್ಬರೂ ಹೊಸಮುಖಗಳು. 1977ರಲ್ಲಿ ರೂಪುಗೊಂಡಿರುವ ದಾವಣಗೆರೆ ಲೋಕಸಭಾ ಕ್ಷೇತ್ರದಲ್ಲಿ ಈವರೆಗೆ 12 ಚುನಾವಣೆಗಳು ನಡೆದಿದ್ದು, 6ನೇ ಬಾರಿ ಈ ಎರಡು ಕುಟುಂಬಗಳು ಕಣದಲ್ಲಿ ಎದುರಾಳಿಯಾಗಿವೆ.

ಗಾಯತ್ರಿ ಸಿದ್ದೇಶ್ವರ ಅವರು ಜಿ.ಎಂ.ಹಾಲಮ್ಮ ಚಾರಿಟಬಲ್ ಟ್ರಸ್ಟ್ ಮೂಲಕ ಡಾ.ಪ್ರಭಾ ಮಲ್ಲಿಕಾರ್ಜುನ್ ಅವರು ಎಸ್‌.ಎಸ್‌. ಕೇರ್ ಟ್ರಸ್ಟ್ ಮೂಲಕ ಹಲವು ಸಾಮಾಜಿಕ ಕಾರ್ಯಗಳ ಮೂಲಕ ಸಕ್ರಿಯರಾಗಿದ್ದಾರೆ, ಇಬ್ಬರೂ ಅಭ್ಯರ್ಥಿಗಳು ಬಂಡಾಯದ ಬಿಸಿ ಅನುಭವಿಸುತ್ತಿದ್ದು, ಯಾರಿಗೆ ಇದು ಒಳ ಏಟು ನೀಡಲಿದೆ, ಬೀಗರಲ್ಲಿ ಯಾರು ಗೆಲ್ಲಲಿದ್ದಾರೆ ಎಂಬುದಕ್ಕೆ ಮತದಾನದವರೆಗೂ ಕಾಯಬೇಕು.

ಅಭ್ಯರ್ಥಿಗಳು

ಗಾಯತ್ರಿ ಸಿದ್ದೇಶ್ವರ
ಬಿಜೆಪಿ

ಡಾ.ಪ್ರಭಾ ಮಲ್ಲಿಕಾರ್ಜುನ್
ಕಾಂಗ್ರೆಸ್

ವಿಧಾನಸಭೆ ಕ್ಷೇತ್ರಗಳ ಪಕ್ಷವಾರು ಪ್ರಾತಿನಿಧ್ಯ

ಕಾಂಗ್ರೆಸ್	ಬಿಜೆಪಿ	ಪಕ್ಷೇತರ
6	1	1

ಮತದಾರರ ಸಂಖ್ಯೆ

ಪುರುಷರು	ಮಹಿಳೆಯರು	ಲಿಂಗತ್ವ ಅಲ್ಪಸಂಖ್ಯಾತರು
8,38,705	8,40,340	136

ಒಟ್ಟು 16,79,746

2019	ಹೆಸರು	ಪಕ್ಷ	ಪಡೆದ ಮತಗಳು
ಗೆದ್ದವರು	ಜಿ.ಎಂ.ಸಿದ್ದೇಶ್ವರ	ಬಿಜೆಪಿ	6,52,996
ಸಮೀಪದ ಪ್ರತಿಸ್ಪರ್ಧಿ	ಎಚ್‌.ಬಿ.ಮಂಜಪ್ಪ	ಕಾಂಗ್ರೆಸ್	4,83,294

ಹೊಸ ಮುಖಗಳ ಅನಿರೀಕ್ಷಿತ ಸ್ಪರ್ಧೆ

ಕೋಲಾರ ಮೀಸಲು ಲೋಕಸಭೆ ಕ್ಷೇತ್ರಕ್ಕೆ ಈ ಬಾರಿ ಇಬ್ಬರೂ ಹೊಸ ಮುಖಗಳೇ. ಮೊದಲ ಬಾರಿ ಸ್ಪರ್ಧಿಸುತ್ತಿರುವ ಕಾಂಗ್ರೆಸ್‌ನ ಕೆ.ವಿ.ಗೌತಮ್ ಹಾಗೂ ಜೆಡಿಎಸ್‌ನ ಎಂ.ಮಲ್ಲೇಶ್ ಬಾಬು ನಡುವೆ ನೇರ ಪೈಪೋಟಿಗೆ ವೇದಿಕೆ ಸಿದ್ಧವಾಗಿದೆ.

ಎರಡೂ ಪಕ್ಷಗಳು ತಡವಾಗಿ ಟಿಕೆಟ್ ಘೋಷಿಸಿದ್ದು, ಕಾಂಗ್ರೆಸ್‌ನಲ್ಲಂತೂ ಅಭ್ಯರ್ಥಿ ವಿಚಾರವಾಗಿ ರಾದ್ಧಾಂತವೇ ನಡೆದಿದೆ.

ಈ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಸತತ ಎಂಟು ಬಾರಿ ಕೆ.ಎಚ್‌.ಮುನಿಯಪ್ಪ ಸ್ಪರ್ಧಿಸಿ ಏಳು ಬಾರಿ ಗೆದ್ದಿದ್ದಾರೆ. ಅವರು 2019ರ ಚುನಾವಣೆಯಲ್ಲಿ ಬಿಜೆಪಿಯ ಎಸ್‌. ಮುನಿಸ್ವಾಮಿ ವಿರುದ್ಧ ಪರಾಭವಗೊಂಡಿದ್ದರು. ಆ ಮೂಲಕ ಬಿಜೆಪಿ ಈ ಕ್ಷೇತ್ರದಲ್ಲಿ ಮೊದಲ ಬಾರಿ ಖಾತೆ ತೆರೆದಿತ್ತು. ಈ ಬಾರಿ ಮೈತ್ರಿಧರ್ಮ ಪಾಲನೆಗಾಗಿ ಬಿಜೆಪಿ ಈ ಕ್ಷೇತ್ರ ತ್ಯಾಗ ಮಾಡಿದ್ದು ಜೆಡಿಎಸ್ ಪಕ್ಷ ತನ್ನ ಅಭ್ಯರ್ಥಿ ಕಣಕ್ಕಿಳಿಸಿದೆ.

ಪರಿಶಿಷ್ಟ ಜಾತಿಯ ಎಡಗೈ ಸಮುದಾಯದ ಗೌತಮ್ ಹೊರಗಿನವರು ಎಂಬ ಅಸ್ತ್ರ ಪ್ರಯೋಗಿಸಲು ಜೆಡಿಎಸ್ ಈಗಲೇ ಸಜ್ಜಾದಂತಿದೆ. 'ಸ್ಥಳೀಯರು ವರ್ಸಸ್ ಹೊರಗಿನವರು' ಎಂಬ ಅಭಿಯಾನವನ್ನೇ ಆರಂಭಿಸಿದೆ. ಭೋವಿ ಸಮುದಾಯದ ಮಲ್ಲೇಶ್ ಬಾಬು ಬಂಗಾರಪೇಟೆ ವಿಧಾನಸಭೆ ಕ್ಷೇತ್ರದಲ್ಲಿ ಎರಡು ಬಾರಿ ಸ್ಪರ್ಧಿಸಿ ಸೋಲು ಕಂಡಿದ್ದಾರೆ. ಬಣ ಜಗಳ ಇರುವುದರಿಂದ ಕಾಂಗ್ರೆಸ್ ಅಭ್ಯರ್ಥಿ ಮುಂದೆ ದೊಡ್ಡ ಸವಾಲು ಇದೆ.

ಅಭ್ಯರ್ಥಿಗಳು

ಕೆ.ವಿ.ಗೌತಮ್
ಕಾಂಗ್ರೆಸ್

ಎಂ.ಮಲ್ಲೇಶ್ ಬಾಬು
ಜೆಡಿಎಸ್

ವಿಧಾನಸಭೆ ಕ್ಷೇತ್ರಗಳ ಪಕ್ಷವಾರು ಪ್ರಾತಿನಿಧ್ಯ

ಕಾಂಗ್ರೆಸ್	ಜೆಡಿಎಸ್	ಬಿಜೆಪಿ
5	3	0

ಮತದಾರರ ಸಂಖ್ಯೆ

ಪುರುಷರು	ಮಹಿಳೆಯರು	ಲಿಂಗತ್ವ ಅಲ್ಪಸಂಖ್ಯಾತರು
8,45,636	8,62,716	213

ಒಟ್ಟು 17,08,565

2019	ಹೆಸರು	ಪಕ್ಷ	ಪಡೆದ ಮತಗಳು
ಗೆದ್ದವರು	ಎಸ್‌.ಮುನಿಸ್ವಾಮಿ	ಬಿಜೆಪಿ	7,09,165
ಸಮೀಪದ ಪ್ರತಿಸ್ಪರ್ಧಿ	ಕೆ.ಎಚ್‌.ಮುನಿಯಪ್ಪ	ಕಾಂಗ್ರೆಸ್	4,99,144

ಈ ಬಾರಿ ಹೆಚ್ಚಾದ ಜಾತಿ ಲೆಕ್ಕಾಚಾರ

ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದಲ್ಲಿ ಮಾಜಿ ಸಚಿವ ಡಾ.ಕೆ.ಸುಧಾಕರ್ ಮತ್ತು ಯುವ ಕಾಂಗ್ರೆಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ರಕ್ಷಾ ರಾಮಯ್ಯ ನಡುವೆ ನೇರ ಹಣಾಹಣಿ ಏರ್ಪಟ್ಟಿದೆ.

ಬಿಜೆಪಿ ಅಭ್ಯರ್ಥಿ ಒಕ್ಕಲಿಗರಾಗಿದ್ದರೆ, ಕಾಂಗ್ರೆಸ್ ಅಭ್ಯರ್ಥಿ ಬಲಿಜ ಸಮುದಾಯಕ್ಕೆ ಸೇರಿದವರಾಗಿದ್ದಾರೆ. ಕ್ಷೇತ್ರದಲ್ಲಿ ಎರಡೂ ಸಮುದಾಯದ ಮತದಾರರು ನಿರ್ಣಾಯಕ ಸಂಖ್ಯೆಯಲ್ಲಿದ್ದಾರೆ. ಆದರೂ, ಇಬ್ಬರೂ ಅಭ್ಯರ್ಥಿಗಳಿಗೆ ಒಳ ಏಟಿನ ಭೀತಿ ಕಾಡುತ್ತಿದೆ.

ಕ್ಷೇತ್ರದಲ್ಲಿ ಒಕ್ಕಲಿಗ ಸಮುದಾಯದ ಮತದಾರರು ಬಹುಸಂಖ್ಯೆಯಲ್ಲಿದ್ದರೂ, ತೀರಾ ಕಡಿಮೆ ಸಂಖ್ಯೆಯ ಮತದಾರರನ್ನು ಹೊಂದಿರುವ ಸಮುದಾಯಗಳು ಕಾಂಗ್ರೆಸ್‌ನಿಂದ ಹೆಚ್ಚು ಬಾರಿ ಗೆಲುವು ಸಾಧಿಸಿರುವ ಇತಿಹಾಸವಿದೆ.ಆದರೆ ಈ ಬಾರಿ ಕ್ಷೇತ್ರದಲ್ಲಿ ಜಾತಿ ಲೆಕ್ಕಾಚಾರ ತೀವ್ರವಾಗಿದೆ.

ಈ ಹಿಂದೆ ಚಿಕ್ಕಬಳ್ಳಾಪುರ ಕಾಂಗ್ರೆಸ್ ಭದ್ರಕೋಟೆಯಾಗಿತ್ತು. 2019ರ ಲೋಕಸಭಾ ಚುನಾವಣೆಯಲ್ಲಿ ಬಿ.ಎನ್‌.ಬಚ್ಚೇಗೌಡ ಗೆಲುವಿನ ಮೂಲಕ ಬಿಜೆಪಿ ಮೊದಲ ಬಾರಿಗೆ ಖಾತೆ ತೆರೆಯಿತು. ಬಚ್ಚೇಗೌಡ ಅವರು ಚುನಾವಣಾ ರಾಜಕೀಯದಿಂದ ನಿವೃತ್ತಿ ಘೋಷಿಸಿದ ಕಾರಣ ಇದೀಗ ಎರಡನೇ ಬಾರಿಗೆ ಕಮಲ ಅರಳಿಸುವ ಹೊಣೆ ಸುಧಾಕರ್ ಹೆಗಲೇರಿದೆ.

ಅಭ್ಯರ್ಥಿಗಳು

ರಕ್ಷಾ ರಾಮಯ್ಯ
ಕಾಂಗ್ರೆಸ್

ಡಾ.ಕೆ.ಸುಧಾಕರ್
ಬಿಜೆಪಿ

ವಿಧಾನಸಭೆ ಕ್ಷೇತ್ರಗಳ ಪಕ್ಷವಾರು ಪ್ರಾತಿನಿಧ್ಯ

ಕಾಂಗ್ರೆಸ್	ಬಿಜೆಪಿ	ಪಕ್ಷೇತರ
5	1	1

ಮತದಾರರ ಸಂಖ್ಯೆ

ಪುರುಷರು	ಮಹಿಳೆಯರು	ಲಿಂಗತ್ವ ಅಲ್ಪಸಂಖ್ಯಾತರು
9,76,436	9,89,369	262

ಒಟ್ಟು 19,66,069

2019	ಹೆಸರು	ಪಕ್ಷ	ಪಡೆದ ಮತಗಳು
ಗೆದ್ದವರು	ಬಿ.ಎನ್‌.ಬಚ್ಚೇಗೌಡ	ಬಿಜೆಪಿ	7,45,912
ಸಮೀಪದ ಪ್ರತಿಸ್ಪರ್ಧಿ	ಎಂ.ವೀರಪ್ಪ ಮೊಯಿಲಿ	ಕಾಂಗ್ರೆಸ್	5,63,802

ಮಹಿಳಾ ಮತದಾರರನ್ನು ಆಕರ್ಷಿಸಲು ಹಲವು ಯೋಜನೆಗಳನ್ನು ಘೋಷಿಸುತ್ತಲೇ ಬಂದ ಕೇಂದ್ರ ಸರ್ಕಾರ

ಮಹಿಳಾ 'ಮತ' ಸೆಳೆತ: ಬಿಜೆಪಿ ಪಥ

ಹಳ್ಳಿಗಳಲ್ಲಿ ಸೌದೆ ಅಥವಾ ಸೀಮೆ ಎಣ್ಣೆ ಸ್ಟೌ ಬಳಸಿ ಹೊಗೆಯ ಉರಿಯಲ್ಲಿ ಬೇಯುತ್ತಿದ್ದ ಮಹಿಳೆಯರ ಕಷ್ಟ ತಪ್ಪಿಸಲು ಜಾರಿಗೆ ತಂದ 'ಉಜ್ವಲ' ಯೋಜನೆ 2019ರ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ ಕೈಹಿಡಿದಿತ್ತು. ಆದರೆ, ಈಚೆಗಿನ ವರ್ಷಗಳಲ್ಲಿ ಸಿಲಿಂಡರ್ ದುಬಾರಿಯಾಗಿ, ಜನರು ಸೌದೆಯ ಮೊರೆಹೋಗಿದ್ದೂ ಉಂಟು

ಮತದಾರರ ವಿವರ (ಆವರಣದಲ್ಲಿರುವುದು 2019ರ ಸಂಖ್ಯೆ) (ಕೋಟಿಗಳಲ್ಲಿ)

	ದೇಶದ ಒಟ್ಟು ಮತದಾರರು	ಪುರುಷರು	ಮಹಿಳೆಯರು
ದೇಶ	96.8 (91.6)	49.7 (48.5)	47.1 (43.1)
ಕರ್ನಾಟಕ	5.42 (5.10)	2.71 (2.58)	2.70 (2.52)

• ವೈ.ಗ. ಜಗದೀಶ್

ಆಡಳಿತ ನಡೆಸುವವರು, ರಾಜಕಾರಣ ಮಾಡುವವರು, ನೀತಿಗಳನ್ನು ರೂಪಿಸುವವರು ಗಂಡಸರೇ ಆದರೂ ಮತ ಹಾಕಲು, ಚುನಾವಣೆ ವೇಳೆ ಅಭ್ಯರ್ಥಿಗಳ ಪರ ಪ್ರಚಾರ ಮಾಡಲು, ನಾಯಕರು ಬಂದಾಗ ಜನಸಾಗರ ಸೇರಿದಂತೆ ತೋರಿಸಲು ಮಹಿಳೆಯರೇ ಬೇಕು. ದೇಶದ ಒಟ್ಟು ಜನಸಂಖ್ಯೆಯಲ್ಲಿ, ಪ್ರತಿ ಕುಟುಂಬದಲ್ಲಿ ಸ್ತ್ರೀಶಕ್ತಿಯ ಪಾಲು ಅರ್ಧದಷ್ಟಿದ್ದರೂ ಅಧಿಕಾರ ತಮ್ಮ ಮುಷ್ಟಿಯೊಳಗೇ ಇರಬೇಕು ಎಂಬುದು ಪುರುಷರ ಠೇಂಕಾರ. ತಮ್ಮ ಬಳಿಯೇ ಅಧಿಕಾರ ಇರಬೇಕು ಎಂದು ಬಯಸುವ ಪುರುಷಾಧಿಪತ್ಯ, ತಮಗೆ ನಿಷ್ಠೆಯಿಂದ ಮತ ಹಾಕುವ ತಾಯಂದಿರ ಮತ ಸೆಳೆಯಲು ವಿವಿಧ ಬಗೆಯ ಕಸರತ್ತುಗಳನ್ನು, ಆಸೆ-ಆಮಿಷಗಳನ್ನು, ಯೋಜನೆ-ಸಹಾಯಧನವನ್ನು ನೀಡುತ್ತಲೇ ಬಂದಿದೆ.

ಅದೇನೂ ಇಂದು-ನಿನ್ನೆಯ ಕತೆಯಲ್ಲ. ಕರ್ನಾಟಕದಲ್ಲಿ ಮಹಿಳಾ ಮತ ಸೆಳೆಯಲು ಕಾಂಗ್ರೆಸ್ ಪಕ್ಷ 'ಗ್ಯಾರಂಟಿ'ಗಳನ್ನು ಘೋಷಿಸಿ ಅದರಲ್ಲಿ ಯಶಸ್ಸನ್ನೂ ಪಡೆಯಿತು. ಕೇಂದ್ರದಲ್ಲಿ ನರೇಂದ್ರ ಮೋದಿ ಪ್ರಧಾನಿಯಾದ ಬಳಿಕ, ಅರ್ಧದಷ್ಟಿರುವ ಮಹಿಳಾ ಮತದಾರರನ್ನು ಬಿಜೆಪಿಯೆಡೆಗೆ ಆಕರ್ಷಿಸಲು ಹಲವು ಯೋಜನೆಗಳನ್ನು ಘೋಷಿಸುತ್ತಲೇ ಬಂದಿದ್ದಾರೆ. ಅವುಗಳಲ್ಲಿ ಬಹುತೇಕವು ಅನುಷ್ಠಾನವಾಗಿವೆ. ಆಕರ್ಷಕ ಹೆಸರು ಬಳಸಿ ಸೂಜಿಗಲ್ಲಿನಂತೆ ಜನರನ್ನು ಸೆಳೆಯುವುದು ಮೋದಿಯವರಿಗಂತೂ ಕರಗತ. ಹೀಗೆ ಚುಂಬಕ ಹೆಸರುಗಳನ್ನು ಹೊಂದಿದ ಯೋಜನೆಗಳು ನೇರ ನಗದು ವರ್ಗಾವಣೆ ಮೂಲಕ ಮಹಿಳೆಯರಿಗೆ ನೇರವಾಗಿ ತಲುಪುವ ಯೋಜನೆಗಳೇ ಆಗಿವೆ.

ಕಾಂಗ್ರೆಸ್ ಅಥವಾ ಯುಪಿಎ ಸರ್ಕಾರಗಳು ಕೇಂದ್ರದಲ್ಲಿ ಅಧಿಕಾರ ನಡೆಸಿದಾಗ ಮಹಿಳಾ ಪರ ಅನೇಕ ಯೋಜನೆಗಳನ್ನು ಜಾರಿಗೊಳಿಸಿದ್ದವು. ಅವುಗಳಲ್ಲಿ ಕೆಲವು ಕಾರ್ಯಕ್ರಮಗಳ ಹೆಸರನ್ನು ಬದಲಾಯಿಸಿ, ಹೊಸರೂಪ ಕೊಟ್ಟು ಭಾರಿ ಪ್ರಚಾರವನ್ನು ಪಡೆಯುವ ತಂತ್ರಗಾರಿಕೆಯನ್ನು ಮೋದಿ ಸರ್ಕಾರ ಮಾಡುತ್ತಾ ಬಂದಿತು. ಸ್ವಚ್ಛ ಭಾರತ್ ಯೋಜನೆ ಇಂತಹದರಲ್ಲಿ ಒಂದು.

ಹಳ್ಳಿಗಳಲ್ಲಿ ಸೌದೆ ಅಥವಾ ಸೀಮೆ ಎಣ್ಣೆ ಸ್ಟೌ ಬಳಸಿ ಹೊಗೆಯ ಉರಿಯಲ್ಲಿ ಬೇಯುತ್ತಿದ್ದ ಮಹಿಳೆಯರ ಕಷ್ಟ ತಪ್ಪಿಸಲು ಜಾರಿಗೆ ತಂದ 'ಉಜ್ವಲ' ಯೋಜನೆ 2019ರ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ ಕೈಹಿಡಿದಿತ್ತು. ಆದರೆ, ಈಚೆಗಿನ ವರ್ಷಗಳಲ್ಲಿ ಸಿಲಿಂಡರ್ ದುಬಾರಿಯಾಗಿ, ಜನರು ಸೌದೆಗಳ ಮೊರೆಹೋಗಿದ್ದೂ ಉಂಟು.

ಕೇಂದ್ರದಲ್ಲಿ ಅಧಿಕಾರ ಹಿಡಿದಾರಭ್ಯ ಬಿಜೆಪಿಯು ಮಹಿಳಾ ಕೇಂದ್ರಿತ ಯೋಜನೆಗಳನ್ನು ಘೋಷಿಸುವ ಮೂಲಕ, ತಮ್ಮ ಮತಬ್ಯಾಂಕ್ ಅನ್ನು ಭದ್ರಪಡಿಸಿಕೊಳ್ಳುವ ಕೆಲಸಕ್ಕೆ ಕೈಹಾಕಿತು. ಮಹಿಳಾ ಸ್ವಾವಲಂಬನೆಯ ಆಶಯವೂ ಇದರ ಹಿಂದಿತ್ತಾದರೂ, ಒಮ್ಮೆ ನಂಬಿದರೆ ಕೈಬಿಡದ ಮಹಿಳೆಯರ ಮತಗಳ ಖಾತರಿಪಡಿಸಿಕೊಳ್ಳುವ ದೂರದೃಷ್ಟಿಯೂ ಇದರ ಬೆನ್ನಿಗಿತ್ತು ಎಂಬುದನ್ನು ಅಲ್ಲಗಳೆಯಲಾಗದು.

ಧರ್ಮದ್ವೇಷದ ರಾಜಕಾರಣವನ್ನು ಬಿಜೆಪಿ ಮುಂದುವರಿಸಿಕೊಂಡೇ ಬಂದಿದೆ. ಮುಸ್ಲಿಂ ಸಮುದಾಯದ ಧಾರ್ಮಿಕ ಸಂಗತಿಯಾಗಿದ್ದ 'ತ್ರಿವಳಿ ತಲಾಖ್' ವಿಷಯವನ್ನು ಬಿಜೆಪಿ ರಾಜಕೀಯ ವೇದಿಕೆಗೆ ತಂದಿತ್ತು. ದೇಶವ್ಯಾಪಿ ಇದನ್ನು ಚರ್ಚೆಯಾಗುವಂತೆ ನೋಡಿಕೊಂಡಿತು. ಕೊನೆಗೆ ತ್ರಿವಳಿ ತಲಾಖ್ ರದ್ದುಪಡಿಸುವ ಕಾನೂನು ಜಾರಿಗೊಳಿಸಿತು. 'ತಲಾಖ್' ಅಸ್ತ್ರವನ್ನು ಬಳಸಿ, ಮಹಿಳೆಯರನ್ನು ಶೋಷಿಸುತ್ತಿದ್ದ ಪದ್ಧತಿಗೆ ತಡೆಹಾಕುವ ಉದ್ದೇಶ ಇದರ ಹಿಂದಿದೆ; ಮುಸ್ಲಿಂ ಮಹಿಳೆಯರ ಏಳಿಗೆ-ಹಿತಕ್ಕಾಗಿ ಇದನ್ನು ಜಾರಿಗೊಳಿಸಲಾಗಿದೆ' ಎಂದು ಬಿಜೆಪಿ ಬಿಂಬಿಸಿತು. ಮೇಲ್ನೋಟಕ್ಕೆ ಇದು ಸದಾಶಯದಂತೆ ಕಂಡರೂ, ಇದು ಮುಸ್ಲಿಂ ಸಮುದಾಯದ ಮಹಿಳೆಯರ ಮತಗಳನ್ನು ಸೆಳೆಯುವ ತಂತ್ರಗಾರಿಕೆಯ ಭಾಗವಾಗಿತ್ತು. ಮುಸ್ಲಿಂ ಮಹಿಳೆಯರ ಬಗ್ಗೆ ನೈಜ ಕಾಳಜಿ ಇದ್ದುದೇ ನಿಜವಾದರೆ, ಅವರನ್ನು ರಾಜಕೀಯವಾಗಿ ಮುನ್ನೆಲೆಗೆ ತರುವ ಯತ್ನವನ್ನೂ ಒಂದು ರಾಜಕೀಯ ಪಕ್ಷವಾಗಿ ಬಿಜೆಪಿ ಮಾಡಬೇಕಿತ್ತು; ಆದರೆ, ಅಂತಹ ಯಾವುದೇ ಕುರುಹುಗಳು ಕಳೆದ 10 ವರ್ಷಗಳಲ್ಲಿ ಸಿಗುವುದಿಲ್ಲ.

ಮಹಿಳಾ ಮತದಾರರ ಓಲೈಕೆಗಾಗಿ ಇಂತಹ ಅನೇಕ ಕಾರ್ಯಕ್ರಮಗಳನ್ನು ಬಿಜೆಪಿ ಸರ್ಕಾರ ರೂಪಿಸಿದೆ. ನಾರೀಶಕ್ತಿ, ಡ್ರೋನ್ ದೀದಿ, ಲಖ್‌ಪತಿ ದೀದಿ, ಬೇಟಿ ಪಡಾವೋ ಬೇಟಿ ಬಚಾವೋ ಎಂಬಿತ್ಯಾದಿ ಚೆಂದ ಚೆಂದದ ಹೆಸರುಗಳಲ್ಲಿ ಅವು ಹೊಳೆಯುತ್ತಿವೆ. ಬೇಟಿ ಪಡಾವೋ ಪರಿಣಾಮ ಅವಲೋಕಿಸಿದರೆ ಶಿಕ್ಷಣ ಕ್ಷೇತ್ರದಲ್ಲಿ ಕಳೆದ 10 ವರ್ಷಗಳಲ್ಲಿ ದೊಡ್ಡ ಮಟ್ಟದ ಕ್ರಾಂತಿಕಾರಕ ಬದಲಾವಣೆಯಾದ ಸೂಚನೆಗಳು ಕಾಣಸಿಗುತ್ತಿಲ್ಲ. ಬೇಟಿ ಬಚಾವೋ ಅಂದರೆ ಹೆಣ್ಣುಮಗುವಿನ ರಕ್ಷಣೆಯ ಬಗ್ಗೆ ಜಾಗೃತಿ ಮೂಡಿದೆಯಾದರೂ ಬಿಜೆಪಿ ಆಡಳಿತ ಇರುವ ರಾಜ್ಯಗಳಲ್ಲಿ ಯುವತಿಯರು-ಮಹಿಳೆಯರ ರಕ್ಷಣೆ ಎಷ್ಟರಮಟ್ಟಿಗೆ ಆಗಿದೆ ಎಂಬುದಕ್ಕೆ ವಿಶೇಷ ಉಲ್ಲೇಖಗಳೇನೂ ಬೇಕಿಲ್ಲ. ಮಹಿಳೆಯರಿನ್ನೂ ಮನೆಯೊಳಗೆ ಇರಬೇಕೆಂಬ ವೈದಿಕ ಧರ್ಮದ ಹೇರಿಕೆಗಳ ಕುರಿತಾಗಿ ಎಂದೂ ಆ ಪಕ್ಷ ಆಕ್ಷೇಪ ವ್ಯಕ್ತಪಡಿಸಿದ್ದಿಲ್ಲ. ಮಹಿಳೆಯನ್ನು ಎರಡನೇ ದರ್ಜೆ ಪ್ರಜೆಯಾಗಿ ನೋಡುವ ವಿಷಯದಲ್ಲಿ ಆ ಪಕ್ಷದ ಸಾಂಪ್ರದಾಯಿಕ ನಿಲುವಿನಲ್ಲೇನೂ ಬದಲಾವಣೆಯಾಗಿಲ್ಲ.

ಇದಕ್ಕೆಲ್ಲ ಬೊಟ್ಟು ಇಟ್ಟಂತೆ ರಾಷ್ಟ್ರಪತಿ ಆಯ್ಕೆ ಮಾಡುವಾಗ ಮಹಿಳೆಯೊಬ್ಬರಿಗೆ ಉನ್ನತ ಗೌರವವನ್ನು ಕಲ್ಪಿಸಿರುವುದಾಗಿ ಬಿಜೆಪಿ ಬಿಂಬಿಸಿಕೊಳ್ಳುತ್ತಿದೆ. ಅದರಲ್ಲೂ, ಅವರು ಬುಡಕಟ್ಟು ಮಹಿಳೆ ಎಂಬ 'ಹೆಗ್ಗಳಿಕೆ'ಯನ್ನು ತಮ್ಮ ಮುಡಿಗೆ ಪೇರಿಸಿಕೊಳ್ಳುತ್ತದೆ. ಸಂಸತ್ ಭವನ ಉದ್ಘಾಟನೆಗಾಗಲಿ, ರಾಮಮಂದಿರ ಶಿಲಾನ್ಯಾಸ ಮತ್ತು ಬಾಲರಾಮನ ಪ್ರತಿಷ್ಠಾಪನೆಯಂತಹ ಕಾರ್ಯಕ್ರಮದಲ್ಲಿ ಅವರನ್ನು 'ಅಸ್ಪೃಶ್ಯ'ರನ್ನಾಗಿಯೇ ನೋಡಿ, ಹೊರಗಿಡಲಾಯಿತು. ಮತದ ಕಾರಣಕ್ಕೆ 'ಮಹಿಳೆ-ಬುಡಕಟ್ಟು' ವಾದವನ್ನು ಮುಂದಿಟ್ಟಿದ್ದೇ ವಿನಾ ಅದರಲ್ಲಿ, ನೈಜ ಕಾಳಜಿಯನ್ನೇನೂ ತೋರಲಿಲ್ಲ.

ಇಷ್ಟೆಲ್ಲ ಮಾಡಿಯೂ 2019ರಲ್ಲಿ ಮಹಿಳೆಯರು ಒಂದಿಷ್ಟು ಪ್ರಮಾಣದಲ್ಲಿ ನಿಂತಂತೆ 2024ರಲ್ಲಿ ನಿಲ್ಲುತ್ತಾರೆಯೇ? ಕಮಲ ಅರಳಿಸಲು ತಮ್ಮ ಮತ ಧಾರೆ ಎರೆಯುತ್ತಾರೆಯೇ ಎಂಬುದನ್ನು ಫಲಿತಾಂಶವಷ್ಟೇ ಹೇಳಬಲ್ಲುದು.

ಸರ್ಕಾರದ ಯೋಜನೆಗಳು

ಡ್ರೋನ್ ದೀದಿ

ದೇಶದಾದ್ಯಂತ 15,000 ಮಹಿಳಾ ಸ್ವಸಹಾಯ ಗುಂಪುಗಳಿಗೆ ಕೇಂದ್ರ ಸರ್ಕಾರ ಡ್ರೋನ್‌ಗಳನ್ನು ವಿತರಿಸುವ ಕಾರ್ಯಕ್ರಮ ಇದು. ಡ್ರೋನ್ ಬಳಸಿ ರೈತ ಮಹಿಳೆಯರು ಗೊಬ್ಬರವನ್ನು ಹೊಲಗಳಲ್ಲಿ ಸಿಂಪಡಿಸಬಹುದು. ಪ್ರತಿ ತಿಂಗಳು ಮಹಿಳಾ ಡ್ರೋನ್ ಪೈಲಟ್‌ಗಳಿಗೆ ಕೇಂದ್ರವು ಗೌರವಧನ ನೀಡುತ್ತದೆ.

ಲಖ್‌ಪತಿ ದೀದಿ

2023ರಲ್ಲಿ ಲಖ್‌ಪತಿ ದೀದಿ ಯೋಜನೆ ಘೋಷಣೆ ಮಾಡಿದ್ದು, ಮಹಿಳೆಯರು ತಮ್ಮ ಹಳ್ಳಿಗಳಲ್ಲಿ ಸಣ್ಣ ಉದ್ಯಮಗಳನ್ನು ಪ್ರಾರಂಭಿಸಲು ಪ್ರೋತ್ಸಾಹಿಸುವುದು ಯೋಜನೆಯ ಉದ್ದೇಶ

ಪಿಎಂ ಸ್ವನಿಧಿ

ಬೀದಿ ಬದಿ ವ್ಯಾಪಾರಿಗಳಿಗೆ ನೆರವಾಗಲು 2020ರಲ್ಲಿ ಜಾರಿಗೆ ತಂದ ಯೋಜನೆಯಾಗಿದೆ. ಬೀದಿ ಬದಿ ವ್ಯಾಪಾರಿಗಳ ಪೈಕಿ ಅರ್ಧದಷ್ಟು ಮಹಿಳೆಯರೇ ಇದ್ದು ಅವರಿಗೆ ನೆರವಾಗುವ ಆಶಯ ಹೊಂದಿದೆ.

ಬೇಟಿ ಬಚಾವೋ

ಹೆಣ್ಣುಮಗು ಹುಟ್ಟುವುದು ಅಥವಾ ಹೆಣ್ಣು ಮಕ್ಕಳನ್ನು ಕಡೆಗಣಿಸುತ್ತಿದ್ದ ಹೊತ್ತಿನೊಳಗೆ, ಹೆಣ್ಣುಮಗುವಿನ ಮಹತ್ವದ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮ ಇದಾಗಿದೆ.

ಮಾತೃವಂದನಾ-2.0

ಗರ್ಭಾವಸ್ಥೆಯಿಂದ ಬಾಣಂತಿಯವರೆಗೆ ಮಹಿಳೆಯರ ಪೋಷಣೆಗೆ ನೆರವಾಗುವ ಆಶಯ ಹೊಂದಿದೆ. ಈ ಅವಧಿಯಲ್ಲಿ ₹ 5 ಸಾವಿರವನ್ನು ಕಂತುಗಳಲ್ಲಿ ನೀಡಲಾಗುತ್ತದೆ. ಎರಡನೇ ಮಗು ಹೆಣ್ಣಾದರೆ ₹6 ಸಾವಿರ ಸಿಗಲಿದೆ.

ಸುಕನ್ಯಾ ಸಮೃದ್ಧಿ

ಬೇಟಿ ಬಚಾವೋಗೆ ಪೂರಕವಾಗಿ ಜಾರಿಗೆ ತಂದ ಯೋಜನೆ. ಹೆಣ್ಣುಮಗುವಿನ ಹೆಸರಿನಲ್ಲಿ ಸಣ್ಣ ಉಳಿತಾಯ ಯೋಜನೆಯಡಿ ಪೋಷಕರು ಠೇವಣಿ ಇರಿಸಿದ ಮೊತ್ತಕ್ಕೆ ಶೇ 8ರಷ್ಟು ಬಡ್ಡಿ ಸಿಗಲಿದೆ. 2.73 ಕೋಟಿ ಖಾತೆಗಳಿದ್ದು ₹1.19 ಲಕ್ಷ ಕೋಟಿ ಠೇವಣಿ ಇರಿಸಲಾಗಿದೆ

ಬಿಜೆಪಿ ಪ್ರಣಾಳಿಕೆ: 'ವಿಕಸಿತ ಭಾರತ'ವೇ ಪ್ರಧಾನ

ನವದೆಹಲಿ (ಪಿಟಿಐ): ಬಿಜೆಪಿಯ ಚುನಾವಣಾ ಪ್ರಣಾಳಿಕೆ ಸಮಿತಿಯು ಸೋಮವಾರ ಮೊದಲ ಬಾರಿಗೆ ಸಭೆ ಸೇರಿದ್ದು, 'ವಿಕಸಿತ ಭಾರತ'ದ ಕಾರ್ಯಸೂಚಿಗೆ ನೀಲನಕ್ಷೆ ರೂಪಿಸುವ ಬಗ್ಗೆ ಮುಖ್ಯವಾಗಿ ಚರ್ಚೆ ನಡೆಸಿತು. ಸಭೆಯಲ್ಲಿ ಎಂಟು ಮಂದಿ ಕೇಂದ್ರ ಸಚಿವರು ಸೇರಿದಂತೆ ಪಕ್ಷದ ಇತರ ಮುಖಂಡರು ಲೋಕಸಭಾ ಚುನಾವಣೆಯ ಪ್ರಮುಖ ಭರವಸೆಗಳ ಬಗ್ಗೆ ಮಾತುಕತೆ ನಡೆಸಿದರು.

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಮಿಸ್ಡ್ ಕಾಲ್ ಸೇವೆಯ ಮೂಲಕ ಪಕ್ಷವು 3.75 ಲಕ್ಷಕ್ಕೂ ಹೆಚ್ಚು ಮತ್ತು 'ನಮೋ' ಆ್ಯಪ್ ಮೂಲಕ ಸುಮಾರು 1.70 ಲಕ್ಷದಷ್ಟು ಸಲಹೆಗಳನ್ನು ಸ್ವೀಕರಿಸಿದೆ. ಜನರಿಂದ ಸ್ವೀಕರಿಸಿದ ಎಲ್ಲ ಸಲಹೆಗಳನ್ನು ವಿವಿಧ ವಿಭಾಗಗಳ ಅಡಿ ವರ್ಗೀಕರಿಸಿ, ಸಮಿತಿಯ ಮುಂದಿನ ಸಭೆಯಲ್ಲಿ ಚರ್ಚಿಸಲಾಗುವುದು ಎಂದು ಕೇಂದ್ರ ಸಚಿವ ಪೀಯೂಷ್ ಗೋಯಲ್ ತಿಳಿಸಿದರು.

ಸಮಿತಿಯ ಸಹ ಸಂಚಾಲಕರೂ ಆಗಿರುವ ಗೋಯಲ್, ದೇಶದ 3,500 ವಿಧಾನಸಭಾ ಕ್ಷೇತ್ರಗಳಲ್ಲಿ 916 ವಿಡಿಯೊ ವ್ಯಾನ್‌ಗಳು ಜನರನ್ನು ಸಂಪರ್ಕಿಸುತ್ತಿದ್ದು, ಪ್ರಣಾಳಿಕೆಗಾಗಿ ಅಭಿಪ್ರಾಯಗಳನ್ನು ಸಂಗ್ರಹಿಸುತ್ತಿವೆ ಎಂದು ಹೇಳಿದರು.

ಬಿಜೆಪಿಯು 27 ಮಂದಿಯ ಪ್ರಣಾಳಿಕೆ ಸಮಿತಿಯನ್ನು ಶನಿವಾರ ಘೋಷಿಸಿತ್ತು.

ಚಾಯ್ ಪೆ ಚರ್ಚಾ

ಪ್ರಚಾರ

ಹಿಮಾಚಲ ಪ್ರದೇಶದ ಮಂಡಿ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ, ಬಾಲಿವುಡ್ ನಟಿ ಕಂಗನಾ ರನೌತ್ ಅವರು ಪ್ರಚಾರದ ಭಾಗವಾಗಿ ಸೋಮವಾರ ನಡೆದ 'ಚಾಯ್ ಪೆ ಚರ್ಚಾ' ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಹಿಮಾಚಲ ಪ್ರದೇಶದ ಮಾಜಿ ಮುಖ್ಯಮಂತ್ರಿ ಜೈರಾಮ್ ಠಾಕೂರ್ ಪಾಲ್ಗೊಂಡರು —ಪಿಟಿಐ ಚಿತ್ರ

ಗುಜರಾತ್: ಬಿಜೆಪಿಗೆ ಭಿನ್ನಮತದ ತೊಡಕು?

ಅಹಮದಾಬಾದ್ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ತವರು ರಾಜ್ಯ ಗುಜರಾತ್‌ನಲ್ಲಿ ಲೋಕಸಭಾ ಟಿಕೆಟ್ ಹಂಚಿಕೆಯ ಸಂಬಂಧ ಬಿಜೆಪಿಯಲ್ಲಿ ಭಿನ್ನಮತ ತಲೆದೋರಿದ್ದು, ಇದು ಪಕ್ಷದ 'ಕ್ಲೀನ್‌ಸ್ವೀಪ್' ಕನಸಿನ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ ಎನ್ನಲಾಗುತ್ತಿದೆ.

ಅಮ್ರೇಲಿ, ರಾಜ್‌ಕೋಟ್, ಸಾಬರಕಾಂತಾ, ಸುರೇಂದ್ರನಗರ ಮತ್ತು ವಡೋದರ ಕ್ಷೇತ್ರಗಳ ಅಭ್ಯರ್ಥಿ ಆಯ್ಕೆ ವಿಚಾರದಲ್ಲಿ ಮುಖಂಡರ ನಡುವೆ ಮನಸ್ತಾಪ ತಲೆದೋರಿದೆ.

'ರಜಪೂತ ದೊರೆಗಳು ಬ್ರಿಟಿಷರಿಗೆ ಸಹಕರಿಸಿದ್ದರು' ಎಂದು ಕೇಂದ್ರ ಸಚಿವ ಮತ್ತು ರಾಜ್‌ಕೋಟ್ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಪರಶೋತ್ತಮ್ ರೂಪಾಲಾ ಈಚೆಗೆ ಹೇಳಿಕೆ ನೀಡಿದ್ದರು. ಅದನ್ನು ವಿರೋಧಿಸಿ ಕ್ಷತ್ರಿಯ ಸಮುದಾಯದ ಮುಖಂಡ ರಾಜ್ ಶೆಖಾವತ್ ಶನಿವಾರ ಪಕ್ಷಕ್ಕೆ ರಾಜೀನಾಮೆ ಸಲ್ಲಿಸಿದ್ದರು. ಜತೆಗೆ ರೂಪಾಲಾ ಹೇಳಿಕೆ ಖಂಡಿಸಿ ಕ್ಷತ್ರಿಯರು ರಾಜ್ಯದ ವಿವಿಧ ಭಾಗಗಳಲ್ಲಿ ಪ್ರತಿಭಟನೆಯನ್ನೂ ನಡೆಸಿದರು.

ರಾಜ್‌ಕೋಟ್‌ನ ಸಾರ್ವಜನಿಕ ಸಭೆಯಲ್ಲಿ ತಾವು ಆಡಿದ ಮಾತಿಗೆ ರೂಪಾಲಾ ಕ್ಷಮೆಯಾಚಿಸಿದ್ದರು. ಆದರೂ ಪ್ರತಿಭಟನೆಯನ್ನು ತೀವ್ರಗೊಳಿಸುವ ಎಚ್ಚರಿಕೆ ನೀಡಿರುವ ಕರ್ಣಿ ಸೇನಾ, ರೂಪಾಲಾಗೆ ನೀಡಿರುವ ಟಿಕೆಟ್ ವಾಪಸ್ ಪಡೆಯದಿದ್ದರೆ ಚುನಾವಣೆಯಲ್ಲಿ ಅವರನ್ನು ಸೋಲಿಸುವುದಾಗಿ ಎಚ್ಚರಿಸಿದೆ.

ಇನ್ನೊಂದೆಡೆ, ಅಮ್ರೇಲಿ ಲೋಕಸಭಾ ಕ್ಷೇತ್ರದ ಅಭ್ಯರ್ಥಿಯಾಗಿ ಭರತ್ ಸುತಾರಿಯಾ ಅವರನ್ನು ಆಯ್ಕೆ ಮಾಡಿರುವ ಸಂಬಂಧ ಎರಡು ಬಣಗಳು ಶನಿವಾರ ರಾತ್ರಿ ಪರಸ್ಪರ ಸಂಘರ್ಷ ನಡೆಸಿವೆ.

ವಡೋದರದಲ್ಲಿ ಪಕ್ಷದ ಅಭ್ಯರ್ಥಿಯಾಗಿದ್ದ ಎರಡು ಅವಧಿಯ ಸಂಸದೆ ರಂಜನಾ ಭಟ್ ಆಂತರಿಕ ಭಿನ್ನಮತದಿಂದಾಗಿ ಈ ಬಾರಿ ಕಣದಿಂದ ಹಿಂದೆ ಸರಿದಿದ್ದರು. ಪಕ್ಷವು, ಹೇಮಾಂಗ್ ಜೋಷಿ ಅವರನ್ನು ವಡೋದರದ ಅಭ್ಯರ್ಥಿಯಾಗಿ ಘೋಷಿಸಿದೆ.

ಬಿಜೆಪಿ ಮುಖಂಡ ಭೀಖಾಜಿ ಠಾಕೂರ್ ಕಣದಿಂದ ಹಿಂದೆ ಸರಿದ ಬಳಿಕ ಪಕ್ಷವು ಕಾಂಗ್ರೆಸ್‌ನ ಮಾಜಿ ಶಾಸಕ ಮಹೇಂದ್ರ ಸಿನ್ಹ ಬರ್ಯ್ಯಾ ಅವರ ಪತ್ನಿ ಶೋಭನಾ ಬರ್ಯ್ಯಾ ಅವರಿಗೆ ಸಾಬರಕಾಂತಾ ಕ್ಷೇತ್ರದ ಟಿಕೆಟ್ ಘೋಷಿಸಿತ್ತು. ಅದರ ವಿರುದ್ಧ ಪ್ರತಿಭಟಿಸಲು ಮಾರ್ಚ್ 26ರಂದು ಠಾಕೂರ್ ಅವರ ದೊಡ್ಡ ಸಂಖ್ಯೆಯ ಬೆಂಬಲಿಗರು ಅರ್ವಲ್ಲಿ ಜಿಲ್ಲೆಯ ಪಕ್ಷದ ಕಚೇರಿಯ ಹೊರಗೆ ನೆರೆದಿದ್ದರು. ಅವರನ್ನು ಸಮಾಧಾನಿಸಲು ಪಕ್ಷದ ಹೈಕಮಾಂಡ್ ಹಲವು ಸಭೆಗಳನ್ನು ನಡೆಸಬೇಕಾಯಿತು.

ಸುರೇಂದ್ರನಗರದಲ್ಲಿಯೂ ಹಾಲಿ ಸಂಸದರ ಬದಲಿಗೆ ಕಣಕ್ಕಿಳಿದಿರುವ ಚಂದು ಶಿಹೋರ ಅವರನ್ನು ಪಕ್ಷದ ಕೆಲವು ಕಾರ್ಯಕರ್ತರು ವಿರೋಧಿಸುತ್ತಿದ್ದಾರೆ. ಶಿಹೋರ ಬದಲಿಗೆ ತಮ್ಮದೇ ಉಪಜಾತಿಯ ಮುಖಂಡನನ್ನು ಕಣಕ್ಕಿಳಿಸಬೇಕು. ಇಲ್ಲದಿದ್ದರೆ ಬಿಜೆಪಿ ವಿರುದ್ಧ ಮತ ಚಲಾಯಿಸುತ್ತೇವೆ' ಎಂದು ತಲ್ಪಾಡಾ ಕೋಲಿ ಸಮುದಾಯ ಎಚ್ಚರಿಸಿದೆ.

ಗುಜರಾತ್‌ನ 26 ಲೋಕಸಭಾ ಕ್ಷೇತ್ರಗಳಿಗೆ ಮೇ.7ರಂದು ಒಂದೇ ಹಂತದಲ್ಲಿ ಮತದಾನ ನಡೆಯಲಿದೆ.

'ಹೊರಗಿನವರಿಗೆ ಮಣೆ ಹಾಕಿದ ಬಿಜೆಪಿ'

'ಅಭ್ಯರ್ಥಿಗಳ ಆಯ್ಕೆಗೆ ಸಂಬಂಧಿಸಿದ ಬಿಜೆಪಿಯೊಳಗೆ ನಡೆಯುತ್ತಿರುವ ಸಂಘರ್ಷವು ಇತರೆ ಪಕ್ಷಗಳಿಂದ ಬಂದವರಿಗೆ ಮಣೆ ಹಾಕಿ ತನ್ನದೇ ಪಕ್ಷದ ನಿಷ್ಠಾವಂತ ಕಾರ್ಯಕರ್ತರನ್ನು ಕಡೆಗಣಿಸಿದ್ದರ ಫಲ' ಎಂದು ಗುಜರಾತ್‌ನ ಕಾಂಗ್ರೆಸ್ ವಕ್ತಾರ ಮನೀಶ್ ದೋಶಿ ಅಭಿಪ್ರಾಯಪಟ್ಟಿದ್ದಾರೆ.

ಮೂರನೇ ಬಾರಿಗೆ ರಾಜ್ಯದ ಎಲ್ಲ ಕ್ಷೇತ್ರಗಳನ್ನು ಗೆಲ್ಲುವ ಬಿಜೆಪಿಯ ಪ್ರಯತ್ನಕ್ಕೆ ಆ ಪಕ್ಷದೊಳಗಿನ ಭಿನ್ನಾಭಿಪ್ರಾಯ ಅಡ್ಡಿಯಾಗಲಿದೆ ಎಂದು ಕಾಂಗ್ರೆಸ್ ಪ್ರತಿಪಾದಿಸಿದೆ.

ಕೇರಳ: ಕಾಂಗ್ರೆಸ್‌ಗೆ ಎಸ್‌ಡಿಪಿಐ ಬೆಂಬಲ

ಕೊಚ್ಚಿ (ಪಿಟಿಐ): ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ (ಎಸ್‌ಡಿಪಿಐ), ಲೋಕಸಭಾ ಚುನಾವಣೆಗೆ ಕೇರಳದಲ್ಲಿ ಕಾಂಗ್ರೆಸ್ ನೇತೃತ್ವದ ಯುಡಿಎಫ್‌ಗೆ ತನ್ನ ಬೆಂಬಲ ಘೋಷಿಸಿದೆ.

ಆದರೆ, ಎಸ್‌ಡಿಪಿಐ ಜತೆ ಯುಡಿಎಫ್ ಯಾವುದೇ ಹೊಂದಾಣಿಕೆ ಮಾಡಿಕೊಂಡಿಲ್ಲ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ವಿ.ಡಿ.ಸತೀಶನ್ ಅವರು ಸ್ಪಷ್ಟಪಡಿಸಿದ್ದಾರೆ.

'ಕೇರಳದಲ್ಲಿ ಬಿಜೆಪಿ ವಿರುದ್ಧ ಹೋರಾಡುತ್ತಿರುವ ಕಾಂಗ್ರೆಸ್‌ಗೆ ನಮ್ಮ ಬೆಂಬಲ ಘೋಷಿಸಿದ್ದೇವೆ. ಎಲ್ಲ ಅಂಶಗಳನ್ನು ಪರಿಗಣಿಸಿ ಈ ನಿರ್ಧಾರ ತೆಗೆದುಕೊಂಡಿದ್ದೇವೆ' ಎಂದು ಎಸ್‌ಡಿಪಿಐ ಅಧ್ಯಕ್ಷ ಮೂವಾಟ್ಟುಪುಳ ಅಶ್ರಫ್ ಮೌಲವಿ ಸೋಮವಾರ ಮಾಧ್ಯಮಗಳಿಗೆ ತಿಳಿಸಿದರು.

ದೇಶದ ವಿವಿಧ ರಾಜ್ಯಗಳಲ್ಲಿ ಒಟ್ಟು 18 ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದೇವೆ ಎಂದು ಅವರು ಹೇಳಿದರು.

'ಮ್ಯಾಚ್ ಫಿಕ್ಸಿಂಗ್' ಹೇಳಿಕೆ ಸಂಬಂಧ ಚುನಾವಣಾ ಆಯೋಗಕ್ಕೆ ಬಿಜೆಪಿ ದೂರು

ರಾಹುಲ್ ವಿರುದ್ಧ 'ಕಠಿಣ ಕ್ರಮ'ಕ್ಕೆ ಆಗ್ರಹ

ನವದೆಹಲಿ (ಪಿಟಿಐ): 'ಇಂಡಿಯಾ' ಕೂಟದ ರ‍್ಯಾಲಿಯಲ್ಲಿ ರಾಹುಲ್ ಗಾಂಧಿಯವರ 'ಮ್ಯಾಚ್ ಫಿಕ್ಸಿಂಗ್' ಮತ್ತು ಇತರ ಹೇಳಿಕೆಗಳ ಸಂಬಂಧ ಅವರ ವಿರುದ್ಧ 'ಕಠಿಣ ಕ್ರಮ' ಕೈಗೊಳ್ಳಬೇಕೆಂದು ಬಿಜೆಪಿ ಸೋಮವಾರ ಚುನಾವಣಾ ಆಯೋಗವನ್ನು ಆಗ್ರಹಿಸಿದೆ.

ಕೇಂದ್ರ ಸಚಿವ ಹರ್ದೀಪ್ ಸಿಂಗ್ ಪುರಿ ಮತ್ತು ಪಕ್ಷದ ಪ್ರಧಾನ ಕಾರ್ಯದರ್ಶಿ ಅರುಣ್ ಸಿಂಗ್ ನೇತೃತ್ವದ ನಿಯೋಗವು ರಾಹುಲ್ ಗಾಂಧಿ ವಿರುದ್ಧ ಆಯೋಗಕ್ಕೆ ದೂರು ಸಲ್ಲಿಸಿದೆ. ದೇಶದ ಜನರಲ್ಲಿ ಮತ್ತು ಪ್ರಧಾನಿ ಮೋದಿ ಅವರಲ್ಲಿ ಬೇಷರತ್ ಕ್ಷಮೆಯಾಚಿಸುವಂತೆ ರಾಹುಲ್ ಅವರಿಗೆ ನಿರ್ದೇಶಿಸಬೇಕು ಎಂದು ನಿಯೋಗವು ಒತ್ತಾಯಿಸಿದೆ.

ದೂರು ದಾಖಲಿಸಿದ ನಂತರ ಮಾತನಾಡಿದ ಪುರಿ, 'ಕಾಂಗ್ರೆಸ್ ನಾಯಕನ ಹೇಳಿಕೆ 'ಅತ್ಯಂತ ಆಕ್ಷೇಪಾರ್ಹ'ವಾಗಿದ್ದು, ಅದು ಕೇವಲ ನೀತಿಸಂಹಿತೆಯ ಉಲ್ಲಂಘನೆ ಅಷ್ಟೇ ಅಲ್ಲದೇ ಗಂಭೀರ ಪರಿಣಾಮ ಬೀರುವಂಥದ್ದು ಕೂಡ ಆಗಿದೆ' ಎಂದು ಹೇಳಿದರು.

'ಸಾರ್ವಜನಿಕ ಸಭೆಯಲ್ಲಿ ರಾಹುಲ್ ಗಾಂಧಿ, ಇದು (ಲೋಕಸಭಾ ಚುನಾವಣೆ) 'ಫಿಕ್ಸ್ ಆದ ಮ್ಯಾಚ್' ಎಂದು ಹೇಳಿದ್ದಾರೆ. ಜತೆಗೆ ಕೇಂದ್ರ ಸರ್ಕಾರವು ತನ್ನ ವ್ಯಕ್ತಿಗಳನ್ನು ಚುನಾವಣಾ ಆಯೋಗಕ್ಕೆ ನಿಯೋಜಿಸಿದೆ ಎಂದಿದ್ದಾರೆ. ಇವಿಎಂಗಳ ವಿಶ್ವಾಸಾರ್ಹತೆಯನ್ನು ಪ್ರಶ್ನಿಸಿರುವ ಅವರು, ಚುನಾವಣೆಯ ನಂತರ ಸಂವಿಧಾನವನ್ನು ರದ್ದುಪಡಿಸಲಾಗುತ್ತದೆ (ಬದಲಿಸಲಾಗುತ್ತದೆ) ಎಂದಿದ್ದಾರೆ' ಎನ್ನುವುದಾಗಿ ಪುರಿ ತಿಳಿಸಿದರು.

'ರಾಹುಲ್ ಮತ್ತು ಇತರ ಕಾಂಗ್ರೆಸ್ ಮುಖಂಡರು ಹಾಗೂ 'ಇಂಡಿಯಾ' ಕೂಟದ ನಾಯಕರ ವಿರುದ್ಧ ಕಠಿಣ ಕ್ರಮ ಜರುಗಿಸುವಂತೆ ನಾವು ಚುನಾವಣಾ ಆಯೋಗವನ್ನು ಒತ್ತಾಯಿಸಿದ್ದೇವೆ' ಎಂದು ಹೇಳಿದರು.

ಕಾಂಗ್ರೆಸ್ ಪಕ್ಷ ಮತ್ತು ಅದರ ಮುಖಂಡರ ದಾರಿ ತಪ್ಪಿಸುವ ಹೇಳಿಕೆಗಳನ್ನು ಗಮನಿಸುವಂತೆ ಚುನಾವಣಾ ಆಯೋಗವನ್ನು ಕೋರಿರುವ ಬಿಜೆಪಿಯು, 'ಈ ಮೂಲಕ ಅವರು ಜನರಲ್ಲಿ ಅಸಮಾಧಾನ ಉಂಟುಮಾಡುತ್ತಿರುವುದರ ಜತೆಗೆ ಚುನಾವಣಾ ನೀತಿಸಂಹಿತೆ ಹಾಗೂ ಆರೋಗ್ಯಕರ ಪ್ರಜಾತಾಂತ್ರಿಕ ವಿಧಾನಗಳನ್ನು ಉಲ್ಲಂಘಿಸುತ್ತಿದ್ದಾರೆ' ಎಂದು ದೂರಿನಲ್ಲಿ ತಿಳಿಸಿದೆ.

ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅರುಣ್ ಸಿಂಗ್, 'ರಾಹುಲ್ ಗಾಂಧಿ ಪದೇ ಪದೇ ಇಂಥ ಹೇಳಿಕೆ ನೀಡುತ್ತಿದ್ದಾರೆ' ಎಂದು ಆರೋಪಿಸಿದರು. 'ಲೋಕಸಭಾ ಚುನಾವಣೆಯಲ್ಲಿ ಇಂಥ ಹೇಳಿಕೆ ನೀಡದಂತೆ ಕಾಂಗ್ರೆಸ್ ನಾಯಕನ ಮಾತುಗಳನ್ನು ಸಂಪೂರ್ಣವಾಗಿ ಸೆನ್ಸಾರ್ ಮಾಡಬೇಕು' ಎಂದು ಅವರು ಆಯೋಗವನ್ನು ಒತ್ತಾಯಿಸಿದರು. ಪ್ರಕರಣಕ್ಕೆ ಸಂಬಂಧಿಸಿದಂತೆ ಕಠಿಣ ಕ್ರಮ ಕೈಗೊಳ್ಳುವುದಾಗಿ ಆಯೋಗವು ತಿಳಿಸಿದೆ ಎಂದು ಅವರು ಹೇಳಿದರು.

'ಪ್ರಜಾಪ್ರಭುತ್ವದ ಬಗ್ಗೆ ಮಾತನಾಡುವ ಹಕ್ಕಿಲ್ಲ'

ಜೋಧಪುರ (ಪಿಟಿಐ): ತುರ್ತು ಪರಿಸ್ಥಿತಿಯ ಸಮಯದಲ್ಲಿ ಲಕ್ಷಾಂತರ ಜನರನ್ನು ಜೈಲಿಗೆ ಹಾಕಿದ್ದ ಮತ್ತು ರಾಜಕೀಯ ಪಕ್ಷಗಳ ಮೇಲೆ ನಿಷೇಧ ಹೇರಿದ್ದ ಮಾಜಿ ಪ್ರಧಾನಿ ಇಂಧಿರಾ ಗಾಂಧಿ ಮೊಮ್ಮಗ ರಾಹುಲ್ ಗಾಂಧಿ ಅವರಿಗೆ ಪ್ರಜಾಪ್ರಭುತ್ವದ ಬಗ್ಗೆ ಮಾತನಾಡಲು ಯಾವುದೇ ಹಕ್ಕು ಇಲ್ಲ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಸೋಮವಾರ ಹೇಳಿದರು.

'ಪ್ರಜಾಪ್ರಭುತ್ವದ ಬಗ್ಗೆ ನೀವು ಏಕೆ ಮಾತನಾಡುತ್ತಿದ್ದೀರಿ ಅಂದರೆ, ನಿಮ್ಮ ನಾಯಕರು ಜೈಲು ಸೇರಿದ್ದಾರೆ. ₹12 ಲಕ್ಷ ಕೋಟಿಯ ಹಗರಣಗಳನ್ನು ಮಾಡಿದರೆ, ಅವರು ಜೈಲಿಗೆ ಹೋಗುತ್ತಾರೊ ಇಲ್ಲವೋ' ಎಂದು ಅವರು ಪ್ರಶ್ನಿಸಿದರು.

ದೆಹಲಿಯಲ್ಲಿ ಭಾನುವಾರ 'ಲೋಕತಂತ್ರ ಬಚಾವೋ' (ಜನತಂತ್ರ ಉಳಿಸಿ) ರ‍್ಯಾಲಿ ನಡೆಸಿದ 'ಇಂಡಿಯಾ' ಕೂಟದ ಮಿತ್ರಪಕ್ಷಗಳ ಬಗ್ಗೆ ವಾಗ್ದಾಳಿ ನಡೆಸಿದ ಅವರು, 'ನೀವು ಎಷ್ಟು ಪಕ್ಷಗಳನ್ನಾದರೂ ಸೇರಿಸಿಕೊಳ್ಳಿ, ಚುನಾವಣೆಯ ನಂತರ ಮೋದಿ ಪ್ರಧಾನಿಯಾಗುವುದು ನಿಶ್ಚಿತ' ಎಂದು ಪ್ರತಿಪಾದಿಸಿದರು.

ಚುಟುಕು

ಆಂಧ್ರ: 114 ಅಭ್ಯರ್ಥಿಗಳು ಅಂತಿಮ

ಅಮರಾವತಿ/ನವದೆಹಲಿ (ಪಿಟಿಐ): ಆಂಧ್ರಪ್ರದೇಶ ಪ್ರದೇಶ ಕಾಂಗ್ರೆಸ್ ಸಮಿತಿಯು (ಎಪಿಸಿಸಿ) ರಾಜ್ಯದ ಐದು ಲೋಕಸಭಾ ಮತ್ತು 114 ವಿಧಾನಸಭಾ ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಅಂತಿಮಗೊಳಿಸಿದೆ.

ನವದೆಹಲಿಯಲ್ಲಿ ಸೋಮವಾರ ನಡೆದ ಕಾಂಗ್ರೆಸ್ ಕೇಂದ್ರ ಚುನಾವಣಾ ಸಮಿತಿ ಸಭೆಯಲ್ಲಿ ಅಭ್ಯರ್ಥಿಗಳನ್ನು ಅಂತಿಮಗೊಳಿಸಲಾಯಿತು ಎಂದು ಎಪಿಸಿಸಿ ಅಧ್ಯಕ್ಷೆ ವೈ.ಎಸ್.ಶರ್ಮಿಳಾ ತಿಳಿಸಿದರು.

'ಉಳಿದ ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಶೀಘ್ರವೇ ಅಂತಿಮಗೊಳಿಸಲಾಗುವುದು, ಪಕ್ಷದ ಮೊದಲ ಪಟ್ಟಿಯನ್ನು ಮಂಗಳವಾರ ಬಿಡುಗಡೆಗೊಳಿಸಲಾಗುವುದು' ಎಂದು ಮಾಹಿತಿ ನೀಡಿದರು.

ಆಂಧ್ರಪ್ರದೇಶದ 25 ಲೋಕಸಭಾ ಮತ್ತು 175 ವಿಧಾನಸಭಾ ಸ್ಥಾನಗಳಿಗೆ ಮೇ 13ರಂದು ಮತದಾನ ನಡೆಯಲಿದೆ. ಆಂಧ್ರಪ್ರದೇಶದಲ್ಲಿ ಕಾಂಗ್ರೆಸ್ ಪಕ್ಷವು ಸಿಪಿಐ ಮತ್ತು ಸಿಪಿಎಂ ಜತೆಗೆ ಮೈತ್ರಿ ಮಾಡಿಕೊಂಡಿದೆ.

ಖಜುರಾಹೊ ಎಸ್‌ಪಿ ಅಭ್ಯರ್ಥಿ ಬದಲು

ಭೋಪಾಲ್ (ಪಿಟಿಐ): ಸಮಾಜವಾದಿ ಪಕ್ಷವು ಖಜುರಾಹೊ ಲೋಕಸಭಾ ಕ್ಷೇತ್ರದ ಅಭ್ಯರ್ಥಿಯನ್ನು ಬದಲಿಸಿದ್ದು, ಮಾಜಿ ಶಾಸಕಿ ಮೀರಾ ದೀಪ್ ನಾರಾಯಣ ಯಾದವ್ ಅವರಿಗೆ ಟಿಕೆಟ್ ನೀಡಿದೆ. ಪಕ್ಷವು ಈ ಮೊದಲು ಮನೋಜ್ ಯಾದವ್ ಅವರ ಹೆಸರನ್ನು ಪ್ರಕಟಿಸಿತ್ತು.

ಮೀರಾ ಅವರು ಮಧ್ಯ ಪ್ರದೇಶ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಮತ್ತು ಹಾಲಿ ಸಂಸದರೂ ಆಗಿರುವ ವಿ.ಡಿ.ಶರ್ಮಾ ಅವರನ್ನು ಎದುರಿಸಲಿದ್ದಾರೆ.

4 ಸಿಪಿಐ ಅಭ್ಯರ್ಥಿಗಳ ಘೋಷಣೆ

ರಾಂಚಿ (ಪಿಟಿಐ): ಭಾರತೀಯ ಕಮ್ಯುನಿಸ್ಟ್ ಪಕ್ಷದ (ಸಿಪಿಐ) ಜಾರ್ಖಂಡ್ ಘಟಕವು ಲೋಕಸಭಾ ಚುನಾವಣೆಗಾಗಿ ರಾಜ್ಯದ ನಾಲ್ಕು ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರು ಪ್ರಕಟಿಸಿದೆ.

ಜಾರ್ಖಂಡ್‌ನ 14 ಲೋಕಸಭಾ ಕ್ಷೇತ್ರಗಳ ಪೈಕಿ 8 ಕ್ಷೇತ್ರಗಳಲ್ಲಿ ಸಿಪಿಐ ಸ್ಪರ್ಧಿಸಲಿದೆ ಎಂದು ಪಕ್ಷದ ರಾಜ್ಯ ಕಾರ್ಯದರ್ಶಿ ಮಹೇಂದ್ರ ಪಾಠಕ್ ಹೇಳಿದರು. ಉಳಿದ ನಾಲ್ಕು ಕ್ಷೇತ್ರಗಳ ಅಭ್ಯರ್ಥಿಗಳನ್ನು ಶೀಘ್ರವೇ ಘೋಷಿಸಲಾಗುವುದು ಎಂದು ತಿಳಿಸಿದರು.

'ನಾವು ನಮ್ಮ ಶಿಫಾರಸುಗಳನ್ನು ಕಳಿಸಿದ್ದೆವು. ಪಕ್ಷದ ಕೇಂದ್ರ ಕಾರ್ಯಕಾರಿ ಸಮಿತಿಯು ಅಭ್ಯರ್ಥಿಗಳನ್ನು ಅಂತಿಮಗೊಳಿಸಿತು' ಎಂದು ಹೇಳಿದರು.

ಎಂಥಾ ಮಾತು!

ನಾವು ಚುನಾವಣೆಯ ತಿಂಗಳಿಗೆ ಕಾಲಿಟ್ಟಿದ್ದೇವೆ. ಮತದಾನ ಪ್ರಕ್ರಿಯೆ ನಿಷ್ಪಕ್ಷಪಾತವಾಗಿ ನಡೆದರೆ ಅದು ಚುನಾವಣಾ ಆಯೋಗಕ್ಕೆ ದೊರೆತ ಗೆಲುವು ಎಂದೇ ಭಾವಿಸಬೇಕು. ಸರ್ಕಾರವು ಇ.ಡಿ, ಸಿಬಿಐ ಮತ್ತು ಆದಾಯ ತೆರಿಗೆ ಇಲಾಖೆಯಂತಹ ಸಂಸ್ಥೆಗಳ ದುರ್ಬಳಕೆ ಮಾಡುವುದನ್ನು ತಡೆಯುವ ಮೂಲಕ ಚುನಾವಣಾ ಆಯೋಗವು ತನ್ನ ಸಾಂವಿಧಾನಿಕ ಜವಾಬ್ದಾರಿಯನ್ನು ನಿರ್ವಹಿಸಬೇಕು. ಪ್ರಜಾಪ್ರಭುತ್ವ ವ್ಯವಸ್ಥೆ ಉಳಿದುಕೊಂಡರೆ ಮಾತ್ರ ಚುನಾವಣಾ ಆಯೋಗದ ಘನತೆ ಉಳಿಯುತ್ತದೆ

ಅಖಿಲೇಶ್ ಯಾದವ್, ಸಮಾಜವಾದಿ ಪಕ್ಷದ ಮುಖ್ಯಸ್ಥ



ಈಶಾನ್ಯದ ರಾಜ್ಯಗಳ ಅಭಿವೃದ್ಧಿ ಆಗದಿದ್ದರೆ ದೇಶವು ಅಭಿವೃದ್ಧಿಯಾಗುವುದಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ನಂಬಿದ್ದಾರೆ. ಅಭಿವೃದ್ಧಿ ಆಗಬೇಕಾದರೆ ಶಾಂತಿ ನೆಲೆಸುವುದು ಅಗತ್ಯ ಎಂಬುದನ್ನು ಮನಗಂಡಿರುವ ಅವರು ಈಶಾನ್ಯ ರಾಜ್ಯಗಳ ವಿವಿಧ ಸಂಘಟನೆಗಳೊಂದಿಗೆ 12 ಒಪ್ಪಂದಗಳನ್ನು ಮಾಡಿದ್ದಾರೆ. ಇಂದು ತ್ರಿಪುರ ರಾಜ್ಯದಲ್ಲಿ ಮಾತ್ರವಲ್ಲದೆ ಇಡೀ ಪ್ರದೇಶದಲ್ಲಿ ಶಾಂತಿ ನೆಲೆಸಿದೆ

ಮಾಣಿಕ್ ಸಹಾ, ತ್ರಿಪುರ ಮುಖ್ಯಮಂತ್ರಿ

ಕ್ಷೇತ್ರ ಮಹಾತ್ಮೆ

ಪುದುಚೇರಿ (ಕೇಂದ್ರಾಡಳಿತ ಪ್ರದೇಶ)



ಕೇಂದ್ರಾಡಳಿತ ಪ್ರದೇಶ ಪುದುಚೇರಿಯ ಏಕೈಕ ಲೋಕಸಭಾ ಸ್ಥಾನಕ್ಕೆ ಈ ಬಾರಿ ತ್ರಿಕೋನ ಸ್ಪರ್ಧೆ ಏರ್ಪಟ್ಟಿದೆ. ಹಾಲಿ ಸಂಸದ ಕಾಂಗ್ರೆಸ್‌ನ ವಿ.ವೈತಿಲಿಂಗಂ ಅವರು ಮರು ಆಯ್ಕೆ ಬಯಸಿ ಕಣಕ್ಕಿಳಿದಿದ್ದಾರೆ. ಬಿಜೆಪಿಯು ಪುದುಚೇರಿ ಗೃಹ ಸಚಿವ ಎ.ನಮಶಿವಾಯಂ ಅವರನ್ನು ಅಖಾಡಕ್ಕೆ ಇಳಿಸಿದೆ. ಎಐಎಡಿಎಂಕೆಯು ಜಿ.ತಮಿಳ್‌ವೇಂದನ್ ಅವರನ್ನು ಅಭ್ಯರ್ಥಿಯಾಗಿ ಘೋಷಿಸಿದೆ. 2019ರ ಚುನಾವಣೆಯಲ್ಲಿ ವೈತಿಲಿಂಗಂ 4,44,981 ಮತಗಳನ್ನು ಪಡೆದು ಗೆದ್ದಿದ್ದರು. ಅವರು ಸಮೀಪದ ಪ್ರತಿಸ್ಪರ್ಧಿಗಿಂತ ಎರಡು ಲಕ್ಷಕ್ಕೂ ಅಧಿಕ ಮತಗಳನ್ನು ಪಡೆದಿದ್ದರು. ಈ ಬಾರಿ ಕಾಂಗ್ರೆಸ್-ಡಿಎಂಕೆ ಮೈತ್ರಿ ಅಭ್ಯರ್ಥಿಯಾಗಿರುವ ಅವರು ಗೆಲುವಿನ ಅಂತರವನ್ನು ಹೆಚ್ಚಿಸುವ ವಿಶ್ವಾಸ ಹೊಂದಿದ್ದಾರೆ. ಆದರೆ ಬಿಜೆಪಿ ಮತ್ತು ಎಐಎಡಿಎಂಕೆಯಿಂದ ಅವರಿಗೆ ಪ್ರಬಲ ಪೈಪೋಟಿ ಎದುರಾಗುವ ಸಾಧ್ಯತೆಯಿದೆ ಎಂದು ವಿಶ್ಲೇಷಿಸಲಾಗಿದೆ. ಕಾಂಗ್ರೆಸ್‌ನ ಎಂ.ಒ.ಎಚ್.ಫಾರೂಕ್ ಅವರು 1991 ಮತ್ತು 1996 ರಲ್ಲಿ ಸತತವಾಗಿ ಗೆದ್ದ ಬಳಿಕ ಈ ಕ್ಷೇತ್ರದಲ್ಲಿ ಯಾರೂ ಸತತ ಗೆಲುವು ಸಾಧಿಸಿಲ್ಲ. 2009ರಲ್ಲಿ ಕಾಂಗ್ರೆಸ್‌ನ ವಿ.ನಾರಾಯಣಸ್ವಾಮಿ ಮತ್ತು 2014 ರಲ್ಲಿ ಎಐಎನ್‌ಆರ್‌ಸಿಯ ಆರ್.ರಾಧಾಕೃಷ್ಣನ್ ಅವರು ಸಂಸದರಾಗಿ ಆಯ್ಕೆಯಾಗಿದ್ದರು. ಬಿಜೆಪಿ ಅಭ್ಯರ್ಥಿ ನಮಶಿವಾಯಂ ಅವರು ವಿಧಾನಸಭಾ ಚುನಾವಣೆಯಲ್ಲಿ ಮನ್ನಡಿಪೇಟ್ ಕ್ಷೇತ್ರದಿಂದ ಗೆದ್ದಿದ್ದರು. ಪುದುಚೇರಿಯಲ್ಲಿ ಏಪ್ರಿಲ್ 19 ರಂದು ಮತದಾನ ನಡೆಯಲಿದ್ದು, ಪಕ್ಷೇತರರು ಸೇರಿದಂತೆ ಒಟ್ಟು 26 ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಇವರಲ್ಲಿ ಮೂವರು ಮಹಿಳಾ ಅಭ್ಯರ್ಥಿಗಳು.

ಮುಖಾಮುಖಿ

ಪತ್ತನಂತಿಟ್ಟ (ಕೇರಳ)



ಆ್ಯಂಟೊ ಆ್ಯಂಟನಿ
ಕಾಂಗ್ರೆಸ್

ಕೇರಳದ ಪತ್ತನಂತಿಟ್ಟ ಲೋಕಸಭಾ ಕ್ಷೇತ್ರವು ಕಾಂಗ್ರೆಸ್‌ನ ಭದ್ರಕೋಟೆಯಾಗಿದೆ. 2009 ರಿಂದಲೂ ಇಲ್ಲಿ ಗೆಲ್ಲುತ್ತಾ ಬಂದಿರುವ ಆ್ಯಂಟೊ ಆ್ಯಂಟನಿ ಅವರನ್ನು ಪಕ್ಷವು ಈ ಬಾರಿಯೂ ಕಣಕ್ಕಿಳಿಸಿದೆ. ಆ್ಯಂಟೊ, ಸತತ ನಾಲ್ಕನೇ ಸಲ ಗೆಲುವಿನ ವಿಶ್ವಾಸದಲ್ಲಿದ್ದಾರೆ. 2019ರ ಚುನಾವಣೆಯಲ್ಲಿ ಅವರು ಸಿಪಿಎಂನ ವೀಣಾ ಜಾರ್ಜ್ ವಿರುದ್ಧ 40 ಸಾವಿರಕ್ಕೂ ಅಧಿಕ ಮತಗಳ ಅಂತರದಿಂದ ಗೆದ್ದಿದ್ದರು. ಆದರೆ 2021ರ ವಿಧಾನಸಭಾ ಚುನಾವಣೆಯಲ್ಲಿ ಪತ್ತನಂತಿಟ್ಟ ಜಿಲ್ಲೆಯ ಎಲ್ಲ ಐದೂ ಕ್ಷೇತ್ರಗಳನ್ನು ಸಿಪಿಎಂ ನೇತೃತ್ವದ ಎಲ್‌ಡಿಎಫ್ ತನ್ನದಾಗಿಸಿಕೊಂಡಿತ್ತು. ಆದ್ದರಿಂದ ಈ ಬಾರಿ ಆ್ಯಂಟೊ ಅವರಿಗೆ ಸಿಪಿಎಂ ಅಭ್ಯರ್ಥಿಯಿಂದ ಪ್ರಬಲ ಪೈಪೋಟಿ ಎದುರಾಗುವ ಸಾಧ್ಯತೆಯಿದೆ. ಕಳೆದ ಮೂರು ಚುನಾವಣೆಗಳನ್ನು ಗಮನಿಸಿದರೆ, ಆ್ಯಂಟೊ ಅವರ ಗೆಲುವಿನ ಅಂತರ ತಗ್ಗುತ್ತಾ ಬಂದಿದೆ. ಇಲ್ಲಿನ ಮತದಾರರು ಮತ್ತೊಮ್ಮೆ ಅವರ ಕೈಹಿಡಿಯುವರೇ ಎಂಬುದನ್ನು ನೋಡಬೇಕು.

V/S



ಟಿ.ಎಂ.ಥಾಮಸ್ ಐಸಾಕ್
ಸಿಪಿಎಂ

ಪತ್ತನಂತಿಟ್ಟ ಕ್ಷೇತ್ರವನ್ನು ಕಾಂಗ್ರೆಸ್‌ನಿಂದ ತನ್ನದಾಗಿಸಿಕೊಳ್ಳಲು ಪ್ರಯತ್ನಿಸುತ್ತಿರುವ ಆಡಳಿತಾರೂಢ ಸಿಪಿಎಂ ಪಕ್ಷವು ಮಾಜಿ ಹಣಕಾಸು ಸಚಿವ ಟಿ.ಎಂ.ಥಾಮಸ್ ಐಸಾಕ್ ಅವರನ್ನು ಅಖಾಡಕ್ಕಿಳಿಸಿದೆ. ಈ ಹಿಂದಿನ ಎಲ್‌ಡಿಎಫ್ ಸರ್ಕಾರದಲ್ಲಿ ಎರಡು ಸಲ ಸಚಿವರಾಗಿದ್ದ ಅವರು ಹೊಂದಿರುವ ಅನುಭವವು ಮತಗಳನ್ನು ಸೆಳೆಯಬಹುದು ಎಂಬುದು ಸಿಪಿಎಂನ ಲೆಕ್ಕಾಚಾರ. ಈ ಹಿಂದೆ ಹಣಕಾಸು ಸಚಿವರಾಗಿದ್ದಾಗ ನಡೆದಿದ್ದ ಕೆಐಐಎಫ್‌ಬಿ ಹಗರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯವು ಐಸಾಕ್ ಅವರಿಗೆ ಹಲವು ಸಲ ಸಮನ್ಸ್ ಜಾರಿಗೊಳಿಸಿತ್ತು. ಬಿಜೆಪಿಯು ಇಲ್ಲಿಂದ ಕೇಂದ್ರದ ಮಾಜಿ ಸಚಿವ, ಕಾಂಗ್ರೆಸ್‌ನ ಎ.ಕೆ.ಆ್ಯಂಟನಿ ಅವರ ಪುತ್ರ ಅನಿಲ್ ಕೆ.ಆ್ಯಂಟನಿ ಅವರನ್ನು ಕಣಕ್ಕಿಳಿಸಿದೆ. ಆದರೂ ಇಲ್ಲಿ ಆ್ಯಂಟೊ-ಐಸಾಕ್ ನಡುವೆ ನೇರ ಪೈಪೋಟಿ ನಡೆಯುವ ಸಾಧ್ಯತೆಯೇ ಅಧಿಕ. ಕ್ರೈಸ್ತರು ಹೆಚ್ಚಿನ ಸಂಖ್ಯೆಯಲ್ಲಿರುವ ಈ ಕ್ಷೇತ್ರದಲ್ಲಿ ಮೂರೂ ಪಕ್ಷಗಳು ಕ್ರೈಸ್ತ ಸಮುದಾಯದ ಅಭ್ಯರ್ಥಿಗಳಿಗೆ ಮಣೆ ಹಾಕಿವೆ.

ಷೇರುಪೇಟೆ ವಹಿವಾಟು 363



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,326
ಇಂದಿನ ಅಂತ್ಯ	22,462
▲	135
ದಿನದ ಗರಿಷ್ಠ	22,529

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹14200
ಎಸಿ	₹8175
ಆರ್‌ಪಿ	₹14850
ಆರ್‌ಸಿ	₹9120

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹440
12 ಕ್ಕೆ	₹60
ಮೈಸೂರು	
100ಕ್ಕೆ	₹440

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಶನಿವಾರದ ದರ)

ಶೇಂಗಾ (ರಿಫೈನ್ಡ್)	₹1500 (1500)
ಸೋಯಾ (ರಿಫೈನ್ಡ್)	₹980 (955)
ಸೂರ್ಯಕಾಂತಿ (ರಿಫೈನ್ಡ್)	₹970 (955)
ಪಾಮೋಲಿನ್	₹972 (950)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹169-436
ದ್ವಿತಳಿ (ಬಿ.ವಿ)	₹302-555

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಕೆ. ಆರ್.ಪೇಟೆ	₹9100-9100
ತಿಪಟೂರು	₹8000-9800

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹179
ಆರ್‌ಎಸ್‌ಎಸ್-5	₹172
ಗುಡ್ ಲಾಟ್	₹162

ಸುಧಾ, ಮಯೂರ ಓದಿರಿ

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಆರನೇ ವರ್ಷದ ಪುಣ್ಯಸ್ಮರಣೆ

ಶ್ರೀ ಕಿರಣ್ ಕುಮಾರ್. ಸಿ
(ಮಾಲೀಕರು ಪಾರ್ವತಿ ಸೂಪರ್ ಫ್ಯೂಲ್ಸ್, ಬಿಡದಿ
ದಿ. ಶ್ರೀ ಪಾರ್ವತಮ್ಮ ಮತ್ತು
ದಿ. ಶ್ರೀ ಚನ್ನಯ್ಯ (ನಿ.ಅರಣ್ಯಾಧಿಕಾರಿ)
ಇವರ ದ್ವಿತೀಯ ಪುತ್ರ (02-04-2018)
ಆರನೇ ವರ್ಷದ ಪುಣ್ಯಸ್ಮರಣೆ, ಮಲ್ಲಿನಾಥಪುರ,
ಬಿ.ಜಿ. ಪುರ ಹೋಬಳಿ, ಮಳವಳ್ಳಿ, ತಾ. ಮಂಡ್ಯ ಜಿಲ್ಲೆ
ಇಂತಿ ದುಃಖತಪ್ತರು ಪತ್ನಿ, ಮಗ, ಕುಟುಂಬದವರು ಹಾಗೂ ಪೆಟ್ರೋಲ್ ಬಂಕ್ ಸಿಬ್ಬಂದಿ ವರ್ಗ
ಮೊ. 9902230350, 9845010161

ತೃತೀಯ ವರ್ಷದ ಪುಣ್ಯಸ್ಮರಣೆ



ಶ್ರೀ ಕೆ.ಸಿ. ಬೆಟ್ಟಸ್ವಾಮಿಗೌಡ
ಸಂಪಂಗಿರಾಮ ಬಸ್ ಮಾಲೀಕರು
ಅಧ್ಯಕ್ಷರು, ಕರ್ನಾಟಕ ಅರ್ಬನ್ ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿ, ಬೆಂಗಳೂರು
ನೀವಿರುವಿರಿ ಎಂದೆಂದಿಗೂ ನಮ್ಮ ಮನದಲ್ಲಿ...
ಸದಾ ನಿಮ್ಮ ನೆನಪಿನಲ್ಲಿರುವ: ಪತ್ನಿ, ಮಕ್ಕಳು, ಮೊಮ್ಮಕ್ಕಳು, ಕುಟುಂಬದವರು ಮತ್ತು ಬಂಧುಗಳು

LOOKING TO BUILD, BUY OR SELL A PROPERTY
Please refer Classifieds on Sunday

ವಾಣಿಜ್ಯ ಬಳಕೆ ಎಲ್‌ಪಿಜಿ ಬೆಲೆ ಇಳಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್ ದರವನ್ನು ಸೋಮವಾರ ₹31 ಕಡಿತಗೊಳಿಸಿವೆ.

ಈ ದರ ಇಳಿಕೆಯಿಂದ 19 ಕೆ.ಜಿ ತೂಕದ ಸಿಲಿಂಡರ್ ದರವು ₹1,764ಕ್ಕೆ ಮುಟ್ಟಿದೆ. ಗೃಹ ಬಳಕೆ ಸಿಲಿಂಡರ್ ದರ ದಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ. ಇದು ₹803 ಇದೆ.

ವಿಮಾನ ಇಂಧನ (ಎಟಿಎಫ್) ದರವನ್ನು ಶೇ 0.49ರಷ್ಟು ಕಡಿತ ಮಾಡಲಾಗಿದೆ. ದೆಹಲಿಯಲ್ಲಿ ವಿಮಾನ ಇಂಧನ ದರವು ಕಿಲೋ ಲೀಟರಿಗೆ ₹502ರಷ್ಟು ಕಡಿಮೆ ಆಗಿ, ₹1 ಲಕ್ಷಕ್ಕೆ ಮುಟ್ಟಿದೆ. (ಒಂದು ಕಿಲೋ ಲೀಟರ್ ಎಂದರೆ ಒಂದು ಸಾವಿರ ಲೀಟರ್). ಸ್ಥಳೀಯ ಮಾರಾಟ ತೆರಿಗೆ ಅಥವಾ ವ್ಯಾಟ್‌ಗೆ ಅನುಗುಣವಾಗಿ ರಾಜ್ಯದಿಂದ ರಾಜ್ಯಕ್ಕೆ ಮಾರಾಟ ದರದಲ್ಲಿ ವ್ಯತ್ಯಾಸ ಆಗುತ್ತದೆ.

ಗ್ರಾಹಕರಿಂದ ಹೆಚ್ಚಿದ ಬೇಡಿಕೆ ● ದೇಶೀಯ ವಾಹನಗಳ ಮಾರಾಟದಲ್ಲಿ ಏರಿಕೆ

ಪ್ರಯಾಣಿಕ ವಾಹನ ಮಾರಾಟ ಹೆಚ್ಚಳ

ನವದೆಹಲಿ (ಪಿಟಿಐ): ಟೊಯೊಟ, ಹುಂಡೈ ಮೋಟರ್, ಮಹೀಂದ್ರ ಆ್ಯಂಡ್ ಮಹೀಂದ್ರ, ಟಾಟಾ ಮೋಟರ್ಸ್, ಮಾರುತಿ ಸುಜುಕಿ ಸೇರಿದಂತೆ ದೇಶದ ಪ್ರಮುಖ ಕಂಪನಿಗಳ ಪ್ರಯಾಣಿಕ ವಾಹನಗಳ ಮಾರಾಟವು ಮಾರ್ಚ್‌ನಲ್ಲಿ ಏರಿಕೆ ಕಂಡಿದೆ.

ದೇಶೀಯ ವಾಹನಗಳ ಮಾರಾಟದಲ್ಲಿ ಪ್ರಗತಿ ದಾಖಲಿಸಿದ್ದು, ರಫ್ತು ಉತ್ತಮವಾಗಿದೆ. ಗ್ರಾಹಕರಿಂದ ಹೆಚ್ಚಿದ ಬೇಡಿಕೆ ಮತ್ತು ಮಾರುಕಟ್ಟೆಗೆ ಹೊಸ ವಾಹನಗಳ ಬಿಡುಗಡೆಯಿಂದ ಮಾರಾಟದಲ್ಲಿ ಏರಿಕೆ ಆಗಿದೆ.

ಟೊಯೊಟ ವಾಹನ ಮಾರಾಟ ಹೆಚ್ಚಳ: ಟೊಯೊಟ ಕಿರ್ಲೋಸ್ಕರ್ ಮೋಟರ್‌ನ 27,180 ವಾಹನಗಳು ಮಾರ್ಚ್‌ನಲ್ಲಿ ಮಾರಾಟವಾಗಿವೆ. 2023-24ರ ಹಣಕಾಸು ವರ್ಷದಲ್ಲಿ 2.63 ಲಕ್ಷ ವಾಹನಗಳು ಮಾರಾಟವಾಗಿದ್ದರೆ, ಹಿಂದಿನ ಇದೇ ಅವಧಿಯಲ್ಲಿ 1.77 ಲಕ್ಷ ವಾಹನಗಳು

ಮಾರಾಟವಾಗಿದ್ದವು. ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇ 48ರಷ್ಟು ಏರಿಕೆ ಆಗಿದೆ.

ಹುಂಡೈ ಮಾರಾಟ ಶೇ 7ರಷ್ಟು ಏರಿಕೆ: ಹುಂಡೈ ಮೋಟರ್ ಇಂಡಿಯಾದ ಒಟ್ಟು 65,601 ವಾಹನಗಳು ಮಾರಾಟವಾಗಿದ್ದು, ಹಿಂದಿನ ವರ್ಷದ ಇದೇ ಅವಧಿಯಲ್ಲಿ 61,500 ವಾಹನಗಳು ಮಾರಾಟವಾಗಿವೆ. ಇದಕ್ಕೆ ಹೋಲಿಸಿದರೆ ಶೇ 7ರಷ್ಟು ಏರಿಕೆ ಆಗಿದೆ. ದೇಶೀಯ ವಾಹನ ಮಾರಾಟ ಶೇ 5 ಮತ್ತು ರಫ್ತು ಶೇ 16ರಷ್ಟು ಹೆಚ್ಚಳ ಆಗಿದೆ. 2023-24ರ ಹಣಕಾಸು ವರ್ಷದಲ್ಲಿ 7.77 ಲಕ್ಷ ವಾಹನಗಳು ಮಾರಾಟವಾಗಿದ್ದರೆ, ಹಿಂದಿನ ವರ್ಷದ ಇದೇ ಅವಧಿಯಲ್ಲಿ 7.20 ಲಕ್ಷ ವಾಹನಗಳು ಮಾರಾಟವಾಗಿವೆ.

ಮಹೀಂದ್ರ ಮಾರಾಟ ಶೇ 4ರಷ್ಟು ಹೆಚ್ಚಳ: ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯ 68,413 ವಾಹನಗಳು ಮಾರಾಟವಾಗಿವೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ 66,041 ವಾಹನಗಳು ಮಾರಾಟವಾಗಿದ್ದವು. ಕಳೆದ ವರ್ಷಕ್ಕೆ ಹೋಲಿಸಿದರೆ ಮಾರಾಟದಲ್ಲಿ ಶೇ 4ರಷ್ಟು ಏರಿಕೆ ಆಗಿದೆ.

ದೇಶೀಯ ಮಾರಾಟದಲ್ಲಿ ಶೇ 13ರಷ್ಟು ಏರಿಕೆಯಾಗಿದ್ದರೆ, ರಫ್ತು ಶೇ 26ರಷ್ಟು ಇಳಿಕೆ ಆಗಿದೆ. 2023-24ರ ಹಣಕಾಸು ವರ್ಷದಲ್ಲಿ 4.59 ಲಕ್ಷ ವಾಹನಗಳು ಮಾರಾಟವಾಗಿದ್ದರೆ, ಹಿಂದಿನ ಇದೇ ಅವಧಿಯಲ್ಲಿ 3.59 ಲಕ್ಷ ವಾಹನಗಳು ಮಾರಾಟವಾಗಿವೆ. ಶೇ 28ರಷ್ಟು ಏರಿಕೆ ಆಗಿದೆ.

ಟಾಟಾ ಮೋಟರ್ಸ್ ಏರಿಕೆ: ಟಾಟಾ ಮೋಟರ್ಸ್ ದೇಶೀಯ ವಾಹನ ಮಾರಾಟ ಶೇ 2ರಷ್ಟು ಹೆಚ್ಚಳವಾಗಿದೆ. ಹಿಂದಿನ ಇದೇ ಅವಧಿಯಲ್ಲಿ 89,351 ವಾಹನಗಳು ಮಾರಾಟವಾಗಿದ್ದರೆ, ಪ್ರಸಕ್ತ ಅವಧಿಯಲ್ಲಿ 90,822 ಮಾರಾಟವಾಗಿವೆ. ದೇಶೀಯ ವಾಣಿಜ್ಯ ವಾಹನ ಮಾರಾಟ ಶೇ 10ರಷ್ಟು ಇಳಿಕೆಯಾಗಿ, 40,712 ವಾಹನಗಳು ಮಾರಾಟವಾಗಿವೆ. 2023-24ರಲ್ಲಿ 9.49 ಲಕ್ಷ ವಾಹನಗಳು ಮಾರಾಟವಾಗಿದ್ದರೆ, ಹಿಂದಿನ ಇದೇ ಅವಧಿಯಲ್ಲಿ 9.31 ಲಕ್ಷ ಮಾರಾಟವಾಗಿದ್ದವು.

ಮಾರುತಿ ಸುಜುಕಿ ಮಾರಾಟ ಏರಿಕೆ: ಮಾರುತಿ ಸುಜುಕಿ ಇಂಡಿಯಾ ವಾಹನ ಮಾರಾಟವು ಶೇ 10ರಷ್ಟು ಏರಿಕೆ ಆಗಿದ್ದು 1.87 ಲಕ್ಷ ವಾಹನ ಮಾರಾಟವಾಗಿವೆ. ಹಿಂದಿನ ಇದೇ ಅವಧಿಯಲ್ಲಿ 1.70 ಲಕ್ಷ ಮಾರಾಟವಾಗಿದ್ದವು.

2023-24ರಲ್ಲಿ ದೇಶೀಯ ಪ್ರಯಾಣಿಕ ವಾಹನದ ಒಟ್ಟು ಮಾರಾಟವು 17.93 ಲಕ್ಷವಿದ್ದರೆ ಮತ್ತು ರಫ್ತು 2.83 ಲಕ್ಷವಿದೆ. ಕಳೆದ ಅವಧಿಗೆ ಹೋಲಿಸಿದರೆ ಪ್ರಸಕ್ತ ಅವಧಿಯಲ್ಲಿ ವಾಹನ ಮಾರಾಟ ಶೇ 9ರಷ್ಟು ಹೆಚ್ಚಳ ಕಂಡಿದೆ ಎಂದು ಕಂಪನಿ ತಿಳಿಸಿದೆ.

ಎಂ.ಜಿ ಮೋಟರ್ ಮಾರಾಟ ಇಳಿಕೆ

ಎಂ.ಜಿ ಮೋಟರ್ ಇಂಡಿಯಾದ ವಾಹನ ಮಾರಾಟವು ಶೇ 23ರಷ್ಟು ಇಳಿಕೆ ಆಗಿದೆ. ಕಳೆದ ವರ್ಷದ ಮಾರ್ಚ್‌ನಲ್ಲಿ 6,051 ವಾಹನಗಳು ಮಾರಾಟವಾಗಿದ್ದರೆ, ಈ ಮಾರ್ಚ್‌ನಲ್ಲಿ 4,648 ಮಾರಾಟವಾಗಿವೆ.

ಕಳೆದ ಹಣಕಾಸು ವರ್ಷಕ್ಕೆ ಹೋಲಿಸಿದರೆ 2023-24ರ ವಾಹನ ಮಾರಾಟದಲ್ಲಿ ಶೇ 14ರಷ್ಟು ಬೆಳವಣಿಗೆ ಆಗಿದೆ ಎಂದು ಕಂಪನಿ ತಿಳಿಸಿದೆ.

ಆರ್‌ಬಿಐನ 90ನೇ ವಾರ್ಷಿಕೋತ್ಸವದಲ್ಲಿ ಮೋದಿ ಆಶಯ

ಬೆಳವಣಿಗೆ ಆರ್‌ಬಿಐನ ಆದ್ಯತೆ ಆಗಲಿ

ಮುಂಬೈ (ಪಿಟಿಐ): 'ದೇಶದ ಬೆಳವಣಿಗೆ'ಯು ಮುಂದಿನ ದಶಕದಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಆದ್ಯತೆ ಆಗಿರಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ ಇಲ್ಲಿ ಹೇಳಿದರು.

ಆರ್‌ಬಿಐ 90 ವರ್ಷಗಳನ್ನು ಪೂರೈಸಿದ್ದರ ಸ್ಮರಣಾರ್ಥವಾಗಿ ನಡೆದ ಸಮಾರಂಭದಲ್ಲಿ ಮಾತನಾಡಿದ ಅವರು, 'ಇನ್ನು 10 ವರ್ಷಗಳಲ್ಲಿ ಆರ್‌ಬಿಐ ಶತಮಾನೋತ್ಸವ ಆಚರಿಸಲಿದೆ. ಈ ವೇಳೆ ಅದು ಅಭಿವೃದ್ಧಿ ಹೊಂದಿದ ಭಾರತ ನಿರ್ಮಾಣದ ಗುರಿಯೆಡೆಗೆ ಕೆಲಸ ಮಾಡಬೇಕು. ಜೊತೆಗೆ, ವಿಶ್ವಾಸ ಹಾಗೂ ಸ್ಥಿರತೆ ಕಾಯ್ದುಕೊಳ್ಳುವ ಕಡೆಗೂ ಮಹತ್ವ ನೀಡಬೇಕು' ಎಂದರು.

2016ರಿಂದ ಈಚೆಗೆ ಹಣದುಬ್ಬರವನ್ನು ನಿಯಂತ್ರಣದಲ್ಲಿಡುವುದು ಆರ್‌ಬಿಐನ ಪ್ರಮುಖ ಗುರಿಯಾಗಿದೆ. ದರ ಕಡಿತದಂಥ ಕ್ರಮಗಳ ಮೂಲಕ ಬೆಳವಣಿಗೆ ಕಡೆಗೆ ಹೆಚ್ಚಿನ ಗಮನ ನೀಡುವಂಥ ಸಲಹೆಗಳೂ ಆಗಾಗ ಬಂದಿವೆ ಎಂದು ಅವರು ಹೇಳಿದರು.

ಹೊಸ ಆರ್ಥಿಕ ವರ್ಷದ ಪ್ರಥಮ ಹಣಕಾಸು ನೀತಿ ಪರಿಶೀಲನೆಗೆ ಕೆಲವೇ ದಿನಗಳು ಬಾಕಿ ಇರುವಂತೆ ಮೋದಿ ಅವರು ಈ ಮಾತುಗಳನ್ನಾಡಿದ್ದಾರೆ.

ಈ ಮೊದಲು ಆರ್ಥಿಕ ನೀತಿಗಳಲ್ಲಿ ಎರಡಂಕಿ ಹಣದುಬ್ಬರ ದರ ಪ್ರತಿಬಿಂಬಿತ ವಾಗುತ್ತಿರಲಿಲ್ಲ. ಹಣದುಬ್ಬರದ ಸಮಸ್ಯೆ ನಿಗ್ರಹಿಸಿದ ಹೆಗ್ಗಳಿಕೆಯನ್ನು ಆರ್‌ಬಿಐಗೇ ನೀಡಬೇಕು. ಆರು ಸದಸ್ಯರ ಹಣಕಾಸು ನೀತಿ ಸಮಿತಿಯು ತಾನು ಮಾಡಬೇಕಿದ್ದ ಕೆಲಸವನ್ನು ಉತ್ತಮ ರೀತಿಯಲ್ಲಿ ಮಾಡಿದೆ. ಹಣಕಾಸು ಕ್ರೋಡೀಕರಣ ಮತ್ತು ಕ್ರಿಯಾತ್ಮಕ ದರ ಪರಿವೀಕ್ಷಣೆಯಂಥ ಕ್ರಮ ತೆಗೆದುಕೊಳ್ಳುವುದೂ ಸೇರಿದಂತೆ ಸರ್ಕಾರ ಕೈಗೊಂಡ ಪ್ರಯತ್ನಗಳು ಹಣದುಬ್ಬರ ತಗ್ಗಲು ಸಹಾಯವಾಯಿತು ಎಂದು ಅವರು ಅಭಿಪ್ರಾಯಪಟ್ಟರು.

ಕೋವಿಡ್-19 ಅಂತಹ ಸಾಂಕ್ರಾಮಿಕ ಮತ್ತು ಹಲವು ದೇಶಗಳಲ್ಲಿ ನಡೆಯುತ್ತಿರುವ ಯುದ್ಧಗಳು ಸವಾಲುಗಳನ್ನು ಒಡ್ಡಿದರೂ ದೇಶದಲ್ಲಿ ಹಣದುಬ್ಬರವು ಮಂದಗಾಮಿಯಾಗಿಯೇ ಇದೆ. ಕೋವಿಡ್ ಹೊಡೆತದಿಂದ ಸುಧಾರಿಸಿಕೊಳ್ಳಲು ಹಲವು ದೇಶಗಳು ಪ್ರಯಾಸಪಡುತ್ತಿರುವ ನಡುವೆಯೇ ಭಾರತ ಆರ್ಥಿಕತೆಯು ಹೊಸ ದಾಖಲೆಗಳನ್ನು ಮಾಡಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಆರ್‌ಬಿಐನ 90ನೇ ವಾರ್ಷಿಕೋತ್ಸವದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಅವರ ಜೊತೆ ಹೀಗೆ ಕಾಣಿಸಿಕೊಂಡರು –ಪಿಟಿಐ ಚಿತ್ರ

₹1.78 ಲಕ್ಷ ಕೋಟಿ ಜಿಎಸ್‌ಟಿ ಸಂಗ್ರಹ

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮೂಲಕ 2023-24ನೇ ಹಣಕಾಸು ವರ್ಷದ ಮಾರ್ಚ್‌ನಲ್ಲಿ ₹1.78 ಲಕ್ಷ ಕೋಟಿ ವರಮಾನ ಸಂಗ್ರಹ ಆಗಿದೆ.

ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಶೇ 11.5ರಷ್ಟು ಏರಿಕೆ ಆಗಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯವು ಸೋಮವಾರ ತಿಳಿಸಿದೆ.

ಈ ಹಣಕಾಸು ವರ್ಷದಲ್ಲಿ ಸಂಗ್ರಹವಾದ 2ನೇ ಅತಿ ದೊಡ್ಡ ಮೊತ್ತ ಇದಾಗಿದೆ. 2023ರ ಏಪ್ರಿಲ್‌ನಲ್ಲಿ ₹1.87 ಲಕ್ಷ ಕೋಟಿ ಅತ್ಯಧಿಕ ಜಿಎಸ್‌ಟಿ ಸಂಗ್ರಹವಾಗಿತ್ತು.

2023ರ ಏಪ್ರಿಲ್‌ನಿಂದ 2024ರ ಮಾರ್ಚ್‌ವರೆಗೆ ಒಟ್ಟು ₹20.18 ಲಕ್ಷ ಕೋಟಿ ಜಿಎಸ್‌ಟಿ ಸಂಗ್ರಹವಾಗಿದೆ. 2022-23ರ ಇದೇ ಅವಧಿಗೆ ಹೋಲಿಸಿದರೆ ಶೇ 11.7ರಷ್ಟು ಏರಿಕೆ ಆಗಿದೆ.

ಸರಾಸರಿ ಮಾಸಿಕ ಸಂಗ್ರಹವು ₹1.5 ಲಕ್ಷ ಕೋಟಿಯಿಂದ ₹1.68 ಲಕ್ಷ ಕೋಟಿಗೆ ಹೆಚ್ಚಳವಾಗಿದೆ.

ಜಿಎಸ್‌ಟಿ ವರಮಾನ ಸಂಗ್ರಹ
(ಮಾರ್ಚ್ 2024) (ಕೋಟಿಗಳಲ್ಲಿ)



ಮಾರ್ಚ್‌ನಲ್ಲಿ ಮರುಪಾವತಿಯ ನಿವ್ವಳ ಜಿಎಸ್‌ಟಿ ವರಮಾನವು ₹1.65 ಲಕ್ಷ ಕೋಟಿಯಾಗಿದ್ದು, ಹಿಂದಿನ ಇದೇ ಅವಧಿಗೆ ಹೋಲಿಸಿದರೆ ಶೇ 18.4ರಷ್ಟು ಏರಿಕೆ ಆಗಿದೆ ಎಂದು ಹಣಕಾಸು ಸಚಿವಾಲಯವು ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ
01-4-2024

ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10800-10900
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10600-10700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1510 (1510)
ಒಂದು ವಾರದ ಡೆಲಿವರಿ	1505 (1505)
ಸೋಯಾ ಕಚ್ಚಾ	940 (910)
ಪಾಮ್ ವಾರದ ಡೆಲಿವರಿ	970 (948)
ಸೂರ್ಯಕಾಂತಿ ಎಣ್ಣೆ ಕಚ್ಚಾ	900 (880)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹68,500 (67,950)
ಬೆಳ್ಳಿ ಕೆ.ಜಿ ₹75,300 (74,600)
ಆವರಣದಲ್ಲಿ ಶನಿವಾರದ ಧಾರಣೆ

ಕಲ್ಲಿದ್ದಲು ಉತ್ಪಾದನೆ: ಶೇ 50ರಷ್ಟು ಏರಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ರಾಷ್ಟ್ರೀಯ ಉಷ್ಣ ವಿದ್ಯುತ್ ನಿಗಮವು (ಎನ್‌ಟಿಪಿಸಿ) ಹಿಂದಿನ ವರ್ಷಕ್ಕೆ ಹೋಲಿಸಿದರೆ 2023-24ರ ಹಣಕಾಸು ವರ್ಷದಲ್ಲಿ ಕಲ್ಲಿದ್ದಲು ಸಾಗಣೆಯಲ್ಲಿ ಶೇ 55ರಷ್ಟು ಮತ್ತು ಉತ್ಪಾದನೆಯಲ್ಲಿ ಶೇ 50ರಷ್ಟು ಏರಿಕೆ ಕಂಡಿದೆ.

ಈ ಅವಧಿಯಲ್ಲಿ 3.41 ಕೋಟಿ ಟನ್ ಕಲ್ಲಿದ್ದಲು ಸಾಗಣೆ ಮತ್ತು 3.43 ಕೋಟಿ ಟನ್ ಉತ್ಪಾದನೆ ಆಗಿದೆ ಎಂದು ಕಂಪನಿ ತಿಳಿಸಿದೆ. ಕಲ್ಲಿದ್ದಲು ಉತ್ಪಾದನೆಯಲ್ಲಿ ನಿರಂತರ ಬೆಳವಣಿಗೆ ಸಾಧಿಸಲು, ಎನ್‌ಟಿಪಿಸಿ ಹಲವಾರು ತಂತ್ರಗಳು ಮತ್ತು ತಂತ್ರಜ್ಞಾನಗಳನ್ನು ಜಾರಿಗೆ ತಂದಿದೆ. ಇವುಗಳಲ್ಲಿ ಕಠಿಣ ಸುರಕ್ಷತಾ ಕ್ರಮಗಳ ಅಳವಡಿಕೆ, ಸುಧಾರಿತ ಗಣಿ ಯೋಜನೆ, ಯಾಂತ್ರೀಕರಣ, ತರಬೇತಿ ಮತ್ತು ನಿರಂತರ ಮೇಲ್ವಿಚಾರಣೆ ಸೇರಿವೆ ಎಂದು ಕಂಪನಿ ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

₹2 ಸಾವಿರ ಮುಖಬೆಲೆ ಶೇ 97.69ರಷ್ಟು ನೋಟು ವಾಪಸ್

ಮುಂಬೈ (ಪಿಟಿಐ): ₹2 ಸಾವಿರ ಮುಖಬೆಲೆಯ ಶೇ 97.69ರಷ್ಟು ನೋಟುಗಳು ಬ್ಯಾಂಕ್‌ಗಳಿಗೆ ಮರಳಿದ್ದು, ಇನ್ನೂ ₹8,202 ಕೋಟಿ ಮೌಲ್ಯದ ನೋಟುಗಳು ಸಾರ್ವಜನಿಕರ ಬಳಿ ಇವೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ಸೋಮವಾರ ತಿಳಿಸಿದೆ.

ಒಟ್ಟು ₹3.56 ಲಕ್ಷ ಕೋಟಿ ಮೌಲ್ಯದ ನೋಟುಗಳನ್ನು ಚಲಾವಣೆ ಯಿಂದ ಹಿಂಪಡೆಯುವುದಾಗಿ 2023ರ ಮೇ 19ರಂದು ಘೋಷಿಸಿತ್ತು.

ಪಾಕ್: ಇಮ್ರಾನ್ ಶಿಕ್ಷೆ ಅಮಾನತು

ಇಸ್ಲಾಮಾಬಾದ್ (ಪಿಟಿಐ): ತೋಷಖಾನಾ ಭ್ರಷ್ಟಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಹಾಗೂ ಅವರ ಪತ್ನಿ ಬುಶ್ರಾ ಬೀಬಿ ಅವರಿಗೆ ವಿಧಿಸಿದ್ದ 14 ವರ್ಷದ ಶಿಕ್ಷೆಯನ್ನು ಇಸ್ಲಾಮಾಬಾದ್ ಹೈಕೋರ್ಟ್ ಸೋಮವಾರ ಅಮಾನತುಗೊಳಿಸಿದೆ.

ಮುಖ್ಯ ನ್ಯಾಯಮೂರ್ತಿ ಆಮೆರ್ ಫಾರೂಕ್ ನೇತೃತ್ವದ ದ್ವಿಸದಸ್ಯ ನ್ಯಾಯಪೀಠವು ಈ ಆದೇಶ ನೀಡಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ ಜಾಮೀನು ನೀಡಿದೆ. 'ತೋಷಖಾನಾ ಭ್ರಷ್ಟಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ನೀಡಲಾಗಿದ್ದ ಶಿಕ್ಷೆಯ ವಿರುದ್ಧ ಆರೋಪಿಗಳು ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಈದ್ ರಜೆ ಬಳಿಕ ನಡೆಸಲಾಗುವುದು' ಎಂದು ಪೀಠ ತಿಳಿಸಿದೆ.

ಷೇರುಪೇಟೆ ಸೂಚ್ಯಂಕಗಳು ಏರಿಕೆ

ಮುಂಬೈ (ಪಿಟಿಐ): 2024-25ರ ಹಣಕಾಸು ವರ್ಷದ ಆರಂಭದ ಮೊದಲ ದಿನದಂದು ಷೇರು ಸೂಚ್ಯಂಕಗಳು ಏರಿಕೆ ಕಂಡಿವೆ. ವಿದೇಶಿ ಬಂಡವಾಳ ಒಳಹರಿವು ಮತ್ತು ಏಷ್ಯಾದ ಮಾರುಕಟ್ಟೆಗಳಲ್ಲಿ ಸಕಾರಾತ್ಮಕ ವಹಿವಾಟಿನಿಂದ ಷೇರು ಸೂಚ್ಯಂಕ ಗಳಿಕೆ ಕಂಡವು.



ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ 363 ಅಂಶ ಹೆಚ್ಚಳವಾಗಿ 74,041ಕ್ಕೆ ಸ್ಥಿರಗೊಂಡಿತು. ದಿನದ ವಹಿವಾಟಿನಲ್ಲಿ 74,254ಕ್ಕೆ ಮುಟ್ಟಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ 135 ಅಂಶ ಏರಿಕೆಯಾಗಿ 22,529ಕ್ಕೆ ಕೊನೆಗೊಂಡಿತು. ಜೆಎಸ್‌ಡಬ್ಲ್ಯು ಸ್ಟೀಲ್, ಟಾಟಾ ಸ್ಟೀಲ್, ಅಲ್ಟ್ರಾ ಟೆಕ್ ಸಿಮೆಂಟ್, ಎನ್‌ಟಿಪಿಸಿ, ಲಾರ್ಸನ್ ಆ್ಯಂಡ್ ಟೊಬ್ರೊ ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್‌ನ ಷೇರು ಮೌಲ್ಯ ಏರಿಕೆ ಕಂಡಿದೆ. ಟೈಟನ್, ನೆಸ್ಲೆ, ಭಾರ್ತಿ ಏರ್‌ಟೆಲ್ ಮತ್ತು ಇಂಡಸ್‌ಇಂಡ್ ಬ್ಯಾಂಕ್‌ನ ಷೇರು ಮೌಲ್ಯ ಇಳಿಕೆ ಆಗಿದೆ.

ಅದಾನಿ ಷೇರು ಏರಿಕೆ: ಅದಾನಿ ಸಮೂಹದ ಎಲ್ಲ ಷೇರಿನ ಮೌಲ್ಯ ಸೋಮವಾರ ಏರಿಕೆ ಕಂಡಿದೆ.

ಅದಾನಿ ಎನರ್ಜಿ ಸಲ್ಯೂಷನ್ಸ್ ಶೇ 8.40, ಎನ್‌ಡಿಟಿವಿ ಶೇ 6.16, ಅದಾನಿ ವಿಲ್ಮರ್ ಶೇ 5.92, ಅದಾನಿ ಪವರ್ ಶೇ 4.99, ಅದಾನಿ ಟೋಟಲ್ ಗ್ಯಾಸ್ ಶೇ 4.81, ಅದಾನಿ ಗ್ರೀನ್ ಎನರ್ಜಿ ಶೇ 2.93, ಅದಾನಿ ಪೋರ್ಟ್ಸ್ ಶೇ 2.56, ಎಸಿಸಿ ಶೇ 2.38, ಅದಾನಿ ಎಂಟರ್‌ಪ್ರೈಸಸ್ ಶೇ 1.80 ಮತ್ತು ಅಂಬುಜಾ ಸಿಮೆಂಟ್ಸ್ ಶೇ 1.49ರಷ್ಟು ಷೇರಿನ ಮೌಲ್ಯ ಏರಿಕೆ ಆಗಿದೆ. ಸಮೂಹದ ಎಲ್ಲ ಕಂಪನಿಗಳ ಒಟ್ಟು ಮಾರುಕಟ್ಟೆ ಮೌಲ್ಯ ₹16.30 ಲಕ್ಷ ಕೋಟಿಗೆ ಮುಟ್ಟಿದೆ.

ಚುನಾವಣೆ ನಂತರ ಟೋಲ್ ಹೆಚ್ಚಳ ಜಾರಿ: ಆಯೋಗ

ನವದೆಹಲಿ (ಪಿಟಿಐ): ಹೆದ್ದಾರಿಗಳಲ್ಲಿ ಬಳಕೆದಾರರ ಶುಲ್ಕ (ಟೋಲ್) ಹೆಚ್ಚಳದ ಲೆಕ್ಕಾಚಾರವನ್ನು ಮುಂದುವರಿಸುವಂತೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ (ಎನ್‌ಎಚ್‌ಎಐ) ಹೇಳಿರುವ ಚುನಾವಣಾ ಆಯೋಗವು, ಹೊಸ ದರಗಳು ಏ. 1ರ ಬದಲು ಲೋಕಸಭಾ ಚುನಾವಣೆಯ ನಂತರವೇ ಅನ್ವಯವಾಗಬೇಕು ಎಂದು ಹೇಳಿದೆ.

ಚುನಾವಣಾ ಆಯೋಗ ಟೋಲ್ ಹೆಚ್ಚಳ ಜಾರಿಗೆ ತರುವುದನ್ನು ಮುಂದೂಡುವಂತೆ ಎನ್‌ಎಚ್‌ಎಐ ಅನ್ನು ಕೇಳಿಕೊಂಡಿದೆ. ಈ ಸಂಬಂಧ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವರು ನಡೆಸಿದ ಸಂವಹನಕ್ಕೆ ಆಯೋಗವು ಪ್ರತಿಕ್ರಿಯಿಸಿದ್ದು, ಇದಕ್ಕೆ ಸಂಬಂಧಿಸಿದ ದಾಖಲೆಗಳು ಸುದ್ದಿಸಂಸ್ಥೆಗೆ ಲಭ್ಯವಾಗಿವೆ.

ವಿದ್ಯುತ್ ಸೇವಾಶುಲ್ಕಕ್ಕೆ ಸಂಬಂಧಿಸಿದ ಅಗತ್ಯ ಪ್ರಕ್ರಿಯೆಗಳನ್ನು ರಾಜ್ಯ ವಿದ್ಯುತ್ ನಿಯಂತ್ರಣ ಆಯೋಗಗಳು ಮುಂದುವರಿಸಬಹುದು. ಆದರೆ, ಇದರ ಅನುಷ್ಠಾನವು ಆಯಾ ರಾಜ್ಯಗಳಲ್ಲಿ ಮತದಾನ ಮುಗಿದ ನಂತರವೇ ನಡೆಯಬೇಕು ಎಂದು ಚುನಾವಣಾ ಆಯೋಗವು ಏ. 1ರಂದು ರಸ್ತೆ ಸಚಿವಾಲಯದೊಟ್ಟಿಗೆ ನಡೆಸಿರುವ ಸಂವಹನದಲ್ಲಿ ತಿಳಿಸಿದೆ. ಏ. 19ರಂದು ಮೊದಲ ಹಂತದ ಮತದಾನ ನಡೆಯಲಿದೆ. ಜೂನ್ 1ರಂದು ಏಳನೇ ಹಂತದ ಮತದಾನ ನಡೆಯಲಿದ್ದು, 4ರಂದು ಮತ ಎಣಿಕೆ ನಡೆಯಲಿದೆ. ದೇಶದಾದ್ಯಂತ ಇರುವ ಹೆದ್ದಾರಿಗಳು ಮತ್ತು ಎಕ್ಸ್‌ಪ್ರೆಸ್ ಹೈವೇಗಳಲ್ಲಿ ಏ. 1ರಿಂದ ಹೊಸ ಟೋಲ್ ದರ ಜಾರಿಗೊಳ್ಳಲಿದ್ದು, ಟೋಲ್‌ನ ವಾರ್ಷಿಕ ಪರಿಷ್ಕರಣೆ ಶೇ 5ರ ಆಸುಪಾಸಿನಲ್ಲಿರಲಿದೆ ಎಂದು ನಿರೀಕ್ಷಿಸಲಾಗಿತ್ತು.

ಶಿಫಾ ಆಸ್ಪತ್ರೆ: ಇಸ್ರೇಲ್ ಸೇನೆ ವಾಪಸ್

ದೇರ್ ಅಲ್ ಬಲಾಹ್ (ಗಾಜಾ ಪಟ್ಟಿ) (ಎಪಿ): 'ಗಾಜಾದ ಶಿಫಾ ಆಸ್ಪತ್ರೆಯಲ್ಲಿ ನಿಯೋಜಿಸಿದ್ದ ತನ್ನ ಯೋಧರನ್ನು ಇಸ್ರೇಲ್ ಸೋಮವಾರ ಹಿಂದಕ್ಕೆ ಕರೆಯಿಸಿಕೊಂಡಿದೆ' ಎಂದು ಪ್ಯಾಲೆಸ್ಟೀನ್ ನಾಗರಿಕರು ತಿಳಿಸಿದ್ದಾರೆ. 'ಕಳೆದ ಎರಡು ವಾರಗಳಿಂದ ಇಸ್ರೇಲ್ ಸೇನೆ ಆಸ್ಪತ್ರೆ ಮೇಲೆ ದಾಳಿ ನಡೆಸಿದ್ದು, ಅನೇಕರನ್ನು ಹತ್ಯೆ ಮಾಡಿದೆ' ಎಂದೂ ದೂರಿದ್ದಾರೆ.

'ಕಳೆದ ಆರು ತಿಂಗಳ ಯುದ್ಧದಲ್ಲಿ ಶಿಫಾ ಆಸ್ಪತ್ರೆ ಮೇಲೆ ನಡೆಸಿದ ದಾಳಿ ನಮ್ಮ ಅತ್ಯಂತ ಯಶಸ್ವಿ ಕಾರ್ಯಾಚರಣೆಗಳಲ್ಲಿ ಒಂದಾಗಿದೆ. ಈ ದಾಳಿಯ ಸಂದರ್ಭದಲ್ಲಿ ಹಮಾಸ್ ಮತ್ತು ಇತರ ಸಂಘಟನೆಗಳ ಉಗ್ರರನ್ನು ಕೊಂದಿದ್ದೇವೆ' ಎಂದು ಇಸ್ರೇಲ್ ಸೇನೆ ತಿಳಿಸಿದೆ.

ನಾಲ್ಕನೇ ಪಟ್ಟಿ ಬಿಡುಗಡೆ ಮಾಡಿದ ಚೀನಾ

ಅರುಣಾಚಲದ ವಿವಿಧ ಸ್ಥಳಗಳಿಗೆ 30 ಚೀನಿ ಹೆಸರು

ಬೀಜಿಂಗ್ (ಪಿಟಿಐ): ಭಾರತದ ಅರುಣಾಚಲ ಪ್ರದೇಶದ ವಿವಿಧ ಸ್ಥಳಗಳಿಗೆ 30 ಹೊಸ ಹೆಸರಿರುವ ನಾಲ್ಕನೇ ಪಟ್ಟಿಯನ್ನು ಚೀನಾ ಬಿಡುಗಡೆ ಮಾಡಿದೆ.

ಇತ್ತೀಚಿನ ದಿನಗಳಲ್ಲಿ ಅರುಣಾಚಲ ಪ್ರದೇಶ ರಾಜ್ಯದ ಮೇಲೆ ತನ್ನ ಹಕ್ಕು ಸಾಧಿಸಲು ಪ್ರಯತ್ನಿಸುತ್ತಿರುವ ಚೀನಾ, ಮತ್ತೊಂದು ಹೆಜ್ಜೆ ಮುಂದೆ ಹೋಗಿದೆ.

ಅರುಣಾಚಲ ಪ್ರದೇಶದ ಸ್ಥಳಗಳಿಗೆ ಮರುನಾಮಕರಣ ಮಾಡುವುದನ್ನು ವಿರೋಧಿಸಿರುವ ಭಾರತ, 'ಅರುಣಾಚಲ ಪ್ರದೇಶ ದೇಶದ ಅವಿಭಾಜ್ಯ ಅಂಗ. ಇಲ್ಲಿನ ಪ್ರದೇಶಗಳಿಗೆ ಹೊಸದಾಗಿ ನಾಮಕರಣ ಮಾಡುವುದರಿಂದ ವಾಸ್ತವವನ್ನು ಬದಲಾಯಿಸಲು ಸಾಧ್ಯವಿಲ್ಲ' ಎಂದು ಪ್ರತಿಪಾದಿಸಿದೆ.

'ಝಂಗ್ನಾನ್‌ನ (ಅರುಣಾಚಲ ಪ್ರದೇಶಕ್ಕೆ ಚೀನಾ ಇಟ್ಟಿರುವ ಹೆಸರು) ವಿವಿಧ ಪ್ರದೇಶಗಳಿಗೆ 30 ಚೀನಿ ಹೆಸರಿರುವ ಪಟ್ಟಿಯನ್ನು ಚೀನಾದ ನಾಗರಿಕ ವ್ಯವಹಾರಗಳ ಸಚಿವಾಲಯ ಬಿಡುಗಡೆ ಮಾಡಿದೆ' ಎಂದು ಗ್ಲೋಬಲ್ ಟೈಮ್ಸ್ ತಿಳಿಸಿದೆ.

'ಸಚಿವಾಲಯದ ಅಧಿಕೃತ ವೆಬ್‌ಸೈಟ್‌ನಲ್ಲಿ ಹೆಸರುಗಳನ್ನು ಘೋಷಿಸಲಾಗಿದ್ದು, ಇವು ಮೇ 1ರಿಂದ ಜಾರಿಗೆ ಬರಲಿವೆ' ಎಂದೂ ಅದು ಮಾಹಿತಿ ನೀಡಿದೆ.

ಚೀನಾದ ನಾಗರಿಕ ವ್ಯವಹಾರಗಳ ಸಚಿವಾಲಯವು 2017ರಲ್ಲಿ ಆರು, 2021ರಲ್ಲಿ 15 ಹಾಗೂ 2023ರಲ್ಲಿ 11 ಸ್ಥಳಗಳಿಗೆ ಹೊಸ ಹೆಸರುಗಳ ಪಟ್ಟಿಯನ್ನು ಪ್ರಕಟಿಸಿತ್ತು.

ಪ್ರತೀಕಾರದ ಕ್ರಮ?: ಪ್ರಧಾನಿ ನರೇಂದ್ರ ಮೋದಿ ಅವರು ಇತ್ತೀಚೆಗೆ ಅರುಣಾಚಲ ಪ್ರದೇಶಕ್ಕೆ ಭೇಟಿ ನೀಡಿದ್ದಾಗ, 13 ಸಾವಿರ ಅಡಿ ಉದ್ದದ ಸೇಲಾ ಸುರಂಗವನ್ನು ಉದ್ಘಾಟಿಸಿದ್ದರು. ಇದಕ್ಕೆ ಪ್ರತೀಕಾರ ಕ್ರಮವಾಗಿ ಚೀನಾ ಹೊಸ ಹೆಸರುಗಳ ಪಟ್ಟಿಯನ್ನು ಬಿಡುಗಡೆ ಮಾಡಿದೆ ಎನ್ನಲಾಗುತ್ತಿದೆ.

ಸೇನೆಯ ಸುಲಭ ಸಂಚಾರಕ್ಕೆ ಮತ್ತು ಆಯಕಟ್ಟಿನ ಸ್ಥಳವಾದ ತವಾಂಗ್‌ಗೆ ಸರಾಗವಾಗಿ ಸಂಪರ್ಕ ಕಲ್ಪಿಸಲು ಈ ಸುರಂಗ ಸಹಾಯಕವಾಗಿದೆ ಎಂದು ಹೇಳಲಾಗಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ವ್ಯಾಪಾರ
Business Offers
Franchise

THERE IS SO MUCH MONEY TO MAKE IN THE TRAVEL BUSINESS
BECOME OUR FRANCHISEE NOW!
CHARIOT WORLD TOURS LTD FRANCHISE OPPORTUNITY
- Low investment
- Most recognised brand association
- World class operations
- Largest choice of tours for customers
- Top class business support
- Monthly commission payout
9945775555
atmanand@chariotworldtours.com
CHARIOT
CHARIOT WORLD TOURS LIMITED
3446/40, 1st 'F' Cross, Next to Bunts Sangha, Vijayanagar, Bangalore 40

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಸಾರ್ವಜನಿಕ ಪ್ರಕಟಣೆ
NABFINS Ltd.
No.3072, 14th Cross, K.R.Road, Banashankari 2nd Stage, Bengaluru- 560 070
REQUEST FOR PROPOSALS
NABFINS Limited invites responses to the Request for Proposal for selection of Life Insurer/s to offer Credit Life Group Insurance cover for the Borrowers and Co-obligants from the life insurance companies.
For details of RFP please visit our website - https://nabfins.org/
Last date of submission of proposal is 25th April 2024.
Sd/-
General Manager

ಭವಿಷ್ಯ
Astrology
★ಓಂದುರ್ಗ ಆಂಜನಂ★ ನಿಮ್ಮ ಯಾವುದೇ ಧೀರ್ಘಕಾಲದ ಎಲ್ಲೂ ಪರಿಹಾರವಾಗದ ಸ್ತ್ರೀಪುರುಷ ಸಂಬಂಧಿತ ಸರ್ವಸಮಸ್ಯೆಗಳಿಗೆ 3 ದಿನಗಳಲ್ಲಿ ಪರಿಹಾರ. ಶ್ರೀ.ದೇವಾನಂದನ್. 9845005009

ಉದ್ಯೋಗಾವಕಾಶ
General
ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ತಕ್ಷಣ ಬೇಕಾಗಿದ್ದಾರೆ. ಟಯೋಟಾ,TVS, ಬ್ರಿಟಾನಿಯಾ, ಟಾಟಾ ಮೋಟಾರ್ಸ್ ಕಂಪನಿಗಳಿಗೆ SSLC, PUC,Degree, ITIನವರು. 18,000/- 60,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9353185367

Part-Time Jobs
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

WORK FROM Home: ಮನೆಯಲ್ಲಿ ಕುಳಿತು 10,000–20,000 ದುಡಿಯಬಹುದು. ವಯೋಮಿತಿ ಇರುವುದಿಲ್ಲ. ಮೊದಲು ಬಂದವರಿಗೆ ಆದ್ಯತೆ. 8861041526, 9945791526

Wanted
ಉದ್ಯೋಗಕ್ಕಾಗಿ ಸಂಪರ್ಕಿಸಿರಿ: ದಾಸ್ ಸೇವಾಸಂಸ್ಥೆಯಿಂದ 7ನೇ,SSLC/PUC ಅಥವಾ Degree ಆದ ಮಹಿಳಾ ಹಾಗೂ ಪುರುಷ ಅಭ್ಯರ್ಥಿಗಳಿಗೆ ಆಸ್ಪತ್ರೆಗಳ ಮುಖಾಂತರ ನರ್ಸಿಂಗ್ ತರಬೇತಿಯನ್ನು ಕೊಟ್ಟು ಉದ್ಯೋಗ ಕೊಡಲಾಗುವುದು. ತರಬೇತಿ ಸಮಯದಲ್ಲಿ15,000ದಿಂದ 20,000ತನಕ ಸಂಬಳ ಹಾಗೂ PF,ESI ಹಾಗೂ ಉಚಿತ ಊಟ, ಹಾಸ್ಟೆಲ್ ವ್ಯವಸ್ಥೆಯಿರುತ್ತದೆ. ತರಬೇತಿ ನಂತರ ವಿವಿಧ ಆಸ್ಪತ್ರೆ,ವೃದ್ಧಾಶ್ರಮಗಳಲ್ಲಿ ಖಾಯಂ ಉದ್ಯೋಗವಕಾಶ ಹಾಗೂ 25,000ತನಕ ಸಂಬಳ ಹಾಗೂ ಈಗಾಗಲೇ ತರಬೇತಿ ಹೊಂದಿ ಅನುಭವ ಇರುವ ನರ್ಸ್,ಹೋಂ ನರ್ಸ್9ಗಳು,ANM,GNMಆದವರು ಹಾಗೂ ಮಗುಬಾಣಂತಿ ಅರ್ರೈಕೆ ಮಾಡುವ ದಾದಿಯರು ಉದ್ಯೋಗಕ್ಕಾಗಿ ಸಂಪರ್ಕಿಸಿರಿ. ದಾಸ್‌ಸೇವಾಸಂಸ್ಥೆ(ರಿ) (ಸರಕಾರಿ ನೋಂದಾಯಿತಸಂಸ್ಥೆ) ಮಂಗಳೂರು:0824-2432744, 9343568915, 9845495055. ಬೆಂಗಳೂರು:9242730143, ಮೈಸೂರು:9243306815, ಹುಬ್ಬಳ್ಳಿ:9242302918, ಬೆಳಗಾಂ:9242096219, ಹಾಸನ:9241324003, ಶಿವಮೊಗ್ಗ:9241127545, ದಾವಣಗೆರೆ:7760164111, ಬಳ್ಳಾರಿ:9972851518 Website:www.homenursingservices.org

ವೈವಾಹಿಕ
Matrimonial Bureaus
ಎಲ್ಲಾ ಜಾತೀಯ ವಧು ವರರಿಗೆ ಮತ್ತು ಮರು ಮದುವೆ ಬಯಸುವ Divorcee, widowers ಮಾಹಿತಿಗೆ ಬಯೋಡಾಟಾ ಫೋಟೋ WhatsApp ಮಾಡಿ 9019566555

ಪ್ರವಾಸ
Holiday Package Tours
15.04.2024, 4ದಿನಗಳು ಎ/ಸಿ ಬಸ್ಸಿನಲ್ಲಿ ಮಂತ್ರಾಲಯ, ಶ್ರೀಶೈಲಾ, ಅಹೋಬಲ, ಮಹಾನಂದಿ ಇತ್ಯಾದಿ. 27-04-2024, 2ದಿನಗಳು ಕೆಮ್ಮಣ್ಣುಗುಂಡಿ, ಮುಳ್ಳಯ್ಯನಗಿರಿ, ಬಾಬಾಬುಡನಗಿರಿ, ಹೆಬ್ಬೆಫಾಲ್ಸ್, ಕಲ್ಹತ್ತಿಫಾಲ್ಸ್ ಇತ್ಯಾದಿ. 9481433157

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
www.dhclassifieds.com
ಬುಕ್ ಮಾಡಿ
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9731810277 | +91 9845114560 | +91 9900428036

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಡ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಅಸ್ಸಾಂ, ಪಶ್ಚಿಮ ಬಂಗಾಳದಲ್ಲಿ ಬಿರುಗಾಳಿ ಸಹಿತ ವರ್ಷಧಾರೆ: ಅಪಾರ ಹಾನಿ

ಮುಂದುವರಿದ ಮಳೆ; ಬಾಲಕಿ ಸಾವು

ಗುವಾಹಟಿ/ಜಲಪಾಈಗುಡಿ (ಪಿಟಿಐ): ಪಶ್ಚಿಮ ಬಂಗಾಳ ಮತ್ತು ಅಸ್ಸಾಂನಲ್ಲಿ ಭಾನುವಾರ ಸುರಿದ ಬಿರುಗಾಳಿ ಸಹಿತ ಮಳೆಯಿಂದ ಜನಜೀವನಕ್ಕೆ ತೊಂದರೆ ಉಂಟಾಗಿದೆ. ಅಸ್ಸಾಂನಲ್ಲಿ ಆಲಿಕಲ್ಲು ಸಹಿತ ಮಳೆಯಾಗಿದ್ದು, ನದಿಯಲ್ಲಿ ದೋಣಿ ಮಗುಚಿ ನಾಲ್ಕು ವರ್ಷದ ಮಗು ಸಾವಿಗೀಡಾಗಿದೆ.

ಅಸ್ಸಾಂನ ಬಹುತೇಕ ಕಡೆಗಳಲ್ಲಿ ಭಾನುವಾರ ಸಂಜೆಯಿಂದ ಆಲಿಕಲ್ಲು ಸಹಿತ ಭಾರಿ ಮಳೆಯಾಗುತ್ತಿದೆ. ಈ ವೇಳೆ, ದಕ್ಷಿಣ ಶಾಲ್ಮಾರ-ಮಾನ ಕಾಚರ್ ಜಿಲ್ಲೆಯಲ್ಲಿ ಬ್ರಹ್ಮಪುತ್ರ ನದಿಯಲ್ಲಿ 15 ಮಂದಿ ಪ್ರಯಾಣಿಕರನ್ನು ಹೊತ್ತು ಸಾಗುತ್ತಿದ್ದ ದೋಣಿಯೊಂದು ಮುಳುಗಿದೆ. ಘಟನೆಯಲ್ಲಿ ಒಬ್ಬ ಬಾಲಕಿ ಮೃತಪಟ್ಟಿದ್ದು, ಇಬ್ಬರು ಕಾಣೆಯಾಗಿದ್ದಾರೆ. ಅವರಲ್ಲಿ 8 ವರ್ಷದ ಒಬ್ಬ ಬಾಲಕ ಇದ್ದಾನೆ. ಶೋಧ ಕಾರ್ಯ ಮುಂದುವರಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಬಾಲಕಿಯ ಮೃತದೇಹವನ್ನು ಸ್ಥಳೀಯರು ಹೊರತೆಗೆದಿದ್ದಾರೆ. ಇನ್ನುಳಿದ ಪ್ರಯಾಣಿಕರು ಸ್ಥಳೀಯರ ಸಹಾಯದಿಂದ ಪಾರಾದರು ಎಂದು ಅವರು ಹೇಳಿದ್ದಾರೆ.

ರಾಜ್ಯದ ಹಲವೆಡೆ ಹಲವಾರು ಮರಗಳು, ವಿದ್ಯುತ್ ಕಂಬಗಳು ನೆಲಕ್ಕುರುಳಿವೆ. ಮನೆಗಳು, ಶಾಲೆಗಳು, ಅಂಗಡಿಗಳು ಮತ್ತು ವಾಹನಗಳಿಗೆ ಹಾನಿಯಾಗಿದೆ. ರಕ್ಷಣಾ ಕಾರ್ಯಕ್ಕೆ ಅನುಕೂಲ ಮಾಡಿಕೊಡಿಕೊಡುವ ನಿಟ್ಟಿನಲ್ಲಿ ಡ್ರೋನ್‌ಗಳನ್ನು ಕಳುಹಿಸಲಾಗಿದೆ ಎಂದು ಅಸ್ಸಾಂ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ (ಎಎಸ್‌ಡಿಎಂಎ) ಸಿಇಒ ಜ್ಞಾನೇಂದ್ರ ದೇವ್ ತ್ರಿಪಾಠಿ ತಿಳಿಸಿದ್ದಾರೆ.

ಮರಗಳು ಉರುಳಿ ರಸ್ತೆ ಬಂದ್ ಆಗಿದ್ದರಿಂದ ಗುವಾಹಟಿ ಬಳಿಯ ಗರ್ಭಂಗ ಸಂರಕ್ಷಿತಾರಣ್ಯಕ್ಕೆ ಭೇಟಿ ನೀಡಿದ್ದ ಹಲವರು ಸೋಮವಾರ ಬೆಳಿಗ್ಗೆವರೆಗೆ ಅಲ್ಲಿಯೇ ಸಿಲುಕಿದ್ದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ನಡುವೆ, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಅವರಿಗೆ ಕರೆ ಮಾಡಿ ಪರಿಸ್ಥಿತಿ ಕುರಿತು ಮಾಹಿತಿ ಪಡೆದಿದ್ದಾರೆ.

ಐದು ದಿನ ಮಳೆ: ಅಸ್ಸಾಂ, ಮೇಘಾಲಯ ಮತ್ತು ಅರುಣಾಚಲ ಪ್ರದೇಶದಲ್ಲಿ ಭಾರತೀಯ ಹವಾಮಾನ ಇಲಾಖೆಯು 'ಆರೆಂಜ್ ಅಲರ್ಟ್' (ಮುನ್ನೆಚ್ಚರಿಕಾ ಕ್ರಮ ತೆಗೆದುಕೊಳ್ಳಲು ಸೂಚನೆ) ಘೋಷಿಸಿದೆ. ಮುಂದಿನ ಐದು ದಿನಗಳು ಅಸ್ಸಾಂ ಸೇರಿ ಈಶಾನ್ಯ ಭಾಗದ ಹಲವು ರಾಜ್ಯಗಳಲ್ಲಿ ಮಿಂಚು, ಗುಡುಗು ಸಹಿತ ಅಧಿಕದಿಂದ ಭಾರಿ ಮಳೆಯಾಗಲಿದೆ. ಈ ವೇಳೆ ಗಂಟೆಗೆ 30-40 ಕಿ.ಮೀ. ವೇಗದಲ್ಲಿ ಮಾರುತ ಬೀಸಲಿದೆ ಎಂದು ಎಚ್ಚರಿಕೆ ನೀಡಿದೆ.

ಅಸ್ಸಾಂ ಬಳಿ ಬಂಗಾಳ ಕೊಲ್ಲಿಯಲ್ಲಿ ವಾಯುಭಾರ ಕುಸಿದಿದೆ. ಈ ಪರಿಸ್ಥಿತಿಯಿಂದಾಗಿ ಈ ಪ್ರದೇಶದಲ್ಲಿ ಮಳೆಯಾಗಲಿದೆ ಎಂದು ಹವಾಮಾನ ವರದಿ ಹೇಳಿದೆ.

ಬಿರುಗಾಳಿ ಸಹಿತ ಮಳೆಯಿಂದಾಗಿ ಪಶ್ಚಿಮ ಬಂಗಾಳದ ಜಲಪಾಈಗುಡಿ ಜಿಲ್ಲೆಯ ಮನೆಯೊಂದು ಕುಸಿದಿದೆ – ಪಿಟಿಐ ಚಿತ್ರ

ಪಶ್ಚಿಮ ಬಂಗಾಳ: ಸಾವಿನ ಸಂಖ್ಯೆ 5ಕ್ಕೆ ಏರಿಕೆ

ಭಾನುವಾರ ಸುರಿದ ಭಾರಿ ಮಳೆಯಿಂದಾಗಿ ಪಶ್ಚಿಮ ಬಂಗಾಳದಲ್ಲಿ ಮೃತರ ಸಂಖ್ಯೆ ಐದಕ್ಕೆ ಏರಿಕೆ ಆಗಿದೆ. ಸುಮಾರು 200 ಜನರು ನಿರಾಶ್ರಿತರಾಗಿದ್ದಾರೆ. ಹಲವಾರು ಮರಗಳು ಮತ್ತು ವಿದ್ಯುತ್ ಕಂಬಗಳು ಧರೆಗುರುಳಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅವಶೇಷಗಳನ್ನು ತೆರವುಗೊಳಿಸಿ ಸಂತ್ರಸ್ತರಿಗೆ ನೆರವು ಒದಗಿಸುವ ನಿಟ್ಟಿನಲ್ಲಿ ರಕ್ಷಣಾ ತಂಡಗಳು ಕೆಲಸ ಮಾಡುತ್ತಿವೆ. ರಾಜ್ಯದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಜಲಪಾಈಗುಡಿ ಜಿಲ್ಲೆಗೆ ಭಾನುವಾರ ರಾತ್ರಿಯೇ ಭೇಟಿ ನೀಡಿ, ಅಗತ್ಯ ನೆರವು ಒದಗಿಸುವ ಭರವಸೆ ನೀಡಿದ್ದಾರೆ.

'ಗಾಯಗೊಂಡವರ ಸಂಖ್ಯೆ ತುಸು ಹೆಚ್ಚೇ ಇದೆ. ಗಾಯಾಳುಗಳು ಮತ್ತು ಮೃತರ ಕುಟುಂಬಗಳ ಸದಸ್ಯರನ್ನು ಭೇಟಿ ಆಗಿದ್ದೇನೆ. ಸಂತ್ರಸ್ತ ಕುಟುಂಬಗಳಿಗೆ ಎಲ್ಲಾ ರೀತಿಯ ಸಹಾಯ ಮಾಡಲಾಗುವುದು. ಮಾದರಿ ನೀತಿ ಸಂಹಿತೆ ಜಾರಿಯಲ್ಲಿರುವ ಕಾರಣ ಪರಿಹಾರಧನ ವಿತರಣೆ ಕುರಿತು ಮಾತನಾಡಲು ನನಗೆ ಸಾಧ್ಯವಿಲ್ಲ' ಎಂದು ಮಮತಾ ಅವರು ಸುದ್ದಿಗಾರರ ಎದುರು ಹೇಳಿದರು.

ರಾಜ್ಯದ ರಾಜ್ಯಪಾಲ ವಿ.ಸಿ. ಬೋಸ್ ಅವರು ಸೋಮವಾರ ಬಿರುಗಾಳಿ ಬಾಧಿತ ಪ್ರದೇಶಗಳಿಗೆ ಭೇಟಿ ನೀಡಿ, ಜನರಿಗೆ ಧೈರ್ಯ ತುಂಬಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರೂ ದುರಂತದಲ್ಲಿ ಮಡಿದವರಿಗೆ ಸಂತಾಪ ಸೂಚಿಸಿದ್ದಾರೆ. ಬಾಧಿತ ಪ್ರದೇಶಗಳಲ್ಲಿ ಅಗತ್ಯ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿರುವುದಾಗಿ ಹೇಳಿದ್ದಾರೆ.

'ಮುನ್ಸೂಚನೆ ಇಲ್ಲದೆ ಬಿರುಗಾಳಿ ಸಹಿತ ಮಳೆಯಾಗಿದೆ. ಯಾವಾಗ ಮತ್ತು ಹೇಗೆ ನಾವು ಮನೆಯನ್ನು ಮರು ನಿರ್ಮಾಣ ಮಾಡುತ್ತೇವೆ ಎಂಬುದು ತಿಳಿಯದಾಗಿದೆ' ಎಂದು ಪಶ್ಚಿಮ ಬಂಗಾಳದ ಮೈನ್‌ಪುರಿಯ ನಿವಾಸಿಯೊಬ್ಬರು ಅಳಲು ತೋಡಿಕೊಂಡಿದ್ದಾರೆ.

ಕೇರಳ ಕರಾವಳಿಯಲ್ಲಿ ದೈತ್ಯ ಅಲೆಗಳು

ತಿರುವನಂತಪುರ (ಪಿಟಿಐ): ಕೇರಳದ ಕರಾವಳಿ ಜಿಲ್ಲೆಗಳಲ್ಲಿ ಭಾನುವಾರ ಇದ್ದಕ್ಕಿದ್ದಂತೆ ದೈತ್ಯಾಕಾರದ ಅಲೆಗಳು ಭುಗಿಲೆದ್ದಿದ್ದು, ಗ್ರಾಮಗಳಿಗೆ ನೀರು ನುಗ್ಗಿದೆ. ಇದರಿಂದ ಸ್ಥಳೀಯರು ತೀವ್ರ ಆಘಾತಕ್ಕೊಳಗಾಗಿದ್ದಾರೆ. ಹಲವರ ಮನೆಗಳಿಗೆ ನೀರು ನುಗ್ಗಿದೆ.

ಪ್ರಸಿದ್ಧ ಪ್ರವಾಸಿ ತಾಣವಾದ ಪೂವರ್ ಮತ್ತು ಸುತ್ತಮುತ್ತಲಿನ ಗ್ರಾಮಗಳು ಭಾನುವಾರ ಸಂಪೂರ್ಣ ಜಲಾವೃತಗೊಂಡಿದ್ದವು. ಸೋಮವಾರದ ವೇಳೆಗೆ ಗ್ರಾಮಗಳಿಂದ ನೀರು ಇಳಿಮುಖ ವಾಗಿದ್ದರೂ ದೈತ್ಯ ಅಲೆಗಳು ದಡಕ್ಕೆ ಅಪ್ಪಳಿಸುತ್ತಿದ್ದವು. ಏ.4ರ ವರೆಗೂ ಇದೇ ರೀತಿ ಅಲೆಗಳು ಮುಂದುವರೆಯುವ ನಿರೀಕ್ಷೆ ಇದೆ ಎನ್ನಲಾಗಿದೆ.

ತಿರುವನಂತಪುರ ಬಳಿಯ ಪೊಳಿಯೂರಿನಲ್ಲಿ 100ಕ್ಕೂ ಹೆಚ್ಚು ಕುಟುಂಬಗಳ ಮನೆಗಳಿಗೆ ಅಲೆಗಳಿಂದ ಹಾನಿಯಾಗಿದೆ. ದೋಣಿಗಳು ಮತ್ತು ಬಲೆಗಳೂ ಹಾನಿಗೊಳಗಾಗಿದ್ದರಿಂದ ಮೀನುಗಾರರು ಸಂಕಷ್ಟಕ್ಕೀಡಾಗಿದ್ದಾರೆ. ಈ ಭಾಗದ ಕರಾವಳಿ ರಸ್ತೆ ಸಂಪೂರ್ಣ ಹಾಳಾಗಿದೆ.

ಕಾಶಿ ವಿಶ್ವನಾಥ ದೇಗುಲ ಟ್ರಸ್ಟಿಗಳಿಗೆ ಸುಪ್ರೀಂ ಕೋರ್ಟ್ ನೋಟಿಸ್

ನವದೆಹಲಿ (ಪಿಟಿಐ): ಗ್ಯಾನವಾಪಿ ಸಂಕೀರ್ಣದ ದಕ್ಷಿಣ ಭಾಗದ ನೆಲಮಾಳಿಗೆಯಲ್ಲಿ ಹಿಂದೂಗಳು ಪ್ರಾರ್ಥನೆ ಸಲ್ಲಿಸುವುದಕ್ಕೆ ತಡೆ ನೀಡಲು ಸುಪ್ರೀಂ ಕೋರ್ಟ್ ನಿರಾಕರಿಸಿತು. ಮಸೀದಿ ವ್ಯವಸ್ಥಾಪನಾ ಸಮಿತಿಯು ಸಲ್ಲಿಸಿರುವ ಅರ್ಜಿಗೆ ಪ್ರತಿ ಕ್ರಿಯೆ ನೀಡುವಂತೆ ಕಾಶಿ ವಿಶ್ವನಾಥ ದೇವಸ್ಥಾನದ ಟ್ರಸ್ಟಿಗಳಿಗೆ ಸೂಚಿಸಿತು.

ಗ್ಯಾನವಾಪಿ ಮಸೀದಿ ಸಂಕೀರ್ಣದ 'ವ್ಯಾಸ ತೆಹಖಾನಾ'ದಲ್ಲಿ ಪೂಜೆ ಸಲ್ಲಿಸಲು ಹಿಂದೂ ಧರ್ಮೀಯರಿಗೆ ಅವಕಾಶ ನೀಡಿ ಕೆಳಹಂತದ ನ್ಯಾಯಾಲಯವೊಂದು ನೀಡಿರುವ ತೀರ್ಪನ್ನು ಅಲಹಾಬಾದ್ ಹೈಕೋರ್ಟ್ ಎತ್ತಿಹಿಡಿದಿರುವುದನ್ನು ಪ್ರಶ್ನಿಸಿ ಮಸೀದಿ ನಿರ್ವಹಣಾ ಸಮಿತಿ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಸೋಮವಾರ ನಡೆಸಿತು.

ಸಂಕೀರ್ಣದಲ್ಲಿ ಮುಸ್ಲಿಮರು ನಮಾಜ್ ಕೂಡ ಸಲ್ಲಿಸುತ್ತಿದ್ದು, ಈ ವಿಷಯದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಸುಪ್ರೀಂ ಕೋರ್ಟ್ ಆದೇಶಿಸಿತು.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಹಾಗೂ ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲ, ಮನೋಜ್ ಮಿಶ್ರ ಅವರು ಇದ್ದ ನ್ಯಾಯಪೀಠವು ಅರ್ಜಿಯ ಪ್ರಕರಣದ ವಿಚಾರಣೆ ನಡೆಸಿತು.

ಮಸೀದಿ ಸಮಿತಿಯು ಹಿಂದೂಗಳು ಪ್ರಾರ್ಥನೆ ಸಲ್ಲಿಸುವುದಕ್ಕೆ ತಡೆಯೊಡ್ಡುವಂತೆ ಸಲ್ಲಿಸಿದ ಅರ್ಜಿಯನ್ನು ಫೆ.26ರಂದು ಹೈಕೋರ್ಟ್ ತಿರಸ್ಕರಿಸಿತ್ತು.

ಭೋಜಶಾಲಾ ಸಮೀಕ್ಷೆ ತಡೆಗೆ ನಕಾರ

ನವದೆಹಲಿ (ಪಿಟಿಐ): ವಿವಾದಿತ ಭೋಜಶಾಲಾ–ಕಮಲ ಮೌಲಾ ಸಂಕೀರ್ಣದ ವೈಜ್ಞಾನಿಕ ಸಮೀಕ್ಷೆಗೆ ತಡೆ ನೀಡಲು ಸುಪ್ರೀಂ ಕೋರ್ಟ್ ಸೋಮವಾರ ನಿರಾಕರಿಸಿದ್ದು, ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ (ಎಎಸ್‌ಐ) ಸರ್ವೇಯ ಬಳಿಕ ಅನುಮತಿಯಿಲ್ಲದೇ ಯಾವುದೇ ಕ್ರಮ ಕೈಗೊಳ್ಳುವಂತಿಲ್ಲ ಎಂದು ಸೂಚಿಸಿದೆ.

ಭೋಜಶಾಲಾ–ಕಮಲ ಮೌಲಾ ಸಂಕೀರ್ಣದ ಸಮೀಕ್ಷೆ ನಡೆಸುವಂತೆ ಮಧ್ಯಪ್ರದೇಶ ಹೈಕೋರ್ಟ್ ಮಾರ್ಚ್ 11ರಂದು ನೀಡಿದ್ದ ಆದೇಶವನ್ನು ಪ್ರಶ್ನಿಸಿ ಮೌಲಾನಾ ಕಮಲುದ್ದೀನ್ ಕಲ್ಯಾಣ ಮಂಡಳಿ ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಹೃಷಿಕೇಶ್ ರಾಯ್ ಮತ್ತು ಪಿ.ಕೆ ಮಿಶ್ರಾ ಅವರ ನ್ಯಾಯಾಪೀಠವು ಕೇಂದ್ರ ಸರ್ಕಾರ, ಮಧ್ಯಪ್ರದೇಶ ರಾಜ್ಯ ಸರ್ಕಾರ, ಎಎಸ್‌ಐಗೆ ಮತ್ತಿತರರಿಗೆ ನೋಟಿಸ್ ಜಾರಿ ಮಾಡಿತು.

'ನಾಲ್ಕು ವಾರಗಳಲ್ಲಿ ನೋಟಿಸ್‌ಗೆ ಪ್ರತಿಕ್ರಿಯೆ ಕೊಡಬೇಕು. ನ್ಯಾಯಾಲಯದ ಅನುಮತಿಯಿಲ್ಲದೆ ಸಮೀಕ್ಷೆಯ ಫಲಿತಾಂಶದ ಆಧಾರದಲ್ಲಿ ಯಾವುದೇ ಕ್ರಮವನ್ನು ಕೈಗೊಳ್ಳುವಂತಿಲ್ಲ. ಸ್ಮಾರಕದ ಸ್ವರೂಪಕ್ಕೆ ಧಕ್ಕೆಯಾಗುವ ರೀತಿ ಯಾವುದೇ ಉತ್ಖನನ ನಡೆಸುವಂತಿಲ್ಲ' ಎಂದು ಕೋರ್ಟ್ ಸೂಚಿಸಿದೆ.

ಭಾರತೀಯ ಪುರಾತತ್ವ ಇಲಾಖೆಯಿಂದ ಸಂರಕ್ಷಿತವಾಗಿರುವ 11ನೇ ಶತಮಾನದ ಸ್ಮಾರಕವು ವಾಗ್ದೇವಿ(ಸರಸ್ವತಿ) ಮಂದಿರವೆಂಬುವುದು ಹಿಂದೂಗಳ ನಂಬಿಕೆಯಾಗಿದ್ದು, ಇದು ಕಮಲ ಮೌಲಾ ಮಸೀದಿಯೆಂದು ಮುಸ್ಲಿಂ ಸಮುದಾಯದ ನಂಬಿಕೆ.

2003ರಲ್ಲಿ ಎಎಸ್‌ಐ ನೀಡಿರುವ ಆದೇಶದ ಅನ್ವಯ ಭೋಜಶಾಲಾದಲ್ಲಿ ಪ್ರತಿ ಮಂಗಳವಾರ ಹಿಂದೂಗಳು ಪೂಜೆ ಮಾಡುತ್ತಾರೆ ಮತ್ತು ಪ್ರತಿ ಶುಕ್ರವಾರ ಮುಸ್ಲಿಮರು ಪ್ರಾರ್ಥನೆ ಸಲ್ಲಿಸುತ್ತಾರೆ.

ಕಾಂಗ್ರೆಸ್ ವಿರುದ್ಧ ಒತ್ತಾಯದ ಕ್ರಮವಿಲ್ಲ: ಐಟಿ

ನವದೆಹಲಿ (ಪಿಟಿಐ): ₹3,567 ಕೋಟಿ ಮೊತ್ತದ ತೆರಿಗೆ ಪಾವತಿಸುವಂತೆ ಕಾಂಗ್ರೆಸ್‌ಗೆ ನೋಟಿಸ್ ನೀಡಿರುವ ಆದಾಯ ತೆರಿಗೆ ಇಲಾಖೆಯು (ಐಟಿ), 'ಲೋಕಸಭಾ ಚುನಾವಣೆ ಸನ್ನಿಹಿತ ಆಗುತ್ತಿರುವುದರಿಂದ ಪಕ್ಷದ ವಿರುದ್ಧ ಯಾವುದೇ ಬಲವಂತದ ಕ್ರಮಗಳನ್ನು ತೆಗೆದುಕೊಳ್ಳುವುದಿಲ್ಲ' ಎಂದು ಸುಪ್ರೀಂ ಕೋರ್ಟ್‌ಗೆ ಸೋಮವಾರ ಹೇಳಿದೆ.

ತೆರಿಗೆ ನೀಡುವಂತೆ ಐಟಿ ನೀಡಿರುವ ನೋಟಿಸ್ ಪ್ರಶ್ನಿಸಿ ಕಾಂಗ್ರೆಸ್ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಮತ್ತು ಅಗಸ್ಟಿನ್ ಜಾರ್ಜ್ ಮಸಿಹ್ ಅವರಿದ್ದ ನ್ಯಾಯಪೀಠ ನಡೆಸಿತು.

'ಈ ಪ್ರಕರಣದಲ್ಲಿ ಅಂತಿಮ ತೀರ್ಪು ಹೊರಬೀಳುವವರೆಗೆ ಕಾಂಗ್ರೆಸ್ ವಿರುದ್ಧ ಒತ್ತಾಯದ ಕ್ರಮಗಳನ್ನು ತೆಗೆದುಕೊಳ್ಳುವುದಿಲ್ಲ' ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ಐಟಿ ಪರವಾಗಿ ನ್ಯಾಯಪೀಠಕ್ಕೆ ಹೇಳಿದರು.

ಈ ಅರ್ಜಿಗೆ ಸಂಬಂಧಿಸಿದಂತೆ ಮುಂದಿನ ವಿಚಾರಣೆಯನ್ನು ನ್ಯಾಯ ಪೀಠವು ಜುಲೈನಲ್ಲಿ ನಿಗದಿಪಡಿಸಿತು.

ಪತಿ ಕೊಂದರೆ ₹ 50,000 ವಾಟ್ಸ್‌ಆ್ಯಪ್ ಸ್ಟೇಟಸ್!

ಪ್ರಜಾವಾಣಿ ವಾರ್ತೆ

ಲಖನೌ: 'ಪತಿಯನ್ನು ಕೊಲೆ ಮಾಡಿದವರಿಗೆ ₹50 ಸಾವಿರ ನಗದು ಬಹುಮಾನ ನೀಡಲಾಗುವುದು' ಎಂದು ಮಹಿಳೆಯೊಬ್ಬರು ತಮ್ಮ ವಾಟ್ಸ್‌ಆ್ಯಪ್ ಖಾತೆಯಲ್ಲಿ ಸ್ಟೇಟಸ್ ಹಾಕಿಕೊಂಡಿದ್ದಾರೆ. ಇಚ್ಛೆಗೆ ವಿರುದ್ಧವಾಗಿ ತನಗೆ ಮದುವೆ ಮಾಡಲಾಗಿದೆ ಎಂದೂ ಬರೆದುಕೊಂಡಿದ್ದಾರೆ.

ಪತ್ನಿಯ 'ಸ್ಟೇಟಸ್' ನೋಡಿ ಗಾಬರಿಗೊಂಡ ಪತಿ ಪೊಲೀಸ್ ಠಾಣೆಗೆ ಹೋಗಿ, ದೂರು ನೀಡಿದ್ದಾರೆ. ಇನ್ನೊಂದೆಡೆ, ಮಹಿಳೆಯ ಈ ಸ್ಟೇಟಸ್ ಆಕೆಯ ಸ್ನೇಹಿತರು, ಸಂಬಂಧಿಕರಲ್ಲಿಯೂ ಆತಂಕ ಮೂಡಿಸಿದೆ.

ಮಧ್ಯಪ್ರದೇಶದ ಭಿಂಡ್ ಜಿಲ್ಲೆಯ ಮಹಿಳೆಗೆ ಉತ್ತರಪ್ರದೇಶ ಆಗ್ರಾ ಜಿಲ್ಲೆಯ ಬಾಹ್‌ನ ಯುವಕನ ಜೊತೆಗೆ ಎರಡು ವರ್ಷ ಹಿಂದೆ ವಿವಾಹವಾಗಿತ್ತು. ಪತಿಯೊಂದಿಗೆ ಭಿನ್ನಾಭಿಪ್ರಾಯ ಇದ್ದ ಹಿನ್ನೆಲೆಯಲ್ಲಿ ಐದು ತಿಂಗಳಿನಿಂದ ಆಕೆ ತಂದೆ–ತಾಯಿ ಜತೆಗೆ ವಾಸವಿದ್ದರು. ಅಲ್ಲದೆ, ಕೌಟುಂಬಿಕ ನ್ಯಾಯಾಲಯಕ್ಕೂ ದೂರು ನೀಡಿದ್ದರು.

ಕೆಲ ದಿನಗಳ ಹಿಂದೆ ಕೋರ್ಟ್‌ಗೆ ವಿಚಾರಣೆಗೆ ಹೋಗಿದ್ದಾಗ, ವಿಚ್ಛೇದನ ನೀಡದಿದ್ದರೆ ಗಂಭೀರ ಪರಿಣಾಮ ಎದುರಿಸಬೇಕಾದೀತು ಎಂದು ತನ್ನ ಪತ್ನಿ ಬೆದರಿಸಿದ್ದಾಗಿ ಹೇಳಿರುವ ಪತಿ, ಆಕೆಗೆ ಮತ್ತೊಬ್ಬರ ಜತೆ ಸಂಬಂಧವಿದ್ದು, ಅವರನ್ನು ಮದುವೆಯಾಗಲು ವಿಚ್ಛೇದನ ಬಯಸಿದ್ದಾರೆ ಎಂದು ತಿಳಿಸಿದ್ದಾರೆ.

ವಾಟ್ಸ್‌ಆ್ಯಪ್ ಸ್ಟೇಟಸ್ ಪ್ರಕರಣ ಈಗ ಪೊಲೀಸ್ ಠಾಣೆಯ ಮೆಟ್ಟಿಲೇರಿದೆ. ಮಾಹಿತಿ ತಂತ್ರಜ್ಞಾನ ಕಾಯ್ದೆಯಡಿ ಈ ಬಗ್ಗೆ ಪ್ರಕರಣ ದಾಖಲಿಸಲಾಗಿದೆ. ತನಿಖೆ ನಡೆಯುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಭದ್ರತೆ ದೃಷ್ಟಿಯಲ್ಲಿ ಪನ್ನೂ ಹತ್ಯೆ ತನಿಖೆ'

ನವದೆಹಲಿ (ಪಿಟಿಐ): 'ಭಾರತದ ರಾಷ್ಟ್ರೀಯ ಭದ್ರತಾ ಹಿತಾಸಕ್ತಿಯ ದೃಷ್ಟಿಯಿಂದ ಖಾಲಿಸ್ತಾನ ಪ್ರತ್ಯೇಕತಾವಾದಿ ಗುರುಪತ್ವಂತ್ ಸಿಂಗ್ ಪನ್ನೂ ಹತ್ಯೆಯಲ್ಲಿ ದೇಶದ ಸರ್ಕಾರಿ ಅಧಿಕಾರಿ ಭಾಗಿಯಾಗಿದ್ದಾರೆ ಎಂಬ ಆರೋಪದ ತನಿಖೆ ನಡೆಯುತ್ತಿದೆ' ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ಸೋಮವಾರ ಹೇಳಿದ್ದಾರೆ.

'ಮತ್ತೊಂದು ದೇಶದ ಪ್ರಜೆಯ ಹತ್ಯೆಯಲ್ಲಿ ಸರ್ಕಾರಿ ಅಧಿಕಾರಿಯೊಬ್ಬ ಭಾಗಿಯಾಗಿರುವುದು ಸ್ವೀಕಾರಾರ್ಹವಲ್ಲ' ಎಂದು ಭಾರತದಲ್ಲಿರುವ ಅಮೆರಿಕ ರಾಯಭಾರಿ ಎರಿಕ್ ಗ್ರಾಸೆಟ್ಟಿ ಅವರು ನೀಡಿದ ಹೇಳಿಕೆ ಕುರಿತು ಸುದ್ದಿಗಾರರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, 'ಅಮೆರಿಕ ರಾಯಭಾರಿ ಅವರು ತಮಗೆ ಏನನ್ನಿಸುತ್ತಿದೆಯೋ ಅದನ್ನು ಹೇಳುತ್ತಿದ್ದಾರೆ' ಎಂದರು.

'ಪನ್ನೂ ಹತ್ಯೆ ಪ್ರಕರಣದ ಕುರಿತು ಪ್ರಸ್ತುತ ನನ್ನ ದೇಶದ ಸ್ಥಿತಿ ಇದಾಗಿದೆ. ನಾವು ನಡೆಸುತ್ತಿರುವ ತನಿಖೆಯಿಂದ ಈಗಾಗಲೇ ಕೆಲವು ಮಾಹಿತಿಗಳು ತಿಳಿದುಬಂದಿವೆ. ಆದ್ದರಿಂದ ಈ ಪ್ರಕರಣದ ತನಿಖೆಯ ಬಗ್ಗೆ ಏನೇ ಹೇಳುವುದಿದ್ದರೂ ಖುಷಿಯಿಂದ ಹೇಳುತ್ತೇವೆ. ಈ ಸಂದರ್ಭದಲ್ಲಿ, ತನಿಖೆ ಪ್ರಗತಿಯಲ್ಲಿದೆ ಎಂಬುದನ್ನು ಬಿಟ್ಟು ಬೇರೇನೂ ಹೇಳಲು ಸಾಧ್ಯವಿಲ್ಲ' ಎಂದೂ ಅವರು ತಿಳಿಸಿದ್ದಾರೆ.

2 ಸಾವಿರ ದಾಟಿದ ಡೆಂಗಿ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈ ವರ್ಷ ಮುಂಗಾರು ಮಳೆಗೆ ಮುನ್ನವೇ ಹಲವರಲ್ಲಿ ಡೆಂಗಿ ಜ್ವರ ಕಾಣಿಸಿಕೊಂಡಿದ್ದು, ಮೂರು ತಿಂಗಳ ಅವಧಿಯಲ್ಲಿ ಡೆಂಗಿ ಜ್ವರ ಎದುರಿಸಿದವರ ಸಂಖ್ಯೆ ಎರಡು ಸಾವಿರದ ಗಡಿ (2,116) ದಾಟಿದೆ.

ಸಾಮಾನ್ಯವಾಗಿ ಮುಂಗಾರು ಮಳೆ ಪ್ರವೇಶಿಸಿದ ಬಳಿಕ ಈ ಜ್ವರ ಹೆಚ್ಚಿನವರಲ್ಲಿ ಕಾಣಿಸಿಕೊಳ್ಳುತ್ತದೆ. ಈ ಸಲ ಬೇಸಿಗೆ ಅವಧಿಯಲ್ಲಿಯೂ ಈ ಜ್ವರದಿಂದ ಹಲವರು ಬಳಲಿದ್ದಾರೆ.

ಆರೋಗ್ಯ ಇಲಾಖೆಯ ಮಾಹಿತಿ ಪ್ರಕಾರ ಈವರೆಗೆ ರಾಜ್ಯದಾದ್ಯಂತ 34,143 ಡೆಂಗಿ ಶಂಕಿತರನ್ನು ಗುರುತಿಸಲಾಗಿದ್ದು, ಅವರಲ್ಲಿ 17,828 ಮಂದಿಯ ರಕ್ತದ ಮಾದರಿಯನ್ನು ಸಂಗ್ರಹಿಸಿ, ಪರೀಕ್ಷೆ ಮಾಡಲಾಗಿದೆ. ಈವರೆಗೆ ಯಾವುದೇ ಮರಣ ಪ್ರಕರಣ ವರದಿಯಾಗಿಲ್ಲ.

2023ರಲ್ಲಿ 16,500ಕ್ಕೂ ಅಧಿಕ ಡೆಂಗಿ ಪ್ರಕರಣಗಳು ದೃಢಪಟ್ಟಿದ್ದವು. 9 ಮಂದಿ ಮೃತಪಟ್ಟಿದ್ದರು. ಜೂನ್ ಬಳಿಕ ಪ್ರಕರಣಗಳ ಸಂಖ್ಯೆ ಗಣನೀಯ ಏರಿಕೆಯಾಗಿತ್ತು.

ಈ ವರ್ಷ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಡೆಂಗಿ ಪ್ರಕರಣಗಳು ದೃಢಪಟ್ಟಿವೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ಅಧಿಕ ಪ್ರಕರಣ (535) ವರದಿಯಾಗಿವೆ. ಮೈಸೂರು (164), ಚಿತ್ರದುರ್ಗ (146), ಶಿವಮೊಗ್ಗ (132) ಹಾಗೂ ದಕ್ಷಿಣ ಕನ್ನಡ (106) ಜಿಲ್ಲೆಯಲ್ಲಿ ಹೆಚ್ಚು ಪ್ರಕರಣ ದೃಢಪಟ್ಟಿವೆ.

ಚಿಕೂನ್‌ಗುನ್ಯ ಜ್ವರದ ಶಂಕೆ ಕಾರಣ 11,968 ಮಂದಿಗೆ ಪರೀಕ್ಷೆ ಮಾಡಲಾಗಿದ್ದು, 464 ಪ್ರಕರಣಗಳು ದೃಢಪಟ್ಟಿವೆ. 25 ಜಿಲ್ಲೆಗಳಲ್ಲಿ ಪ್ರಕರಣಗಳು ವರದಿಯಾಗಿದ್ದು, ಶಿವಮೊಗ್ಗದಲ್ಲಿ (190) ಗರಿಷ್ಠ ಪ್ರಕರಣಗಳು ಖಚಿತಪಟ್ಟಿವೆ.

ಬರಗಾಲ ಉಲ್ಬಣ

ಒಂದನೇ ಪುಟದಿಂದ...

ಈಗ ಅವುಗಳ ಸಂಖ್ಯೆಯಲ್ಲಿ ಮತ್ತಷ್ಟು ಏರಿಕೆಯಾಗಿದೆ.

ಕುಡಿಯುವ ನೀರು ಪೂರೈಸಲು ವಿವಿಧ ಜಿಲ್ಲೆಗಳಲ್ಲಿ ಮಾರ್ಚ್ 25ರ ವೇಳೆಗೆ 1,655 ಕೊಳವೆ ಬಾವಿಗಳನ್ನು ಬಾಡಿಗೆಗೆ ಪಡೆಯಲಾಗಿತ್ತು. ಮಾರ್ಚ್ 31ರ ವೇಳೆಗೆ 1,839 ಕೊಳವೆಬಾವಿ ಬಾಡಿಗೆಗೆ ಪಡೆದುಕೊಳ್ಳಲಾಗಿದೆ. ನೀರು ಪೂರೈಸಲು ಬಾಡಿಗೆಗೆ ಪಡೆಯುತ್ತಿರುವ ಕೊಳವೆಬಾವಿಗಳ ಸಂಖ್ಯೆ ಏರಿಕೆ ಆಗುತ್ತಲೇ ಇದೆ. ಬಾಡಿಗೆಗೆ ಪಡೆದಿರುವ ಕೊಳವೆಬಾವಿಗಳಲ್ಲೂ ನೀರಿನ ಲಭ್ಯತೆ ಕಡಿಮೆಯಿದೆ ಎನ್ನುತ್ತಾರೆ ಅಧಿಕಾರಿಗಳು.

ಚಿತ್ರದುರ್ಗದ 59, ಬೆಂಗಳೂರು ನಗರದ 53 ಪ್ರದೇಶ, ರಾಮನಗರದ 26, ವಿಜಯಪುರ ಜಿಲ್ಲೆಯ 68, ಬೆಳಗಾವಿಯ 50 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿದೆ. ಅಲ್ಲಿಗೆ ಟ್ಯಾಂಕರ್‌ಗಳಲ್ಲಿ ನೀರು ಪೂರೈಸಲಾಗುತ್ತಿದೆ. ಕಲಬುರಗಿ, ಯಾದಗಿರಿ, ರಾಯಚೂರು ಜಿಲ್ಲೆಗಳ ಹಲವು ಗ್ರಾಮಗಳದ್ದು ಅದೇ ಕಥೆ. ಜಾನುವಾರುಗಳಿಗೆ ಮೇವಿನ ಕೊರತೆ ಎದುರಾಗಿದ್ದು, ರೈತರು 5,483 ಜಾನುವಾರುಗಳನ್ನು ಗೋಶಾಲೆಗಳಿಗೆ ತಂದು ಬಿಟ್ಟಿದ್ದಾರೆ.

ನಾಲ್ಕು ವರ್ಷದ ಬಳಿಕ ಮಲೆನಾಡು ಪ್ರದೇಶದಲ್ಲಿ ಮೊದಲ ಬಾರಿಗೆ ಬೇಸಿಗೆ ಭೀಕರತೆ 'ದರ್ಶನ'ವಾಗುತ್ತಿದೆ. ಚಿಕ್ಕಮಗಳೂರು, ಹಾಸನ ಭಾಗದಲ್ಲಿ ಕಾಫಿ, ತೆಂಗು, ಅಡಿಕೆ ಬೆಳೆಗೆ ನೀರಿಲ್ಲದೆ ತೋಟಗಳು ಒಣಗುತ್ತಿವೆ.

'ತೋಟಕ್ಕೆ ನೀರು ಹಾಯಿಸಲು ನದಿಗಳಲ್ಲಿಯೇ ನೀರಿಲ್ಲ. ಅಂತರ್ಜಲ ಕಡಿಮೆಯಾಗಿ ಕೊಳವೆಬಾವಿಗಳು ಬತ್ತಿ ಹೋಗುತ್ತಿವೆ' ಎಂದು ಕೊಡಗಿನ ಹೊಸತೋಟದ ನಂಜಪ್ಪ ಹೇಳುತ್ತಾರೆ.

ನದಿಯಲ್ಲಿ 'ಕಲ್ಲುಗಳ ದರ್ಶನ'

ಕಾವೇರಿ, ತುಂಗಾ–ಭದ್ರಾ ನದಿಗಳು ಬತ್ತಿ ಹೋಗಿದ್ದು, ತಳದಲ್ಲಿರುವ 'ಕಲ್ಲುಗಳ ದರ್ಶನ'ವಾಗುತ್ತಿದೆ. ಕೊಡಗಿನಲ್ಲಿ ಕಾವೇರಿ ನದಿಯ ನೀರನ್ನು ತೋಟಕ್ಕೆ ನೀರು ಬಳಸದಂತೆ ಜಿಲ್ಲಾಧಿಕಾರಿ ಆದೇಶಿಸಿದ್ದಾರೆ. ಕುಡಿಯಲು ಮಾತ್ರ ಬಳಸುವಂತೆ ಸೂಚಿಸಿದ್ದಾರೆ. ನದಿಗಳ ನೀರನ್ನೇ ಕುಡಿಯಲು ಬಳಸುತ್ತಿರುವ ನದಿ ಅಕ್ಕಪಕ್ಕದ ಪಟ್ಟಣ ಪ್ರದೇಶಗಳಲ್ಲೂ ದಿನ ಕಳೆದಂತೆ ಸಮಸ್ಯೆ ತೀವ್ರವಾಗಿದೆ.

ಕೊಡಗಿನ ಕಾವೇರಿ ನದಿಯಲ್ಲಿ ಕಲ್ಲುಗಳ ದರ್ಶನವಾಗುತ್ತಿದೆ

ನಾಲ್ಕು ಜಿಲ್ಲೆಗಳಲ್ಲಿ 'ಬಿಸಿಗಾಳಿ'ಯ ಎಚ್ಚರಿಕೆ

ರಾಜ್ಯದ ಉತ್ತರ ಒಳನಾಡು ಪ್ರದೇಶದಲ್ಲಿ ಮಂಗಳವಾರ ಹಾಗೂ ಬುಧವಾರ ಮಳೆಯಾಗುವ ಸಾಧ್ಯತೆಯಿದೆ. ಕರಾವಳಿ–ದಕ್ಷಿಣ ಒಳನಾಡು ಜಿಲ್ಲೆಗಳಲ್ಲಿ ಒಣಹವೆ ಇರಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಬಾಗಲಕೋಟೆ, ಬೆಳಗಾವಿ, ವಿಜಯಪುರ ಜಿಲ್ಲೆಗಳ ಕೆಲವು ಭಾಗದಲ್ಲಿ ಮಂಗಳವಾರ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ.

ಏಪ್ರಿಲ್ 3ರಿಂದ 5ರ ತನಕ ಉತ್ತರ ಒಳನಾಡಿನ ಕಲಬುರಗಿ, ಬಾಗಲಕೋಟೆ, ರಾಯಚೂರು, ಕೊಪ್ಪಳ ಜಿಲ್ಲೆಯಲ್ಲಿ ಬಿಸಿಗಾಳಿ ಬೀಸುವ ಸಾಧ್ಯತೆಯಿದೆ. ರಾಜ್ಯದಲ್ಲೇ ಸೋಮವಾರ ಗರಿಷ್ಠ ಉಷ್ಣಾಂಶ ಕಲಬುರಗಿ ಜಿಲ್ಲೆಯಲ್ಲಿ 41.4 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು ಎಂದು ತಿಳಿಸಿದೆ.

'ಗೋಧಿ ಮೇಲೆ ಪರಿಣಾಮ ಇಲ್ಲ'

ನವದೆಹಲಿ (ಪಿಟಿಐ): ಗರಿಷ್ಠ ತಾಪಮಾನದಲ್ಲಿನ ಹೆಚ್ಚಳವು ಈಗ ಕೊಯ್ಲಿಗೆ ಸಿದ್ಧವಾಗಿರುವ ಗೋಧಿ ಬೆಳೆಯ ಮೇಲೆ ಕೆಟ್ಟ ಪರಿಣಾಮ ಉಂಟುಮಾಡದು ಎಂದು ಕೇಂದ್ರ ಹವಾಮಾನ ಇಲಾಖೆ ಹೇಳಿದೆ.

ಮಧ್ಯಪ್ರದೇಶ ಹೊರತುಪಡಿಸಿದರೆ ಗೋಧಿ ಬೆಳೆಯುವ ಬೇರೆ ಯಾವುದೇ ರಾಜ್ಯದಲ್ಲಿ ಬಿಸಿಗಾಳಿಯ ಅಪಾಯ ಇಲ್ಲ ಎಂದು ಇಲಾಖೆಯ ಮಹಾನಿರ್ದೇಶಕ ಮೃತ್ಯುಂಜಯ ಮಹಾಪಾತ್ರ ಹೇಳಿದ್ದಾರೆ.

'ಮಧ್ಯಪ್ರದೇಶದಲ್ಲಿ ಈಗ ತಾಪಮಾನವು 37-40 ಡಿಗ್ರಿ ಸೆಲ್ಸಿಯಸ್ ಇದೆ. ಇದು ಮುಂದಿನ ವಾರ 42 ಡಿಗ್ರಿ ಸೆಲ್ಸಿಯಸ್‌ವರೆಗೆ ಏರಿಕೆಯಾಗಬಹುದು. ಗೋಧಿ ಕೊಯ್ಲು ಶೇಕಡ 90ರಷ್ಟು ಪೂರ್ಣಗೊಂಡಿರುವ ಕಾರಣ, ಬೆಳೆಯ ಮೇಲೆ ಪರಿಣಾಮ ಇರುವುದಿಲ್ಲ' ಎಂದು ಅವರು ಹೇಳಿದ್ದಾರೆ.

ಬರದ ನಡುವೆ ಬಿಸಿಗಾಳಿ ಭೀತಿ

ಒಂದನೇ ಪುಟದಿಂದ...

ಹಿಮಾಲಯದ ಪಶ್ಚಿಮ ಭಾಗದಲ್ಲಿ, ಈಶಾನ್ಯ ರಾಜ್ಯಗಳಲ್ಲಿ ಹಾಗೂ ಒಡಿಶಾದ ಉತ್ತರ ಭಾಗದಲ್ಲಿ ಗರಿಷ್ಠ ತಾಪಮಾನವು ವಾಡಿಕೆಯಂತೆ ಅಥವಾ ವಾಡಿಕೆಗಿಂತ ತುಸು ಕಡಿಮೆ ಇರುವ ಸಾಧ್ಯತೆ ಇದೆ ಎಂದು ಅವರು ಹೇಳಿದ್ದಾರೆ.

ದೇಶದ ವಿವಿಧ ಭಾಗಗಳಲ್ಲಿ ಹತ್ತರಿಂದ ಇಪ್ಪತ್ತು ದಿನಗಳವರೆಗೆ ಬಿಸಿಗಾಳಿ ಇರಲಿದೆ. ವಾಡಿಕೆಯ ಪ್ರಕಾರ ಇದು ನಾಲ್ಕರಿಂದ ಎಂಟು ದಿನ ಮಾತ್ರ ಇರುತ್ತಿತ್ತು ಎಂದು ಅವರು ತಿಳಿಸಿದ್ದಾರೆ.

ಬಿಜೆಪಿ ಜಾಹೀರಾತು: ವಾಪಸ್‌ಗೆ ಆಗ್ರಹ

ಬೆಂಗಳೂರು: ಮಹಿಳೆಯರನ್ನು ಕೀಳಾಗಿ ಬಿಂಬಿಸುವ ಜಾಹೀರಾತನ್ನು ಬಿಜೆಪಿ ಹಿಂಪಡೆಯಬೇಕು. ಬೇಷರತ್ ಕ್ಷಮೆ ಯಾಚಿಸಬೇಕು ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಆಗ್ರಹಿಸಿದೆ.

ಜಾಹೀರಾತು ವಿಡಿಯೊವನ್ನು ಒಂದನ್ನು ಬಿಜೆಪಿ ಬಿಡುಗಡೆ ಮಾಡಿದ್ದು, ಅದರಲ್ಲಿ ನವವಧುವಿನ ಅಲಂಕಾರವನ್ನು ಮಾಡಿಕೊಂಡಿರುವ ಮಹಿಳೆಗಾಗಿ 'ಇಂಡಿಯಾ' ಕೂಟದ ಪಕ್ಷದ ಪುರುಷರು ಕಿತ್ತಾಡುತ್ತಾರೆ. ಅಂತ್ಯದಲ್ಲಿ ನರೇಂದ್ರ ಮೋದಿಯನ್ನು ಆ ವಿಡಿಯೊದಲ್ಲಿ ತೋರಿಸಲಾಗಿದೆ. ಮನುವ್ಯಾಧಿಯನ್ನು ತಲೆಗೇರಿಸಿಕೊಂಡ ಪಾಳೇಗಾರಿಕೆ ಮೌಲ್ಯವನ್ನು ಹಾಸಿ ಹೊದ್ದುಕೊಂಡಿರುವ ಬಿಜೆಪಿಗೆ ಮಹಿಳೆಯೊಬ್ಬಳು ಭೋಗದ ವಸ್ತು ಅಷ್ಟೇ ಎಂಬುದನ್ನು ಈ ಜಾಹೀರಾತು ಮತ್ತೊಮ್ಮೆ ಸಾಬೀತು ಮಾಡಿದೆ ಎಂದು ಸಂಘಟನೆಯ ಅಧ್ಯಕ್ಷೆ ಮೀನಾಕ್ಷಿ ಬಾಳಿ, ಪ್ರಧಾನ ಕಾರ್ಯದರ್ಶಿ ದೇವಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಇದು ಮಹಿಳಾ ಕುಲಕ್ಕೆ ಮಾತ್ರವಲ್ಲ, ಸಂವಿಧಾನಕ್ಕೂ ಬಗೆದ ಅಪಚಾರ. ಇಂಥ ವಿಚಾರಗಳನ್ನು ಚುನಾವಣಾ ಆಯೋಗ ಗಂಭೀರವಾಗಿ ಪರಿಗಣಿಸಿ, ಪಕ್ಷಗಳಿಗೆ ಕಟ್ಟೆಚ್ಚರ ನೀಡಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಮಕ್ಕಳ ಆಯೋಗ–ಶಿಕ್ಷಣ ಇಲಾಖೆ ಜಟಾಪಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಲು ಅವಕಾಶ ನಿರಾಕರಿಸಿದ ವಿಷಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಹಾಗೂ ಶಾಲಾ ಶಿಕ್ಷಣ ಇಲಾಖೆಯ ಮಧ್ಯೆ ಜಟಾಪಟಿಗೆ ನಾಂದಿ ಹಾಡಿದೆ.

ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಕೊಠಡಿಯ ಒಳಗೆ ಸಿಸಿಟಿವಿ ಕ್ಯಾಮೆರಾ ಅಳವಡಿಸಿ, ಅಧಿಕಾರಿಗಳು ತಮ್ಮ ಕಚೇರಿಗಳಲ್ಲಿ ಕುಳಿತು ವೆಬ್‌ಕಾಸ್ಟ್ ಮೂಲಕ ವೀಕ್ಷಣೆ ಮಾಡುತ್ತಿದ್ದಾರೆ. ಇದರಿಂದ ಪರೀಕ್ಷೆ ಬರೆಯುವ ಮಕ್ಕಳು ಹಾಗೂ ಶಿಕ್ಷಕರು ಮಾನಸಿಕ ಒತ್ತಡಕ್ಕೆ ಒಳಗಾಗುತ್ತಿದ್ದಾರೆ. ಪರೀಕ್ಷಾ ಕೊಠಡಿಗಳ ಒಳಗೆ ಮಕ್ಕಳ ಸ್ನೇಹಿ ವಾತಾವರಣ ಇಲ್ಲವಾಗಿದೆ. ಇಷ್ಟೆಲ್ಲ ವ್ಯವಸ್ಥೆ ಇದ್ದರೂ ನಕಲು ಪ್ರಕರಣಗಳು ಹೇಗೆ ನಡೆಯುತ್ತಿವೆ ಎಂಬ ಪ್ರಶ್ನೆಗೆ ಉತ್ತರ ಕಂಡುಕೊಳ್ಳಬೇಕಿದೆ. ಇದರ ಆಧಾರದಲ್ಲಿ ಮುಂದಿನ ಪರೀಕ್ಷೆಗಳಲ್ಲಿ ಸುಧಾರಣೆ ತರಬಹುದಾಗಿದೆ. ಹಾಗಾಗಿ, ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಬೇಕು ಎಂದು 'ಚೈಲ್ಡ್ ರೈಟ್ ಟ್ರಸ್ಟ್' ನಿರ್ದೇಶಕ ನರಸಿಂಹ ಜಿ. ರಾವ್ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗಕ್ಕೆ ಪತ್ರ ಬರೆದಿದ್ದರು.

ಚೈಲ್ಡ್ ರೈಟ್ ಟ್ರಸ್ಟ್ ಪತ್ರ ಆಧರಿಸಿ ಆಯೋಗದ ಅಧ್ಯಕ್ಷ ನಾಗಣ್ಣ ಗೌಡ ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಲು ಸದಸ್ಯರಿಗೆ ಸೂಚಿಸಿದ್ದರು. ಆದರೆ, ಭೇಟಿಗೆ ಅವಕಾಶ ನೀಡಲು ಶಿಕ್ಷಣ ಇಲಾಖೆ ಆಯುಕ್ತರು ನಿರಾಕರಿಸಿದ್ದಾರೆ.

'ಆಯೋಗದ ಸದಸ್ಯರು ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡುವ ಅವಕಾಶ ನಿರಾಕರಿಸುವುದು ನಿಯಮಗಳ ಉಲ್ಲಂಘನೆ. ಉಚಿತ ಮತ್ತು ಕಡ್ಡಾಯ ಶಿಕ್ಷಣ ಕಾಯ್ದೆಗೆ ವಿರುದ್ಧ. ಹಾಗಾಗಿ, ಆಯುಕ್ತರ ವಿರುದ್ಧ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಳ್ಳಬೇಕು' ಎಂದು ಆಯೋಗದ ಸದಸ್ಯ ಕೆ.ಟಿ. ತಿಪ್ಪೇಸ್ವಾಮಿ ಅಧ್ಯಕ್ಷರನ್ನು ಒತ್ತಾಯಿಸಿದ್ದಾರೆ.

ಅಂಗವಿಕಲರ ರಾಷ್ಟ್ರಮಟ್ಟದ ಟಿ20 ಕ್ರಿಕೆಟ್ ಟೂರ್ನಿಗೆ ಚಾಲನೆ

ಸದರ್ನ್ ಸ್ಮ್ಯಾಷರ್ಸ್ ತಂಡಕ್ಕೆ ಸುಲಭ ಗೆಲುವು

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಒಂದು ರನ್‌ನಿಂದ ಶತಕ ವಂಚಿತರಾದ ಎಂ.ಸುಗಣೇಶ್ ಅವರ ಉತ್ತಮ ಆಟದ ನೆರವಿನಿಂದ ಸದರ್ನ್ ಸ್ಮ್ಯಾಷರ್ಸ್ ತಂಡವು ಅಜಿತ್ ವಾಡೇಕರ್ ಸ್ಮರಣಾರ್ಥ ಆಯೋಜಿಸಿರುವ ಅಂಗವಿಕಲರ ರಾಷ್ಟ್ರಮಟ್ಟದ ಟ್ವೆಂಟಿ-20 ಕ್ರಿಕೆಟ್ ಟೂರ್ನಿಯಲ್ಲಿ ಸೆಂಟ್ರಲ್ ಕಮಾಂಡೋಸ್ ವಿರುದ್ಧ 135 ರನ್‌ಗಳಿಂದ ಜಯಿಸಿತು.

ಇಲ್ಲಿನ ರಾಜನಗರದ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ಸದರ್ನ್ ಸ್ಮ್ಯಾಷರ್ಸ್, 20 ಓವರ್‌ಗಳಲ್ಲಿ 6 ವಿಕೆಟ್‌ಗೆ 192 ರನ್ ಗಳಿಸಿತು. ಈ ದೊಡ್ಡ ಮೊತ್ತ ಬೆನ್ನಟ್ಟಿದ ಸೆಂಟ್ರಲ್ ಕಮಾಂಡೋಸ್ ತಂಡವು 12 ಓವರ್‌ಗಳಲ್ಲಿ 57 ರನ್ ಗಳಿಸಲಷ್ಟೇ ಶಕ್ತವಾಯಿತು.

ಸಂಕ್ಷಿಪ್ತ ಸ್ಕೋರು: ಸದರ್ನ್ ಸ್ಮ್ಯಾಷರ್ಸ್: 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 192 (ಎಂ.ಸುಗಣೇಶ 99, ನರೇಂದ್ರ ಮಂಗೋರೆ 29, ನಯನ್ ಶಿಂದೆ 25; ಅವನೀಶ ಕುಮಾರ್ 50ಕ್ಕೆ2). ಸೆಂಟ್ರಲ್ ಕಮಾಂಡೋಸ್: 12 ಓವರ್‌ಗಳಲ್ಲಿ 57 (ಅವನೀಶ್ ಕುಮಾರ್ 21; ಕೃಷ್ಣ ಬಗಾದಿ 13ಕ್ಕೆ 4, ಅನೀಶ್ ರಾಜನ್ 4ಕ್ಕೆ 2). **ಫಲಿತಾಂಶ:** ಸದರ್ನ್ ಸ್ಮ್ಯಾಷರ್ಸ್‌ಗೆ 135 ರನ್‌ಗಳ ಜಯ.

ರೈಲ್ವೆ ಮೈದಾನ, ಹುಬ್ಬಳ್ಳಿ: ನಾರ್ದರ್ನ್ ಫ್ರಾಂಟ್ಯರ್ಸ್: 20 ಓವರ್‌ಗಳಲ್ಲಿ 6ಕ್ಕೆ 185 (ವಿಜಯ್‌ಕುಮಾರ್ 65, ಅಖಿಬ್ ಮಲಿಕ್ 32, ಯಶ್ 32; ಅನಂತ ಫತಾಳೆ 30ಕ್ಕೆ 4). ಸಿ.ಎಸ್.ಇನ್ಫೊಕಾಮ್ ಚಾಲೆಂಜರ್ಸ್: 15.4 ಓವರ್‌ಗಳಲ್ಲಿ 92 (ಅನಂತ ಫತಾಳೆ 18, ಸುರ್ಜೀತ್ 14ಕ್ಕೆ 4, ಅನ್ಮುಲ್ 11ಕ್ಕೆ 2). **ಫಲಿತಾಂಶ:** ನಾರ್ದರ್ನ್ ಫ್ರಾಂಟ್ಯರ್ಸ್‌ಗೆ 93 ರನ್‌ಗಳ ಜಯ.

ರೈಲ್ವೆ ಮೈದಾನ, ಹುಬ್ಬಳ್ಳಿ: ಬೋರ್ಡ್ ಪ್ರೆಸಿಡೆಂಟ್ ಬ್ಲ್ಯಾಸ್ಟರ್ಸ್: 20 ಓವರ್‌ಗಳಲ್ಲಿ 4ಕ್ಕೆ 143 (ಮೆಹತಾಬ್ ಅಲಿ 38, ಸತೀಶ್‌ಕುಮಾರ್ ಮಲೋಡೆ 36; ವಿಕಾಸ್ ಯಾದವ್ 28ಕ್ಕೆ 1). ಅಜಿತ್ ವಾಡೇಕರ್ ವಾರಿಯರ್ಸ್: 16.4 ಓವರ್‌ಗಳಲ್ಲಿ 97 (ವಿಕಾಸ್ ಯಾದವ್ 21, ಜೀಜೊ 21; ಗಟ್ಟು ರುತ್ವಿಕ್ 17ಕ್ಕೆ 4, ಸತೀಶ್ ಕುಮಾರ್ ಮಲೋಡೆ 11ಕ್ಕೆ 3). **ಫಲಿತಾಂಶ:** ಬೋರ್ಡ್ ಪ್ರೆಸಿಡೆಂಟ್ ಬ್ಲ್ಯಾಸ್ಟರ್ಸ್‌ಗೆ 46 ರನ್‌ಗಳ ಜಯ.

ಕೆಎಸ್‌ಸಿಎ ಕ್ರೀಡಾಂಗಣ, ರಾಜನಗರ: ಸೆಂಟ್ರಲ್ ಕಮಾಂ ಡೋಸ್ 15.4 ಓವರ್‌ಗಳಲ್ಲಿ 89 (ಅಜರ್ ಮೊಹಮ್ಮದ್ 22, ಕರಣ್ 17; ಗಟ್ಟು ರುತ್ವಿಕ್ 24ಕ್ಕೆ 3, ಹಫಿಜ್ 12ಕ್ಕೆ 2). ಬೋರ್ಡ್ ಪ್ರೆಸಿಡೆಂಟ್ ಬ್ಲ್ಯಾಸ್ಟರ್ಸ್ 11.1 ಓವರ್‌ಗಳಲ್ಲಿ 41 (ಶ್ಯಾಮಸುಂದರ್ ಜೈಶ್ವಾಸ್ 9; ರಾಕೇಶ ಠಾಕೂರ್ 7ಕ್ಕೆ 5). **ಫಲಿತಾಂಶ:** ಸೆಂಟ್ರಲ್ ಕಮಾಂಡೋಸ್‌ಗೆ 48 ರನ್‌ಗಳ ಜಯ.

ಜಿಮ್ಖಾನ ಮೈದಾನ, ಹುಬ್ಬಳ್ಳಿ: ವೆಸ್ಟರ್ನ್ ರೇಂಜರ್ಸ್: 20 ಓವರ್‌ಗಳಲ್ಲಿ 9ಕ್ಕೆ 169 (ಸೋಮನಾಥ ನಲವಡೆ 42, ವೃಶಾಂತ್ ಗುಂಜಾಳ 35; ಅಮಿತ್ ಸಚ್‌ದೇವ್ 20ಕ್ಕೆ 3). ನಾರ್ದರ್ನ್ ಫ್ರಾಂಟ್ಯರ್ಸ್: 18.3 ಓವರ್‌ಗಳಲ್ಲಿ 87 (ರಾಜೇಶ್ ಸುರ್ವೆ 5ಕ್ಕೆ 2, ಯಶ್ ರಾಠೋಡ್ 12ಕ್ಕೆ 2). **ಫಲಿತಾಂಶ:** ವೆಸ್ಟರ್ನ್ ರೇಂಜರ್ಸ್ ರೇಂಜರ್ಸ್‌ಗೆ 82 ರನ್‌ಗಳ ಜಯ.

ಈಸ್ಟರ್ನ್ ಈಗಲ್ಸ್: 20 ಓವರ್‌ಗಳಲ್ಲಿ 9ಕ್ಕೆ 139 (ಮಹೇಶ್ ಶಾ 48, ರಾಜೀವ್ 24; ಯಶ್ ರಾಠೋಡ್ 19ಕ್ಕೆ 2). ವೆಸ್ಟರ್ನ್ ರೇಂಜರ್ಸ್: 19 ಓವರ್‌ಗಳಲ್ಲಿ 6ಕ್ಕೆ 140 (ಮಯೂರೇಶ್ ಸನ್ಸಾರೆ 53, ಸತೀಶ ರಾಠೋಡ್ 14; ಮಹಶೇಶ್ ಶಾ 37ಕ್ಕೆ 2). **ಫಲಿತಾಂಶ:** ವೆಸ್ಟರ್ಸ್ ರೇಂಜರ್ಸ್‌ಗೆ 4 ವಿಕೆಟ್ ಜಯ.

ಚಂಡೀಗಢ ಓಪನ್: ತಂದೆ-ಮಗ ಕಣಕ್ಕೆ

ಚಂಡೀಗಢ (ಪಿಟಿಐ): ಖ್ಯಾತ ಗಾಲ್ಫ್ ಆಟಗಾರ ಜೀವ್ ಮಿಲ್ಖಾ ಸಿಂಗ್ ಮತ್ತು ಅವರ 14 ವರ್ಷದ ಪುತ್ರ ಹರ್ಜೈ ಮಿಲ್ಖಾ ಸಿಂಗ್ ಅವರು ಬುಧವಾರ ಆರಂಭವಾಗುವ ಪ್ರಪ್ರಥಮ ಚಂಡೀಗಢ ಓಪನ್ ಟೂರ್ನಿಯಲ್ಲಿ ಕಣಕ್ಕಿಳಿಯಲಿದ್ದಾರೆ. ಚಂಡೀಗಢ ಗಾಲ್ಫ್ ಕ್ಲಬ್‌ನಲ್ಲಿ ನಡೆಯಲಿರುವ ಈ ಟೂರ್ನಿಯಲ್ಲಿ ದೇಶದ ಪ್ರಮುಖ ಆಟಗಾರರು ಕಾಣಿಸಿಕೊಳ್ಳಲಿದ್ದಾರೆ.

ಏಪ್ರಿಲ್ 3 ರಿಂದ 6 ರವರೆಗೆ ನಡೆಯುವ ಈ ಟೂರ್ನಿಯು ₹1 ಕೋಟಿ ಬಹುಮಾನದ ಮೊತ್ತ ಹೊಂದಿದೆ ಎಂದು ವೃತ್ತಿಪರ ಗಾಲ್ಫ್ ಟೂರ್ ಆಫ್ ಇಂಡಿಯಾ (ಪಿಜಿಟಿಐ) ಸೋಮವಾರ ಪ್ರಕಟಿಸಿದೆ. ಕಳೆದ ವರ್ಷ 13 ವರ್ಷದೊಳಗಿನ ಬಾಲಕರ ವಿಭಾಗದಲ್ಲಿ ಯುಎಸ್ ಕಿಡ್ಸ್ ಗಾಲ್ಫ್ ಯುರೋಪಿಯನ್ ಚಾಂಪಿಯನ್‌ಷಿಪ್ ಗೆದ್ದ ಹರ್ಜೈ, ಅಯಾನ್ ಗುಪ್ತಾ ಮತ್ತು ರಾಮ್ ಸಿಂಗ್ ಮಾನ್- ಈ ಮೂವರು ಹವ್ಯಾಸಿ ಆಟಗಾರರಿಗೆ ವೃತ್ತಿಪರರೊಂದಿಗೆ ಸ್ಪರ್ಧಿಸುವ ಅವಕಾಶ ದೊರಕಿದೆ.

ಜೀವ್ ಮಿಲ್ಖಾ ಸಿಂಗ್

ಕೋಲ್ಕತ್ತ ರೇಸ್

ಸ್ಯಾವಿ ಚಿಕ್ ಗೆಲ್ಲುವ ನಿರೀಕ್ಷೆ

ಅಡ್ಜುಟಿಕೆಟ್ ಕಪ್ ಮಂಗಳವಾರದ ಕೋಲ್ಕತ್ತ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಸ್ಯಾವಿ ಚಿಕ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:45ಕ್ಕೆ ಪ್ರಾರಂಭವಾಗಲಿರುದ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ.

1ನೇ ರೇಸ್: ಸೆಪ್ಟಿಮಸ್ ಸೆವೆರಸ್ 1, ಯಾವಾರ್ 2, ಸನ್‌ಗಾಡ್ 4
2ನೇ ರೇಸ್: ಚಿಲಿಲೇಡಿ 10, ಬಂಡಲ್ ಆಫ್ ಚಾರ್ಮ್ 1, ಪ್ರೈಮೊ ವಿಕ್ಟೋರಿಯಾ 11
3ನೇ ರೇಸ್: ಕಲಹರಿ ಗೋಲ್ಡ್ 6, ಲಾ ಡಾಮಿನೇಟ್ 8, ಎಟರ್ನಲ್ ಪ್ರಿನ್ಸೆಸ್ 2
4ನೇ ರೇಸ್: ದುಬೈ ಕಿಂಗ್ 10, ಸ್ಪೆಕ್ಟಾಕ್ಯುಲರ್ 9, ಬ್ಲೂ ಚಿಪ್ 6
5ನೇ ರೇಸ್: ಸ್ಯಾವಿ ಚಿಕ್ 5, ಸ್ವಾಕ್‌ಬ್ರಿಡ್ಜ್ 2. ಹಾರ್ವೆಸ್ಟ್‌ಟೈಮ್ 4
6ನೇ ರೇಸ್: ದುಬೈ ಸ್ಟಾರ್ 2. ಮಂಡೆಲ್ಲಾ 3

ಉತ್ತಮ ಬೆಟ್: ಚಿಲಿಲೇಡಿ

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
2,3,4,5,6	4,5,6	4,5,6

ಐಡಬ್ಲ್ಯುಎಫ್ ವಿಶ್ವಕಪ್ ವೇಟ್‌ಲಿಫ್ಟಿಂಗ್: 'ಬಿ' ಗುಂಪಿನಲ್ಲಿ ಮೂರನೇ ಸ್ಥಾನ

ಒಲಿಂಪಿಕ್ಸ್: ಅರ್ಹತೆಯತ್ತ ಮೀರಾಬಾಯಿ

ಫುಕೆಟ್ (ಥಾಯ್ಲೆಂಡ್), (ಪಿಟಿಐ): ಟೋಕಿಯೊ ಒಲಿಂಪಿಕ್ಸ್ ಬೆಳ್ಳಿ ಪದಕ ವಿಜೇತೆ ಮೀರಾಬಾಯಿ ಚಾನು ಅವರು ಐಡಬ್ಲ್ಯುಎಫ್ ವಿಶ್ವಕಪ್ ವೇಟ್‌ಲಿಫ್ಟಿಂಗ್‌ನ ಮಹಿಳೆಯರ 49 ಕೆ.ಜಿ ವಿಭಾಗದ 'ಬಿ' ಗುಂಪಿನಲ್ಲಿ ಸೋಮವಾರ ಮೂರನೇ ಸ್ಥಾನ ಪಡೆದಿದ್ದಾರೆ. ಆದರೂ ಅವರು ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಗಿಟ್ಟಿಸುವ ಹಾದಿಯಲ್ಲಿದ್ದಾರೆ.

ಗಾಯದಿಂದ ಆರು ತಿಂಗಳು ಸ್ಪರ್ಧಾಕಣದಿಂದ ದೂರವಿದ್ದ ಚಾನು ಅವರು ಒಟ್ಟು 184 ಕೆ.ಜಿ (81 ಕೆಜಿ + 103 ಕೆ.ಜಿ) ಭಾರ ಎತ್ತಿದರು. ಇದು ಪ್ಯಾರಿಸ್ ಒಲಿಂಪಿಕ್ಸ್‌ಗೆ ಅಂತಿಮ ಅರ್ಹತಾ ಟೂರ್ನಿಯಾಗಿತ್ತು.



ಈ ಕ್ರೀಡಾಕೂಟ ಮುಕ್ತಾಯದೊಂದಿಗೆ ಚಾನು ಪ್ಯಾರಿಸ್ ಒಲಿಂಪಿಕ್ಸ್‌ನ ಮಾನದಂಡಗಳನ್ನು ಪೂರೈಸಿದ್ದಾರೆ. ಎರಡು ಕಡ್ಡಾಯ ಸ್ಪರ್ಧೆಗಳು ಮತ್ತು ಇತರ ಮೂರು ಅರ್ಹತಾ ಪಂದ್ಯಗಳಲ್ಲಿ ಭಾಗವಹಿಸಿದ್ದಾರೆ.

2017ರ ವಿಶ್ವ ಚಾಂಪಿಯನ್, ಪ್ರಸ್ತುತ ಮಹಿಳೆಯರ 49 ಕೆ.ಜಿ ಒಲಿಂಪಿಕ್ ಅರ್ಹತಾ ಕ್ರಮಾಂಕಪಟ್ಟಿಯಲ್ಲಿ (ಒಕ್ಯೂಆರ್) ಚೀನಾದ ಜಿಯಾನ್ ಹುಯಿಹುವಾ ನಂತರ ಎರಡನೇ ಸ್ಥಾನದಲ್ಲಿದ್ದಾರೆ. ವಿಶ್ವಕಪ್ ಬಳಿಕ ಒಕ್ಯೂಆರ್ ಪರಿಷ್ಕರಿಸಲಿದ್ದು ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯುವ ಸ್ಪರ್ಧಿಗಳ ಪಟ್ಟಿ ಪ್ರಕಟವಾಗಲಿದೆ. ಪ್ರತಿ ತೂಕ ವಿಭಾಗದಲ್ಲಿ ಅಗ್ರ 10 ಮಂದಿ ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯುತ್ತಾರೆ.

ಸೆಪ್ಟೆಂಬರ್‌ನಲ್ಲಿ ನಡೆದ ಏಷ್ಯನ್ ಕ್ರೀಡಾಕೂಟದಲ್ಲಿ ಕೊನೆಯ ಬಾರಿ ಸ್ಪರ್ಧಿಸಿದ್ದ ಚಾನು, ಸೊಂಟದ ಸ್ನಾಯುಸೆಳೆತದಿಂದ ಬಳಲುತ್ತಿದ್ದರು. ಅವರು ತೋರಿದ ನಿರ್ವಹಣೆ ಉತ್ತಮವಾಗಿರಲಿಲ್ಲ. ಆದರೆ ಐದು ಕ್ಲೀನ್ ಲಿಫ್ಟ್‌ಗಳನ್ನು ಮಾಡಲು ಅವರಿಗೆ ಸಾಧ್ಯವಾಯಿತು.

ಬೌಲ್ಟ್, ಚಾಹಲ್ ದಾಳಿ: ಮುಂಬೈಗೆ ಮೂರನೇ ಸೋಲು

ರಾಜಸ್ಥಾನಕ್ಕೆ ಹ್ಯಾಟ್ರಿಕ್ ಜಯ

ಮುಂಬೈ: ವಾಂಖೆಡೆ ಕ್ರೀಡಾಂಗಣದಲ್ಲಿಯೂ ಹಾರ್ದಿಕ್ ಪಾಂಡ್ಯ ನಾಯಕತ್ವದ ಮುಂಬೈ ಇಂಡಿಯನ್ಸ್ ತಂಡಕ್ಕೆ ಜಯ ಒಲಿಯಲಿಲ್ಲ. ಆದರೆ ಸಂಜು ಸ್ಯಾಮ್ಸನ್ ನಾಯಕತ್ವದ ರಾಜಸ್ಥಾನ ರಾಯಲ್ಸ್ ತಂಡವು ಗೆಲುವಿನ 'ಹ್ಯಾಟ್ರಿಕ್' ಸಾಧನೆ ಮಾಡಿತು.

ಸೋಮವಾರ ಇಲ್ಲಿ ನಡೆದ ಪಂದ್ಯದಲ್ಲಿ ವೇಗದ ಬೌಲರ್ ಟ್ರೆಂಟ್ ಬೌಲ್ಟ್ (22ಕ್ಕೆ3), ಸ್ಪಿನ್ನರ್ ಯಜುವೇಂದ್ರ ಚಾಹಲ್ (11ಕ್ಕೆ3) ಅವರ ದಾಳಿ ಮತ್ತು ರಿಯಾನ್ ಪರಾಗ್ ಅವರ ಚೆಂದದ ಅರ್ಧಶತಕದ ಬಲದಿಂದ ರಾಯಲ್ಸ್ ತಂಡವು 6 ವಿಕೆಟ್‌ಗಳಿಂದ ಜಯಿಸಿತು.

ಟಾಸ್ ಗೆದ್ದ ರಾಯಲ್ಸ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಮುಂಬೈ ತಂಡಕ್ಕೆ ಬೌಲ್ಟ್ ಬಿಗು ದಾಳಿಯ ಮೂಲಕ ಆಘಾತ ನೀಡಿದರು. ನಂತರ ಚಾಹಲ್ ಕೂಡ ಪೆಟ್ಟು ಕೊಟ್ಟರು. ಇದರಿಂದಾಗಿ ಮುಂಬೈ ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗೆ 125 ರನ್ ಗಳಿಸಲಷ್ಟೇ ಶಕ್ತವಾಯಿತು. ಗುರಿ ಬೆನ್ನಟ್ಟಿದ ರಾಜಸ್ಥಾನ ತಂಡವು 15.3 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 127 ರನ್ ಗಳಿಸಿತು.

ರಾಯಲ್ಸ್ ತಂಡವನ್ನು ನಿಯಂತ್ರಿಸಲು ಮುಂಬೈ ಬೌಲರ್‌ಗಳಾದ ಆಕಾಶ್ ಮದ್ವಾಲ್ (20ಕ್ಕೆ3) ಮಾಡಿದ ಪ್ರಯತ್ನವು ಸಾಕಾಗಲಿಲ್ಲ. ರಿಯಾನ್ ಪರಾಗ್ (ಔಟಾಗದೆ 54 ರನ್) ಅರ್ಧಶತಕ ಹೊಡೆದು ತಂಡವನ್ನು ಗೆಲುವಿನ ದಡ ಸೇರಿಸಿದರು. ಅಸ್ಸಾಂ ಹುಡುಗ ರಿಯಾನ್ ಕಳೆದ ಪಂದ್ಯದಲ್ಲಿಯೂ ಅಮೋಘ ಅರ್ಧಶತಕ ಗಳಿಸಿದ್ದರು.

ಬೌಲ್ಟ್ ದಾಳಿ: ಮೊದಲ ಓವರ್‌ನಲ್ಲೇ ಭಾರತ ತಂಡದ ನಾಯಕ ರೋಹಿತ್ ಶರ್ಮಾ ವಿಕೆಟ್ ಪಡೆದಾಗ ಗ್ಯಾಲರಿಯಲ್ಲಿ ಮಹಾಮೌನ ಆರಿಸಿತು. ಶರ್ಮಾ ಅವರ ಬ್ಯಾಟಿನ ಹೊರ ಅಂಚಿಗೆ ಬಡಿದ ಚೆಂಡನ್ನು ಕೀಪರ್ ಸಂಜು ಸ್ಯಾಮ್ಸನ್ ಡೈವ್ ಮಾಡಿ ಕೆಳಮಟ್ಟದಲ್ಲಿ ಕ್ಯಾಚ್ ಪಡೆದರು. ನಮನ್ ಧೀರ್ ಮಿಡ್‌ಆನ್‌ನತ್ತ ಆಡಲು ಯತ್ನಿಸಿ ಎಲ್‌ಬಿ ಬಲೆಗೆ ಬಿದ್ದರು. ಬ್ರಿವಾಲ್ಡ್ ಕೂಡ ಮೊದಲ ಎಸೆತದಲ್ಲೇ ಶಾರ್ಟ್ ಥರ್ಡ್‌ಮ್ಯಾನ್‌ನಲ್ಲಿ ಕ್ಯಾಚಿತ್ತರು. ಎಡಗೈ ಆರಂಭ ಆಟಗಾರ ಇಶಾನ್ ಕಿಶನ್ (16) ಅವರ ವಿಕೆಟ್ ಅನ್ನು ನ್ಯಾಂಡ್ರೆ ಬರ್ಗರ್ ಕಬಳಿಸಿದಾಗ ಮೊತ್ತ 4 ವಿಕೆಟ್‌ಗೆ 20.

ತಿಲಕ್ ವರ್ಮಾ (32, 29ಎಸೆತ) ಮತ್ತು ನಾಯಕ ಹಾರ್ದಿಕ್ ಪಾಂಡ್ಯ (34, 21ಎ, 4x6) ಆಘಾತದಿಂದ ಚೇತರಿಕೆ ನೀಡುವಂತೆ ಕಂಡಿತ್ತು. ಇವರಿಬ್ಬರು 36 ಎಸೆತಗಳಲ್ಲಿ 56 ರನ್ ಸೇರಿಸಿದ್ದರು. ಪಾಂಡ್ಯ ಆಕ್ರಮಣಕಾರಿಯಾಗಿದ್ದು, ಬರ್ಗರ್ ಅವರು ಮಾಡಿದ ಇನಿಂಗ್ಸ್‌ನ ಆರನೇ ಓವರ್‌ನಲ್ಲಿ ಮೂರು ಬೌಂಡರಿಗಳನ್ನು ಹೊಡೆದಿದ್ದರು.

ಆದರೆ ಈ ಹಂತದಲ್ಲಿ ಚಾಹಲ್ ಆಘಾತ ನೀಡಿದರು. ತಮ್ಮ ಎರಡನೇ ಓವರ್‌ನಲ್ಲೇ ಪಾಂಡ್ಯ ಅವರ ವಿಕೆಟ್ ಪಡೆದರು. ಆಫ್‌ಸ್ಟಂಪ್ ಆಚೆಬಿದ್ದ ಎಸೆತದಲ್ಲಿ ಭರ್ಜರಿ ಹೊಡೆತಕ್ಕೆ ಯತ್ನಿಸಿದ ಪಾಂಡ್ಯ ಲಾಂಗ್‌ಆನ್‌ನಲ್ಲಿ ಬದಲಿ ಆಟಗಾರ ಪಾವೆಲ್ ಓಡಿ ಹಿಡಿದ ಕ್ಯಾಚಿಗೆ ನಿರ್ಗಮಿಸಬೇಕಾಯಿತು. ಆ ಮೂಲಕ ಆಪತ್ಬಾಂಧವನಾಗಿ ಪ್ರೇಕ್ಷಕರ ಮನಗೆಲ್ಲುವ ಕನಸಿಗೆ ತೆರೆಬಿತ್ತು.

ಚಾಹಲ್ ಮುಂದಿನ ಎರಡು ಓವರ್‌ಗಳಲ್ಲಿ ಕ್ರಮವಾಗಿ ಚಾವ್ಲಾ ಮತ್ತು ತಿಲಕ್ ವರ್ಮಾ ಅವರ ವಿಕೆಟ್‌ಗಳನ್ನು ಪಡೆದು ಹೋರಾಟದ ಮೊತ್ತ ಗಳಿಸುವ ಆಸೆಗೆ ತೆರೆಯೆಳೆದರು.

ವಿಕೆಟ್ ಪಡೆದ ಸಂಭ್ರಮದಲ್ಲಿ ರಾಜಸ್ಥಾನ ರಾಯಲ್ಸ್ ತಂಡದ ಟ್ರೆಂಟ್ ಬೌಲ್ಟ್ –ಎಎಫ್‌ಪಿ ಚಿತ್ರ

ಹಾರ್ದಿಕ್‌ಗೆ ತೆಗಳಿಕೆ, ಹೊಗಳಿಕೆ..!



ಮುಂಬೈ (ಪಿಟಿಐ): ಮುಂಬೈ ಇಂಡಿಯನ್ಸ್ ತಂಡದ ನಾಯಕ ಹಾರ್ದಿಕ್ ಪಾಂಡ್ಯ ಅವರನ್ನು ತವರಿನಂಗಳದಲ್ಲಿಯೂ ಪ್ರೇಕ್ಷಕರು ಅಪಹಾಸ್ಯ ಮಾಡಿದರು. ಆದರೆ ಆ ಟೀಕೆಗಳನ್ನು ತಮ್ಮ ಉತ್ತಮ ಬ್ಯಾಟಿಂಗ್ ಮೂಲಕ ಶ್ಲಾಘನೆಗಳಲ್ಲಿ ಬದಲಾಯಿಸಿಕೊಳ್ಳುವಲ್ಲಿ ಆಲ್‌ರೌಂಡರ್ ಯಶಸ್ವಿಯಾದರು.

ರಾಜಸ್ಥಾನ ರಾಯಲ್ಸ್ ಎದುರಿನ ಪಂದ್ಯದ ಆರಂಭಕ್ಕೂಮುನ್ನ ಹಾರ್ದಿಕ್ ವಾರ್ಮ್ ಅಪ್ ವ್ಯಾಯಾಮ ಮಾಡುವಾಗ ಒಂದು ಗ್ಯಾಲರಿಯಲ್ಲಿದ್ದ ಜನರು 'ರೋಹಿತ್... ರೋಹಿತ್..' ಎಂದು ಕೂಗುವ ಮೂಲಕ ಪಾಂಡ್ಯ ಅವರನ್ನು ಅಣಕಿಸಿದರು. ಅವರು ಟಾಸ್‌ಗಾಗಿ ಪಿಚ್‌ನತ್ತ ನಡೆದಾಗಲೂ ಅದೇ ರೀತಿಯ ಕೂಗುಗಳಿಂದ ವ್ಯಂಗ್ಯವಾಡಿದರು. ಆದರೆ ಹಾರ್ದಿಕ್ ಮಾತ್ರ ನಗುನಗುತ್ತಲೇ ಓಡಾಡಿಕೊಂಡಿದ್ದರು.

20 ರನ್‌ಗಳಿಗೆ ನಾಲ್ಕು ವಿಕೆಟ್ ಕಳೆದುಕೊಂಡು ತಂಡ ಸಂಕಷ್ಟದಲ್ಲಿ ಇರುವ ಸಂದರ್ಭ ಕ್ರೀಸ್‌ಗೆ ಬಂದ ಹಾರ್ದಿಕ್ 21 ಎಸೆತಗಳಲ್ಲಿ 34 ರನ್ ರನ್ ಗಳಿಸಿದರು.

ವರ್ಮಾ ಶಾರ್ಟ್‌ಥರ್ಡ್ ಮ್ಯಾನ್‌ನಲ್ಲಿ ಕ್ಯಾಚಿತ್ತರು. ತಂಡ 20 ಓವರುಗಳನ್ನು ಪೂರೈಸಿದ್ದೇ ಸಾಧನೆಯಂತೆ ಕಂಡಿತು.

ಸ್ಕೋರ್ ಕಾರ್ಡ್

ಮುಂಬೈ ಇಂಡಿಯನ್ಸ್
9 ವಿಕೆಟ್‌ಗೆ 125 (20 ಓವರುಗಳಲ್ಲಿ)
ಇಶಾನ್ ಸಿ ಸ್ಯಾಮ್ಸನ್ ಬಿ ಬರ್ಗರ್ 16 (14ಎ, 4x2, 6x1)
ರೋಹಿತ್ ಸಿ ಸ್ಯಾಮ್ಸನ್ ಬಿ ಬೌಲ್ಟ್ 0 (1ಎ)
ನಮನ್ ಎಲ್‌ಬಿಡಬ್ಲ್ಯು ಬಿ ಬೌಲ್ಟ್ 0 (1ಎ)
ಬ್ರೆವಿಸ್ ಸಿ ಬರ್ಗರ್ ಬಿ ಬೌಲ್ಟ್ 0 (1ಎ)
ತಿಲಕ್ ಸಿ ಅಶ್ವಿನ್ ಬಿ ಚಾಹಲ್ 32 (29ಎ, 6x2)
ಹಾರ್ದಿಕ್ ಸಿ ಸಬ್ (ಪಾವೆಲ್) ಬಿ ಚಾಹಲ್ 34 (21ಎ, 4x6)
ಚಾವ್ಲಾ ಸಿ ಹೆಟ್ಮೆಯರ್ ಬಿ ಆವೇಶ್ 3 (6ಎ)
ಡೇವಿಡ್ ಸಿ ಬೌಲ್ಟ್ ಬಿ ಬರ್ಗರ್ 17 (24ಎ, 4x1)
ಕೋಟ್ಜಿ ಸಿ ಹೆಟ್ಮೆಯರ್ ಬಿ ಚಾಹಲ್ 4 (9ಎ)
ಬೂಮ್ರಾ ಔಟಾಗದೇ 8 (9ಎ, 4x1)
ಆಕಾಶ್ ಮಧ್ವಾಲ್ ಔಟಾಗದೇ 4 (5ಎ)
ಇತರೆ: 7 (ಬೈ 1, ಲೆಗ್‌ಬೈ 2, ವೈಡ್ 4)
ವಿಕೆಟ್ ಪತನ: 1–1 (ರೋಹಿತ್ ಶರ್ಮಾ, 0.5), 2–1 (ನಮನ್ ಧೀರ್, 0.6), 3–14 (ಡೆವಾಲ್ಡ್ ಬ್ರೆವಿಸ್, 2.2), 4–75 (ಇಶಾನ್ ಕಿಶನ್, 3.3), 5–76 (ಹಾರ್ದಿಕ್ ಪಾಂಡ್ಯ, 9.3), 6–83 (ಪೀಯುಷ್ ಚಾವ್ಲಾ, 11.1), 7–95 (ತಿಲಕ್ ವರ್ಮಾ, 13.2), 8–111 (ಜೆರಾಲ್ಡ್ ಕೋಟ್ಜಿ, 16.3), 9–114 (ಟಿಮ್ ಡೇವಿಡ್, 18.3)
ಬೌಲಿಂಗ್: ಟ್ರೆಂಟ್ ಬೌಲ್ಟ್ 4–0–22–3; ನ್ಯಾಂಡ್ರೆ ಬರ್ಗರ್ 4–0–32–2; ಆವೇಶ್ ಖಾನ್ 4–0–30–1; ಯಜುವೇಂದ್ರ ಚಾಹಲ್ 4–0–11–3; ರವಿಚಂದ್ರನ್ ಅಶ್ವಿನ್ 4–0–27–0.

ರಾಜಸ್ಥಾನ ರಾಯಲ್ಸ್
4 ವಿಕೆಟ್‌ಗೆ 127 (13.3 ಓವರ್‌ಗಳಲ್ಲಿ)
ಯಶಸ್ವಿ ಸಿ ಡೇವಿಡ್ ಬಿ ಕ್ವೆನಾ 10 (6ಎ, 4x2)
ಜೋಸ್ ಸಿ ಚಾವ್ಲಾ ಬಿ ಆಕಾಶ್ 13 (16ಎ, 4x2)
ಸಂಜು ಬಿ ಆಕಾಶ್ 12 (10ಎ, 4x3)
ರಿಯಾನ್ ಪರಾಗ್ ಔಟಾಗದೆ 54 (39ಎ, 4x5, 6x3)
ಅಶ್ವಿನ್ ಸಿ ತಿಲಕ್ ಬಿ ಆಕಾಶ್ 16 (16ಎ, 4x1)
ಶುಭಂ ದುಬೆ ಔಟಾಗದೆ 8 (6ಎ, 4x1)
ಇತರೆ: 14 (ಬೈ 2, ಲೆಗ್‌ಬೈ 2, ವೈಡ್ 10)
ವಿಕೆಟ್ ಪತನ: 1-10 (ಯಶಸ್ವಿ ಜೈಸ್ವಾಲ್; 0.6), 2-42 (ಸಂಜು ಸ್ಯಾಮ್ಸನ್; 4.2), 3-48 (ಜೋಸ್ ಬಟ್ಲರ್;6.3), 4-88 (ರವಿಚಂದ್ರನ್ ಅಶ್ವಿನ್; 12.2)
ಬೌಲಿಂಗ್: ಕ್ವೆನಾ ಮಫಕಾ 2–0–23–1, ಜಸ್‌ಪ್ರೀತ್ ಬೂಮ್ರಾ 4–0–26–0, ಆಕಾಶ್ ಮದ್ವಾಲ್ 4–0–20–3, ಜೆರಾಲ್ಡ್ ಕೋಟ್ಜಿ 2.3–0–36–0, ಪಿಯೂಷ್ ಚಾವ್ಲಾ 3–0–18–0
ಪಂದ್ಯದ ಆಟಗಾರ: ಟ್ರೆಂಟ್ ಬೌಲ್ಟ್

ಫಲಿತಾಂಶ: ರಾಜಸ್ಥಾನ ರಾಯಲ್ಸ್‌ಗೆ 6 ವಿಕೆಟ್ ಜಯ

ಜಯದ ಹಾದಿಗೆ ಮರಳುವುದೇ ಆರ್‌ಸಿಬಿ?

ಬೆಂಗಳೂರು– ಲಖನೌ ಹಣಾಹಣಿ ಇಂದು • ರನ್ ಯಂತ್ರ ವಿರಾಟ್‌ಗೆ ವೇಗಿ ಮಯಂಕ್ ಸವಾಲು

• ಗಿರೀಶ ದೊಡ್ಡಮನಿ

ಬೆಂಗಳೂರು: ಮಂಗಳವಾರ ರಾತ್ರಿ ಚಿನ್ನಸ್ವಾಮಿ ಕ್ರೀಡಾಂಗಣದ ಹೊನಲು ಬೆಳಕಿನಲ್ಲಿ ದೆಹಲಿಯ ಇಬ್ಬರು ಆಟಗಾರರ ನಡುವಣ ಜಿದ್ದಾಜಿದ್ದಿ ರಂಗೇರುವ ನಿರೀಕ್ಷೆ ಗರಿಗೆದರಿದೆ.

ಅವರಿಬ್ಬರೂ ಬೇರಾರೂ ಅಲ್ಲ. ಒಬ್ಬರು 'ರನ್ ಯಂತ್ರ' ವಿರಾಟ್ ಕೊಹ್ಲಿ, ಇನ್ನೊಬ್ಬರು ಭಾರತೀಯ ಕ್ರಿಕೆಟ್ ಅಂಗಳದ ಹೊಸ 'ವೇಗದೂತ' ಮಯಂಕ್ ಯಾದವ್. ಇಲ್ಲಿ ನಡೆಯಲಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಲಖನೌ ಸೂಪರ್ ಜೈಂಟ್ಸ್ ಪಂದ್ಯವು ಕುತೂಹಲ ಕೆರಳಿಸಲು ಇವರಿಬ್ಬರೂ ಕಾರಣರಾಗಿದ್ದಾರೆ.

ಕನ್ನಡಿಗ ಕೆ.ಎಲ್. ರಾಹುಲ್ ನಾಯಕತ್ವದ ಲಖನೌ ತಂಡವು ಮೂರು ದಿನಗಳ ಹಿಂದೆ ಪಂಜಾಬ್ ಕಿಂಗ್ಸ್ ಎದುರು ಜಯಿಸಲು ಇದೇ ಮಯಂಕ್ ಕಾರಣರಾಗಿದ್ದರು. 21 ವರ್ಷದ ಬಲಗೈ ವೇಗಿ ಆ ಪಂದ್ಯದಲ್ಲಿ ಪದಾರ್ಪಣೆ ಮಾಡಿದ್ದರು. ಪ್ರತಿ ಗಂಟೆಗೆ 155 ಕಿ.ಮೀ ವೇಗದ ಎಸೆತ ಪ್ರಯೋಗಿಸಿದ್ದರು. ಪಂಜಾಬ್ ತಂಡದ ಅನುಭವಿ ಬ್ಯಾಟರ್ ಜಾನಿ ಬೆಸ್ಟೊ ಸೇರಿದಂತೆ ಮೂರು ವಿಕೆಟ್‌ಗಳನ್ನು ತಮ್ಮ ಬುಟ್ಟಿಗೆ ಹಾಕಿಕೊಂಡಿದ್ದರು.

'ಭಾರತಕ್ಕೆ ಈಗ ವೇಗದ ಬೌಲರ್ ಲಭಿಸಿದ' ಎಂದು ಆಸ್ಟ್ರೇಲಿಯಾದ ಮಾಜಿ ವೇಗಿ ಬ್ರೆಟ್ ಲೀ ಅವರೇ ವೀಕ್ಷಕ ವಿವರಣೆಯಲ್ಲಿ ಮೆಚ್ಚುಗೆ ಮಾತನಾಡುವ ಮಟ್ಟಕ್ಕೆ ಮಯಂಕ್ ಬೌಲಿಂಗ್ ಮಾಡಿದ್ದರು. ಇದೀಗ ಮಯಂಕ್ ಮುಂದೆ ವಿಶ್ವದ ಅಗ್ರಮಾನ್ಯ ಬ್ಯಾಟರ್ ವಿರಾಟ್ ಅವರನ್ನು ತಮ್ಮ ವೇಗದ ಅಸ್ತ್ರದಿಂದ ಅಚ್ಚರಿಗೊಳಿಸುವುರೇ ಎಂಬ ಕುತೂಹಲ ಗರಿಗೆದರಿದೆ.

ಐಪಿಎಲ್ ಇತಿಹಾಸದಲ್ಲಿ ಏಳು ಶತಕ ಹೊಡದಿರುವ ಆಟಗಾರ ವಿರಾಟ್. ಟೂರ್ನಿಯಲ್ಲಿ 240 ಪಂದ್ಯಗಳನ್ನು ಆಡಿರುವ ಅನುಭವಿ. 35 ವರ್ಷದ ವಿರಾಟ್ ಖಾತೆಯಲ್ಲಿ 7444 ರನ್‌ಗಳಿವೆ. ಅಷ್ಟೇ ಅಲ್ಲ; ಪ್ರಸಕ್ತ ಟೂರ್ನಿಯ ಮೂರು ಪಂದ್ಯಗಳಿಂದ 181 ರನ್ ಗಳಿಸಿದ್ದಾರೆ. ಅವರ ತಲೆಯನ್ನು 'ಆರೇಂಜ್ ಕ್ಯಾಪ್' ಅಲಂಕರಿಸಿದೆ. ತವರಿನಲ್ಲಿ ನಡೆದ ಕಳೆದ ಎರಡೂ ಪಂದ್ಯಗಳಲ್ಲಿ ಅವರು ಅರ್ಧಶತಕಗಳನ್ನು ಗಳಿಸಿದ್ದರು. ಆದ್ದರಿಂದ ಲಖನೌ ಬೌಲರ್‌ಗಳೆಲ್ಲರ ಕಣ್ಣು ಅವರನ್ನು ಕಟ್ಟಿಹಾಕುವತ್ತಲೇ ಇರುವುದು ಸಹಜ. ಆದರೆ ವಿರಾಟ್ ಮತ್ತು ಮಯಂಕ್ ಮುಖಾಮುಖಿಯು ಹೆಚ್ಚು ಕುತೂಹಲ ಕೆರಳಿಸಿದೆ.

ಅವರನ್ನು ಬಿಟ್ಟರೆ ಗ್ಲೆನ್ ಮ್ಯಾಕ್ಸ್‌ವೆಲ್, ದಿನೇಶ್ ಕಾರ್ತಿಕ್ ಅವರು ತಂಡದ ಮೊತ್ತ ಹಿಗ್ಗಿಸಲು ನಿರಂತರವಾಗಿ ಉತ್ತಮ ಕಾಣಿಕೆ ನೀಡಿದ್ದಾರೆ. ಆದರೆ ನಾಯಕ ಫಫ್ ಡುಪ್ಲೆಸಿ, ಯುವ ಬ್ಯಾಟರ್‌ಗಳಾದ ಅನುಜ್ ರಾವತ್, ರಜತ್ ಪಾಟೀದಾರ್ ಹಾಗೂ ಕ್ಯಾಮರಾನ್ ಗ್ರೀನ್ ಅವರ ಬ್ಯಾಟಿಂಗ್‌ನಲ್ಲಿ ಸ್ಥಿರತೆ ಇಲ್ಲ.

ಆರ್‌ಸಿಬಿ ಬಳಿ ಮಯಂಕ್ ಅವರಂತಹ ಒಬ್ಬ 'ಮ್ಯಾಚ್ ವಿನ್ನರ್' ಬೌಲರ್ ಇಲ್ಲದೇ ಇರುವುದು ದೊಡ್ಡ ಕೊರಗು. ಕಳೆದ ಮೂರು ಪಂದ್ಯಗಳಲ್ಲಿಯೂ ಇದು ಢಾಳಾಗಿ ಕಂಡಿದೆ. ಅದರಲ್ಲೂ ಕೋಲ್ಕತ್ತ ನೈಟ್ ರೈಡರ್ಸ್ ಎದುರು ಅನುಭವಿ ವೇಗಿ ಮೊಹಮ್ಮದ್ ಸಿರಾಜ್, ಅಲ್ಜರಿ ಜೋಸೆಫ್ ಮತ್ತು ಯಶ್ ದಯಾಳ್ ಅವರು ದುಬಾರಿಯಾಗಿದ್ದರು. ಆದರೆ 'ಇಂಪ್ಯಾಕ್ಟ್ ಬೌಲರ್' ಆಗಿ ಕಣಕ್ಕಿಳಿದಿದ್ದ ಕನ್ನಡಿಗ ವೈಶಾಖ ವಿಜಯಕುಮಾರ್ (23ಕ್ಕೆ1) ಕೊಂಚ ಭರವಸೆ ಮೂಡಿಸಿದ್ದರು. ಈ ಪಂದ್ಯದಲ್ಲಿಯೂ ಅವರು ಆಡುವ ಸಾಧ್ಯತೆ ಹೆಚ್ಚಿದೆ.

ಆತಿಥೇಯ ಬೌಲರ್‌ಗಳ ಮುಂದೆ ಲಖನೌ ತಂಡದ ನಿಕೊಲಸ್ ಪೂರನ್, ಕ್ವಿಂಟನ್ ಡಿಕಾಕ್ ಹಾಗೂ ಕೃಣಾಲ್ ಪಾಂಡ್ಯ ಅವರ ಭರಾಟೆಗೆ ಕಡಿವಾಣ ಹಾಕುವ ಸವಾಲು ಇದೆ. ತಂಡದಲ್ಲಿರುವ ಬೆಂಗಳೂರು ಹುಡುಗ ದೇವದತ್ತ ಪಡಿಕ್ಕಲ್ ಮತ್ತು ರಾಹುಲ್ ಅವರು ಲಯಕ್ಕೆ ಮರಳುವ ನಿರೀಕ್ಷೆ ಇದೆ. ಬೌಲಿಂಗ್ ವಿಭಾಗದಲ್ಲಿ ಮಯಂಕ್ ಅವರಲ್ಲದೇ ರವಿ ಬಿಷ್ಣೋಯಿ, ಕೃಣಾಲ್ ಹಾಗೂ ಮೊಹಸಿನ್ ಖಾನ್ ಅವರು ಇರುವುದು ತಂಡದ ಆತ್ಮವಿಶ್ವಾಸ ಹೆಚ್ಚಿಸಿದೆ.

ಆರ್‌ಸಿಬಿ ತಂಡದ ಆಟಗಾರ ವಿರಾಟ್ ಕೊಹ್ಲಿ

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಸಿನಿಮಾ ಆ್ಯಪ್

ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸೋಮವಾರ ಮಯಂಕ್ ಯಾದವ್ ತಾಲೀಮು ನಡೆಸಿದರು –ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್.ಜಿ.

ಇಂಡಿಯನ್ ಪ್ರೀಮಿಯರ್ ಲೀಗ್ ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ	ಎನ್‌ಆರ್‌ಆರ್
ರಾಜಸ್ಥಾನ ರಾಯಲ್ಸ್	3	3	0	6	1.249
ಕೋಲ್ಕತ್ತ ನೈಟ್ ರೈಡರ್ಸ್	2	2	0	4	1.047
ಚೆನ್ನೈ ಸೂಪರ್ ಕಿಂಗ್ಸ್	3	2	1	4	0.976
ಗುಜರಾತ್ ಟೈಟನ್ಸ್	3	2	1	4	-0.738
ಸನ್‌ರೈಸರ್ಸ್ ಹೈದರಾಬಾದ್	3	1	2	2	0.204
ಲಖನೌ ಸೂಪರ್ ಜೈಂಟ್ಸ್	2	1	1	2	0.025
ಡೆಲ್ಲಿ ಕ್ಯಾಪಿಟಲ್ಸ್	3	1	2	2	-0.016
ಪಂಜಾಬ್ ಕಿಂಗ್ಸ್	3	1	2	2	-0.337
ರಾಯಲ್ ಚಾಲೆಂಜರ್ಸ್ ಬೆಂಗಳೂರು	3	1	2	2	-0.711
ಮುಂಬೈ ಇಂಡಿಯನ್ಸ್	3	0	3	0	-1.423

ಆರೆಂಜ್ ಕ್ಯಾಪ್: ವಿರಾಟ್ ಕೊಹ್ಲಿ, ಆರ್‌ಸಿಬಿ (181ರನ್)

ಪರ್ಪಲ್ ಕ್ಯಾಪ್: ಮುಸ್ತಫಿಜುರ್ ರೆಹಮಾನ್, ಸಿಎಸ್‌ಕೆ (7 ವಿಕೆಟ್)

ಮುಖ್ಯಾಂಶಗಳು

- ಎರಡರಲ್ಲಿ ಸೋತು, ಒಂದು ಗೆದ್ದಿರುವ ಆರ್‌ಸಿಬಿ
- ಕಳೆದ ಪಂದ್ಯದಲ್ಲಿ ಇಂಪ್ಯಾಕ್ಟ್ ಪ್ಲೇಯರ್ ಆಗಿದ್ದ ರಾಹುಲ್
- ತವರಿನಂಗಳದಲ್ಲಿ ಆಡಲಿರುವ ಪಡಿಕ್ಕಲ್

ಚಿನ್ನಸ್ವಾಮಿ ಕ್ರೀಡಾಂಗಣದ ಪಿಚ್‌ನಲ್ಲಿ 200 ಕ್ಕೂ ಹೆಚ್ಚು ರನ್‌ಗಳ ಮೊತ್ತ ಗಳಿಸಲು ಸಾಧ್ಯವಿದೆ. ಈ ಪಂದ್ಯದಲ್ಲಿ ನಮ್ಮ ಅಗ್ರಕ್ರಮಾಂಕದ ಬ್ಯಾಟರ್‌ಗಳು ವೇಗವಾಗಿ ರನ್ ಗಳಿಸುವ ನಿರೀಕ್ಷೆ ಇದೆ.
ಆ್ಯಂಡಿ ಫ್ಲವರ್ ಆರ್‌ಸಿಬಿ ಮುಖ್ಯ ಕೋಚ್

ರಾಹುಲ್ ಫಿಟ್‌ನೆಸ್ ಮೇಲೆ ನಿಗಾ

ಬೆಂಗಳೂರು: ಲಖನೌ ಸೂಪರ್ ಜೈಂಟ್ಸ್ ನಾಯಕ ಕೆ.ಎಲ್. ರಾಹುಲ್ ಅವರ ಫಿಟ್‌ನೆಸ್ ಮೇಲೆ ನಿಗಾ ವಹಿಸಲಾಗಿದೆ.

ಪಂಜಾಬ್ ಕಿಂಗ್ಸ್ ವಿರುದ್ಧದ ಪಂದ್ಯದಲ್ಲಿ ಅವರು ಇಂಪ್ಯಾಕ್ಟ್ ಪ್ಲೇಯರ್ ಆಗಿ ಆಡಿದ್ದರು. ನಿಕೊಲಸ್ ಪೂರನ್ ಅವರು ಹಂಗಾಮಿ ನಾಯಕರಾಗಿದ್ದರು.

ಅವರು ಈ ಟೂರ್ನಿಗೆ ಆಡಲು ಬರುವ ಮುನ್ನವೂ ಗಾಯದಿಂದ ಚೇತರಿಸಿಕೊಂಡು ಬಂದಿದ್ದರು. ಆದರೆ ಮೊದಲ ಪಂದ್ಯದಲ್ಲಿ ಕೀಪಿಂಗ್, ಬ್ಯಾಟಿಂಗ್ ನಿಭಾಯಿಸಿದ್ದರು. ಮುಂಬರುವ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಅವರು ಆಡಲು ಫಿಟ್ ಆಗಿ ಉಳಿಯುವುದು ಮುಖ್ಯವಾಗಿದೆ. ಆದ್ದರಿಂದ ಅವರ ದೈಹಿಕ ಕ್ಷಮತೆ ನಿರ್ವಹಣೆಗೆ ಹೆಚ್ಚು ಆದ್ಯತೆ ನೀಡಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

ಪಂತ್‌ಗೆ ದಂಡ

ನವದೆಹಲಿ (ಪಿಟಿಐ): ಡೆಲ್ಲಿ ಕ್ಯಾಪಿಟಲ್ಸ್ ತಂಡದ ನಾಯಕ ರಿಷಭ್ ಪಂತ್ ಅವರಿಗೆ ₹ 12 ಲಕ್ಷ ದಂಡ ವಿಧಿಸಲಾಗಿದೆ.

ವಿಶಾಖಪಟ್ಟಣದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಎದುರು ಭಾನುವಾರ ನಡೆದ ಪಂದ್ಯದಲ್ಲಿ ನಿಗದಿಯ ಅವಧಿಯೊಳಗೆ ಓವರ್‌ಗಳನ್ನು ಡೆಲ್ಲಿ ತಂಡವು ಮುಗಿಸಲಿಲ್ಲ. ಆದ್ದರಿಂದ ನಾಯಕ ಪಂತ್ ಅವರಿಗೆ ದಂಡ ಹಾಕಲಾಗಿದೆ. ಈ ಪಂದ್ಯದಲ್ಲಿ ಕ್ಯಾಪಿಟಲ್ಸ್ ತಂಡವು 20 ರನ್‌ಗಳ ಅಂತರದಿಂದ ಜಯ ಗಳಿಸಿತ್ತು.

ಬಾಂಗ್ಲಾ ವಿರುದ್ಧ ಕ್ಲೀನ್‌ಸ್ವೀಪ್ ಹಾದಿಯಲ್ಲಿ ಲಂಕಾ

ಚಿತ್ತಗಾಂಗ್ (ಎಪಿ): ಬಾಂಗ್ಲಾದೇಶ ವಿರುದ್ಧದ ಅಂತಿಮ ಟೆಸ್ಟ್ ಪಂದ್ಯದ ಮೂರನೇ ದಿನವಾದ ಸೋಮವಾರ ಬ್ಯಾಟಿಂಗ್ ಕುಸಿತದ ಹೊರತಾಗಿಯೂ ಶ್ರೀಲಂಕಾ ಎರಡು ಟೆಸ್ಟ್‌ಗಳ ಸರಣಿ ಗೆಲ್ಲುವ ಹಾದಿಯಲ್ಲಿದೆ.

ಎರಡನೇ ಇನ್ನಿಂಗ್ಸ್‌ನಲ್ಲಿ ಶ್ರೀಲಂಕಾ ಆರು ವಿಕೆಟ್‌ಗೆ 102 ರನ್ ಗಳಿಸಿದೆ. ಮೊದಲ ಇನ್ನಿಂಗ್ಸ್‌ನ 353 ಲೀಡ್ ಸೇರಿ ಒಟ್ಟಾರೆ 455 ರನ್‌ಗಳ ಮುನ್ನಡೆ ಗಳಿಸಿದೆ.

ಹಸನ್ ಮಹಮೂದ್ (51ಕ್ಕೆ4) ಮತ್ತು ಖಲೀದ್ ಅಹ್ಮದ್ (29ಕ್ಕೆ2) ಉತ್ತಮ ಬೌಲಿಂಗ್ ಪ್ರದರ್ಶಿಸಿದರು. ಏಂಜೆಲೊ ಮ್ಯಾಥ್ಯೂಸ್ (ಅಜೇಯ 39) ಅವರೊಂದಿಗೆ ಜಯ ಸೂರ್ಯ (ಅಜೇಯ 3 ರನ್) ನಾಲ್ಕನೇ ದಿನ ಬ್ಯಾಟಿಂಗ್ ಮುಂದುವರಿಸಲಿದ್ದಾರೆ.

ಪ್ರವಾಸಿ ತಂಡವು ಮೊದಲು ಬಾಂಗ್ಲಾದೇಶವನ್ನು 178 ರನ್‌ಗಳಿಗೆ ಆಲೌಟ್ ಮಾಡಿತು. ಆದರೆ ಫಾಲೋ-ಆನ್ ಹೇರಲಿಲ್ಲ. ಲಂಕಾ ಮೊದಲ ಇನಿಂಗ್ಸ್‌ನಲ್ಲಿ 531 ರನ್ ಗಳಿಸಿತ್ತು.

ಕೆಕೆಆರ್– ರಾಯಲ್ಸ್ ಪಂದ್ಯದ ದಿನಾಂಕ ಬದಲಾವಣೆ?

ಕೋಲ್ಕತ್ತ (ಪಿಟಿಐ): ಏಪ್ರಿಲ್ 17ರಂದು ರಾಜಸ್ತಾನ ರಾಯಲ್ಸ್ ವಿರುದ್ಧ ಕೋಲ್ಕತ್ತ ನೈಟ್ ರೈಡರ್ಸ್ ತಂಡದ ತವರು ಪಂದ್ಯ ಅಂದು ರಾಮನವಮಿ ಹಬ್ಬದ ಪ್ರಯುಕ್ತ ಬದಲಾವಣೆ ಆಗುವ ಸಾಧ್ಯತೆ ಇದೆ. ಪಂದ್ಯಕ್ಕೆ ಸೂಕ್ತ ರೀತಿ ಭದ್ರತೆ ಒದಗಿಸುವ ವಿಷಯದಲ್ಲಿ ಸ್ಥಳೀಯ ಪೊಲೀಸರು ಅಸಹಾಯಕತೆ ವ್ಯಕ್ತಪಡಿಸಿದ್ದಾರೆ ಎಂದು ಬಂಗಾಳ ಕ್ರಿಕೆಟ್ ಸಂಸ್ಥೆ (ಸಿಎಬಿ) ಬಿಸಿಸಿಐಗೆ ತಿಳಿಸಿದೆ.

ಬಂಗಾಳದಲ್ಲಿ ಏಳು ಹಂತದ ಚುನಾವಣೆ ನಡೆಯಲಿದ್ದು ಮೊದಲ ಹಂತದ ಚುನಾವಣೆ ಏ. 19ರಂದು ನಿಗದಿಯಾಗಿದೆ. 'ಹೆಚ್ಚಿನ ಸಂಖ್ಯೆಯ ಪೊಲೀಸರು ಚುನಾವಣಾ ಕಾರ್ಯಕ್ಕೆ ನಿಯೋಜನೆಯಾಗಿರುವ ಕಾರಣ ಪಂದ್ಯಕ್ಕೆ ಭದ್ರತೆ ವ್ಯವಸ್ಥೆ ಕಲ್ಪಿಸುವುದು ಕಷ್ಟ' ಎಂದು ಕೋಲ್ಕತ್ತ ಪೊಲೀಸರು ಸಿಎಬಿ ಅಧ್ಯಕ್ಷ ಸ್ನೇಹಾಶಿಶ್ ಗಂಗೂಲಿ ಅವರಿಗೆ ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ.

ಈ ಪಂದ್ಯವನ್ನು, ಒಂದು ದಿನ ಮೊದಲು (ಏ. 16) ಅಥವಾ ಒಂದು ದಿನ ನಂತರ (ಏಪ್ರಿಲ್ 18ಕ್ಕೆ) ಮುಂದೂಡಬಹುದು ಎಂದು ಸಿಎಬಿ ಸಲಹೆ ನೀಡಿದೆ.

'ಬಂಗಾಳದಿಂದ ವಿನಂತಿ ಬಂದಿದೆ. ಆದರೆ ನಾವು ಹೊಸ ದಿನಾಂಕದ ಬಗ್ಗೆ ಇನ್ನೂ ನಿರ್ಧಾರ ಮಾಡಿಲ್ಲ' ಎಂದು ಬಿಸಿಸಿಐ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಆದರೆ ದಿನಾಂಕ ಬದಲಾವಣೆ ಸುಲಭವಲ್ಲ. ತಂಡಗಳು ಪ್ರಯಾಣ ವೇಳಾಪಟ್ಟಿಯಲ್ಲಿ ಬದಲಾವಣೆ ಮಾಡಬೇಕಾಗುತ್ತದೆ. ಪ್ರಸಾರ ಸಂಸ್ಥೆಯವರೂ ಮರುಹೊಂದಾಣಿಕೆ ಮಾಡಬೇಕಾಗುತ್ತದೆ. ಟಿಕೆಟ್ ನೀಡುವ ವಿಷಯದಲ್ಲೂ ತೊಂದರೆಯಾಗುತ್ತದೆ. ಒಟ್ಟಾರೆ ಇದೆಲ್ಲಾ ತಲೆನೋವಿನ ಕೆಲಸ' ಎಂದು ಅವರು ಹೇಳಿದ್ದಾರೆ.

16ರಂದು ಐಪಿಎಲ್ ತಂಡಗಳ ಮಾಲೀಕರ ಸಭೆ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ಐಪಿಎಲ್‌ನಲ್ಲಿ ಪಾಲ್ಗೊಳ್ಳುತ್ತಿರುವ ಹತ್ತು ತಂಡಗಳ ಮಾಲೀಕರ ಅನೌಪಚಾರಿಕ ಸಭೆಯನ್ನು ಏ. 16ರಂದು ಅಹಮದಾಬಾದಿನಲ್ಲಿ ಕರೆದಿದೆ. ಆಟಗಾರರ ಬಿಡ್, ಉಳಿಸಿ ಕೊಳ್ಳುವ ಹರಾಜು ಪ್ರಕ್ರಿಯೆಗೆ ಈಗಿರುವ ಮೊತ್ತವನ್ನು ಹೆಚ್ಚಿಸುವ ವಿಷಯಕ್ಕೆ ಸಂಬಂಧಿಸಿ ಚರ್ಚೆಯಾಗುವ ಸಾಧ್ಯತೆಯಿದೆ.

ಅಂದು ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ಮತ್ತು ಗುಜರಾತ್ ಟೈಟನ್ಸ್ ನಡುವೆ ಪಂದ್ಯ ಇದ್ದು, ಈ ಸಂದರ್ಭದಲ್ಲಿ ಸಭೆ ನಡೆಸಲು ನಿರ್ಧರಿಸಲಾಗಿದೆ.

'ಈ ಅನೌಪಚಾರಿಕ ಸಭೆಗೆ ನಿರ್ದಿಷ್ಟ ಕಾರ್ಯಸೂಚಿಯಿಲ್ಲ. ಐಪಿಎಲ್ 2ನೇ ತಿಂಗಳಿಗೆ ಕಾಲಿಟ್ಟಿದ್ದು, ಎಲ್ಲ ಭಾಗಿದಾರರ ಒಟ್ಟಿಗೆ ಸೇರಲು ಇದು ಅವಕಾಶ ಕಲ್ಪಿಸಲಿದೆ' ಎಂದು ಬಿಸಿಸಿಐ ಅಧಿಕಾರಿಯೊಬ್ಬರು ಪಿಟಿಐಗೆ ತಿಳಿಸಿದರು.

ವರ್ಷದ ಕೊನೆಗೆ ನಡೆಯಲಿರುವ ಮೆಗಾ ಹರಾಜು ಪ್ರಕ್ರಿಯೆಯಲ್ಲಿ ಫ್ರಾಂಚೈಸಿಗೆ ಈಗಿರುವ ₹100 ಕೋಟಿ ಮೊತ್ತವನ್ನು ಹೆಚ್ಚಿಸುವ ವಿಷಯ ಚರ್ಚೆಯಾಗುವ ನಿರೀಕ್ಷೆಯಿದೆ. ಬಿಸಿಸಿಐ ಕಾರ್ಯದರ್ಶಿ ಜಯ್ ಶಾ, ಅಧ್ಯಕ್ಷ ರೋಜರ್ ಬಿನ್ನಿ ಮತ್ತು ಐಪಿಎಲ್ ಚೇರ್ಮನ್ ಅರುಣ್ ಧುಮಾಲ್ ಭಾಗವಹಿಸಲಿದ್ದಾರೆ.

ನಗಾಲ್‌ಗೆ ಜೀವನಶ್ರೇಷ್ಠ 95ನೇ ಸ್ಥಾನ

ಲಂಡನ್ (ಪಿಟಿಐ): ಭಾರತದ ಪ್ರಮುಖ ಸಿಂಗಲ್ಸ್ ಆಟಗಾರ ಸುಮಿತ್ ನಗಾಲ್ ಅವರು ಸೋಮವಾರ ಪ್ರಕಟವಾದ ಎಟಿಪಿ ಸಿಂಗಲ್ಸ್ ರ‍್ಯಾಂಕಿಂಗ್ ಪಟ್ಟಿಯಲ್ಲಿ 95ನೇ ಸ್ಥಾನ ಪಡೆದಿದ್ದಾರೆ. ಇದು ಅವರ ಜೀವನ ಶ್ರೇಷ್ಠ ರ‍್ಯಾಂಕಿಂಗ್ ಆಗಿದೆ.

ಎಟಿಪಿ ಚಾಲೆಂಜರ್ ಟೂರ್ನಿಯಾಗಿರುವ ಚೆನ್ನೈ ಓಪನ್ ಗೆದ್ದ ನಂತರ, ಫೆಬ್ರುವರಿಯಲ್ಲಿ 97ನೇ ಸ್ಥಾನ ಪಡೆದಿದ್ದು ಈ ಹಿಂದಿನ ಅವರ ಅತ್ಯುತ್ತಮ ರ‍್ಯಾಂಕಿಂಗ್ ಆಗಿತ್ತು.

ಜನವರಿಯಲ್ಲಿ ಆಸ್ಟ್ರೇಲಿಯಾ ಓಪನ್ ಪ್ರಧಾನ ಸುತ್ತಿಗೆ ಅರ್ಹತೆ ಪಡೆದು ಅವರು ಗಮನ ಸೆಳೆದಿದ್ದರು. ಮೊದಲ ಸುತ್ತಿನಲ್ಲಿ ಶ್ರೇಯಾಂಕ ಆಟಗಾರನನ್ನು ಸೋಲಿಸಿದ್ದ ಭಾರತದ ಮೊದಲ ಆಟಗಾರ ಎಂಬ ಶ್ರೇಯಕ್ಕೂ ಪಾತ್ರರಾಗಿದ್ದರು. ಆದರೆ ಎರಡನೇ ಸುತ್ತಿನಲ್ಲಿ ಚೀನಾ ಆಟಗಾರ ಶಾಂಗ್ ಜುನ್‌ಚೆಂಗ್ ಎದುರು ಸೋತಿದ್ದರು.

ಚೆನ್ನೈ ಓಪನ್ ಗೆದ್ದ ನಂತರ ಅವರು ಮತ್ತೆರಡು ಚಾಲೆಂಜರ್ ಟೂರ್ನಿಗಳಲ್ಲಿ ಆಡಿದ್ದರು. ದುಬೈ ಚಾಂಪಿಯನ್‌ಷಿಪ್‌ನಲ್ಲೂ ಭಾಗಿಯಾಗಿದ್ದರು. ಆದರೆ ಅವರ ಉತ್ತಮ ಸಾಧನೆ ಮೂಡಿದ್ದು ಬೆಂಗಳೂರು ಚಾಲೆಂಜರ್‌ನಲ್ಲಿ. ಅಲ್ಲಿ ಸೆಮಿಫೈನಲ್‌ವರೆಗೆ ತಲುಪಿದ್ದರು.

ಸಿನ್ನರ್‌ಗೆ ಮಯಾಮಿ ಓಪನ್ ಕಿರೀಟ

ಮಯಾಮಿ ಅಮೆರಿಕ (ಪಿಟಿಐ): ಇಟಲಿಯ ಯಾನಿಕ್ ಸಿನ್ನರ್ ಅವರು ಎಟಿಪಿ ಮಯಾಮಿ ಓಪನ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್‌ನ ಪ್ರಶಸ್ತಿ ಮುಡಿಗೇರಿಸಿಕೊಂಡರು.

ಭಾನುವಾರ ತಡರಾತ್ರಿ ನಡೆದ ಫೈನಲ್ ಹಣಾಹಣಿ ಯಲ್ಲಿ ಸಿನ್ನರ್ 6-3, 6-1ರಿಂದ ಬಲ್ಗೇರಿಯಾದ ಗ್ರಿಗರ್ ಡಿಮಿಟ್ರೋವ್ ಅವರನ್ನು ಮಣಿಸಿದರು.

ಇದು ಸಿನ್ನರ್ ಅವರಿಗೆ ಈ ಋತುವಿನ ಮೂರನೇ ಪ್ರಶಸ್ತಿಯಾಗಿದೆ. ಜನವರಿಯಲ್ಲಿ ಆಸ್ಟ್ರೇಲಿಯನ್ ಓಪನ್ ಮತ್ತು ಫೆಬ್ರುವರಿಯಲ್ಲಿ ಎಟಿಪಿ ರೋಟಡ್ರ್ಯಾಮ್ ಟೂರ್ನಿಯಲ್ಲಿ ಚಾಂಪಿಯನ್ ಆಗಿದ್ದರು. ಈ ಗೆಲುವಿನೊಂದಿಗೆ ಎಟಿಪಿ ವಿಶ್ವ ರ‍್ಯಾಂಕಿಂಗ್‌ನಲ್ಲಿ ಕಾರ್ಲೋಸ್ ಅಲ್ಕರಾಜ್ ಅವರನ್ನು ಹಿಂದಿಕ್ಕಿ ಎರಡನೇ ಸ್ಥಾನಕ್ಕೆ ಏರಿದ್ದಾರೆ. ಇದು ಅವರ ಜೀವನಶ್ರೇಷ್ಠ ಸಾಧನೆಯಾಗಿದೆ.

ಪ್ರಶಸ್ತಿಯೊಂದಿಗೆ ಯಾನಿಕ್ ಸಿನ್ನರ್